ಆದೋನಿ ಕನ್ನಡ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕ[illegible]

[illegible] ಕಾಶಿ[illegible] ಯಕ

ಮಾರ್ಗದರ್ಶಕರು
ಡಾ. ಪಿ.ಮಹಾದೇವಯ್ಯ
ಹಿ.ಶ್ರೇ. ಉಪನ್ಯಾಸಕರು
ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೭

ಆದೋನಿ ಕನ್ನಡ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು
ಬಿ.ಓಂಪ್ರಕಾಶ ನಾಯಕ

ಮಾರ್ಗದರ್ಶಕರು
ಡಾ. ಪಿ.ಮಹಾದೇವಯ್ಯ
ಹಿ.ಶ್ರೇ. ಉಪನ್ಯಾಸಕರು
ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೭

ದೃಢೀಕರಣ ಪತ್ರ

ಬಿ. ಓಂಪ್ರಕಾಶನಾಯಕ ಇವರು 'ಆದೋನಿ ಕನ್ನಡ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೨.೦೪.೨೦೦೨

೨.೪.೦೨

ಡಾ.ಪಿ. ಮಹಾದೇವಯ್ಯ
ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಆದೋನಿ ಕನ್ನಡ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಪಿ.ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೩ .೦೪.೨೦೦೭

ಬಿ. ಓಂಪ್ರಕಾಶನಾಯಕ
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ನನಗೆ ಸಂಶೋಧನೆ ಮಾಡಲು ಅನುವು ಮಾಡಿಕೊಟ್ಟು ಈ ಮಹಾಪ್ರಬಂಧದ ರಚನೆಗೆ ಪ್ರೇರಣೆ ನೀಡಿದ ಮಾನ್ಯ ಕುಲಪತಿಗಳಾದ ಡಾ.ಬಿ.ಎ. ವಿವೇಕ್ ರೈ ಅವರಿಗೂ ಹಿಂದಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಅವರಿಗೂ.

ನನ್ನ ಅಧ್ಯಯನದ ಬಗ್ಗೆ ವಿಚಾರಿಸಿ ಆಸಕ್ತಿ ಮೂಡಿಸಿ ಸೂಕ್ತ ಸಲಹೆಗಳನ್ನು ನೀಡಿ ಓದಲು ಪ್ರೇರೇಪಿಸಿದ ಡಾ.ಕೆ.ವಿ. ನಾರಾಯಣ ಅವರಿಗೂ ಪರೋಕ್ಷವಾಗಿ ನನಗೆ ಪ್ರೇರಣೆಯಾಗಿರುವ ಪ್ರೊ. ಬರಗೂರು ರಾಮಚಂದ್ರಪ್ಪ ಅವರಿಗೂ.

ನನ್ನ ಅಧ್ಯಯನಕ್ಕೆ ಪೂರಕವಾಗುವಂತೆ ಚಿಂತನೆಗೆ ಹಚ್ಚಿ ಬರವಣಿಗೆಯ ಓರೆ-ಕೋರೆಗಳನ್ನು ಸಹನೆಯಿಂದ ತಿದ್ದಿ-ತೀಡಿ ಆತ್ಮೀಯತೆಯಿಂದ ಸಹಕರಿಸಿ ಮಾರ್ಗದರ್ಶನ ಮಾಡಿದ ಪ್ರೀತಿಯ ಗುರುಗಳಾದ ಡಾ.ಪಿ. ಮಹಾದೇವಯ್ಯ ಅವರಿಗೂ. ಹಾಗೂ ನನ್ನ ಅಧ್ಯಯನದ ಬಗ್ಗೆ ಸದಾ ವಿಚಾರಿಸುತ್ತಾ ಪ್ರೋತ್ಸಾಹ ನೀಡುವ ಗುರುಗಳಾದ ಡಾ. ಪಾಂಡುರಂಗಬಾಬು, ಡಾ.ಅಶೋಕಕುಮಾರ ರಂಜೇರೆ ಮತ್ತು ಡಾ.ಸಾಂಬಾಮೂರ್ತಿ ಅವರಿಗೂ.

ಅಧ್ಯಯನದ ಬಗ್ಗೆ ಸದಾ ವಿಚಾರಿಸುತ್ತಾ ಪ್ರೋತ್ಸಾಹವನ್ನು ನೀಡುವ ಗುರುಗಳಾದ ಡಾ.ಕರಿಯಪ್ಪ ಮಾಳಿಗಿ, ಡಾ.ಮಾನಕರಿ ಶ್ರೀನಿವಾಸ ಆಚಾರ್ಯ, ಡಾ.ಮಲ್ಲಿಕಾಘಂಟಿ, ಡಾ.ಶಾಂತಿನಾಥ ದಿಬ್ಬದ, ಡಾ. ಮೃತ್ಯುಂಜಯ ಹೊರಕೇರಿ ಅವರಿಗೂ.

ನನ್ನ ಹಿರಿಯ ಸಂಶೋಧನಾ ಮಿತ್ರರಾದ ಡಾ. ಜಾಜಿದೇವೇಂದ್ರಪ್ಪ, ಡಾ. ಸಣ್ಣಪಾಪಯ್ಯ, ಡಾ. ಸುಜಾತ ಅಕ್ಕಿ, ಡಾ. ಎಂ.ನಾಗರಾಜ, ಡಾ. ಜಿ.ಉಮೇಶ್, ಡಾ. ಕವಿತಾರಾಣಿ, ಡಾ. ಭಾರತಿ ಅವರಿಗೂ.

ಸಂಶೋಧನಾ ಗೆಳೆಯರಾದ ದೇವರಾಜ ಓ., ಆಂಜನೇಯ ಉರ್ತಾಳ್, ಅಜ್ಜಯ್ಯ ಸಿ., ಲೋಕರಾಜ್, ಮೋಹನ್, ಶಿವು, ಜಗದೀಶಕುಮಾರ್, ಹೋಳಿಬಸಪ್ಪ, ಹಣುಮಂತರಾಯ, ಅರುಣ ಜೋಳದ ಕೂಡ್ಲಿಗಿ, ಚಂದ್ರಪ್ಪ, ಮಾರ್ಕಂಡೇಯ, ಹೂಲಿಯಪ್ಪ ಸಂಡೂರು, ಸಂತೋಷಪವಾರ್ ಎನ್., ವೀರಭದ್ರಪ್ಪ, ಗುರುರಾಜ ಮುಗುಳಿ, ಎ.ಡಿ. ಬಸವರಾಜ, ವಾಗೀಶ್, ಕುಪ್ಪೇರಾವ್, ನಾಗರಾಜ್ ಚಿತ್ರಂಪಳ್ಳಿ, ಲಿಂಗಣ್ಣ, ಗೀತಾ, ರೇಣುಕ, ಶ್ರೀದೇವಿ, ಸುಕನ್ಯಾ, ವೀರಾಕ್ಷಿ, ಸೋಮಕ್ಕ, ಪ್ರೇಮಾಪಲ್ಲವಿ, ಮಂಜುಳ, ಗಿರಿಜಾ, ಸುನಂದ, ಕೃಷ್ಣವೇಣಿ, ಪಾರ್ವತಿ, ತಾರಾಮತಿ, ಡಿ.ಬಿ.ಜ್ಯೋತಿ, ಸುಮತಿ ಅವರಿಗೂ.

ನನ್ನ ಓದಿಗೆ ಬೆನ್ನೆಲುಬಾಗಿ ನಿಂತ ನನ್ನ ಕನಸನ್ನು ನನಸು ಮಾಡಿದ ಪೂಜ್ಯ ತಂದೆಯವರಾದ ಬಿ.ರಾಮಣ್ಣ, ತಾಯಿ ನಾಗಮ್ಮ, ಚಿಕ್ಕಪ್ಪನವರಾದ ಬಿ.ಗೋಪಾಲ್, ಬಿ.ಬೈರಪ್ಪ, ಬಿ.ಗುರುಬಸಪ್ಪ ಮತ್ತು ಎರ್ರಿಬಸಪ್ಪ ಅವರಿಗೂ, ಚಿಕ್ಕಮ್ಮಂದಿರಿಗೂ, ತಂಗಿಯಾದ ಜಯಲಕ್ಷ್ಮಿ ಮತ್ತು ಭಾವನವರಾದ ಬಿ.ರಾಮದಾಸ ಅವರಿಗೂ, ಪುಟಾಣಿಗಳಾದ ಮದನ್, ಚರಣ್, ಕಿರಣ್, ಆರತಿ, ಕಾವೇರಿ, ಲಕ್ಷ್ಮಿ, ಅಮೃತ, ತಂಗಿ ಕವಿತ, ತಮ್ಮನವರಾದ ಕೇಶವನಾಯಕ, ಮಂಜುನಾಥ, ಸಂಗಮೇಶನವರಿಗೂ.

ನನ್ನ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದಂತಹ ಕಂಪ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಎಲ್.ನಾಗರಾಜ್, ಶ್ರೀ ಮಂಜಪ್ಪ, ಶ್ರೀ ನೂರ್‌ಭಾಷಾ, ಶ್ರೀ ಗಣಪತಿ ಲಂಬಾಣಿ, ಶ್ರೀಮತಿ ಜಗದೇವಿ ಕಲಶೆಟ್ಟಿ ಹಾಗೂ ಸಿಬ್ಬಂದಿಯವರಿಗೂ.

ನನ್ನನ್ನು ಸದಾ ಪ್ರೋತ್ಸಾಹಿಸುತ್ತಿರುವ ನನ್ನೂರಿನ ಗೆಳೆಯರಾದ ಜನಾರ್ಧನ ನಾಯಕ, ನಾಗರಾಜ ನಾಯಕ, ರಾಮಲಿಂಗ, ಜೆ.ಭೀಮಪ್ಪ, ವೀರಣ್ಣ, ಚಂದ್ರಶೇಖರ, ಕೆ.ರಾಮಯ್ಯ, ಕೆ.ಬಸವರಾಜ್, ಬಿ.ಬಸವರಾಜ್, ಹರಿ ಮತ್ತು ನನ್ನನ್ನು ಸದಾ ಅಭಿಮಾನದಿಂದ ಕಾಣುವ ನನ್ನೂರಿನ ಸಮಸ್ತ ಬಾಂಧವರಿಗೂ.


ಅಚ್ಚುಕಟ್ಟಾಗಿ ಡಿ.ಟಿ.ಪಿ. ಕಾರ್ಯ ಪೂರೈಸಿದ ಕಮಲಾಪುರದ ಶ್ರೀಮತಿ ಎ. ನಾಗವೇಣಿಯವರಿಗೆ

ತುಂಬು ಹೃದಯದ ಕೃತಜ್ಞತೆಗಳು.


ಬಿ.ಓಂಪ್ರಕಾಶ ನಾಯಕ

ಪರಿವಿಡಿ

೧೮೪೫ರಲ್ಲಿ ಮಡೋಸ್ ಟೈಲರ್ ರಿತ್ಯ ಕನ್ನಡ ಮಾತನಾಡುವ ಭೂಪ್ರದೇಶ



ಆದೋನಿ ತಾಲ್ಲೂಕು


ಥೋವಿ
ವಲ್ಲೂರು
ಕೋಸಗಿ
ಪೆದ್ದತುಂಬಳಂ
ಸಿಂದವರಂ
ವೀರಲದಿನ್ನೆ
ಹಾಲ್ವಿ
ಕುಪ್ಪಗಲ್ಲು
ಸಂತೇಕೂಡ್ಲೂರು
ಪೆದ್ದಹರಿವಾಣ
ಆದೋನಿ
ಗಡೇಕಲ್ಲು
ಹೆಬ್ಬತ್ತಿ
ಕೈರುಪ್ಪಲಂ
ಧಣಾಪುರಂ
ನಗರೂರು
ಬಲ್ಲೇಕಲ್
ಮಂತ್ರಿಕಿ
ಕಾತರಕಿ
ಇಸ್ವಿ
ಪೀಸಲಬಂಡ
ವಲ್ಲೂರ್
ರಾಡೂರು
ಉರುಕುಂದ
ಎಂಡಪಲ್ಲಿ
ಪದಲಕುಂಟ
ಕೌತಾಳಂ
ಕೊಂಡಾಪುರ
ಕಲ್ಲುಬಾವಿ
ಗುರ್ರಲದೊಡ್ಡಿ
ಸಲಕಲಕೊಂಡ
ಗೋನಬಾವಿ
ಮೈಕದೋಣ
ಬೈಚಿಗೇರಿ
ಬೊಮ್ಮಪಲ್ಲೆ
ಎಂಡಪಲ್ಲಿ
ಹನವಾಳ್

ಸಂಕ್ಷೇಪಗಳು

೧.	ಕ.	ಕನ್ನಡ
೨.	ತೆ.	ತೆಲುಗು
೩.	ಆ.ಕ.	ಆದೋನಿ ಕನ್ನಡ
೪.	ಆ.ತೆ.	ಆದೋನಿ ತೆಲುಗು
೫.	ಬ.ಕ.	ಬರಹ ಕನ್ನಡ
೬.	ಬ.ತೆ.	ಬರಹ ತೆಲುಗು
೭.	ಕ.ರ.ಕೋ.	ಕನ್ನಡ ರತ್ನಕೋಶ
೮.	ಕ.ಕ.ಕೋ.	ಕನ್ನಡ-ಕನ್ನಡ ರತ್ನಕೋಶ
೯.	ಕ.ನಿ.	ಕನ್ನಡ ನಿಘಂಟು
೧೦.	ಸಂ.ಕ.ನಿ.	ಸಂಕ್ಷಿಪ್ತ ಕನ್ನಡ ನಿಘಂಟು
೧೧.	ಸಿ.ಅ.	ಸಿರಿಗನ್ನಡ ಅರ್ಥಕೋಶ
೧೨.	ಪು.ವಾ.	ಪುರುಷ ವಾಚಕ
೧೩.	ಸ್ತ್ರೀ.ವಾ.	ಸ್ತ್ರೀ ವಾಚಕ
೧೪.	ನಂ.ಪು.	ನಪುಂಸಕ ವಾಚಕ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಪ್ರವೇಶ

ಮಾನವ ಸಂಘಜೀವಿ. ಅವನು ಒಂದಲ್ಲಾ ಒಂದು ಸಮಾಜದ ಸದಸ್ಯನಾಗಿರುತ್ತಾನೆ. ಅವನ ಮೂಲಭೂತ ಆಶಯಗಳಲ್ಲಿ ಹಾಗೂ ಅವನ ಬೌದ್ಧಿಕ ಆಕೃತಿಗಳಲ್ಲಿ ಭಾಷೆ ಪ್ರಧಾನವಾದುದು. ಬಹುಪ್ರಾಚೀನ ಕಾಲದಿಂದಲೂ ಭಾಷೆ ಎಂಬುದು ದೈವಸೃಷ್ಟಿ. ದೇವರಿಂದ ಪಡೆದ ಅಪೂರ್ವವಾದ ವರಗಳಲ್ಲಿ ಒಂದೆಂದು ಭಾವಿಸಲಾಗುತ್ತಿದ್ದಿತು. ಆ ಕಾಲದಲ್ಲಿ ಅನೇಕರು ಭಾಷೆ ದೈವಸೃಷ್ಟಿ ಎಂದೇ ನಂಬಿದ್ದರು. ಮನುಷ್ಯನ ಆಲೋಚನೆಗಳು ಚಿಂತನ ಮಂಥನಗಳು ಬೆಳೆದು ಬಂದಂತೆಲ್ಲಾ ಕಾಲ ಕಳೆದಂತೆಲ್ಲಾ ವೈಜ್ಞಾನಿಕ ದೃಷ್ಟಿ ಮೂಡಿ ಬಂದಂತೆಲ್ಲಾ, ಭಾಷೆ ದೈವ ಸೃಷ್ಟಿ ಎಂಬ ಕಲ್ಪನೆ ಮಾಯವಾಗಿ ಅದು ಮಾನವ ಸೃಷ್ಟಿ ಎಂಬ ಸತ್ಯಸಂಗತಿ ಹೊರಬಂದಿತು. ಇಂತಹ ಭಾಷೆಯಲ್ಲಿ ಅನೇಕ ವೈವಿಧ್ಯಗಳಿವೆ. ಪ್ರತಿಯೊಂದು ಭಾಷೆಯು ತನ್ನದೇ ಆದ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳನ್ನು ಪಡೆದುಕೊಂಡಿರುತ್ತದೆ. ಇದು ಜೀವಂತ ಭಾಷೆಯ ಬಹುಮುಖ್ಯವಾದ ಲಕ್ಷಣ.

ಯಾವುದೇ ಭಾಷೆ ತನ್ನ ಮಡಿವಂತಿಕೆಯನ್ನು ಬಹಳ ಕಾಲ ಕಾಯ್ದುಕೊಳ್ಳಲಾರದು. ರಾಜಕೀಯ ಕಾರಣದಿಂದಾಗಿ ಆಳರಸರ ಭಾಷೆಯು ಸ್ಥಳೀಯ ಭಾಷೆಗೆ ಸಂಬಂಧಿಸಿರದಿದ್ದರೆ ಕ್ರಮೇಣ ಆಡಳಿತಗಾರ ಭಾಷೆ ಸ್ಥಳೀಯ ಭಾಷೆಯ ಮೇಲೆ ಪ್ರಭಾವ ಬೀರತೊಡಗುತ್ತದೆ. ಗಡಿ ಪ್ರದೇಶಗಳಲ್ಲಿಯ ಜನರು ಸ್ಥಳೀಯ ಭಾಷೆ, ಆಡಳಿತ ಭಾಷೆ ಇವುಗಳಲ್ಲಿ ಮಾತೃಭಾಷೆಯೊಂದಿಗೆ ಕನಿಷ್ಟ ಪಕ್ಷ ಒಂದನ್ನಾದರೂ ಬಲ್ಲವರಾಗಿರುತ್ತಾರೆ. ಹೀಗಾಗಿ ಆ ಪ್ರದೇಶ ದ್ವಿಭಾಷಾ ಇಲ್ಲವೇ ಬಹುಭಾಷಾ ಪ್ರದೇಶವೆನಿಸುತ್ತದೆ. ಯಾವುದೇ ಕಾರಣವಿರಲಿ

ಅನ್ಯಭಾಷಾ ಪ್ರಭಾವ ಸುತ್ತಲಿನ ಪರಿಸ್ಥಿತಿಗನುಗುಣವಾಗಿ ಒಂದು ಪ್ರದೇಶದ ಸ್ಥಳೀಯ ಭಾಷೆಯ ಮೇಲೆ ಗಾಢವಾಗಿ ಪ್ರಭಾವ ಬೀರುತ್ತಾ ಹೋದಂತೆ ಅದರದೇ ಆದ ವಿಶಿಷ್ಟ ಭಾಷೆ ಅಂದರೆ ಬರಹ ಭಾಷೆಗಿಂತ ಭಿನ್ನವಾಗಿ ತೋರಲಾರಂಬಿಸುತ್ತದೆ. ಆಗ ಅದನ್ನು ಪ್ರಾದೇಶಿಕ ಪ್ರಭೇದವಾಗಿ ಪರಿಗಣಿಸಬೇಕಾಗುತ್ತದೆ. ಅನ್ಯಭಾಷೆ ಪ್ರಭಾವ ಈ ರೀತಿ ಪ್ರಭೇದಗಳಾಗಲು ಅವಕಾಶ ಮಾಡಿಕೊಡುವ ಪ್ರಧಾನ ಅಂಶವಾಗಿದೆ. ಅನ್ಯಭಾಷೆ ಪ್ರಭಾವವೆಂದರೆ ಸಾಮಾನ್ಯವಾಗಿ ಸ್ಥಳೀಯ ಭಾಷೆಯಲ್ಲಿ ಹಲವು ಬಗೆಯಲ್ಲಿ ನಡೆಯುವ ಸ್ವೀಕರಣೆ.

ಕನ್ನಡ ಭಾಷೆಯ ಮೇಲೆ ಅನೇಕ ಅನ್ಯ ಭಾಷೆಗಳು ಪ್ರಭಾವ ಬೀರಿವೆ. ಅದರಂತೆ ತೆಲುಗು ಭಾಷೆಯ ಮೇಲೆ ಅನ್ಯಭಾಷೆಯ ಪ್ರಭಾವ ಆಗಿದೆ. ಒಂದು ಕಾಲಕ್ಕೆ ಕನ್ನಡದ ಪ್ರದೇಶಗಳೇ ಆದ ಕರ್ನೂಲು ಜಿಲ್ಲೆಯ ಆದೋನಿ ತಾಲೂಕು ಇಂದು ಅನೇಕ ಸ್ಥಿತ್ಯಂತರಗಳಿಗೆ ಒಳಗಾಗಿದೆ. ಭಾಷಿಕವಾಗಿ ಒಂದು ಕಡೆ ಕನ್ನಡ ಎಲ್ಲೆ, ಮತ್ತೊಂದು ಕಡೆ ತೆಲುಗಿನ ಎಲ್ಲೆ ರಾಜಕೀಯ ಗಡಿಯನ್ನು ಮೀರಿ ನಿಂತಿದೆ. ಈ ಬೆಳವಣಿಗೆಯ ನಡುವೆಯೇ ಪರಸ್ಪರ ಭಾಷಾ ಕೊಡುಕೊಳ್ಳುವಿಕೆಯಲ್ಲಾದ ದ್ವಿಭಾಷಿಕ ಸ್ಥಿತಿಯನ್ನು ವಿಶ್ಲೇಷಿಸುವ ಕೆಲಸವನ್ನು ಮಾಡಲಾಗಿದೆ. ಭಿನ್ನ ನೆಲೆಗಳಿಂದ ವಲಸೆ ಬಂದ ಅನ್ಯಭಾಷಿಕರು ಆಯಾ ಸಾಮಾಜಿಕ ಪರಿಸರದ ಭಾಷೆಯನ್ನು ವ್ಯವಹಾರಿಕ ಭಾಷೆಯನ್ನಾಗಿ ಸ್ವೀಕರಿಸಿ ವಿವಿಧ ಸಂದರ್ಭದಲ್ಲಿ ಬಳಸುವುದು ಸಹಜ. ಅಂತಹ ಸಂದರ್ಭದಲ್ಲಿ ಭಾಷಿಕ ಭಿನ್ನತೆ ಹೆಚ್ಚು ಕಂಡುಬರುತ್ತದೆ. ಅದರಲ್ಲೂ ದ್ವಿಭಾಷಿಕ ಮತ್ತು ಬಹುಭಾಷಿಕರಲ್ಲಿ ಭಾಷಿಕ ಭಿನ್ನತೆ ಹೆಚ್ಚಾಗಿ ಕಂಡುಬರುವುದು. ಆದೋನಿ ಪರಿಸರದಲ್ಲಿರುವ ಕನ್ನಡಿಗರು ಮತ್ತು ತೆಲುಗರು ದ್ವಿಭಾಷಿಕರೂ ಹೌದು ಬಹುಭಾಷಿಕರೂ ಹೌದು. ತೆಲುಗು ಮಾತೃಭಾಷೆಯುಳ್ಳವರು ಮನೆ ಪರಿಸರದಲ್ಲಿ ತೆಲುಗನ್ನು ಬಾಹ್ಯ ಪರಿಸರದಲ್ಲಿ ಕನ್ನಡವನ್ನೂ ಬಳಸುವರು. ಅಂತಹ ಪರಿಸರದಲ್ಲಿ ಕನ್ನಡ ಮಾತುಗಳನ್ನು ತೆಲುಗು ಮಾತುಗಳೊಂದಿಗೆ ಬೆರೆಸಿ, ಬಳಸುವುದರಿಂದ ಅವರ ಮಾತಿನಲ್ಲಿ ತೆಲುಗು ಭಾಷೆಯ ಧ್ವನಿ, ಶಬ್ದಕೋಶ, ವ್ಯಾಕರಣ, ವಿಚಾರಗಳು ಸ್ಪಷ್ಟವಾಗಿ ಗೋಚರಿಸುವವು. ಆದ್ದರಿಂದ ತೆಲುಗರ ಕನ್ನಡದಲ್ಲಿ ತೆಲುಗು ಮಾತುಗಳು ಸಹಜವಾಗಿ ಕನ್ನಡೀಕರಣಗೊಂಡಿರುವ ಅಂಶ ಸ್ಪಷ್ಟ. ಈ ಹಿನ್ನೆಲೆಯಿಂದ ಕನ್ನಡ ಮತ್ತು ತೆಲುಗು ದ್ವಿಭಾಷಿಕ ಭಾಷಿಕ ಪರಿಸರವನ್ನು ಗಮನಿಸಿ ಆದೋನಿ ಕನ್ನಡ ರಚನೆಯನ್ನು ರೂಪಿಸಲಾಗಿದೆ. ಹಾಗೆಯೇ ಕನ್ನಡಿಗರು ಕನ್ನಡ ಮಾತುಗಳೊಂದಿಗೆ ತೆಲುಗು ಭಾಷೆಯನ್ನು ಬೆರಸಿ ಬಳಸುವುದರಿಂದ ಅವರ ಮಾತಿನಲ್ಲಿ ತೆಲುಗು ಭಾಷೆಯ ಧ್ವನಿ, ಶಬ್ದಕೋಶ, ವ್ಯಾಕರಣ, ವಿಚಾರಗಳು ಸ್ಪಷ್ಟವಾಗಿ ಗೋಚರಿಸುವುದು. ಆದ್ದರಿಂದ ಕನ್ನಡಿಗರ ಮಾತಿನಲ್ಲಿ ತೆಲುಗು ಮಾತುಗಳು ಸಹಜವಾಗಿಯೇ ಕನ್ನಡೀಕರಣಗೊಂಡಿರುವ ಅಂಶ ಸ್ಪಷ್ಟವಾಗಿದೆ. ಈ ಎರಡೂ ನೆಲೆಯಲ್ಲಿ ಆದೋನಿ ಕನ್ನಡದ ರಚನೆಯನ್ನು ಸೂಕ್ತ ನಿರ್ದೇಶನಗಳೊಂದಿಗೆ ಚರ್ಚಿಸಿ ಕನ್ನಡದ ಒಂದು ಮಹತ್ವವಾದ ಕನ್ನಡ ಭಾಷಾ ಪ್ರಭೇದ ಎಂಬ ನಿರ್ಧಾರಕ್ಕೆ ಬರಲಾಗಿದೆ.

ಆದೋನಿ ಪರಿಸರದಲ್ಲಿ ತೆಲುಗು ಮತ್ತು ಕನ್ನಡಿಗರ ಸಾಂಸ್ಕೃತಿಕ, ಧಾರ್ಮಿಕ ಮತ್ತು ಸಾಮಾಜಿಕ ಅಂಶಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಆದೋನಿ ಪರಿಸರದಲ್ಲಿ ಭಾಷಿಕ ವೈಶಿಷ್ಟ್ಯಗಳಲ್ಲದೆ ಭಾಷಿಕೇತರ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ. ಅಲ್ಲಿ ಬಳಕೆಯಾಗಿರುವ ಸ್ಥಳನಾಮ, ವ್ಯಕ್ತಿನಾಮ ಮುಂತಾದ ಸಾಮಾಜಿಕ ವಿಚಾರಗಳನ್ನು ಚರ್ಚಿಸಲಾಗಿದೆ. ಆದೋನಿ ಪರಿಸರ ಒಂದು ಬಹುಭಾಷಿಕ ಪರಿಸರವಾಗಿರುವುದರಿಂದ ಅಲ್ಲಿ ನೆಲೆಸಿರುವ ಸಮುದಾಯಗಳು ದ್ವಿಭಾಷಿಕ ಮತ್ತು ಬಹುಭಾಷಿಕ ಸಮುದಾಯಗಳಾಗಿವೆ.

ತೆಲುಗರು ಅನೌಪಚಾರಿಕ ಪರಿಸರಗಳಲ್ಲಿ ಬರಹದ ಕನ್ನಡವನ್ನು, ಬರಹ ಕನ್ನಡದ ಪದಗಳನ್ನು ಬಳಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ಕನ್ನಡಿಗರೂ ಬರಹದ ತೆಲುಗನ್ನು ಬಳಸಲು ಸಾಧ್ಯವಾಗುವುದಿಲ್ಲ. ಈ ಎರಡೂ ಭಾಷಿಕ ಮಾದರಿಗಳಿಗಿಂತ ಭಿನ್ನವಾಗಿ ಆದೋನಿ ಕನ್ನಡ ಮತ್ತು ಆದೋನಿ ತೆಲುಗು ಎಂಬ ಎರಡು ಮಾತಿನ ಭೇದಗಳು ಬಳಕೆಯಲ್ಲಿರುವುದು ಗೋಚರಿಸುತ್ತದೆ.

ಭಾಷಾವಾರು ಪ್ರಾಂತ ರಚನೆಗೆ ಮೊದಲು ಕರ್ನೂಲು ಜಿಲ್ಲೆಯ ಆದೋನಿ, ಆಲೂರು ತಾಲೂಕುಗಳು ಕನ್ನಡದ ಆಡಳಿತಕ್ಕೆ ಒಳಪಟ್ಟಿದ್ದವು. ಭಾಷಾವಾರು ಪ್ರಾಂತ ರಚನೋತ್ತರ ಅವಧಿಯಲ್ಲಿ ಆಂಧ್ರದ ಆಡಳಿತಕ್ಕೆ ಒಳಪಡಬೇಕಾಯಿತು. ಭಾಷಾವಾರು ಗಡಿ ಏರ್ಪಟ್ಟರೂ ಇಲ್ಲಿ ಕನ್ನಡ ಉಳಿದುಕೊಂಡು ಬೆಳೆದುಕೊಂಡು ಬಂದಿದೆ. ಕರ್ನಾಟಕದ ಗಡಿಭಾಗದಲ್ಲಿರುವ ಸಿರುಗುಪ್ಪ, ಸಂಡೂರು, ಹೊಸಪೇಟೆ, ಬಳ್ಳಾರಿ ಮೇಲೆ ಯಾವ ರೀತಿ ತೆಲುಗು ಪ್ರಭಾವವಿದೆಯೇ ಅದೇ ರೀತಿ ಆಂಧ್ರದ ಗಡಿಭಾಗವಾದ ಆದೋನಿ ಭಾಗದಲ್ಲಿ ಕನ್ನಡದ ಪ್ರಭಾವವಾಗಿದೆ. ಆದ್ದರಿಂದ ಕನ್ನಡ ತೆಲುಗು ಬಾಂಧವ್ಯ ಈಗಿನದಲ್ಲ, ಅನಾದಿ ಕಾಲದಿಂದಲೂ ಇರುವಂತಹದು.

ಕರ್ನಾಟಕ+ಆಂಧ್ರ = ಕರ್ನಾಟಕಾಂಧ್ರ ಸಮಾಸದಂತೆ ಅದೇ ರೀತಿ ಕನ್ನಡ ತೆಲುಗುಗಳ ಸಮ್ಮಿಳನವೇ ಆದೋನಿ ಕನ್ನಡ. ಈ ಸಮ್ಮಿಳನ ಅರ್ಧನಾರೀಶ್ವರನಂತೆ ಒಂದು ದೇಹದ ಎರಡು ಶ್ವಾಸಕೋಶಗಳಂತೆ ಅವಿನಾಭಾವ ಸಂಬಂಧವುಳ್ಳದ್ದು. ಶ್ರೀಕೃಷ್ಣದೇವರಾಯ ಕನ್ನಡದ ರಮಾರಮಣನೂ ಹೌದು. ಜೊತೆಗೆ ಆಂಧ್ರಭೋಜನೂ ಹೌದು.

ಕರ್ನಾಟಕದಲ್ಲಿ ಅನೇಕ ಹೋಟೆಲ್‌ಗಳಿಗೆ ಆಂಧ್ರಭೋಜನಾಲಯ ಎನ್ನುವ ನಾಮಫಲಕಗಳಿವೆ. ಇಲ್ಲಿ ಆಂಧ್ರಭೋಜನ ಸಿಗುತ್ತದೆ. ಇದು ಒಂದು ರೀತಿಯ ಬಾಂಧವ್ಯ. ಅದೇ ರೀತಿ ಆದೋನಿ ಭಾಗದಲ್ಲಿ ಕರ್ನಾಟಕ ಬೇಕರಿ ಎನ್ನುವಂತ ನಾಮಫಲಕಗಳು ಮಾತ್ರವಲ್ಲ ಕರ್ನಾಟಕ ಕಾಳು ರೊಟ್ಟಿ ಸಿಗುತ್ತವೆ. ಎನ್ನುವಂತಹ ನಾಮಫಲಕಗಳು ಕಂಡು ಬರುತ್ತವೆ.

ಆಂಧ್ರ ಗಡಿಭಾಗದ ಬಸ್ಸುಗಳಲ್ಲಿ ಬಳಕೆಯಾಗುವ ಭಾಷೆಯನ್ನು ಗಮನಿಸಿದರೆ ಕನ್ನಡ ತೆಲುಗು ಮಿಶ್ರಿತ ಭಾಷೆ ಕಂಡು ಬರುತ್ತದೆ. 'ಅಣ್ಣಾ ಕನ್ಯಾ ನೋಡಾಕ ಪೋತೇ ಬೆಕ್ಕಲಡ್ಡ ಆಯಾ' ಇಂತಹ ದ್ವಿಭಾಷಾ ಸ್ಥಿತಿ ಕಂಡು ಬರುತ್ತದೆ.

ಉದ್ದೇಶ

ಆದೋನಿ ತಾಲೂಕಿನ ಕುಂಟನಾಳ್, ಹನುಮಾಳ್, ಉಪ್ಪರಾಳ್, ಬಾಪುರ ಅಗಸಲದಿನ್ನೆ, ಕಾತರಕಿ, ನದಿಚ್ಯಾಗಿ, ಹೂವನೂರು, ಹಾಲ್ವಿ ಮುಂತಾದ ಗ್ರಾಮಗಳಲ್ಲಿ ಪ್ರತಿಯೊಂದು ಮನೆಯಲ್ಲಿ ಕನ್ನಡ ಭಾಷೆ ಬಳಕೆಯಲ್ಲಿದೆ. ನಾಟಕ ಆಡಿದರೂ ಕನ್ನಡ, ಬಯಲಾಟ ಆಡಿದರೂ ಕನ್ನಡ, ಪುರಾಣಗಳು ಹೇಳಿದರೂ ಕನ್ನಡವೇ, ಅವರ ಸಂಪ್ರದಾಯ, ಶಿಕ್ಷಣ, ಸಂಸ್ಕೃತಿ, ಹಬ್ಬ ಹರಿದಿನ ಪ್ರತಿಯೊಂದು ಕನ್ನಡಮಯವೇ. ಕನ್ನಡವೇ ಜೀವಾಳ. ಅಷ್ಟೇ ಅಲ್ಲ ಮನೆಯಲ್ಲಿ ತೂಗಾಡುವ ಕ್ಯಾಲೆಂಡರ್ ಶಬಾದಿಮಠ ಕ್ಯಾಲೆಂಡರ್, ಪ್ರತಿಯೊಂದು ಮನೆಯ ಪಂಚಾಂಗ ಬಸವೇಶ್ವರ ಪಂಚಾಂಗ. ಮನರಂಜನೆ ಕಾರ್ಯಕ್ರಮಗಳ ವಿಷಯಕ್ಕೆ ಬಂದಾಗ ಮನೆಗಳಲ್ಲಿ ಟಿ.ವಿ.ಯನ್ನು ನೋಡುವ ಸಂದರ್ಭದಲ್ಲಿ ಕನ್ನಡ ತೆಲುಗು ಎರಡನ್ನೂ ನೋಡುತ್ತಾರೆ. ವೀರಶೈವರ ಲಗ್ನಪತ್ರಿಕೆಗಳಲ್ಲಿ ಕನ್ನಡ ಅಕ್ಷರಗಳನ್ನೇ ಬಳಕೆ ಮಾಡುತ್ತಾರೆ. ಆಸ್ತಿ ಪತ್ರಗಳು ತೆಲುಗಿನಲ್ಲಿವೆ. ಆದರೆ ಪತ್ರ ಬರಹಗಾರರು ಕನ್ನಡದವರಾಗಿದ್ದರಿಂದ ಕನ್ನಡದ ಅಕ್ಷರಗಳು ಸೇರಿಕೊಂಡಿವೆ. ಈ ಹಿನ್ನೆಲೆಯಿಂದ ಕನ್ನಡ ತೆಲುಗು ಭಾಷಿಕರು ಜೊತೆಯಲ್ಲಿ ಬದುಕುತ್ತಿದ್ದಾರೆ. ಹೀಗಾಗಿ ಆದೋನಿ ಕನ್ನಡ ವಿಶಿಷ್ಟವಾಗಿದೆ. ತೆಲುಗರು ಕನ್ನಡಿಗರ ಜೊತೆ ಸಂಭಾಷಣೆ ಮಾಡುವಾಗ ಕನ್ನಡ ತೆಲುಗು ಭಾಷಿಕ ತುಣುಕುಗಳನ್ನು ನುಡಿಮಿಶ್ರಣ ಮಾಡಿ ಬಳಕೆ ಮಾಡುವ ಪ್ರಕ್ರಿಯೆ ಕಂಡುಬರುತ್ತದೆ. ಅದೇ ರೀತಿ ಕನ್ನಡಿಗರು ತೆಲುಗು ಭಾಷಿಕರ ಜೊತೆ ವ್ಯವಹರಿಸುವಾಗ ಆದೋನಿ ಕನ್ನಡ ಬರಹ ಕನ್ನಡಕ್ಕಿಂತ ವಿಶಿಷ್ಟವಾಗಿದೆ. ಆದ್ದರಿಂದ ಯಾವುದೇ ಪರಿಸರದ ಆಡುನುಡಿಯನ್ನು ದ್ವಿಭಾಷಿಕ ಅಧ್ಯಯನದ ಮಾದರಿಯಲ್ಲಿ ಅಧ್ಯಯನ ಮಾಡಿದಾಗ ಒಂದು ನಿರ್ದಿಷ್ಟ ಪರಿಸರದ ಸಂಸ್ಕೃತಿ ಮತ್ತು ಸಮಾಜದ ರಚನೆಯನ್ನು ತಿಳಿಯಬಹುದು. ಕನ್ನಡದ ಸಮಗ್ರ ರಚನೆಯನ್ನು ವಿವರಿಸುವ ಉದ್ದೇಶದಿಂದ ಕನ್ನಡದ ಅತ್ಯಂತ ಮುಖ್ಯ ಪ್ರಾದೇಶಿಕ ಪ್ರಭೇದವಾದ ಆದೋನಿ ಕನ್ನಡವನ್ನು ಪ್ರಸ್ತುತ ಸಂಶೋಧನೆಗೆ ಆರಿಸಿಕೊಳ್ಳಲಾಗಿದೆ.

ವಿಧಾನ

ಆದೋನಿ ಸ್ವರೂಪ ತಿಳಿಯಲು ಆದೋನಿ ಪರಿಸರದ ಎಲ್ಲಾ ಸಾಮಾಜಿಕ ವರ್ಗದವರಿಂದ ಭಾಷಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆದೋನಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕನ್ನಡ ಮಾಧ್ಯಮ

ಶಾಲೆಗಳಿಂದ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಶೋಧನೆ ಪ್ರಬಂಧಗಳು, ಮೌಖಿಕ ದಾಖಲೆಗಳನ್ನು ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಕ್ಷೇತ್ರ ಮಾಹಿತಿಯೇ ಈ ನಿಬಂಧಕ್ಕೆ ಹೂರಣ. ಪ್ರಶ್ನಾವಳಿ ಮತ್ತು ಕಥೆಗಳ ಮೂಲಕ ಭಾಷಿಕ ಅಂಶಗಳನ್ನು ಪಡೆಯಲಾಗಿದೆ. ಗಡಿ ಪ್ರದೇಶದ ದ್ವಿಭಾಷಿಕ ವಲಯದಲ್ಲಿ ತೆಲುಗು ಮತ್ತು ಕನ್ನಡ ಮಾತೃಭಾಷಿಕರ, ಭಾಷಿಕ ಚಹರೆಗಳನ್ನು ಗಮನಿಸಿಕೊಳ್ಳಲಾಗಿದೆ. ಈ ಮೂಲಕ ಬರಹ ಮತ್ತು ಉಚ್ಚಾರಣೆಯ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ತೆಲುಗು ಮಾತೃ ಭಾಷಿಕರನ್ನು ಸಂದರ್ಶಿಸಿ ಅವರು ಕನ್ನಡ ಉಚ್ಚರಿಸುವ ಬಗೆಯನ್ನು ತಿಳಿಯಲಾಗಿದೆ. ಅಲ್ಲದೆ ವ್ಯವಹಾರಿಕ ಸಂದರ್ಭದಲ್ಲಿ ಭಾಷೆಯ ಬಳಕೆಯನ್ನು ಹೊರಾವರಣಗಳಾದ ಬಸ್ಸಿನ ಪ್ರಯಾಣ, ಮಾರ್ಕೆಟ್, ಹೋಟೆಲ್‌ಗಳಲ್ಲಿ ಸಾಂದರ್ಭಿಕವಾಗಿ ಗಮನಿಸಲಾಗಿದೆ. ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿಯೊಂದಿಗೆ ಕನ್ನಡ, ತೆಲುಗು, ಇಂಗ್ಲೀಷ್‌ನಲ್ಲಿ ಬಂದ ಕೆಲವು ಅಧ್ಯಯನಗಳನ್ನು ಗಮನಿಸಿಕೊಂಡು ಪ್ರಸ್ತುತ ನಿಬಂಧವನ್ನು ಭಿನ್ನ ಮಾದರಿಯಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ವ್ಯಾಪ್ತಿ

ಆದೋನಿ ಕನ್ನಡ ಎಂಬ ನಿಬಂಧದಲ್ಲಿ ಸಂಪೂರ್ಣ ಗಡಿ ಪ್ರದೇಶವನ್ನು ಆಯ್ದುಕೊಂಡಿಲ್ಲ. ಕರ್ನೂಲು ಜಿಲ್ಲೆಯ ಆದೋನಿ ತಾಲೂಕು ಮತ್ತು ಆಲೂರು ತಾಲೂಕಿನ ಕೆಲವು ಸ್ಥಳಗಳನ್ನು ಭಾಷಿಕ ಮಾಹಿತಿಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಒಂದೊಮ್ಮೆ ರಾಜಕೀಯ ಗಡಿಗಳನ್ನು ಮೀರಿ ಭಾಷಿಕ ಭೌಗೋಳಿಕ ವ್ಯಾಪ್ತಿಯನ್ನು ಗಮನಿಸಲಾಗಿದೆ. ಆದೋನಿ ಪರಿಸರದ ಭಾಷೆ, ಭೌಗೋಳಿಕ ಪರಿಸರ, ಜನಜೀವನ, ಚರಿತ್ರೆ, ಸಂಸ್ಕೃತಿ ಈ ಎಲ್ಲವನ್ನು ಅಧ್ಯಯನದಲ್ಲಿ ಒಳಗು ಮಾಡಿಕೊಂಡು ಭಾಷಿಕ ಅಂಶಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಪ್ರಸ್ತುತ ಆದೋನಿ ಕನ್ನಡ ಎಂಬ ಈ ನಿಬಂಧ ರಚನೆಗೆ ಮುನ್ನ ಎತ್ತಿಕೊಂಡ ಸವಾಲುಗಳು ಇಂತಿವೆ.

೧. ಆದೋನಿ ಕನ್ನಡದ ಉಚ್ಚಾರಣೆ ಧ್ವನಿ ನಿಯಮಗಳು ಬರಹ ಕನ್ನಡಕ್ಕಿಂತ ಯಾವ ರೀತಿ ಭಿನ್ನವಾಗಿವೆ ಎಂದು ತೋರಿಸಿಕೊಡುವುದು.

೨. ಪದ ರಚನೆಯನ್ನು ವ್ಯಾಕರಣಾತ್ಮಕ ದೃಷ್ಟಿಯಿಂದ ಬರಹ ಕನ್ನಡಕ್ಕಿಂತ ಯಾವ ರೀತಿ ಭಿನ್ನವಾಗಿದೆ ಎನ್ನುವುದನ್ನು ಉದಾಹರಣೆ ಸಹಿತ ಗುರುತಿಸುವುದು.

೩. ಆದೋನಿ ಕನ್ನಡದ ವಿಶಿಷ್ಟ ಪದಗಳು ಮತ್ತು ಪ್ರಯೋಗಾರ್ಥವನ್ನು ನಿದರ್ಶನ ಸಹಿತ ವಿಶ್ಲೇಷಿಸುವುದು.

೪. ದ್ವಿಭಾಷಿಕ ವಲಯದಲ್ಲಿ ಭಾಷಿಕ ಕೊಡು ಪಡೆಯನ್ನು ಚರ್ಚಿಸುವುದು. ನುಡಿ ಬೆರಕೆಯಲ್ಲಿ ಕನ್ನಡ ತೆಲುಗು ನುಡಿಮಿಶ್ರಣ ಇದೆಯೋ ಅಥವಾ ತೆಲುಗು ಕನ್ನಡ ನುಡಿಮಿಶ್ರಣ ಇದೆಯೋ ಅಥವಾ ಎರಡೂ ಮಾದರಿಯ ರಚನೆಗಳು ಬಳಕೆಯಲ್ಲಿ ಇವೆಯೋ ಎನ್ನುವುದನ್ನು ಗುರುತಿಸುವುದು.

೫. ತೆಲುಗು ಭಾಷೆಯ ಮೇಲೆ ಕನ್ನಡದ ಪ್ರಭಾವವಾಗಿದೆಯೋ ಅಥವಾ ಕನ್ನಡದ ಮೇಲೆ ತೆಲುಗಿನ ಪ್ರಭಾವವಾಗಿದೆಯೋ ಎನ್ನುವುದನ್ನು ಗಮನಿಸುವುದು ಮತ್ತು ಆದೋನಿ ತೆಲುಗು ಬರಹ ತೆಲುಗಿಗಿಂತ ಯಾವ ರೀತಿ ಭಿನ್ನವಾಗಿದೆ ಮತ್ತು ಆದೋನಿ ಬಳಕೆಯ ತೆಲುಗಿನ ರೂಪಗಳು ಕನ್ನಡ ಬರಹದ ರೂಪಗಳಿಗೆ ಸಾಮಿಪ್ಯವಿರುವುದನ್ನು ಗಮನಿಸುವುದು.

೬. ಶೈಕ್ಷಣಿಕ ವಲಯದಲ್ಲಿ ಆದೋನಿ ಪರಿಸರದಲ್ಲಿರುವ ಕನ್ನಡಿಗರು ಯಾವ ರೀತಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎನ್ನುವುದನ್ನು ಚರ್ಚಿಸುವುದು.

೭. ವ್ಯಕ್ತಿನಾಮಗಳನ್ನು ನಿರ್ದಿಷ್ಟ ವಾರ್ಗಿಕ ಎಂದು ವಿಭಾಗಿಸಿಕೊಂಡು, ಕನ್ನಡ ತೆಲುಗು ರೂಪಗಳು ಯಾವ ರೀತಿ ವ್ಯಕ್ತಿನಾಮಗಳಲ್ಲಿ ಬಳಕೆಯಾಗಿವೆ ಎನ್ನುವುದನ್ನು ದ್ವಿಭಾಷಿಕ ಪರಿಸರದ ಹಿನ್ನೆಲೆಯಲ್ಲಿ ಚರ್ಚಿಸುವುದು.

೮. ಆದೋನಿ ಪರಿಸರದ ಸ್ಥಳನಾಮಗಳನ್ನು ಕುರಿತು ಚರ್ಚಿಸುವುದು. ಈ ಸ್ಥಳನಾಮಗಳಲ್ಲಿ ಕನ್ನಡ ತೆಲುಗು ರೂಪಗಳು ಬಳಕೆಯಾಗಿರುವುದನ್ನು ಗಮನಿಸುವುದು.

ಈ ಎಲ್ಲಾ ಕಾರಣಗಳಿಂದ ಆದೋನಿ ಕನ್ನಡ ಎಂಬ ನಿಬಂಧವನ್ನು ಅಧ್ಯಯನಕ್ಕೆ ಒಳಗು ಮಾಡಲಾಗಿದೆ. ಈವರೆಗೆ ಕನ್ನಡದಲ್ಲಿ ಕೇವಲ ಒಳಾವರಣದ ಭಾಷಿಕ ಪ್ರಭೇದದ ಅಧ್ಯಯನಗಳು ನಡೆದಿವೆ. ಈ ನಿಬಂಧದಲ್ಲಿ ಗಡಿಭಾಗದ ಆಂಧ್ರದ ಹೊರಾವಣವನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಅಲ್ಲದೆ ಈ ವರೆಗಿನ ವರ್ಣನಾತ್ಮಕ ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಮೌಖಿಕ ಪರಂಪರೆ, ಚರಿತ್ರೆ, ಭಾಷೆ, ಸಮಾಜ ಈ ಅಂಶಗಳ ಮುಖೇನ ಸಂಸ್ಕೃತಿಯ ವಿಭಿನ್ನ ಮುಖಗಳ ಕಡೆಗೆ ಗಮನಹರಿಸಲಾಗಿದೆ.

ಪ್ರಸ್ತುತ ಅಧ್ಯಯನವು ಹಲವು ದೃಷ್ಟಿಕೋನಗಳಿಂದ ಮಹತ್ವಪೂರ್ಣವಾಗಿದೆ. ಒಂದು ಭಾಷೆಯನ್ನು ಆಡುವ ಜನರ ಸಮಾಜ, ಸಂಸ್ಕೃತಿ, ಆಚಾರ ವಿಚಾರ ಮುಂತಾದವುಗಳನ್ನು ಅರಿಯಬೇಕಾದರೆ ಇಂತಹ ಅಧ್ಯಯನಗಳು ನೆರವಾಗುತ್ತವೆ. ಭಾಷಾಬೋಧಕರಿಗೆ ಮತ್ತು ಕಲಿಕಾರ್ಥಿಗಳಿಗೆ ಇಂತಹ ಅಧ್ಯಯನಗಳಿಂದ

ಪ್ರಯೋಜನವಿದೆ. ಶಿಕ್ಷಕ ಮಾತೃಭಾಷೆ ಬೋಧಿಸುವವನಿರಲಿ ಅಥವ ಅನ್ಯಭಾಷೆ ಬೋಧಿಸುವವನಿರಲಿ ಅವನು ಉಪಭಾಷೆ ಶಬ್ದಗಳಿಗಿಂತ ಬರಹ ಭಾಷೆ ಶಬ್ದಗಳನ್ನು ಹೆಚ್ಚು ಬಳಸುತ್ತಾರೆ. ಮಕ್ಕಳಿಗೆ ಸುಲಭವಾಗಿ ಭಾಷೆ ಅರ್ಥವಾಗಬೇಕಾದರೆ ಬರಹ ಕನ್ನಡದ ಶಬ್ದಗಳಿಗೆ ಸಂವಾದಿಯಾಗಿ ಪ್ರಭೇದದ ಶಬ್ದಗಳನ್ನು ಅಗತ್ಯವಿದ್ದ ಕಡೆಗಳಲ್ಲೆಲ್ಲಾ ಪರಿಚಯಿಸುವುದು ಉತ್ತಮ. ಇದರಿಂದ ಭಾಷಾ ಕಲಿಕೆ ಸುಲಭವಾಗುತ್ತದೆ. ದ್ವಿಭಾಷಿಕ ಪರಿಸರದಲ್ಲಿ ವ್ಯಾಸಾಂಗ ಮಾಡುತ್ತಿರುವ ಮಕ್ಕಳಿಗೆ ಶೈಕ್ಷಣಿಕ ನೆಲೆಯಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತಿವೆ. ಅಂತಹ ಸಮಸ್ಯೆಗಳನ್ನು ಪ್ರಸ್ತುತ ನಿಬಂಧದಲ್ಲಿ ಗುರುತಿಸಲಾಗಿದೆ. ಈ ಅಧ್ಯಯನದ ಸಹಾಯದಿಂದ ಸರ್ಕಾರ ಕ್ರಮ ತೆಗೆದುಕೊಂಡು ಸಮಸ್ಯೆಗಳಿಗೆ ಪರಿಹಾರ ಸೂಚಿಸಬಹುದಾಗಿದೆ. ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು ತುರ್ತಾಗಿ ಆಗಬೇಕಾದ ಕೆಲಸ. ಈ ಹಿನ್ನೆಲೆಯಿಂದ ಪ್ರಸ್ತುತ ಅಧ್ಯಯನವು ಮಹತ್ವಪೂರ್ಣವಾದುದ್ದಾಗಿದೆ.

□□

ಅಧ್ಯಾಯ ೨

ಆದೋನಿ ಭೌಗೋಳಿಕ ಮತ್ತು ಪ್ರಾಚೀನ ಇತಿಹಾಸ

ಅಧ್ಯಾಯ ೨

ಆದೋನಿ ಭೌಗೋಳಿಕ ಮತ್ತು ಪ್ರಾಚೀನ ಇತಿಹಾಸ

ಭಾರತ ನಕ್ಷೆಯಲ್ಲಿ ಆದೋನಿ ೧೫°.೩೬c ಉತ್ತರ ಅಕ್ಷಾಂಶ ಮತ್ತು ೭೭°.೧೬c ಪೂರ್ವ ರೇಖಾಂಶದಲ್ಲಿ ಇದೆ. ಆದೋನಿ ತಾಲೂಕು ವಿಸ್ತೀರ್ಣ ೧,೯೮,೩೧೪ ಹೆಕ್ಟೇರ್. ಮಳೆಗಾಲ ಸುಮಾರು ಜೂನ್ ತಿಂಗಳಿನಿಂದ ಪ್ರಾರಂಭವಾಗಿ ಅಕ್ಟೋಬರ್-ನವೆಂಬರ್ ತಿಂಗಳವರೆಗೆ ಇರುತ್ತದೆ. ಬಿಸಿಲು ಕಾಲದಲ್ಲಿ ಬಿಸಿಲು ಫೆಬ್ರವರಿ ತಿಂಗಳಿಂದ ಜೂನ್ ತಿಂಗಳವರೆಗೆ ಇರುತ್ತದೆ. ಮತ್ತು ಮೇ ತಿಂಗಳಲ್ಲಿ ೩೮°c ನಿಂದ ೪೬°c ಅತಿಹೆಚ್ಚು ಉಷ್ಣತೆ ಇರುವುದು ತಿಳಿದುಬರುತ್ತದೆ. ಜೂನ್‌ವರೆಗೆ ೩೪°c ನಿಂದ ೩೬°c ವರೆಗೆ ಉಷ್ಣತೆ ಇರುತ್ತದೆ.

ಚಳಿಗಾಲ ನವೆಂಬರ್ ತಿಂಗಳಿನಿಂದ ಫೆಬ್ರವರಿ ೨ನೇ ವಾರದ ವರೆಗೆ ಇರುವುದು. ಆಗಾಗ ಅಂದರೆ ಮಧ್ಯದಲ್ಲಿ ಅತಿ ಕಡಿಮೆ ಉಷ್ಣತೆ ಇರುತ್ತದೆ. ಅತಿ ಕಡಿಮೆ ದಿನಾಂಕ ೨೯.೧೨.೧೯೦೨ ರಲ್ಲಿ ೬.೭° ಉಷ್ಣತೆ ಕಂಡುಬಂದಿದೆ. ಮೇ ತಿಂಗಳಿನಿಂದ ನವೆಂಬರ್‌ವರೆಗೆ ಆಕಾಶದಲ್ಲಿ ಮೋಡಗಳು ಕಂಡು ಬಂದು ಉಳಿದ ತಿಂಗಳುಗಳಲ್ಲಿ ಆಕಾಶ ಶುಭ್ರವಾಗಿ ಇರುವುದು ಕಾಣಬಹುದು. ಸಾಮಾನ್ಯವಾಗಿ ಮಳೆ ೫೮೨.೩m.m ಇರುತ್ತದೆ. ೧೯೯೫-೯೬ ರಲ್ಲಿ ೫೨೦.೬m.m. ದಾಖಲಾಗಿದೆ. ಅದೇ ರೀತಿ ಗಾಳಿ ವಿಶಿಷ್ಟತೆ ಸುಮಾರು ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೆ ಗಂಟೆಗೆ ೪ ರಿಂದ ೮ ಕಿ.ಮೀ. ವೇಗದಲ್ಲಿ ಬೀಸುತ್ತದೆ.

ಆದೋನಿ ವ್ಯವಸಾಯ, ವ್ಯಾಪಾರ, ವಾಣಿಜ್ಯ ಪ್ರಕೃತಿ ದೃಷ್ಟಿಯಿಂದಲ್ಲದೆ ಪುರಾತನ ರಾಜರ ಇತಿಹಾಸ ಮತ್ತು ಐತಿಹಾಸಿಕ ಆಧಾರಗಳನ್ನು ಪರಿಶೀಲಿಸಿದರೆ ಕರ್ನೂಲು ಜಿಲ್ಲೆಯಲ್ಲಿ ಆದೋನಿ ಎರಡನೇ ಪಟ್ಟಣ ಎಂದು ಗುರುತಿಸಲಾಗಿದೆ. ಅಷ್ಟೇ ಅಲ್ಲದೆ ಮದ್ರಾಸ್, ಬೆಂಗಳೂರು, ಮುಂಬೈ, ಕೊಚ್ಚಿನ್, ಹೈದರಾಬಾದ್, ಡೆಲ್ಲಿ ಮೊದಲಾದ ಪಟ್ಟಣಗಳಿಗೆ

ಹೋಗಿ ಬರುವ ರೈಲು ಮಾರ್ಗಗಳು ಆದೋನಿ ಮೇಲೆ ಹೋಗಿ ಅನುಕೂಲ ಹೊಂದಿರುವುದು ವಿಶೇಷ. ಈ ವ್ಯವಸ್ಥೆ ಬಹಳ ಹಳೇ ಕಾಲದಿಂದ ಇರುವುದಲ್ಲದೆ ರಾಜರ ಕಾಲದಲ್ಲಿ ಕೂಡ ದೂರ ಪ್ರದೇಶಗಳ ರಹದಾರಿಗೆ ಅನುಕೂಲವಾಗಿದೆ.

ಆದೋನಿ ಸುತ್ತ ನಾಲ್ಕು ಜಿಲ್ಲೆಗಳು ಹತ್ತಿರ ಇವೆ. ಬಳ್ಳಾರಿ ೮೮ ಕಿ.ಮೀ. ರಾಯಚೂರು ೭೫ ಕಿ.ಮೀ. ಅನಂತಪುರ ೧೧೦ ಕಿ.ಮೀ. ಕರ್ನೂಲು ೮೦ ಕಿ.ಮೀ. ದೂರದಲ್ಲಿ ಇವೆ. ತುಂಗಾಭದ್ರ ನದಿ ೪೫ ಕಿ.ಮೀ. ದೂರದಲ್ಲಿದೆ. ಪುಣ್ಯಕ್ಷೇತ್ರವಾದ ಶ್ರೀ ರಾಘವೇಂದ್ರಸ್ವಾಮಿ ಸನ್ನಿಧಾನವಾದ ಮಂತ್ರಾಲಯಕ್ಕೆ ಮತ್ತು ಉರುಕುಂದಿ ಗ್ರಾಮದ ಶ್ರೀ ಉರುಕುಂದಿ ಈರಣ್ಣಸ್ವಾಮಿ ಕ್ಷೇತ್ರಕ್ಕೆ ಹೋಗುವುದಕ್ಕೆ ಆದೋನಿ ಪಟ್ಟಣ ಕೇಂದ್ರಬಿಂದುವಾಗಿದೆ. ಆದೋನಿ ಚರಿತ್ರಾರ್ಹ ಸ್ಥಳವಾಗಿ ಹೆಸರು ಪಡೆದಿದೆ.

ಜನಪ್ರಗತಿ : ಪ್ರತಿ ೧೦೦೦ ಪುರುಷರಿಗೆ ೯೭೯ ಸ್ತ್ರೀಯ ಸಂಖ್ಯೆ ಇರುವುದು ತಿಳಿದುಬರುತ್ತದೆ.

ಜನಸಂಖ್ಯಾ : ಕ್ರಿ.ಶ. ೧೮೬೫-೨೦,೦೦೦, ೧೯೭೬-೮೦,೦೦೦, ೧೯೯೮-೨,೩೦,೦೦೦

ಆದಿವನಂ, ಆದಿವನಿ, ಯದುವನಿ, ಯಾದವ ಅವನಿ, ಆದವಾನಿ, ಆದೋನಿ

ಆದವಾನಿ ಆದಿಕಾಲದ ಸೃಷ್ಟಿ. ಪ್ರಕೃತಿಯ ಸೌಂದರ್ಯದೊಂದಿಗೆ ಹಚ್ಚ ಹಸಿರಿನ ಕಾಂತಿಯೊಂದಿಗೆ, ಗುಡ್ಡಗಾಡಿನೊಂದಿಗೆ, ಪ್ರಶಾಂತವಾದ ತಂಪಾದ ಗಾಳಿಯೊಂದಿಗೆ ಬಯಲು ಭೂಮಿಯೊಂದಿಗೆ ಕೂಡಿದ ಸುಂದರ ವನ.

ಮಹರ್ಷಿಗಳ, ಮುನಿ ಪುಂಗವರ, ಪಾವನಕ್ಕೆ ಪುಣ್ಯಸ್ಥಳವಾಗಿ, ಜ್ಞಾನೋದಯಕ್ಕೆ ಸ್ಫೂರ್ತಿ ನೀಡುವ ವಾತಾವರಣದೊಂದಿಗೆ ಕೂಡಿದ ಮಹತ್ತರ ಕ್ಷೇತ್ರವೆಂದು ಹೇಳಬಹುದು. ಶ್ರೀಗುರು ರಾಘವೇಂದ್ರರು ತಮ್ಮ ಚರಿತ್ರೆಯಲ್ಲಿ ಅವರೇ ಈ ಪ್ರದೇಶವನ್ನು ಕುರಿತು ಬಹಳ ವಿವರವಾಗಿ ವರ್ಣಿಸಿದ್ದಾರೆ.

ಪೂರ್ವಕಾಲದ ವಿಷಯಗಳನ್ನು ಅವಲೋಕಿಸಿದಾಗ ಆದಿಮಾನವನ ವಾಸಸ್ಥಳವೆಂದು ಹೇಳುವ ಆಧಾರಕ್ಕೆ ಅನುಗುಣವಾಗಿ ಅಂದಿನ ಮಹಾಪುರುಷರು ಆನಂದಭರಿತರಾಗಿ 'ಆದಿವನ' (ಆದಿವನಿ) ಎಂದು ಕರೆದಿರಬಹುದು ಎನ್ನುವುದಕ್ಕೆ ಸಾಕ್ಷಿಯಾಗಿ ಈ ಪ್ರಾಂತದೊಳಗಿನ ಸೌಂದರ್ಯ ವೀಕ್ಷಣೆ, ಆದಿಮಾನವರ ಗುರುತುಗಳು ಹೇಳುವ ಆಧಾರದೊಂದಿಗೆ ಮತ್ತು ಆದಿವನಂ, ಯಾದವರ ಪಾಲನೆಯಲ್ಲಿ ಯಾದವನಿ, ಯಾದವ ಅವನಿ, ಆದವಾನಿ ಹೀಗೆ ರೂಪಾಂತರ ಹೊಂದುತ್ತಾ ಬಂದಿದೆ.

ಆದವಾನಿ ಕಾಲಕ್ರಮೇಣ ಜನಜೀವನ ಹೆಚ್ಚಾದ್ದರಿಂದ ಕಲುಷಿತವಾಗಿ ಅದರ ಸಮಾಜ ಸೌಂದರ್ಯವನ್ನು ಕಳೆದುಕೊಳ್ಳುತ್ತಾ ಬಂದಿದೆ. ಅಂದಿನ ನಮ್ಮ ಪೂರ್ವಜರ ಕಾಲದ ಗುಣವನ್ನು ದೃಷ್ಟಿಯಲ್ಲಿ ಉಳಿಸಿಕೊಂಡು ಔದ್ಯೋಗಿಕ, ಆಧುನಿಕ ಯಂತ್ರಯುಗವನ್ನು ಅನುಸರಿಸಿ 'ಆದೋನಿ' ಎಂದು ಸಂಬೋಧಿಸಲಾಗಿದೆ ಎಂದು ಪಿ.ವಿ. ನರಸನ್ನ ಅವರು ಅಭಿಪ್ರಾಯಪಡುತ್ತಾರೆ.

ಆದಿಮಾನವರ ವಾಸಸ್ಥಳವಾದ್ದರಿಂದ 'ಆದಿವನಂ' 'ಆದಿಬನಂ' ಎಂದು ಗೋಸಂರಕ್ಷಣೆಗೆ ಅನುಕೂಲವಾದ ಹಚ್ಚಹಸಿರಿನ ಮೈದಾನವಾದ ಈ ಪ್ರಾಂತವನ್ನು ಗೋಪಾಲಕ ರಾಜರಾದ ಯಾದವರ ವಾಸಸ್ಥಳವೆಂದು 'ಯಾದುವನಂ' ಎಂದು ಯಾದವರ ರಾಜ್ಯ ಪಾಲನೆ ಮಾಡಿದ್ದರಿಂದ 'ಯಾದವನಿ' ಮತ್ತು 'ಯಾದವ ಅವನಿ' ಎಂದು ಗುಡ್ಡಗಾಡಿನಲ್ಲಿ ಕೋಟೆ ನಿರ್ಮಿಸಿದ್ದರಿಂದ 'ಯಾದವಗಿರಿ' ಎಂದು, ಕೋಟೆಯೊಳಗೆ ಹೆಚ್ಚಾಗಿ ಓಣಿಗಳು, ಸಂದುಗಳು, ಇರುವುದರಿಂದ 'ಅದ ಓಣಿ' ಎಂದು, ಸುಲ್ತಾನರ ಕಾಲದೊಳಗೆ 'ದೋನಿ', 'ದಿವಾನಿ' 'ಬೇಗಂಪುರಂ' ಎಂದು ಕೊನೆಗೆ 'ಆದವಾನಿ' ಎಂದು ಹೀಗೆ ಅನೇಕ ಹೆಸರುಗಳೊಂದಿಗೆ ಕರೆಯಲಾಗಿದೆ.

ಆದೋನಿಯಲ್ಲಿ ಯಾರೂ ಸ್ವತಂತ್ರವಾಗಿ ರಾಜ್ಯಭಾರವನ್ನು ಮಾಡಲಿಲ್ಲ. ರಾಜ ಮಹಾರಾಜರ, ಚಕ್ರವರ್ತಿಗಳ ಸಾಮಂತರು ಪರಿಪಾಲನೆ ಮಾಡುತ್ತಾ ರಾಜರಿಗೆ ಕಾಣಿಕೆಗಳನ್ನು ಸಲ್ಲಿಸುತ್ತಾ ಇರುತ್ತಿದ್ದರು.

ವಿಜಯನಗರ ರಾಜ್ಯ ಪಾಲನೆಯಲ್ಲಿ ಆದೋನಿ ಸುಂದರವಾದ ಶಿಲ್ಪಕಲೆಗಳೊಂದಿಗೆ, ಸುಂದರ ಕಟ್ಟಡಗಳಿಂದ ನಿರ್ಮಿಸಲಾದ ಸುಂದರ ಪಟ್ಟಣವಾಗಿ ರೂಪಿಸಲ್ಪಟ್ಟಿದೆ.

ವಿಜಯನಗರ ಸಾಮ್ರಾಜ್ಯ ಪಾಲನೆಯಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಕೋಟೆಗೆ ಹೊರಗಿನ ಪ್ರದೇಶವಾದ ಚಿಕ್ಕ ಚಿಕ್ಕ ಹಳ್ಳಿಗಳಾದ ಕೊಂಡಪುರಂ, ಮರ್ರ್ಯಾಪುರಂ, ಪರ್ವತಪುರಂ, ಓಬಳಾಪುರಂ, ವೆಂಗಳಾಪುರಂ, ಬೇಗಂಪುರಂ, ಸುಂಕ್ರಾಂಪೇಟ ಮೊದಲಾದ ಪ್ರದೇಶಗಳನ್ನು ಕಲಿಸಿಕೊಂಡು ಅಭಿವೃದ್ಧಿ ಮಾಡುತ್ತಾ ಸಿದ್ದಿಮಸೂದ್‌ಖಾನ್ ಪರಿಪಾಲನೆಯಲ್ಲಿ 'ಆದವಾನಿ' ಎನ್ನುವ ನಗರ ಏರ್ಪಟ್ಟಿತು.

ಆದೋನಿಯಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಭಾಷೆಗಳು

ಆಡಳಿತ ಭಾಷೆ ತೆಲುಗು. ನಂತರ ಕನ್ನಡ, ಮರಾಠಿ, ಉರ್ದು, ಗುಜರಾತಿ, ಸಿಂಧಿ, ಇಂಗ್ಲೀಷ್, ಮಲಯಾಳಿ, ತಮಿಳು, ತುಳು, ಬೆಂಗಾಲಿ, ಕೊರಚ, ಕೊರವ, ಲಂಬಾಡಿ.

ಬೆಳೆಗಳು

ಹಿಂಗಾರು, ಮುಂಗಾರು ಎರಡೂ ಕಾಲಗಳಲ್ಲಿ ಬೇಸಾಯವನ್ನು ಮಾಡುತ್ತಾರೆ. ನೀರಾವರಿ ಭೂಮಿಗಿಂತ ಮಳೆ ಆಶ್ರಯದ ಭೂಮಿ ಹೆಚ್ಚಿನ ಸಂಖ್ಯೆಯಲ್ಲಿದೆ. ಮುಂಗಾರುವಿನಲ್ಲಿ ಜೋಳ ಮತ್ತು ಭತ್ತ ಪ್ರಧಾನವಾದ ಬೆಳೆಗಳಾಗಿವೆ. ಭತ್ತ, ಜೋಳ, ನವಣೆ, ಸಜ್ಜೆ ಮುಖ್ಯವಾದ ಆಧಾರ ಬೆಳೆಗಳಾಗಿವೆ. ಹತ್ತಿ. ಶೇಂಗಾ, ಈರುಳ್ಳಿ ಮುಖ್ಯ ವಾಣಿಜ್ಯ ಬೆಳೆಗಳಾಗಿವೆ. ಇವಲ್ಲದೆ ಹುರುಳಿ, ತೊಗರಿ, ಹಲಸಂದಿ ಮುಂತಾದ ದ್ವಿದಳ ಧಾನ್ಯಗಳು ಬೆಳೆಯುತ್ತಾರೆ.

ಭಾಷಿಕ ಪರಿಸರ

ಕನ್ನಡ ಮತ್ತು ತೆಲುಗು ಭಾಷೆಗಳು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದವುಗಳು. ಕನ್ನಡ ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆ. ತೆಲುಗು ಮಧ್ಯ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆಯಾಗಿದೆ. ಕರ್ನಾಟಕದಲ್ಲಿ ಕನ್ನಡ ಮತ್ತು ಉರ್ದು ಭಾಷೆಗಳು ಬಹುಸಂಖ್ಯಾತರ ಭಾಷೆಯಾಗಿವೆ. ಹಾಗೆಯೇ ಬಹುಸಂಖ್ಯಾತರಾಡುವ ಭಾಷೆಯಾಗಿ ತೆಲುಗು ಮೂರನೇ ಸ್ಥಾನ ಪಡೆದುಕೊಂಡಿದೆ. ತೆಲುಗು ಭಾಷೆಯನ್ನು ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಬಳಸುವವರು ಇದ್ದಾರೆ. ಕರ್ನಾಟಕದಲ್ಲಿ ತೆಲುಗು ಭಾಷೆ ಕೋಲಾರ ಜಿಲ್ಲೆಯಲ್ಲಿ ಬಹುಸಂಖ್ಯಾತರಾಡುವ ಭಾಷೆಯಾಗಿದೆ. ಇತರೆಡೆಗಳಲ್ಲೂ ಅಲ್ಲಲ್ಲಿ ಬಳಕೆ ಮಾಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲೂ ಹೆಚ್ಚು ಜನ ತೆಲುಗು ಭಾಷಿಕರು ನೆಲೆಸಿದ್ದಾರೆ. ಅದೇ ರೀತಿ ಆಂಧ್ರದ ಗಡಿಭಾಗಗಳಾದ ಆದೋನಿ, ಆಲೂರು, ರಾಯದುರ್ಗ, ಮಡಕಸಿರಗಳಲ್ಲಿ ಕನ್ನಡವನ್ನು ಹೆಚ್ಚಾಗಿ ಬಳಕೆ ಮಾಡುತ್ತಿದ್ದಾರೆ.

ಭಾರತದಲ್ಲಿ ಹಿಂದಿಯ ನಂತರ ಬಹುಸಂಖ್ಯಾತರಿಂದ ಬಳಕೆಯಾಗುತ್ತಿರುವ ಭಾಷೆಯೆಂದರೆ ತೆಲುಗು. ಚಾರಿತ್ರಿಕವಾಗಿ ಅಧ್ಯಯನ ಮಾಡಿದಾಗ ತೆಲುಗು ಮತ್ತು ಕನ್ನಡ ಭಾಷೆಗಳು ರಚನೆಯಲ್ಲಿ ಸಮಾನತೆ ಹೆಚ್ಚು. ಆದೋನಿಯಲ್ಲಿ ನೆಲೆಸಿರುವ ಕನ್ನಡಿಗರು ಮನೆಯ ಆವರಣದಲ್ಲಿ ಮತ್ತು ವ್ಯವಹಾರಿಕ ವಲಯಗಳಲ್ಲಿ ಕನ್ನಡವನ್ನು ಬಳಕೆ ಮಾಡುತ್ತಾರೆ. ತೆಲುಗರೊಂದಿಗೆ ವ್ಯವಹರಿಸುವಾಗ ಮಾತ್ರ ತೆಲುಗನ್ನು ಬಳಕೆ ಮಾಡುತ್ತಾರೆ. ಸಾರ್ವಜನಿಕ ಆವರಣಗಳಲ್ಲಿ ಕನ್ನಡ ಮತ್ತು ತೆಲುಗು ಮಿಶ್ರಿತ ರೂಪಗಳು ರೂಪಗಳ ಬಳಕೆ ಹೆಚ್ಚು ಸಾರ್ವಜನಿಕ ವಲಯಗಳೆಂದರೆ ಸಾರ್ವಜನಿಕ ವೇದಿಕೆ, ಕಚೇರಿ, ಮನೋರಂಜನೆ ಸ್ಥಳಗಳು, ಸಿನಿಮಾ ಮಂದಿರ, ಆಟದ ಮೈದಾನ, ಹೊಟೇಲುಗಳು ಮುಂತಾದವು. ಈ ಎಲ್ಲಾ ಆವರಣಗಳಲ್ಲಿ ಬಹುಸಂಖ್ಯಾತರು ಕನ್ನಡಿಗರು ವ್ಯವಹಾರ ಮಾಡುವುದರಿಂದ ಅನಿವಾರ್ಯವಾಗಿ ತೆಲುಗರು ಕನ್ನಡ ಭಾಷೆಯನ್ನು ಬಳಕೆ ಮಾಡುತ್ತಾರೆ. ಅಂತಹ ಸನ್ನಿವೇಶ ಸಂದರ್ಭದಲ್ಲಿ ತೆಲುಗರ ಕನ್ನಡ ಮಾತಿನಲ್ಲಿ ತೆಲುಗು ಭಾಷೆಯ ಉಚ್ಚಾರಣೆ, ಶಬ್ದಕೋಶ, ವ್ಯಾಕರಣ ವಿಷಯಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಆಕಾಶವಾಣಿ, ದೂರದರ್ಶನ, ಸಂವಹನ ಮಾಧ್ಯಮ ಮುಂತಾದ ವಲಯಗಳಲ್ಲಿ ಕಾರ್ಯಕ್ರಮಗಳನ್ನು ಕನ್ನಡ ಮತ್ತು ತೆಲುಗು ಎರಡೂ ಮಾಧ್ಯಮದಲ್ಲಿ ಕೇಳಲು ಇಷ್ಟಪಡುತ್ತಾರೆ. ನಿಯತಕಾಲಿಕೆಗಳು ಸಹ ಎರಡೂ ಮಾಧ್ಯಮಕ್ಕೆ ಒತ್ತುಕೊಡುತ್ತವೆ. ಸಾರ್ವಜನಿಕ ಸಮಾರಂಭಗಳಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಕನ್ನಡ ಮತ್ತು ತೆಲುಗು ಎರಡೂ ಮಾಧ್ಯಮಗಳಲ್ಲಿ ಕೇಳಲು ಇಷ್ಟಪಡುತ್ತಾರೆ. ದೇವಾಲಯ, ಪಂಚಾಯಿತಿ, ವಿವಾಹದಂತಹ ಕಾರ್ಯಕ್ರಮಗಳನ್ನು ಸಹ ಎರಡೂ ಭಾಷೆಯಲ್ಲಿ ನಿರ್ವಹಿಸುವರು.

ವಿದ್ಯಾವಂತ ತೆಲುಗರ ಮಾತು ತೆಲುಗಿನಿಂದ ಇಂಗ್ಲೀಷ್‌ಗೆ ನುಡಿಪಲ್ಲಟ ಮಾಡಿದರೆ, ಅವಿದ್ಯಾವಂತರು ತೆಲುಗು ಭಾಷೆಯಿಂದ ಕನ್ನಡಕ್ಕೆ ನುಡಿಪಲ್ಲಟ ಮಾಡುವ ಪ್ರಕ್ರಿಯೆ ಕಂಡುಬರುತ್ತದೆ. ಈ ಅಂಶಗಳನ್ನು ಗಮನಿಸಿದಾಗ, ಬಳ್ಳಾರಿ ಜಿಲ್ಲೆ ಒಂದು ದ್ವಿಭಾಷಿಕ ಪ್ರದೇಶ. (ಆದೋನಿ ಬಳ್ಳಾರಿ ಜಿಲ್ಲೆಗೆ ಸೇರಿತ್ತು.) ಅನೇಕ ಶತಮಾನಗಳ ಕಾಲ ಬಳ್ಳಾರಿ ಜಿಲ್ಲೆ ಆಂಧ್ರದಲ್ಲಿರುವ ಕರ್ನೂಲ್, ಕಡಪ, ಅನಂತಪುರ ಜಿಲ್ಲೆಗಳು ಒಂದೇ ಆಡಳಿತಕ್ಕೆ ಒಳಪಟ್ಟಿದ್ದವು. "ಈ ಪ್ರದೇಶಗಳನ್ನು ಕ್ರಿ.ಶ. ೧೮೦೦ರಲ್ಲಿ ಹೈದರಾಬಾದ್ ನಿಜಾಮನು ಬ್ರಿಟಿಷರಿಗೆ ನೀಡಿದ್ದರಿಂದ ಇವುಗಳನ್ನು ಸೀಡೆಡ್ ಡಿಸ್ಟಿಕ್"[೧] ಎಂದು ಕರೆಯಲಾಗಿದೆ. ಈ ಹಿನ್ನೆಲೆಯಿಂದ ಆದೋನಿಯಲ್ಲಿ ಕನ್ನಡ ಮತ್ತು ತೆಲುಗು ಭಾಷಿಕರು ಜೊತೆಯಲ್ಲಿ ಬದುಕುತ್ತಿದ್ದಾರೆ.

ಇಲ್ಲಿ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳು ವ್ಯವಹಾರದಲ್ಲಿವೆ. ಕನ್ನಡಿಗರೆಲ್ಲರಿಗೂ ತೆಲುಗು ಗೊತ್ತಿದೆ. ತೆಲುಗರೆಲ್ಲರಿಗೆ ಕನ್ನಡ ಗೊತ್ತಿಲ್ಲ. ಈ ಹಿನ್ನೆಲೆಯಿಂದ ಕನ್ನಡ ಮತ್ತು ತೆಲುಗು ಭಾಷಿಕರನ್ನು ವರ್ಗೀಕರಿಸುವುದು ತುಂಬಾ ಪ್ರಾಸದಾಯಕ ಕೆಲಸ. ಆದೋನಿ ಮಾತೃಭಾಷಾ ದೃಷ್ಟಿಯಿಂದ ಕನ್ನಡ, ತೆಲುಗು, ಉರ್ದು, ತಮಿಳು, ಮಲೆಯಾಳಂ, ಮರಾಠಿ, ಲಂಬಾಣಿ ಮತ್ತು ಹಿಂದಿ ಭಾಷೆಗಳನ್ನಾಡುವ ಭಾಷಿಕರಿದ್ದಾರೆ.

ಶಿಕ್ಷಣ

ಎಜ್ಯುಕೇಶನ್ ಬ್ರಿಟೀಷ್ ಪರಿಪಾಲನೆ ೧೮೦೦ ರಲ್ಲಿ ಬಂದ ಹೊತ್ತಿಗೆ, ೧೮೬೦ ರಲ್ಲಿ ಆಂಗ್ಲ ಮಾಧ್ಯಮ ಸ್ಕೂಲ್ ಆದೋನಿಯಲ್ಲಿ ಪ್ರಾರಂಭವಾಗಿದೆ. ೧೮೭೮ ರಲ್ಲಿ ಬಾಲಕಿಯರ ಶಾಲೆ, ಮುನ್ಸಿಪಾಲ್ ೩೮ ಹುಡುಗರೊಂದಿಗೆ ಪ್ರಾರಂಭವಾಗಿದೆ. ೧೮೬೪ ರಲ್ಲಿ ಮುನ್ಸಿಪಾಲ್ ಪ್ರೌಢಶಾಲೆ (ಹೈಸ್ಕೂಲ್) ಕರ್ನೂಲ್‌ನಿಂದ ಪ್ರಾರಂಭವಾಗಿ ಜಿಲ್ಲೆಯಲ್ಲಿ ಒಟ್ಟು ೧೮೪ ವಿದ್ಯಾರ್ಥಿಗಳು ಇದ್ದರು. ೧೮೮೭ ರಲ್ಲಿ ಆದೋನಿಯಲ್ಲಿ ಲಂಡನ್ ಮಿಶನ್ ನೇತೃತ್ವದಲ್ಲಿ ಮಾಧ್ಯಮಿಕ ಶಾಲೆ ಸ್ಥಾಪನೆಗೊಂಡಿದೆ. ೧೮೮೦ರಲ್ಲಿ ಹೆಸರಿಗೆ ಮಾತ್ರ ಖಾಸಗಿ ಶಾಲೆಗಳು ಪ್ರಾರಂಭವಾದವು.

ನಂತರ ೧೯೦೮ ರಲ್ಲಿ ಮುನ್ಸಿಫಲ್ ಹೈಸ್ಕೂಲ್ ಪ್ರಾರಂಭಿಸಲಾಗಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಹೈಸ್ಕೂಲಿನಿಂದ ೧೯೨೧ ರಲ್ಲಿ ಪ್ರಾರಂಭಿಸಲ್ಪಟ್ಟಿತು. ನೆಹ್ರು ಮೆಮೋರಿಯಲ್ ಮುನ್ಸಿಫಲ್ ಹೈಸ್ಕೂಲ್ ೧೯೫೮ ರಲ್ಲಿ ಪ್ರಾರಂಭಿಸಿದರು. ಟಿ.ಜಿ.ಎಲ್.ವಿ. ಹೈಸ್ಕೂಲ್ ೧೯೬೧ ರಲ್ಲಿ ಪ್ರಾರಂಭಿಸಿದರು. ಆದೋನಿ ಕಲೆ ಮತ್ತು ವಿಜ್ಞಾನ (ಆರ್ಟ್ಸ್ ಅಂಡ್ ಸೈನ್ಸ್) ಕಾಲೇಜು ೧೯೬೨ ರಲ್ಲಿ ಆದೋನಿ ಮಸೂದಿಯಾ ಅರೆಬಿಕ್ ಹೈಸ್ಕೂಲ್ ೧೯೬೫ ರಲ್ಲಿ ಪ್ರಾರಂಭಿಸಿದರು. ಟಿ.ಜಿ. ಕೃಷ್ಣಮೂರ್ತಿ ಬಾಲ ವಿದ್ಯಾಸದನಂ ೧೯೮೦ ರಲ್ಲಿ ಪ್ರಾರಂಭಿಸಿದರು. ಟಿ.ಜಿ. ಪ್ರಹ್ಲಾದಶೆಟ್ಟಿ ಜೂನಿಯರ್ ಕಾಲೇಜ್ ೧೯೮೧ ರಲ್ಲಿ ಪ್ರಾರಂಭಿಸಿದರು. ಟಿ.ಜಿ.ಎಲ್. ಗೋಪಾಲಶೆಟ್ಟಿ ಪಾಲಿಟೆಕ್ನಿಕ್ ಕಾಲೇಜು ೧೯೮೨ ರಲ್ಲಿ ಪ್ರಾರಂಭಿಸಿದರು. ಹೀಗೆ ಎಪ್ಲೋ ಹೈಸ್ಕೂಲ್ ಗ್ರಾಂಟೆಡ್ ಎಲಿಮೆಂಟ್ ಸ್ಕೂಲ್ ಅಪ್ಪರ್ ಪ್ರೈಮರಿ ಸ್ಕೂಲ್ ಅನ್ಎಡೆಡ್ ಸ್ಕೂಲ್ ರಿಕ್‌ಗನೈಜ್ ಅಂಡ್ ನಾನ್‌ರಿಕಗ್ನೈಜ್ ಸ್ಕೂಲ್‌ಗಳು ಆದೋನಿಯಲ್ಲಿ ಸ್ಥಾಪಿಸಲ್ಪಟ್ಟಿವೆ.

ಆದೋನಿ ಪ್ರಾಚೀನ ಇತಿಹಾಸ

೧೯೪೭ ರಲ್ಲಿ ದೇಶವು ಸ್ವಾತಂತ್ರವಾದ ನಂತರ ದೇಶದಲ್ಲಿ ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ಭಾಷಾವಾರು ಪ್ರಾಂತ ರಚನೆಗೆ ಹೆಚ್ಚಿನ ಬೇಡಿಕೆ ಬಂದಿತು. ಇದರ ಅಂಗವಾಗಿ ಚಳುವಳಿಗಳು ನಡೆಯಲಾರಂಭಿಸಿದವು. ಪ್ರಮುಖವಾಗಿ ಆಂಧ್ರಪ್ರದೇಶದ ಶ್ರೀ ಪೊಟ್ಟಿ ಶ್ರೀರಾಮುಲು ಅವರ ಮುಂದಾಳತ್ವದಲ್ಲಿ ಬೃಹತ್ ಪ್ರಮಾಣದ ಚಳುವಳಿ ನಡೆಯಲಾರಂಭಿಸಿತು. ಚಳುವಳಿ ಯಾವ ಸ್ವರೂಪ ಪಡೆಯಿತೆಂದರೆ ಪೊಟ್ಟಿ ಶ್ರೀರಾಮುಲು ಅವರು ಉಪವಾಸ ಕೈಗೊಂಡು ಉಪವಾಸದ ಸ್ಥಳದಲ್ಲಿಯೇ ಕೋಟಿ ಕೋಟಿ ಅಭಿಮಾನಿಗಳ ಮುಂದೆಯೇ ಮಡಿದರು. ಇದರ ಅಂಗವಾಗಿ ೧೯೫೩ ರಲ್ಲಿ ಭಾರತದಲ್ಲಿಯೇ ಪ್ರಥಮವಾಗಿ ಆಂಧ್ರ ಪ್ರದೇಶವು ಭಾಷೆಯ ಆಧಾರದ ಮೇಲೆ ಪ್ರತ್ಯೇಕ ರಾಜ್ಯವಾಗಿ ರೂಪಿತವಾಯಿತು. ಇದಾದ ನಂತರ ರಾಷ್ಟ್ರೀಯ ಪುನರ್‌ರಚನಾ ಆಯೋಗದ ಅನ್ವಯದಂತೆ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳು ಉದಯವಾದವು. ಇಷ್ಟಕ್ಕೆ ಸಮಸ್ಯೆ ಕೊನೆಗೊಂಡಿತೆಂದು ಹೇಳಲು ಸಾಧ್ಯವಾಗಲಿಲ್ಲ. ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ ರಾಜ್ಯಗಳೊಂದಿಗೆ ಕರ್ನಾಟಕ ಗಡಿಪ್ರದೇಶಗಳ ಸಮಸ್ಯೆಯೂ ಹೆಚ್ಚಾಯಿತು.[೨] ಶತಮಾನಗಳಿಂದ ಒಂದೇ ಆಡಳಿತಕ್ಕೆ ಅಧೀನವಾಗಿದ್ದ ಬಳ್ಳಾರಿ ಜಿಲ್ಲೆಯು ವಿಭಜನೆಯಾಗಿ ಮೂರು ತುಂಡುಗಳಾದವು. ದೊಡ್ಡ ಭಾಗವಾದ ಏಳು ತಾಲೂಕುಗಳು ಮೈಸೂರು ಸಂಸ್ಥಾನಕ್ಕೆ ಸೇರಿ ಬಳ್ಳಾರಿ ಜಿಲ್ಲೆ ಎಂಬ ಹೆಸರನ್ನೇ ಹೊಂದಿವೆ. ಚಿಕ್ಕಭಾಗವಾದ ರಾಯದುರ್ಗವು ಅನಂತಪುರ ಜಿಲ್ಲೆಯನ್ನು ಸೇರಿತು. ಉಳಿದ ಮೂರನೇ ಭಾಗವಾದ ಆದೋನಿ ಮತ್ತು ಆಲೂರು ತಾಲೂಕುಗಳು ಕರ್ನೂಲು ಜಿಲ್ಲೆಯನ್ನು

ಸೇರಿದವು. ಹೀಗೆ ಭಾಗವಾದ ಆದೋನಿ ತಾಲೂಕಿನ ಪ್ರಾಚೀನ ಇತಿಹಾಸವನ್ನು ತಿಳಿಯುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ.

ಸಿಂದವಾಡಿ : ಆದೋನಿ ಮತ್ತು ಆಲೂರು ಎರಡು ತಾಲೂಕುಗಳನ್ನು ಒಳಗೊಂಡ ಪ್ರದೇಶವನ್ನು ಈ ಭಾಗದಲ್ಲಿ ದೊರೆತಿರುವ ಹಲವು ಶಿಲಾಶಾಸನಗಳಲ್ಲಿ 'ಸಿಂದವಾಡಿ ಸಾವಿರನಾಡು' ಎಂದು ಕರೆಯಲಾಗಿದೆ. ಈ ಹೆಸರಿನ ಉತ್ಪತ್ತಿಯನ್ನು ಹರಿಹರ ಕ್ಷೇತ್ರದ ಶ್ರೀಹರಿಹರ ದೇವಾಲಯದ ಆವರಣದಲ್ಲಿರುವ ೪೩ನೇ ಶಿಲಾಶಾಸನದಲ್ಲಿ - ಸಿವಸಿಂಧು ಸಂಗದಿಂದು | ದ್ಭುವಿಸಿದನೊಬ್ಬಂ ಕುಮಾರನಾತನ ಪಸರಂ || ಭವನಿಟ್ಟನೊಲ್ದು ಸೈಂಧವ | ನಿವನೆನ್ನುರ ಗಾಧಿರಾಜ ರಕ್ಷಾಸಹಿತಂ || - ಎಂದು ಹೇಳಿದೆ. ಶ್ರೀ ಸಿವನು ಸಿಂದುದೇವಿಯೊಡನೆ ರಮಿಸಲು ಆ ಸಂಗದಿಂದ ಒಬ್ಬ ಕುಮಾರನು ಉದಯಿಸಿದನು. ಅವನಿಗೆ ಭವನು 'ಸೈಂಧವ' ಎಂದು ನಾಮಕರಣ ಮಾಡಿದನು. ಆ ಬಾಲಕ ರಕ್ಷಣೆಗಾಗಿ ಸರ್ಪಗಳು ಒಡೆಯನಾದ ಉರಗ ರಾಜನನ್ನೇ ರಕ್ಷಕನನ್ನಾಗಿ ನೇಮಿಸಿದನು. ಸೈಂಧವನು ಪ್ರಾಪ್ತವಯಸ್ಕನಾದ ಮೇಲೆ ಕರಹಾಟ ೪೦೦೦ ನಾಡಿಗೆ ರಾಜನಾದನು. ಈ ಸೈಂಧವನೂ, ಅವನ ವಂಶಿಕರೂ ಅನೇಕ ಕಾಲ ಆಳಿದರು. ಕರಹಾಟ ರಾಜ್ಯವು ಇಂದಿನ ಸಾತಾರಾ ಜಿಲ್ಲೆಯ ಭಾಗದಲ್ಲಿತ್ತು. ಸೈಂಧವನ ವಂಶವು ಅಭಿವೃದ್ಧಿಯಾಗಿ ದಕ್ಷಿಣ ಪಥದ ಅನೇಕ ಸ್ಥಳಗಳಲ್ಲಿ ಸಾಮಂತರಾಗಿ ಆಳಿದರು. ಬೆಳಗಾವತಿ (ಹೊನ್ನಾಳಿ ತಾಲೂಕು) ಹೂಲ್ಲೂರು (ರಾಣಿಬೆನ್ನೂರು ತಾಲೂಕು) ಬಲ್ಲೆಕುಂದನಾಡಿನ ರಾಜಧಾನಿ ಕುರುಗೋಡು (ಬಳ್ಳಾರಿ ತಾಲೂಕು) ಬಾಗಲಕೋಟೆ (ಬಿಜಾಪುರ ಜಿಲ್ಲೆ) ಯಲ್ಬುರಗ (ಹೈದರಾಬಾದ್ ಪ್ರಾಂತ್ಯ) ಸಿಂಧುವೊಳಲು (ಬಳ್ಳಾರಿ ತಾಲೂಕು) ಮುಂತಾದ ಪ್ರಾಚೀನ ಪಟ್ಟಣಗಳು ಈ ಸಿಂಧು ವಂಶದವರಾದ ಅನೇಕ ಸಾಮಂತರಿಗೆ ಬಳ್ಳಾರಿಯ ಬಳಿ ಇರುವ 'ಸಿಂಧುವೊಳಲು' ಎಂಬ ಪುರಾತನ ಗ್ರಾಮವು ಆಗ ದೊಡ್ಡ ಪಟ್ಟಣವಾಗಿದ್ದು ಸೈಂಧವನ ಮೂಲ ಸ್ಥಾನವಾಗಿರಬೇಕು. ಆದ್ದರಿಂದಲೇ ಸೈಂಧವರ + ಹೊಳಲು = ಸಿಂಧುಹೊಳಲು ಅಂದರೆ ಸೈಂಧವ ಪಟ್ಟಣ ಎಂದು ಹೆಸರು ಬಂದಿದೆ. ಈ ಸಿಂಧುವೊಳಲು ರಾಜಧಾನಿಯಾದ ಪೆದ್ದನಾಡಿಗೆ ಸಿಂಧುವಾಡಿ ೧೦೦೦ ರಾಜ್ಯ ಎಂದು ಆದೋನಿ ಮತ್ತು ಆಲೂರು ತಾಲೂಕುಗಳಲ್ಲಿಯೂ, ಈ ತಾಲೂಕುಗಳ ನೆರೆಯಲ್ಲಿ ದೊರೆತಿರುವ ಹಲವು ಶಾಸನಗಳಲ್ಲಿಯೂ ಉಕ್ತವಾಗಿದೆ.[೩]

ಸಿಂದವಾಡಿಯ ಮೇರೆಗಳು : ಸಿಂದವಾಡಿಯು ಇಂದಿನ ಆದೋನಿ ಆಲೂರು ತಾಲೂಕುಗಳನ್ನೂ ಅಕ್ಕಪಕ್ಕದ ಸಿರುಗುಪ್ಪ, ಬಳ್ಳಾರಿ, ಪತ್ತಿಕೊಂಡ, ಗುತ್ತಿ, ಕರ್ನೂಲು ತಾಲೂಕುಗಳ ಆಚಿನ ಭಾಗವನ್ನು ಒಳಗೊಂಡಿತ್ತು. ಈ ಸಿಂದವಾಡಿಗೆ ಪೂರ್ವ ದಿಕ್ಕಿನಲ್ಲಿ ಕರ್ನೂಲು ಮತ್ತು ಪತ್ತಿಕೊಂಡಗಳನ್ನೊಳಗೊಂಡಿದ್ದ ನೆಳವಾಡಿ ೫೦೦ ರಾಜ್ಯವು ಆಗ್ನೇಯಕ್ಕೆ ಗುತ್ತಿ ತಾಲೂಕನ್ನೊಳಗೊಂಡಿದ್ದ ಕುರುಮಾರು ವಿಷಯವೂ, ದಕ್ಷಿಣದಲ್ಲಿ ಗೋವಿಂದವಾಡಿ ರಾಜಧಾನಿಯಾಗಿದ್ದ ಕಣೆಯಕಲ್ಲು ೨೦೦ ನಾಡು ಮೇರೆಗಳಾಗಿದ್ದವು.

ಪಶ್ಚಿಮದಲ್ಲಿ ವೇದಾವತಿ ನದಿಯೂ ಅದರ ಪಕ್ಕದ ಬಳ್ಳಾರಿ ಸಿರುಗುಪ್ಪ ತಾಲೂಕುಗಳನ್ನೊಳಗೊಂಡಿದ್ದ ಬಲ್ಲಕುಂದೆ ನಾಡೂ ಮೇರೆಯಾಗಿದ್ದವು. ಉತ್ತರಕ್ಕೆ ತುಂಗಾಭದ್ರ ನದಿಯೂ ಅದರ ಪಕ್ಕದ ರಾಯಚೂರು ಜಿಲ್ಲೆಯ ಭಾಗವು ಗಡಿಯಾಗಿತ್ತು. ಸಿಂದವಾಡಿಯ ಒಳಭಾಗಗಳು ಸುಮಾರು ಹತ್ತು ಒಳಭಾಗಗಳು ಆಗಿದ್ದಂತೆ ಶಾಸನಗಳಿಂದ ಗೊತ್ತಾಗಿದೆ. ಆ ಹತ್ತು ವಿಭಾಗಗಳಲ್ಲಿ ಆದೋನಿ ೫೦೦ ಹಳ್ಳಿಗಳ ದೊಡ್ಡ ವಿಭಾಗವಾಗಿತ್ತು.

ಮೌರ್ಯರು (ಕ್ರಿ.ಪೂ. ೩೨೫-೧೮೪) : ಕನ್ನಡ ನಾಡಿನ - ಅಷ್ಟೇಕೆ ದಕ್ಷಿಣ ಪಥದ ಕಾಲಮಾನ ನಿರ್ಧಾರವಾದ ಇತಿಹಾಸವು ಅಶೋಕ ಚಕ್ರವರ್ತಿ ಕಾಲದಿಂದ ಆರಂಭವಾಗುವುದು. ಅಶೋಕನು ಉತ್ತರ ಭಾರತದಲ್ಲಿನ ಮಗಧ ರಾಜ್ಯದ ರಾಜಧಾನಿ ಪಾಟಲಿಪುತ್ರದಲ್ಲಿ ಆಳಿದ ಮೌರ್ಯವಂಶದ ಮೂರನೇ ಚಕ್ರವರ್ತಿ. ಪಾಟಲೀಪುತ್ರ ರಾಜಧಾನಿಯಿಂದ ಬಹುದೂರದಲ್ಲಿದ್ದ ಪ್ರಾಂತ್ಯಗಳು ರಾಜಕುಮಾರರಾದ ರಾಜಪ್ರತಿನಿಧಿಗಳಿಂದ ಆಳಲ್ಪಡುತ್ತಿದ್ದವು. ದಕ್ಷಿಣ ಪಥದಲ್ಲಿ ಅಶೋಕ ಕುಮಾರನಾದ ಓರ್ವ ಆರ್ಯಪುತ್ರನು ಸುವರ್ಣಗಿರಿ ಎಂಬ ರಾಜಧಾನಿಯಿಂದ ರಾಜಪ್ರತಿನಿಧಿಯಾಗಿ ಆಳುತ್ತಿದ್ದನು. ಈ ಸುವರ್ಣಗಿರಿ ಯಾವುದೋ ನಿರ್ಧರಿಸಲಾಗಿಲ್ಲ. ಸುವರ್ಣಗಿರಿ ಎಂಬ ಅರ್ಥ ಕೊಡುವ ಒಂದು ಕನಕಗಿರಿಯು ಹಾಳುಹಂಪೆಯ ಬಳಿ ಇದೆ. ಹರಪನಹಳ್ಳಿ ತಾಲೂಕಿನಲ್ಲಿರುವ ಉಚ್ಚಂಗಿದುರ್ಗಕ್ಕೆ ಸುವರ್ಣ ವೃಷ್ಟಿಯ ದೆಸೆಯಿಂದ ಕನಗಿರಿ ಎಂಬ ಹೆಸರುಂಟಾಯಿತೆಂದು ಆ ಊರಿನ ಒಂದು ಶಾಸನದಲ್ಲಿ ಉಕ್ತವಾಗಿದೆ. ಈ ಎರಡೂ ಕನಕಗಿರಿಗಳೂ ಆದೋನಿಯಿಂದ ಪಶ್ಚಿಮಕ್ಕಿರುವ ಕನ್ನಡ ನಾಡಿನಲ್ಲಿವೆ ಎಂಬುದು ಗಮನಾರ್ಹವಾಗಿದೆ.

ಶಾತವಾಹನರು : ಆದೋನಿ ತಾಲೂಕು ಮ್ಯಾಕದೋಣಿಯ ಶಾತವಾಹನ ಶ್ರೀಪುಲಮಾಯಿಯ ಶಾಸನದಲ್ಲಿ ಈ ಪ್ರಾಂತ್ಯವು ಶಾತವಾಹನರದು ಎಂದು ಉಕ್ತವಾಗಿದೆ. ಹರವು ಎಂದರೆ ವಿಸ್ತಾರವಾದ ಪ್ರದೇಶ, ಬಡಾವಣೆ, ರಾಷ್ಟ್ರ, ಬೀಡು ಮುಂತಾಗಿ ಅರ್ಥಗಳಿವೆ. ಆದೋನಿ ತಾಲೂಕು ಶಾತವಾಹನರು ಪ್ರಥಮತಃ ವಾಸವಾಗಿದ್ದ ಹರವು ಅಥವಾ ರಾಷ್ಟ್ರ. ಹಿರೆಹಡಗಲಿ ತಾಮ್ರಶಾಸನದಲ್ಲಿ ಸಾತಹನೀರಠ್ಠ ಎಂದಿದೆ. ಆದೋನಿ ತಾಲೂಕಿನಲ್ಲಿ ಸಾತನೂರು ಎಂಬ ಹಳ್ಳಿ ಇದೆ. ಅಲ್ಲದೆ ಶಾತವಾಹನರು 'ಕುಂತಳ ದೇಶೇನ ಜಾತ್ಯಾತ್' ಅಂದರೆ ಕುಂತಳದಲ್ಲಿ ಜನಿಸಿದವರು. ಒಬ್ಬ ರಾಜನಿಗೆ 'ಕುಂತಳ ಶಾತಕರ್ಣಿ' ಎಂಬ ಹೆಸರೂ ಇದೆ. ಇಂದ್ರನ ರಾಣಿಗೆ ಪುಳಮಾವಿ ಜಯಂತಿ ಎಂಬ ಹೆಸರುಗಳೂ ಇವೆ. ಶಾತವಾಹನರಲ್ಲಿ ಕುಂತಳ ಶ್ರೀಜಯಂತ ಪುಳಮಾವಿ ಎಂಬುವರೂ ಇರುವರು. ಜಯಂತಿ ಹೆಸರಿನಲ್ಲಿ ನಿರ್ಮಿಸಿದ ನಗರ ಜಯಂತಿ ಅಥವಾ ವೈಜಯಂತಿ ನಗರ ಇದೇ ಬನವಾಸಿ ನಗರ. ಕುಂತಳವು ಕನ್ನಡ ರಾಜ್ಯ.

ಮೌರ್ಯರ ಕಾಲದಲ್ಲಿ ಮಹಾಮಂಡಲವಾಗಿದ್ದ ನಾಡು ಶಾತವಾಹನರ ಕಾಲದಲ್ಲಿ ಶಾತವಾಹನ ಹರವು ಅಥವಾ ಶಾತವಾಹನ ರಾಷ್ಟ್ರವಾಯಿತು. ಮೊದಲನೆ ರಾಜ ಸಿಂಧುಕ. ಅವನ ಹೆಸರಿನಲ್ಲಿ ಸಿಂಧುವಾಡಿಯಾಯಿತು. ಸಿಂಧುಕ ಕಟ್ಟಿದ ಹೊಳಲು ಸಿಂಧುಹೊಳಲು ಆಯಿತು.

ಕದಂಬರು : ಕದಂಬರು ತಾವು 'ಆಶ್ರಿತ ಅಂಬಾನಾಂ' ಅಂದರೆ ಅಂಬೆಯ ಆಶ್ರಿತರೆಂದೂ 'ಉಚ್ಚಂಗಿ ಗಿರಿನಾಥ'ರೆಂದೂ ತಮ್ಮ ಶಾಸನಗಳಲ್ಲಿ ಹೇಳಿಕೊಂಡಿರುವರು. ಅಂಬೆ ಅಥವಾ ಉಚ್ಚಂಗಿ ಎಲ್ಲಮ್ಮನ ಮತ್ತು ಅಂಬೆಯ ಕುಮಾರನಾದ ಪರಶುರಾಮನ ದೇವಾಲಯವು ಆದೋನಿ ತಾಲೂಕು ಮಂತ್ರಾಲಯದಲ್ಲಿದೆ. ಉಚ್ಚಂಗಮ್ಮನನ್ನು ಅಲ್ಲಿ ಮಂಚಾಲಮ್ಮ ಎಂದು ಕರೆಯುವರು. ಆದ್ದರಿಂದ ಈ ಊರಿಗೆ ಮಂಚಾಲ ಎಂದು ಹೆಸರು. ಮಂಚಾಲವು ಸಂಸ್ಕೃತದಲ್ಲಿ ಮಂತ್ರಾಲಯವಾಗಿದೆ. ಜಮದಗ್ನಿ ಋಷಿಪತ್ನಿಯಾದ ರೇಣುಕೆಯೇ ಮಂಚಾಲಮ್ಮ. ಈ ದೇವಾಲಯವು ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನವಿರುವ ಆವರಣದಲ್ಲಿಯೇ ಇದೆ. ಮಂಚಾಲದ ಸಮೀಪದಲ್ಲಿಯೇ ಚಿಕ್ಕಬನವಾಸಿ ಗ್ರಾಮವಿದೆ. ಉಚ್ಚಂಗಮ್ಮನ ಸಮಾಂತರದಲ್ಲಿ ಮಂಚಾಲವನ್ನು, ರಾಜಧಾನಿ ಬನವಾಸಿಯ ಹೆಸರಿನಲ್ಲಿ ಚಿಕ್ಕ ಬನವಾಸಿಯನ್ನು ಕದಂಬರು ನಿರ್ಮಿಸಿದರೆಂದು ವ್ಯಕ್ತವಾಗುವುದು.

ಬಾದಾಮಿ ಚಾಲುಕ್ಯರು : ಈ ಚಾಲುಕ್ಯರು ಪ್ರಥಮದಲ್ಲಿ ಕದಂಬರ ಸಾಮಂತರಾಗಿದ್ದರು. ಪ್ರಥಮ ಪುಲಕೇಶಿಯು ಕದಂಬರನ್ನು ಸೋಲಿಸಿ ಬಾದಾಮಿಯನ್ನು ಆಕ್ರಮಿಸಿದನು. ನಂತರ ಅವನ ಮಗ ಕೀರ್ತಿವರ್ಮನು ಕದಂಬರನ್ನು ಪೂರ್ಣವಾಗಿ ಸೋಲಿಸಿ ತನ್ನ ಸಾಮಂತರನ್ನಾಗಿ ಮಾಡಿಕೊಂಡನು. ಈ ಕೀರ್ತಿವರ್ಮನ ಒಬ್ಬ ರಾಣಿಯು ಸೇಂದ್ರಕ ರಾಜಕುಮಾರಿಯಾಗಿದ್ದಳು. ಈ ರಾಣಿಯ ಮಗನೇ ಇಮ್ಮಡಿ ಪುಲಕೇಶಿ. ಪುಲಕೇಶಿಯ ಮಗ ಆದಿತ್ಯವರ್ಮನ ಶಾಸನವು ಕರ್ನೂಲು ಪ್ರಾಂತ್ಯದಲ್ಲಿ ಸಿಕ್ಕಿದೆ. ಇವನ ಮಗನಾದ ಅಭಿನವಾದಿತ್ಯವರ್ಮನಿಗೆ ಉಚ್ಚಂಗಿ ವಿಷಯವು ಸೇರಿತ್ತು. ಇವರಿಬ್ಬರೂ ಕೆಲಕಾಲವಾದರೂ ಚಕ್ರವರ್ತಿ ಪದವಿಯನ್ನು ಧರಿಸಿದ್ದರು. ಆದಿತ್ಯವರ್ಮನ ತಮ್ಮನಾದ ೧ನೇ ವಿಕ್ರಮಾದಿತ್ಯನಿಗೆ ಮಡಕಶಿರಾ ತಾಲೂಕು ರತ್ನಗಿರಿ ಸೇರಿತ್ತು.

ಈ ಚಕ್ರವರ್ತಿಗಳ ಮೂರು ಕನ್ನಡ ಶಿಲಾಶಾಸನಗಳು ಸಿಂದವಾಡಿಯಲ್ಲಿ ದೊರೆತಿವೆ. ಆಲೂರು ತಾಲೂಕು ಚಿಪ್ಪಗಿರಿಯಲ್ಲಿ ವಿಜಯಾದಿತ್ಯ ಸತ್ಯಾಶ್ರಯನ (ಕ್ರಿ.ಶ. ೬೯೬-೭೦೯) ಕನ್ನಡ ಶಿಲಾಶಾಸನವೂ, ಇದೇ ತಾಲೂಕು ನಗರೂರಿನಲ್ಲಿ ಶ್ರೀ... ದಿತ್ಯಾ ಭಟ್ಟಾರನ ಕನ್ನಡ ಶಿಲಾಶಾಸನವೂ ದೊರೆತಿವೆ. ಈ ಕನ್ನಡ ಶಾಸನಗಳಿಂದ ಚಾಲುಕ್ಯರ ಕಾಲದಲ್ಲಿ ಸಿಂದುವಾಡಿಯು ಅಂದರೆ ಆದೋನಿಯು ಕನ್ನಡ ಚಕ್ರಾಧಿಪತ್ಯದ ಕನ್ನಡ ಸಾಮಂತರ ಪ್ರದೇಶವಾಗಿತ್ತು ಎನ್ನುವುದು ತಿಳಿಯುತ್ತದೆ.

ಮಳಖೇಡದ ರಾಷ್ಟ್ರಕೂಟರು : ಬಾದಾಮಿಯ ಚಾಲುಕ್ಯರನ್ನು ಮೂಲೆಗೆ ತಳ್ಳಿ, ಅವರ ಚಕ್ರಾಧಿಪತ್ಯವನ್ನೆಲ್ಲಾ ರಾಷ್ಟ್ರಕೂಟರು ಆಕ್ರಮಿಸಿದರು. ಅಂದು ಪ್ರಖ್ಯಾತರಾದ ಮೂರು ಜನ ಚಕ್ರವರ್ತಿಗಳಲ್ಲಿ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನೇ ಶ್ರೇಷ್ಠನೆನಿಸಿಕೊಂಡನು. ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತೆಂದು ಅವನ ಕವಿರಾಜ ಮಾರ್ಗವು ಸಾರುತ್ತಿದೆ.

ರಾಷ್ಟ್ರಕೂಟರ ಅರಸು ಮನೆತನದ ಕನ್ನಡ ಶಾಸನಗಳು ಸಿಂದವಾಡಿಯಲ್ಲಿ ದೊರೆತಿವೆ. ಅಮೋಘವರ್ಷ ನೃಪತುಂಗನ ಕಿರಿಯ ಮಗನಾದ ದುದ್ದಯ್ಯನು ಸಿಂದವಾಡಿಯನ್ನಾಳುತ್ತಾ ಇನ್ನವಲಿಯ ಹನ್ನೆರಡು ಮಾಂಡಲಿಕರಿಗೆ ಸ್ಥಿತಿಯನ್ನು ಕೊಟ್ಟನೆಂದು ಆಲೂರು ತಾಲೂಕು ರಾಮದುರ್ಗದ ಶಿಲಾಶಾಸನದಲ್ಲಿ ಹೇಳಿದೆ.

- ಶಕ ೮೧೫ (ಕ್ರಿ.ಶ.೮೯೪)ನೇ ಪ್ರಮಾಥಿ ಸಂವತ್ಸರದಲ್ಲಿ ಆಕಾಶವರ್ಷ ಶುಭತುಂಗ ಭಟ್ಟಾರಕನಾದ ೧ನೇ ಕೃಷ್ಣನು ಪೃಥ್ವಿಯನ್ನಾಳುತ್ತಿರುವಾಗ ಕಣ್ಣನು ಸಿಂದವಾಡಿ ೧೦೦೦ ನಾಡನ್ನಾಳುತ್ತಿದ್ದು ಮಂಚಾಳದ (ಇಂದಿನ ಮಂತ್ರಾಲಯ) ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನದ ಆವರಣದಲ್ಲಿರುವ ಉಚ್ಚಂಗಿ ಎಲ್ಲಮ್ಮನ ಗುಡಿಯ ಶಿಲಾಶಾಸನವೂ ಇಂದಿಗೂ ಕನ್ನಡದಲ್ಲಿ ಸಾರುತ್ತಿರುವುದು.

- ಶಕ ೮೫೨ ಖರ ಸಂವತ್ಸರದಲ್ಲಿ (೨೫-೨-೯೩೧) ಶ್ರೀಗೋವಿಂದರ ೪ನೇ ಬಲ್ಲಾಹನು ಸಮುದ್ರ ಪರ್ಯಂತರ ಆಳುತ್ತಿದ್ದಾಗ ಮಹಾಸಾಮಂತ ಕನ್ನರನು ಸಿಂದವಾಡಿ ೧೦೦೦ವನ್ನು ಆಳುತ್ತಿದ್ದನು. ಆಗ ಬಳಿಗಾರ ಕರುಳ ರಾಮಶೆಟ್ಟಿಯು ತಾನು ನಿರ್ಮಿಸಿದ ಕಾಮೇಶ್ವರ ದೇವಾಲಯಕ್ಕೆ ಭೂದಾನ ಮಾಡಿದನೆಂದು ಆದೋನಿ ತಾಲೂಕು ದೊಡ್ಡ ಮಾಕಳದ ಈಶ್ವರ ಗುಡಿ ಶಾಸನದಲ್ಲಿ ಹೇಳಿದೆ.

- ಶಕ ೮೫೪ನೆಯ ಪಾರ್ಥಿವನದಲ್ಲಿ ಕನ್ನರನ ಸಿಂದವಾಡಿ ೧೦೦೦ ನಾಡನ್ನು ಆಳುತ್ತಿರುವಾಗ ಅವನ ಅರಸಿ ಚನ್ದಿಯಬ್ಬೆಯು ನನ್ದವರದಲ್ಲಿ ಬಸದಿಯನ್ನು ಮಾಡಿಸಿದಳೆಂದೂ, ಆ ಬಸದಿಗೆ ಕನ್ನರನು ದಾನ ಮಾಡಿದನೆಂದೂ ಆಲೂರು ತಾಲೂಕು ಹಾಲಹರವಿ ಶಿಲಾಶಾಸನದಲ್ಲಿ ಉಕ್ತವಾಗಿದೆ.

ಈ ರೀತಿ ಸಿಂದವಾಡಿ ೧೦೦೦ ನಾಡು ಅಂದರೆ ಆದೋನಿ ಆಲೂರು ರಾಷ್ಟ್ರಕೂಟರ ಸಾಮಂತ ನಾಡಾಗಿ, ಕನ್ನಡ ಸಾಮ್ರಾಜ್ಯದ ಭಾಗವಾಗಿ ಕನ್ನಡ ನಾಡಾಗಿಯೇ ಇತ್ತು ಎಂದು ವ್ಯಕ್ತವಾಗಿದೆ.

ಕಲ್ಯಾಣಿ ಚಾಲುಕ್ಯರು : ರಾಷ್ಟ್ರಕೂಟರ ಕೊನೆಯ ಅರಸ ಕಕ್ಕಲನನ್ನು ಕ್ರಿ.ಶ. ೯೭೪ ರಲ್ಲಿ ಸೋಲಿಸಿ ಈ ಚಕ್ರಾಧಿಪತ್ಯಕ್ಕೆ ಇಮ್ಮಡಿ ತೈಲಪನು ಕಲ್ಯಾಣಿ ಚಾಲುಕ್ಯರ ಮೂಲ ಪುರುಷನಾದನು. ಅಂದಿನಿಂದಲೂ ಆ ಮನೆತನದವರು ಅಂತ್ಯ ಕಾಲದವರೆಗೂ ಸಿಂದವಾಡಿ ೧೦೦೦ ನಾಡು ಅಂದರೆ ಆದೋನಿ ಪ್ರಾಂತ್ಯ ಚಾಲುಕ್ಯರ ಸಾಮಂತ ರಾಜ್ಯವಾಗಿತ್ತು. ಈ ಚಾಲುಕ್ಯರ ಹಲವು ಶಿಲಾಶಾಸನಗಳು ಆದೋನಿ ತಾಲೂಕು

ಚಿಕ್ಕಕುಂಬಳ, ಬದನೇಹಾಳು, ದೊಡ್ಡಕುಂಬಳ, ಗುರ್ಜಾಲ ಮತ್ತು ನಂದಾವರಗಳಲ್ಲಿಯೂ, ಆಲೂರು ತಾಲೂಕು ರಾಮದುರ್ಗ, ಹಾಲರವಿ, ಹೊಳಗುಂದಿ, ಕಮ್ಮರಚೇಡು ಗ್ರಾಮಗಳಲ್ಲಿಯೂ ದೊರೆತಿವೆ. ಈ ಎಲ್ಲಾ ಶಾಸನಗಳಲ್ಲಿಯೂ ಸಿಂದವಾಡಿಯನ್ನಾಳುತ್ತಿದ್ದ ಮಹಾಮಂಡಲೇಶ್ವರರು ಕಲ್ಯಾಣಿ ಚಾಲುಕ್ಯ ಚಕ್ರೇಶ್ವರರಿಗೆ ಸಾಮಂತರಾಗಿದ್ದರೆಂದು ಹೇಳಿದೆ. ಎಲ್ಲವೂ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿಯೇ ಇವೆ.

ಹೊಯ್ಸಳರು : ಕಾಲಚೂರ್ಯರ ಆಕ್ರಮಣದಿಂದ ಖ್ಯಾತಿಗೊಂಡ ಚಾಲುಕ್ಯರು ಕ್ರಿ.ಶ. ೧೨ನೆಯ ಶತಮಾನದ ಅಂತ್ಯದವರೆಗೂ ಆಳಿದರಾದರೂ ಪ್ರತಿಭಾಶಾಲಿಗಳಾಗಿರಲಿಲ್ಲ. ಆಗ ಕನ್ನಡ ನಾಡನ್ನು ಒಂದೇ ರಾಜಾಶ್ರಯದಲ್ಲಿ ತರಲು ಉತ್ತರದಲ್ಲಿ ದೇವಗಿರಿಯ ಯಾದವರು, ದಕ್ಷಿಣದಲ್ಲಿ ದೋರ ಸಮುದ್ರದ ಹೊಯ್ಸಳರು ಪ್ರಯತ್ನಿಸಿದರು. ಸಿಂದವಾಡಿಯು ತುಂಗಾಭದ್ರ ತೀರದವರೆಗಿನ ಕನ್ನಡ ನಾಡುಗಳು ಪ್ರಥಮದಲ್ಲಿ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಅಧೀನವಾದವು. ಸಿಂದವಾಡಿಯಲ್ಲಿ ಹೊಯ್ಸಳರ ಶಾಸನಗಳು ದೊರೆತಿಲ್ಲವಾದರೂ ಹಿರೇಕುಂಬಳದ ಊರು ಮಧ್ಯದಲ್ಲಿರುವ ಪ್ರಸಿದ್ಧವಾದ ದೇವಾಲಯವೂ, ಆದೋನಿಯಲ್ಲಿರುವ ಹೊಯ್ಸಳ ವಿಗ್ರಹ ಮತ್ತು ಗಂಡಭೇರುಂಡವೂ, ಸಿಂದವಾಡಿಯು ಹೊಯ್ಸಳರಿಂದ ಆಕ್ರಮಿಸಲ್ಪಟ್ಟಿತ್ತೆಂದು ವ್ಯಕ್ತವಾಗುವುದು.

ದೇವಗಿರಿ ಯಾದವರು : ಶಕ ೧೧೦೫ನೆಯ ದುಂದುಭಿ ಸಂವತ್ಸರದ ವೇಳೆಗೆ (ಕ್ರಿ.ಶ. ೧೨೦೩) ದೇವಗಿರಿಯ ಯಾದವರು ಸಿಂದವಾಡಿಯನ್ನು ಆಕ್ರಮಿಸಿದ್ದರು. ಸಿಂಘಣನ ಸಚಿವಾಗ್ರಣಿ, ಬಸವರಸ ನಾಯಕರು ಸಿಂದವಾಡಿಯನ್ನಾಳುತ್ತಾ ಇದ್ದು, ಆದೋನಿ ತಾಲೂಕು ಹಿರಿಯಕೋಟೆ (ಪೆದ್ದಕೋಟಲಕಿ)ಯ ಅಮೃತೇಶ್ವರ ಗೋಪಿನಾಥ ದೇವರಿಗೆ ಮತ್ತು ಅನೇಕ ಬ್ರಾಹ್ಮಣರಿಗೆ ಭೂದಾನ ಮಾಡಿದರು. ಸಿಂಗಣದೇವನ ೧೨ನೇ ವರ್ಷವಾದ ಪ್ರಮೋದೂತ ಸಂವತ್ಸರದಲ್ಲಿ (ಕ್ರಿ.ಶ. ೧೨೧೦) ಆದೋನಿಯ ತಾಲೂಕು ದೇವರಬೆಟ್ಟದ ಮಲ್ಲಿಕಾರ್ಜುನ ದೇವರಿಗೆ ಸಿಂದವಾಡಿ ೧೦೦೦ ಸುಂಕದ ಅಧಿಕಾರಿ ಭಿಲ್ಲವ ನಾಯಕನು ಮೊದಲಕಲ್ಲು ಸುಂಕದ ಉತ್ಪತ್ತಿಯನ್ನು ದಾನ ಮಾಡಿದನು. ಕ್ರಿ.ಶ. ೧೨೭೬ ರಲ್ಲಿ ರಾಮಚಂದ್ರರಾಯನು ಆಳುತ್ತಿದ್ದಾಗ ವಾಸದೇವನ ಸರ್ವಾಧಿಕಾರಿ ಲಕುಮಾನಾಯನು ನರನಿಕಿಯ ಕಲ್ಲಿನಾಥ ದೇವರಿಗೆ ಭೂದಾನ ಮಾಡಿದನು. ಅದೇ ರಾಜನು ದೇವಗಿರಿಯಲ್ಲಿ ಆಳುತ್ತಿದ್ದಾಗ ಭೀಮದೇವ ರಾಣೆಯನು ಸಿಂದವಾಡಿಯಲ್ಲಿ ಆದೋನಿ ಮುಖ್ಯವಾಗಿ ನಾಯಕವಳಿತನ ಮಾಡುತ್ತಿದ್ದನು. ಆಗ ಅವನು ವೀರಬೊಮ್ಮರಸನಿಗೆ ಬಸರಕೋಡನ್ನು ಸರ್ವಮಾನ್ಯವಾಗಿ ಕೊಟ್ಟನು. ರಾಮಚಂದ್ರರಾಯನ ರಾಜ್ಯಭಾರದ ೧೭ನೇ ವರ್ಷ (ಕ್ರಿ.ಶ. ೧೨೮೭)ದಲ್ಲಿ ದೇವರಾಣೇಯನು ಸಿಂದವಾಡಿಯನ್ನು ಆಳುತ್ತಿದ್ದಾಗ ಅವನ ಸರ್ವಾಧಿಕಾರಿ ನಾಗಯ್ಯ ನಾಯಕನು ಸಿಂದವಾಡಿಯ ನೇಕಳಿಕೆ, ಬೆಂಬುಗುಡಿ, ಅರೆಕೆರೆ, ಹೊಳಲುಗುಂದ ಗ್ರಾಮಗಳನ್ನು ವೃತ್ತಿಯಾಗಿ ಕೊಟ್ಟನು. ಆದೋನಿ

ತಾಲೂಕು ಶಂಭುಕಲ್ಲಿನಲ್ಲಿ ಮಾಧವನಾರಾಯಣ ರಾಮಚಂದ್ರರಾಯನ ಕನ್ನಡ ಶಿಲಾಶಾಸನದ ಒಂದು ತುಂಡು ದೊರಕಿದೆ. ಉಳಿದ ಮುಖ್ಯ ಭಾಗವಾಗಿರುವ ತುಂಡು ದೊರೆತಿಲ್ಲ. ಸಿಂದವಾಡಿಯಲ್ಲಿ ದೊರೆತ ಯಾದವರ ಶಾಸನಗಳು ಕನ್ನಡದಲ್ಲಿವೆ. ಆದ್ದರಿಂದ ಸಿಂದವಾಡಿ ಈ ಯಾದವರ ಕಾಲದಲ್ಲಿ ಕನ್ನಡವಾಗಿತ್ತೆಂಬುದರಲ್ಲಿ ಸಂದೇಹವೇ ಇಲ್ಲ.

ಪುವ್ವಲ ಅರಸರು : ದೇವಗಿರಿಯ ರಾಮಚಂದ್ರರಾಯನ ಕಾಲದಲ್ಲಿ ಮುಮ್ಮಡಿಸಿಂಗ ಮತ್ತು ಇವನ ಮಗ ವೀರಕಂಪಿಲದೇವ ಎಂಬ ಸಾಮಂತರು ಸೇನಾಧಿಪತಿಗಳಾಗಿದ್ದು ರಾಮಚಂದ್ರರಾಯನಿಗೆ ಬಲಗೈಯಂತಿದ್ದರು. ದೆಹಲಿ ಸುಲ್ತಾನರ ದಾಳಿಗಳ ಪರಿಣಾಮವಾಗಿ ಯಾದವರು ತತ್ತರಿಸಿ ಹೋದರು. ಆಗ ತುಂಗಭದ್ರ ನದಿಯ ದಂಡೆಯಲ್ಲಿದ್ದ ಸಾಮಂತರು ಸ್ವತಂತ್ರರಾಗಲು ಹವಣಿಸಿದರು. ಭದ್ರಾ ನದಿಯ ದಂಡೆಯಲ್ಲಿದ್ದ ಸಾಮಂತರು ಸ್ವತಂತ್ರರಾಗಲು ಹವಣಿಸಿದರು. ಅವರಲ್ಲಿ ವೀರಕಂಪಿಲದೇವನೂ, ಅವನ ಮಗ ಕಮ್ಮಟದ ಗಂಡುಗಲಿ ಕುಮಾರರಾಮನು ಪ್ರಬಲಿಸಿ, ದೆಹಲಿಯ ಸುಲ್ತಾನರ ಸೇನೆಯನ್ನು ಮೂರು ಸಲ ಸೋಲಿಸಿ ಹಿಂದಕ್ಕಟ್ಟಿದರು. ಓರಂಗಲ್ಲು ಪ್ರತಾಪರುದ್ರ, ಹೊಯ್ಸಳ ಮುಮ್ಮಡಿ ವೀರಬಲ್ಲಾಳ, ಹುಳಿಯಾರು ಮಾರನಗೌಡ ಮುಂತಾದವರು ಕುಮಾರರಾಮನಿಗೆ ಮಣಿಯ ಬೇಕಾಯಿತು. ಕುಮಾರರಾಮನು ಪಟ್ಟಾಭಿಷಿಕ್ತನಾದಾಗ, ಅಧಿರಾಜತ್ವವನ್ನು ಒಪ್ಪಿಕೊಂಡು ಆದೋನಿಯ ರೆಡ್ಡಿ ಕರಣೀಕರು ಕಪ್ಪವನ್ನೊಪ್ಪಿಸುತ್ತಿದ್ದರು. ಈ ಪುವ್ವಲ ಅರಸರು ಅಚ್ಚ ಕನ್ನಡಿಗರು. ಈಗಿನ ತರಿಕೆರೆ ಪಾಳೆಯಗಾರರು ಈ ಪುವ್ವಲ ವಂಶದವರು ಎಂದು ಹೇಳುತ್ತಾರೆ.

ದೆಹಲಿ ಸುಲ್ತಾನರು : ಪುವ್ವಲ ವಂಶದ ಕಂಪಿಲದೇವರಾಯ ಮತ್ತು ಕುಮಾರರಾಮ ಇವರು ಯುದ್ಧದಲ್ಲಿ ಮಡಿದ ಮೇಲೆ ಕಮ್ಮಟ ರಾಜ್ಯವು ತುಂಗಭದ್ರೆಯ ಅಕ್ಕಪಕ್ಕಗಳ ಭಾಗಗಳು ದೆಹಲಿ ಸುಲ್ತಾನರ ವಶವಾದವು. ಈ ರಾಜ್ಯಕ್ಕೆ ಒಬ್ಬ ಮುಸಲ್ಮಾನ ಪ್ರಾಂತ್ಯಾಧಿಕಾರಿಯು ನೇಮಿಸಲ್ಪಟ್ಟನು. ಕಮ್ಮಟದುರ್ಗ ಮತ್ತು ಆಲೂರು ತಾಲೂಕು ಚಿಪ್ಪಗಿರಿ ಈ ಪ್ರಾಂತ್ಯಾಧಿಕಾರಿಯ ರಾಜಧಾನಿಗಳಾದವು.

ಈ ಪ್ರಾಂತ್ಯಾಧಿಕಾರಿಗಳ ಆಡಳಿತವು ಸುಗಮವಾಗಿರಲಿಲ್ಲ. ಮುಸಲ್ಮಾನರನ್ನು ಓಡಿಸಿ ದಕ್ಷಿಣ ಭಾರತವನ್ನು ಸ್ವತಂತ್ರಗೊಳಿಸಲು ಕನ್ನಡಿಗರೂ, ಆಂಧ್ರರೂ ಐಕ್ಯಮತ್ಯರಾದರು. ಆಂಧ್ರದಲ್ಲಿ ಕಾಕತೀಯ ಪ್ರತಾಪರುದ್ರ ಮತ್ತು ಅವನ ಮಗ ಕೃಷ್ಣ ಅಥವಾ ಯಪ್ಪಟರಾಜ, ಗಜಪತಿ ಪ್ರತಾಪರುದ್ರ, ಗಂಡಿಕೋಟೆಯ ನೊಂಕರೆಡ್ಡಿ, ಆಂಧ್ರದೇಶಾಧೀಶ್ವರ ಮತ್ತು ಸುರತ್ರಾಣ ಎಂಬ ಬಿರುದಾಂಕಿತ ಕಾಪಯ್ಯ ನಾಯಕ, ಅದ್ದಂಕೆ ಕೊಂಡವೀಡುಗಳ ವೇಮರಾಜ, ಕರ್ನೂಲಿನ ಸೋಮದೇವರಾಜ ಮುಂತಾದವರು ಮುಖ್ಯರು. ಮುಮ್ಮಡಿ ವೀರಬಲ್ಲಾಳ, ಕುಮಾರರಾಮನ ಮುಖ್ಯಮಂತ್ರಿಯಾಗಿದ್ದ ಬೈಚಪ್ಪ ದಂಡನಾಯಕ, ಹರಿಹರ, ಬುಕ್ಕ, ಅಳಿಯ

ಸೋಮಯ್ಯ, ದಣ್ಣಾಯಿಕ, ಮಲ್ಲಿನಾಥ ಒಡೆಯರು ಮತ್ತು ಶ್ರೀ ವಿದ್ಯಾರಣ್ಯರು ಕನ್ನಡಿಗರಲ್ಲಿ ಪ್ರಮುಖರು. ಶಾಲಿವಾಹನ ಶಕ ೧೨೫೮ (ಕ್ರಿ.ಶ. ೧೩೩೬)ರಲ್ಲಿ ಅಂದರೆ ಎರಡು ಮೂರು ವರ್ಷಗಳಲ್ಲಿ ಪ್ರಸಿದ್ಧವಾದ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಲ್ಪಟ್ಟಿತು.

ವಿಜಯನಗರ ಸಾಮ್ರಾಜ್ಯ : ವಿಜಯನಗರವನ್ನು ನಾಲ್ಕು ವಂಶದ ಸಾಮ್ರಾಟರು ಆಳಿದರಾದರೂ, ಸಂಗಮ, ಸಾಳುವ ಮತ್ತು ತುಳುವ ವಂಶದವರ ಕಾಲದಲ್ಲಿ ಮಾತ್ರ ಆದೋನಿ ಅಥವಾ ಸಿಂದುವಾಡಿಯು ವಿಜಯನಗರ ಸಾಮ್ರಾಜ್ಯದ ಅಧೀನವಾಗಿತ್ತು. ಈ ಮೂರು ವಂಶದವರ ಕಾಲದಲ್ಲಿಯೂ ಈ ಸಾಮ್ರಾಜ್ಯ ಅಚ್ಚ ಕರ್ನಾಟಕವಾಗಿತ್ತು. ಈ ಸಾಮ್ರಾಟರೆಲ್ಲರೂ ಕರ್ನಾಟಕ ಸಿಂಹಾಸನಾಧೀಶ್ವರರೆಂದೇ ಹೊಗಳಿಸಿಕೊಂಡಿರುವರು. ವಿಜಯನಗರದ ಅರಸರು ಆಂಧ್ರ ಗಜಕೇಸರಿ ಎಂಬ ಬಿರುದು ಧರಿಸಿದ್ದರು. ೧ನೇ ಬುಕ್ಕರಾಯನ ಪ್ರತಾಪದ ಮುಂದೆ 'ಆಂಧ್ರಾಃ ರಂಧ್ರಾಣಿ ಧಾವಂತಿ' ಅಂದರೆ ಆಂಧ್ರರು ಓಡಿಹೋಗಿ ಬಿಲವನ್ನು ಹೊಕ್ಕರು. ಇಮ್ಮಡಿ ಹರಿಹರನು 'ಕರ್ನಾಟಕ ವಿದ್ಯಾವಿಳಾಸ'ನಾಗಿದ್ದನು. ಈ ಹರಿಹರನ ತಮ್ಮನ ಮಗನಾದ ಚನ್ನಪ್ಪ ಒಡೆಯರು ಆದೋನಿ ದುರ್ಗವೂ, ರಾಜ್ಯವೂ ತುರಕರ ಭೂಯಿಷ್ಟವಾಗುತ್ತಿರುವಲ್ಲಿ, ಆ ತುರಕರನ್ನು ಗೆದ್ದು ಆದೋನಿ ದುರ್ಗವನ್ನು ಸಾಧಿಸಿ, ತನ್ನ ದೊಡ್ಡಪ್ಪನಾದ ಇಮ್ಮಡಿ ಹರಿಹರನಿಗೆ ಒಪ್ಪಿಸಿದನೆಂದು ಸೀಗೆ ಮಾವಿನಹಳ್ಳಿ ದಾನಶಾಸನದಲ್ಲಿ ಉಕ್ತವಾಗಿದೆ.

ಕ್ರಿ.ಶ. ೧೪೦೬ರಲ್ಲಿ ಮುದಗಲ್ ಸುಂದರಿಯ ವಿಷಯದಲ್ಲಿ ವಿಜಯನಗರದ ೧ನೇ ದೇವರಾಯನಿಗೂ ಗುಲ್ಬರ್ಗಾದ ಫಿರೋಜ್‌ಷಹನಿಗೂ ಯುದ್ಧವಾಗಿ ಆದೋನಿ ದುರ್ಗವು ಮುಸಲ್ಮಾನರಿಂದ ಮುತ್ತಲ್ಪಟ್ಟಿತು. ಆದರೆ ಸಂಧಾನವಾಗಿ ಕೋಟೆಯ ಶತ್ರುಗಳು ವಶವಾಗಲಿಲ್ಲ. ಕ್ರಿ.ಶ. ೧೫೩೦ರಲ್ಲಿ ಬಿಜಾಪುರದ ಇಬ್ರಾಹಿಂ ಆದಿಲ್‌ಷಹನು ಮುತ್ತಿ ವಿಫಲನಾದನು. ಕ್ರಿ.ಶ. ೧೫೫೧ರಲ್ಲಿ ರಾಮರಾಯನ ತಮ್ಮಂದಿರಾದ ವೆಂಕಟರಾಮ ಮತ್ತು ತಿರುಮಲರಾಯನು ದಂಗೆ ಎದ್ದು ಆದೋನಿಯನ್ನು ಹಿಡಿದರು. ಆದರೆ ಆರು ತಿಂಗಳೊಳಗೆ ರಾಮರಾಯನು ದಂಗೆಯನ್ನು ಅಡಗಿಸಿ ತಮ್ಮಂದಿರನ್ನು ಕ್ಷಮಿಸಿದನು. ರಕ್ಕಸತಂಗಡಿ ಯುದ್ಧವಾದ ನಂತರವೂ ಮೂರು ವರ್ಷಗಳ ಕಾಲ ಆದೋನಿ ರಾಜ್ಯವು ವಿಜಯನಗರದವರ ವಶದಲ್ಲಿಯೇ ಇತ್ತು.

ಬಹಮನಿ ಸುಲ್ತಾನರು : ಕ್ರಿ.ಶ. ೧೫೬೮ರಲ್ಲಿ ಬಿಜಾಪುರದ ಸುಲ್ತಾನ ಆದಿಲ್‌ಷಹನು ಆದೋನಿಯನ್ನು ಮುತ್ತಲು ತನ್ನ ಸೇನಾನಿ ಅಂಕುಶಖಾನನನ್ನು ಕಳುಹಿಸಿದನು. ಆದೋನಿಯು ಮುಸಲ್ಮಾನರ ವಶವಾಯಿತು. ಅಂದಿನಿಂದ ಕ್ರಿ.ಶ. ೧೮೦೦ರ ವರೆಗೆ ಮುಸಲ್ಮಾನರ ವಶದಲ್ಲಿಯೇ ಇತ್ತು.

ಅನೇಕ ಮುಸಲ್ಮಾನ ಪ್ರಾಂತಾಧಿಕಾರಿಗಳು ಆದೋನಿಯನ್ನು ಆಳಿದರು. ಅವರಲ್ಲಿ ಮಲ್ಲಿಕ್ ರಹಮಾನಖಾನ್ ಕ್ರಿ.ಶ. ೧೬೦೪ ರಿಂದ ೧೬೩೧ ರವರೆಗೆ ಅಧಿಕಾರಿಯಾಗಿದ್ದನು. ಆದರೆ ಕ್ರಿ.ಶ. ೧೬೬೨ ರಿಂದ ೧೬೮೭ ರವರೆಗೆ ಪ್ರಾಂತ್ಯಾಧಿಕಾರಿಯಾಗಿದ್ದ ಸಿದ್ದಿ ಮಸೂದ್‌ಖಾನ್ ಪ್ರಜಾವಾತ್ಸಲ್ಯದ ಅಧಿಕಾರಿಯಾಗಿದ್ದನೆಂದು ಕೀರ್ತಿಗೊಂಡಿರುವವನು. ಆದೋನಿಯಲ್ಲಿರುವ ಜುಮ್ಮ ಮಸೀದಿಯು ಅವನ ಕೀರ್ತಿ ಸ್ಮಾರಕವಾಗಿದೆ. ಇವನ ಕೀರ್ತಿಗೆ ಇವನ ದಿವಾನನಾಗಿದ್ದ ವೆಂಕಣ್ಣ ಪಂತನೇ ಮುಖ್ಯ ಕಾರಣ. ವೆಂಕಣ್ಣನು ಕಟ್ಟಿಸಿದ ಹೊಂಡವೂ ಆದೋನಿಯ ಊರು ಮಧ್ಯದಲ್ಲಿ ಇಂದಿಗೂ ಇದೆ.

ಈ ಪ್ರಾಂತ್ಯಾಧಿಕಾರಿಗಳ ಕಾಲದ ಕೆಲವು ಶಾಸನಗಳು ದೊರೆತಿವೆ. ಶಕ ೧೫೯೨ನೆಯ ವಿರೋಧಿಕೃತು ಸಂವತ್ಸರದ ಕನ್ನಡದಲ್ಲಿರುವ ದಾನಪತ್ರಕ್ಕೆ 'ವೆಂಕಟಾದ್ರಿ ಮುರಾರಿಗಳ ಸ್ವಹಸ್ತದ ವಪ್ಪಿತ' ಎಂದು ಹಸ್ತಾಕ್ಷರವಿದೆ. ಆದೋನಿ ಸ್ಥಳ ಮತ್ತು ಪರಸ್ಥಳದ ದೈವದವರು ಸಾಧರಣ ಸಂವತ್ಸರದಲ್ಲಿ (ಕ್ರಿ.ಶ. ೧೬೭೦ರಲ್ಲಿ) ಭಂಡಗಲ್ಲು ರಾಮಲಿಂಗೇಶ್ವರ ದೇವರಿಗೆ ಒಂದು ತಾಮ್ರದ ಬಟ್ಟಲಿನ ಮೇಲೆ ಕನ್ನಡದಲ್ಲಿ ದಾನ ಶಾಸನವನ್ನು ಬರೆದುಕೊಟ್ಟಿದ್ದಾರೆ. ಸಿದ್ದಿಮಸೂದ್‌ಖಾನ್‌ನ ಒಂದು ತಾಮ್ರಶಾಸನವು ನಾಗರಿ ಅಕ್ಷರ ಕನ್ನಡ ಭಾಷೆಯಲ್ಲಿದೆ. ಈ ಪ್ರಾಂತ್ಯಾಧಿಕಾರಿಯ ಕಾಲದ ಶಾಸನಗಳು ಮತ್ತು ಸದುಕ್ತಿಗಳು ಜುಮ್ಮಾ ಮಸೀದಿಯಲ್ಲಿಯೂ, ಬೆಟ್ಟದ ಮೇಲೆಯೂ ಫಾರ್ಸಿ ಭಾಷೆಯಲ್ಲಿವೆ. ಇವುಗಳ ಪರಿಶೀಲನೆಯಿಂದ ಮುಸಲ್ಮಾನರ ಆಡಳಿತದಲ್ಲಿ ಫಾರ್ಸಿ ಮತ್ತು ಕನ್ನಡ ಭಾಷೆಗಳೇ ಆದೋನಿ ರಾಜ್ಯದಲ್ಲಿ ಪ್ರಚಾರದಲ್ಲಿದ್ದವು ಎಂದು ವ್ಯಕ್ತವಾಗುವುದು.

ಮೊಗಲರು : ಕ್ರಿ.ಶ. ೧೬೮೮ ರಲ್ಲಿ ಬಹುಮನಿ ರಾಜ್ಯವೂ ಅದರೊಡನೆ ಆದೋನಿ ರಾಜ್ಯವು ದೆಹಲಿ ಸುಲ್ತಾನ ಔರಂಗಜೇಬನ ವಶವಾಯಿತು. ಔರಂಗಜೇಬನಿಂದ ನಿಯಮಿತವಾದ ಅನುಪ್‌ಸಿಂಗ್ ಮತ್ತು ಭೀಮಸಿಂಗ್ ಎಂಬ ಪ್ರಾಂತ್ಯಾಧಿಕಾರಿಗಳು ಆದವಾನಿಯಲ್ಲೆ ೧೪ ವರ್ಷ ಕಾಲ ರಾಜ್ಯವಾಳಿದರು. ೧೭೦೩ ರಿಂದ ೧೭೨೩ ರವರೆಗೆ ಕೆಲವು ಮುಸಲ್ಮಾನ ಪ್ರಾಂತ್ಯಾಧಿಕಾರಿಗಳು ಆಳಿದರು. ೧೭೨೩ ರಲ್ಲಿ ಈ ಭಾಗವು ಹೈದರಾಬಾದ್ ನಿಜಮಾನ ವಶಕ್ಕೆ ಬಂದು ೧೮೦೦ ರವರೆಗೂ ಅವರ ವಶದಲ್ಲಿಯೇ ಇತ್ತು. ೧೮೦೦ ರಲ್ಲಿ ಬ್ರಿಟಿಷರ ವಶವಾಯಿತು. ಈ ಮಹಮ್ಮದೀಯರ ಆಳ್ವಿಕೆಯಲ್ಲಿಯೂ ಫಾರ್ಸಿ ಮತ್ತು ಕನ್ನಡಗಳೇ ಆಡಳಿತ ಭಾಷೆಗಳಾಗಿದ್ದವು. ಕ್ರಿ.ಶ. ೧೯೫೬ ನವೆಂಬರ್ ೧ ರಂದು ಆಂಧ್ರ-ಕರ್ನಾಟಕ ವಿಭಜನೆ ಆದೋನಿ ಕರ್ನಾಟಕದಿಂದ ಆಂಧ್ರ ರಾಜ್ಯದೊಳಗೆ ವಿಲೀನ.

ಅಡಿಟಿಪ್ಪಣಿ

೧. ಡಾ.ಪಿ. ಮಹಾದೇವಯ್ಯ, ೧೯೯೯, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪು.೧೦

೨. ಸಂ. ತಂಬಂಡ ವಿಜಯ ಪೂಣಚ್ಚ, ಚರಿತ್ರೆ ವಿಶ್ವಕೋಶ, ಪು.೮೮೩

೩. ಸಂ. ಲಕ್ಷ್ಮಣ್ ತೆಲಗಾವಿ, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು

□□

ಅಧ್ಯಾಯ ೩

ಆದೋನಿ ಕನ್ನಡದ ಉಚ್ಚಾರಣೆ ಮತ್ತು ಧ್ವನಿನಿಯಮಗಳು

ಅಧ್ಯಾಯ ೩

ಆದೋನಿ ಕನ್ನಡದ ಉಚ್ಚಾರಣೆ ಮತ್ತು ಧ್ವನಿನಿಯಮಗಳು

"ಭಾಷೆಯು ಸಮಾಜದ ಬಹುಮುಖ್ಯ ಸಾಧನೆಗಳಲ್ಲಿ ಒಂದು. ಈ ಭಾಷೆ ಪೂರ್ಣವಾಗಿ ಉಚ್ಚರಿತ ಧ್ವನಿಗಳಿಂದ ಕೂಡಿದ್ದಾಗಿದೆ. ಮನುಷ್ಯ ಅನೇಕ ರೀತಿಯ ಧ್ವನಿಗಳನ್ನು ಉಚ್ಚರಿಸಬಲ್ಲ ಶಕ್ತಿಯನ್ನು ಹೊಂದಿದ್ದಾನೆ. ಇಂತಹ ಧ್ವನಿಗಳ ಉತ್ಪತ್ತಿಗೆ ಮನುಷ್ಯನ ಧ್ವನ್ಯಂಗಗಳು ಸಹಾಯ ಮಾಡುತ್ತವೆ. ಅಂತಹ ಉಚ್ಚರಿತ ಧ್ವನಿಗಳ ಉತ್ಪಾದನೆ ಅವುಗಳ ಸ್ವರೂಪ ಮತ್ತು ಅವುಗಳ ವರ್ಗೀಕರಣ ಮುಂತಾದ ವಿಷಯಗಳ ವಿವೇಚನೆಯನ್ನು 'ಧ್ವನಿ ವಿಜ್ಞಾನ' ಎನ್ನುವರು."[೧]

"ಉಚ್ಚರಿತ ಧ್ವನಿಗಳು ಭಾಷೆಯಿಂದ ಭಾಷೆಗೆ ಒಂದೇ ಆಗಿರದೆ ಬೇರೆ ಬೇರೆ ಆಗಿರುತ್ತವೆ. ಅಂತಹ ಧ್ವನಿಗಳೆಲ್ಲ ಒಂದೇ ಭಾಷೆಯಲ್ಲಿ ಒಂದು ಪಕ್ಷ ಕಂಡುಬಂದರೂ ಅವುಗಳ ಗುಣಧರ್ಮ ಬೇರೆ ಬೇರೆಯಾಗಿರುತ್ತದೆ. ಹೀಗಾಗಿ ಉಚ್ಚರಿತ ಧ್ವನಿಗಳು ಪ್ರತಿಯೊಂದು ಭಾಷೆಯಲ್ಲೂ ತಮ್ಮದೇ ಆದ ರೀತಿಯಲ್ಲಿರುತ್ತವೆ. ಅಂತಹ ಉಚ್ಚರಿತ ಧ್ವನಿಗಳ ವ್ಯವಸ್ಥೆಯನ್ನು ಆ ಭಾಷೆಯ ಧ್ವನಿವ್ಯವಸ್ಥೆ ಎಂದು ಕರೆಯಲಾಗುವುದು."[೨]

ಸಾಮಾನ್ಯನ ಕಣ್ಣಿಗೆ ಒಂದು ಪವಾಡದಂತೆ ಕಾಣುವ ಧ್ವನಿ ಉತ್ಪಾದನೆ, ಮನುಷ್ಯನ ಬಾಯಿಯಲ್ಲಿರುವ ಧ್ವನ್ಯಂಗಗಳ ಸಹಾಯದಿಂದ ಆಗುತ್ತಿದೆ. "ಧ್ವನ್ಯಂಗಗಳು ಧ್ವನಿಗಳನ್ನು ಉತ್ಪಾದಿಸುವ ರೀತಿಯನ್ನು ಒಂದು ಹಾರ್ಮೋನಿಯಂ ಅಥವ ಕೊಳಲಿಗೆ ಹೋಲಿಸಬಹುದು. ಈ ವಾದ್ಯಗಳಲ್ಲಿ ಗಾಳಿಯನ್ನು ತುಂಬಿ ಅದನ್ನು ತಡೆಗಟ್ಟುತ್ತಾ ಹೋದಂತೆಲ್ಲಾ ಹಾಗೆಯೇ ಸ್ವಲ್ಪ ಸ್ವಲ್ಪ ಗಾಳಿಯನ್ನು ಹೊರಬಿಡುತ್ತಾ ಮುಂದುವರೆದಂತೆಲ್ಲಾ ಆ ಗಾಳಿ ನಿರಾತಂಕವಾಗಿ

ಸಾಗದೇ ಇರುವುದರಿಂದ ಬೇರೆ ಬೇರೆ ಧ್ವನಿಗಳು ಹೊರಬರುತ್ತವೆ. ಹಾರ್ಮೋನಿಯಂಗೆ ತಿದಿಯನ್ನು ಒತ್ತುವುದರಿಂದ ಗಾಳಿಯನ್ನು ತುಂಬಿದರೆ ಕೊಳಲಿಗೆ ಬಾಯಿಯಿಂದ ಊದುವುದರಿಂದ ಗಾಳಿ ತುಂಬುತ್ತದೆ. ಅಂತೆಯೇ ಧ್ವನ್ಯಂಗಗಳಿಗೆ ಬೇಕಾಗುವ ಗಾಳಿಯನ್ನು ಶ್ವಾಸಕೋಶಗಳು ಒದಗಿಸುತ್ತವೆ. ಶ್ವಾಸಕೋಶದಿಂದ ಹೊರಬರುವ ಗಾಳಿಯನ್ನು ಧ್ವನ್ಯಂಗಗಳು ಬೇರೆ ಬೇರೆ ಸ್ಥಿತಿಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ತಡೆಯುಂಟು ಮಾಡುವುದರಿಂದ ಸಾಮಾನ್ಯವಾಗಿ ಧ್ವನಿಗಳು ಹೊರಬರುತ್ತವೆ. ಇದಕ್ಕೆ ವಿರುದ್ಧವಾದ ಪದ್ಧತಿಯಲ್ಲಿ ಕೆಲವು ವೇಳೆ ಅಂತರಮುಖಿ ಧ್ವನಿಗಳಂತಹ ಧ್ವನಿಗಳನ್ನು ಉತ್ಪಾದಿಸಬಹುದು. ಬಾಯಿಯಿಂದ ಶ್ವಾಸಕೋಶದವರೆಗಿನ ಎಲ್ಲಾ ಧ್ವನಿ ಉತ್ಪಾದನಾಂಗಗಳನ್ನು ಪರಿಶೀಲಿಸುತ್ತಾ ಅವು ಧ್ವನಿಗಳನ್ನು ಹೇಗೆ ಉತ್ಪಾದಿಸುತ್ತವೆ ಎನ್ನುವುದಕ್ಕಿಂತ ಅವುಗಳ ಸ್ವರೂಪವೇನು ಎಂಬುದನ್ನು ಗಮನಿಸುವುದು ಅತ್ಯಗತ್ಯವಾಗಿದೆ."[5]

ಭಾಷೆಯ ಮೂಲ ಸಾಮಗ್ರಿ ಧ್ವನಿ. ಮಾನವನ ಮುಖ ವಿವರದಿಂದ ಹೊರಡುವ ಧ್ವನಿಗಳಿಗೆಲ್ಲಾ ಭಾಷೆಯಲ್ಲಿ ಅರ್ಥವಿಲ್ಲ. ಉಚ್ಚರಿತ ಧ್ವನಿಗಳಿಗೆ ಮಾತ್ರ ಭಾಷೆಯಲ್ಲಿ ಸ್ಥಾನವಿದೆ. ತಾನು ಹೊರಡಿಸುವ ಧ್ವನಿಗಳನ್ನು ತನ್ನ ಭಾಷೆಯಲ್ಲಿ ಸಂಕೇತಾತ್ಮಕವಾಗಿ ಅಂದರೆ ಧ್ವನಿ ಅಥವ ಧ್ವನಿ ಸರಣಿಯನ್ನು ಅರ್ಥವಂತಿಕೆಯೊಂದಿಗೆ ಬಳಸುತ್ತಾನೆ. ಅಸಂಖ್ಯಾತ ಧ್ವನಿಗಳನ್ನು ಹೊರಡಿಸಬಹುದಾದರೂ ಎಲ್ಲಾ ಧ್ವನಿಗಳನ್ನು ಅವನೇ ತನ್ನ ಭಾಷೆಯಲ್ಲಿ ಅಥವ ಇತರ ಭಾಷೆಗಳಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಅಳವಡಿಸಿಕೊಳ್ಳಲು ಸಾಧ್ಯವೂ ಇಲ್ಲ. ಅಂತೆಯೇ ಅಪರಿಮಿತ ಧ್ವನಿಗಳಲ್ಲಿ ತನ್ನ ಅನುಕೂಲತೆಗೆ ತಕ್ಕಂತೆ ಕೆಲವನ್ನು ಆಯ್ದುಕೊಂಡು ಅವುಗಳನ್ನು ಮಾತ್ರ ತನ್ನ ಆಡುನುಡಿಯಲ್ಲಿ ಬಳಸುತ್ತಿರುತ್ತಾನೆ. ಆದ್ದರಿಂದ ಜಗತ್ತಿನಲ್ಲಿ ಒಂದೊಂದು ಭಾಷೆಯಲ್ಲಿ ಸಂಖ್ಯಾ ದೃಷ್ಟಿಯಿಂದ ವಿಭಿನ್ನ ಧ್ವನಿ ಮೊತ್ತಗಳು ಇರುವುದು ಅನಿವಾರ್ಯವಾಗಿದೆ.

"ಆಡುನುಡಿ ಎಂದರೆ ನಿರ್ದಿಷ್ಟ ಗುಂಪಿನ ಜನರು ದಿನನಿತ್ಯ ಬಳಸುವ ನಿರ್ದಿಷ್ಟ ಭಾಷೆ." ಆಡುನುಡಿ ಒಂದು ಜೀವಂತ ಭಾಷೆಯ ಸಹಜ ಲಕ್ಷಣ. ಆಡುನುಡಿ ಉಚ್ಚಾರಣೆಗಳನ್ನು ಅವಲಂಬಿಸಿರುತ್ತದೆ. ಎಲ್ಲಾ ಭಾಷೆಗಳಿಗೂ ಆಡುನುಡಿಯೇ ತಾಯಿ. ಈ ಹಿನ್ನೆಲೆಯಿಂದ ಪ್ರಸ್ತುತ ಅಧ್ಯಾಯದಲ್ಲಿ ಉಚ್ಚಾರಣೆಗೆ ಒತ್ತು ನೀಡಿ ಆದೋನಿ ಕನ್ನಡದ ಉಚ್ಚಾರಣೆಯ ಧ್ವನಿಯಮಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಆದೋನಿ ಕನ್ನಡದಲ್ಲಿ ಬಳಕೆಯಲ್ಲಿರುವ ಧ್ವನಿಗಳು ಕೆಳಗಿನಂತಿವೆ.

* ಪದಾದಿಯ ವಿಸ್ಸೃತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರವು ಆದೋನಿ ಕನ್ನಡದಲ್ಲಿ ವೃತ್ತೌಷ್ಠ ಅರ್ಧ ಸಂವೃತ್ತ ಪಶ್ಚ ಹ್ರಸ್ವಸ್ವರ 'ಒ' ಕಾರವಾಗಿದೆ.
* ಪದಾದಿಯ ವಿಸ್ಸೃತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರವು ಸಂಬಂಧವಾಚಕಗಳ ಸಂಬೋಧನೆಯಲ್ಲಿ ತಾಲವ್ಯ ವಿರಳ ಘರ್ಷ 'ಯ' ಕಾರವು ಉಚ್ಚಾರಣೆಯಲ್ಲಿದೆ.

* ಪದಮಧ್ಯ ವಿಸ್ರುತೌಷ್ಠ ಮಧ್ಯ ಹ್ರಸ್ವಸ್ವರ 'ಅ'ಕಾರ ಲೋಪ.

* ಪದಮಧ್ಯ ವಿಸ್ರುತೌಷ್ಠ ಪೂರ್ವ ಸಂವೃತ್ತ ಹ್ರಸ್ವಸ್ವರ 'ಇ'ಕಾರವೂ ಕ್ರಿಯಾ ಪ್ರಕೃತಿಗೆ ಗೌರವಾರ್ಥ 'ರಿ' ಸೇರಿದಾಗ 'ಇ' ಲೋಪವಾಗುತ್ತದೆ.

* ಪದಮಧ್ಯ ಪರಿಸರದ ಸಂವೃತ್ತ ಹ್ರಸ್ವಸ್ವರ 'ಇ' ಕಾರ ಲೋಪ.

* ಪದಾಂತ್ಯದ ವೃತ್ತೌಷ್ಠ ಸಂವೃತ್ತ ಪಶ್ಚ ಹ್ರಸ್ವ 'ಉ' ಕಾರವು ವಿಸ್ರುತೌಷ್ಠ ಮಧ್ಯ ಹ್ರಸ್ವ 'ಅ' ಕಾರವಾಗಿದೆ.

* ಪದಾಂತ್ಯ ಪರಿಸರದ ವಿಸ್ರುತೌಷ್ಠ ಪೂರ್ವ ಅರ್ಧಸಂವೃತ್ತ ಹ್ರಸ್ವಸ್ವರ 'ಎ' ಕಾರವು ಆದೋನಿ ಕನ್ನಡದಲ್ಲಿ ವಿಸ್ರುತೌಷ್ಠ ಪೂರ್ವ ಸಂವೃತ್ತ ಹ್ರಸ್ವಸ್ವರ 'ಇ'ಕಾರವಾಗಿ ಉಚ್ಚಾರಣೆಯಲ್ಲಿದೆ.

* ಪದಾಂತ್ಯ ಪರಿಸರದ ವಿಸ್ರುತೌಷ್ಠ ಪೂರ್ವ ಅರ್ಧ ಸಂವೃತ್ತ ಹ್ರಸ್ವಸ್ವರ 'ಎ' ಕಾರಾಂತವಾಗಿ ಉಚ್ಚಾರಣೆಯಲ್ಲಿದೆ.

* ಪದಾದಿಯ ವಿಸ್ರುತೌಷ್ಠ ಪೂರ್ವ ಅರ್ಧ ಸಂವೃತ್ತ ಸ್ವರ 'ಎ' ಕಾರವು ತಾಲವ್ಯ ವಿರಳ ಘರ್ಷ 'ಯ' ಕಾರವಾಗಿದೆ.

* ಪದಾದಿಯ ವಿಸ್ರುತೌಷ್ಠ ಪೂರ್ವ ಅರ್ಧ ಸಂವೃತ್ತ ಸ್ವರ 'ಎ' ಕಾರವು 'ಆ್ಯ' ಕಾರವಾಗಿದೆ.

* ಪದ ಮಧ್ಯ ವಿಸ್ರುತೌಷ್ಠ ಅರ್ಧಸಂವೃತ್ತ ಹ್ರಸ್ವಸ್ವರ 'ಎ' ಕಾರ ಲೋಪ.

* ಪದಾದಿಯ ವೃತ್ತೌಷ್ಠ ಅರ್ಧ ಸಂವೃತ್ತ ಪಶ್ಚ ಹ್ರಸ್ವಸ್ವರ 'ಒ' ಕಾರವು ವಿಸ್ರುತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರ ಮತ್ತು ದೀರ್ಘಸ್ವರ 'ಆ' ಕಾರಗಳಾಗಿವೆ.

* ಪದಾದಿಯ ವೃತ್ತೌಷ್ಠ ಅರ್ಧಸಂವೃತ್ತ ಪಶ್ಚ ಹ್ರಸ್ವಸ್ವರ 'ಒ'ಕಾರವು ಆದೋನಿ ಕನ್ನಡದಲ್ಲಿ ದಂತೌಷ್ಠ ವಿರಳ ಘರ್ಷ 'ವ'ಕಾರವಾಗಿದೆ.

* ಪದಾದಿಯ ವೃತ್ತೌಷ್ಠ ಅರ್ಧ ಸಂವೃತ್ತ ಪಶ್ಚ ದೀರ್ಘಸ್ವರ 'ಓ' ಕಾರವು ದಂತೌಷ್ಠ ವಿರಳ ಘರ್ಷ 'ವ' ಕಾರವಾಗಿದೆ.

* ಒಂದು ಸ್ವರಕ್ಕೆ ಮತ್ತೊಂದು ಸ್ವರ ಆಗಮವಾಗಿ ಉಚ್ಚರಣೆಯಲ್ಲಿರುವುದು.

* ಪದಾದಿಯ ತಾಲವ್ಯ ಸ್ಪರ್ಷ 'ಚ' ಕಾರವು ಲೋಪವಾಗಿ ವರ್ತ್ಸ್ಯ ಘರ್ಷ 'ಸ' ಕಾರ ಉಚ್ಚಾರಣೆಯಲ್ಲಿದೆ.

* ವರ್ತ್ಸ್ಯ ನಾಸಿಕ ವ್ಯಂಜನ 'ನ' ಕಾರಕ್ಕೆ ಬದಲು ವರ್ತ್ಸ್ಯ ಪಾರ್ಶ್ವಿಕ 'ಲ' ಕಾರವಾಗಿ ಉಚ್ಚಾರಣೆಯಲ್ಲಿದೆ.
* ಮೂರಕ್ಷರ ಪದಗಳಲ್ಲಿ ವರ್ತ್ಸ್ಯತಾಡಿತ 'ರ' ಕಾರಕ್ಕೆ ಬದಲು ವರ್ತ್ಸ್ಯ ಪಾರ್ಶ್ವಿಕ 'ಲ' ಕಾರ ವ್ಯಂಜನ ಗುಚ್ಛಗಳು ಉಚ್ಚಾರಣೆಯಲ್ಲಿವೆ.
* ಪದಾದಿಯ ದಂತೌಷ್ಠ್ಯ ವಿರಳ ಘರ್ಷ 'ವ' ಕಾರವು ವಿಸ್ತೃತೌಷ್ಠ ಪೂರ್ವ ಸಂವೃತ್ತ ಹ್ರಸ್ವ 'ಇ' ಕಾರವಾಗಿ ಉಚ್ಚಾರಣೆಯಲ್ಲಿದೆ.
* ಪದಾದಿಯ ದಂತೌಷ್ಠ್ಯ ವಿರಳ ಘರ್ಷ 'ವ' ಕಾರ ಲೋಪ.
* ಪದಾದಿಯ ಷ,ಶ ಕಾರವು 'ಸ' ಕಾರವಾಗಿ ಉಚ್ಚಾರಣೆಯಲ್ಲಿದೆ.
* ಪದಾದಿಯ ಮೂರ್ಧನ್ಯ ಘರ್ಷ 'ಷ' ಕಾರ ಲೋಪ.
* ಪದಾದಿಯ ಕೃಕೋತ್ತರ 'ಹ' ಕಾರವು ವಿಸ್ತೃತೌಷ್ಠ ಮಧ್ಯಹ್ರಸ್ವ ಸ್ವರ 'ಅ' ಕಾರವಾಗಿದೆ.
* ಪದಾದಿಯ ಕೃಕೋತ್ತರ 'ಹ' ಕಾರವು ವೃತ್ತೌಷ್ಠ ಸಂವೃತ್ತ ಪಶ್ಚ ಹ್ರಸ್ವ ಹಾಗೂ ದೀರ್ಘ 'ಉ', 'ಊ' ಕಾರಗಳಾಗಿವೆ.
* ಪದಾದಿಯ ಕೃಕೋತ್ತರ ಘರ್ಷ 'ಹ' ಕಾರವು ದಂತೌಷ್ಠ್ಯ ವಿರಳ ಘರ್ಷ 'ವ' ಕಾರವಾಗಿದೆ.
* ಪದಾದಿಯ ಮಹಾಪ್ರಾಣ ವ್ಯಂಜನಗಳು ಲೋಪವಾಗಿವೆ.
* ಮಧ್ಯ ಸ್ವರ ಬಿದ್ದುಹೋಗಿ ವ್ಯಂಜನ ದ್ವಿತ್ವಗಳು ಇಲ್ಲವೆ ಸಮರೂಪಗಳು ಉಚ್ಚಾರಣೆಯಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿವೆ.
* ಪದ ಮಧ್ಯಕ್ಷರ ಕೃಕೋತ್ತರ ಘರ್ಷ 'ಹ' ಕಾರ ಲೋಪವಾಗಿದೆ.

*** ಪದಾದಿಯ ವಿಸ್ತೃತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರವು ಆದೋನಿ ಕನ್ನಡದಲ್ಲಿ ವೃತ್ತೌಷ್ಠ ಅರ್ಧ ಸಂವೃತ್ತ ಪಶ್ಚ ಹ್ರಸ್ವಸ್ವರ 'ಒ' ಕಾರವಾಗಿದೆ.**

ಬ.ಕ.	ಆ.ಕ.
ಕಲ್ಲು	ಕೊಲ್ಲು
ಕಣ್ಣು	ಕೊಣ್ಣು
ಕಪ್ಪೆ	ಕೊಪ್ಪೆ
ಕಬ್ಬು	ಕೊಬ್ಬು

ಇಲ್ಲಿ ಪದಾದಿಯ ‘ಅ’ ಧ್ವನಿಯು ‘ಒ’ ಆಗಿದೆ. ‘ಅ’ ಪೂರ್ವಸ್ವರ ‘ಒ’ ಪಶ್ಚ ಸ್ವರವಾಗಿ ಬದಲಾವಣೆಯಾಗಿದೆ. ಆವೃತ್ತ ಸ್ವರವು ಸಂವೃತ್ತ ಸ್ವರವಾಗಿ ಬದಲಾವಣೆಗೊಂಡಿದೆ. ಮೇಲಿನ ನಿರ್ದೇಶನದಲ್ಲಿ “ಕ’ ಕಾರದ ಮುಂದಿನ ಅಕ್ಷರವು ಸಜಾತಿಯ ದ್ವಿತ್ವವಾಗಿದ್ದರೆ ‘ಅ’ ಕಾರವು ‘ಒ’ ಕಾರವಾಗಿರುವುದು ಸ್ಪಷ್ಟವಾಗಿದೆ ಎಂದು ಡಾ.ಎಸ್.ಎಸ್. ಅಂಗಡಿಯವರು ತಮ್ಮ ಶೋಧನ ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ.’’ ಈ ಅಭಿಪ್ರಾಯವು ಆದೋನಿ ವ್ಯವಹಾರಿಕ ಕನ್ನಡದಲ್ಲೂ ಬಳಕೆಯಲ್ಲಿದೆ. ಇದಲ್ಲದೆ ಕೆಲವೊಮ್ಮೆ ‘ಮ’ ಕಾರದ ಮುಂದಿನ ಅಕ್ಷರವು ಸಜಾತಿಯ ದ್ವಿತ್ವ ಬಂದರೆ ಅಂತಹ ಪರಿಸರದಲ್ಲೂ ‘ಒ’ ಕಾರವಾಗಿ ಉಚ್ಚಾರಣೆಯಲ್ಲಿದೆ. ಅದನ್ನು ಮುಂದಿನ ಧ್ವನಿನಿಯಮದಲ್ಲಿ ಉದಾಹರಣೆ ಸಹಿತ ವಿವರ ನೀಡಲಾಗಿದೆ. ಕಬ್ಬು ಎನ್ನುವ ಪದವು ಕೊಬ್ಬು ಎಂದು ಉಚ್ಚಾರಣೆಯಲ್ಲಿದ್ದು, ಅಹಂಕಾರ ಎನ್ನುವ ಪದಕ್ಕೂ ಕೊಬ್ಬು ಎಂದು ಬಳಕೆ ಮಾಡುವುದು ಆದೋನಿ ಕನ್ನಡದ ವೈಶಿಷ್ಟ್ಯವಾಗಿದೆ.

<u>ಬ.ಕ.</u>	<u>ಆ.ಕ.</u>
ಮಣ್ಣು	ಮೊಣ್ಣು
ಮದ್ದು	ಮೊದ್ದು
ಮಬ್ಬು	ಮೊಬ್ಬು

‘ಕ’ ಮತ್ತು ‘ಮ’ ಕಾರವನ್ನು ಬಿಟ್ಟು ಬೇರೆ ಅಕ್ಷರಗಳ ಮುಂದೆ ಸಜಾತಿಯ ದ್ವಿತ್ವ ಬಂದರೆ ‘ಅ’ ಕಾರ ‘ಒ’ ಕಾರವಾಗಿ ಉಚ್ಚಾರಣೆಯಲ್ಲಿ ಇಲ್ಲ.

<u>ಬ.ಕ.</u>	<u>ಆ.ಕ.</u>
ಬಣ್ಣ	ಬೊಣ್ಣ
ಗಲ್ಲ	ಗೊಲ್ಲ
ಹಕ್ಕಿ	ಹೊಕ್ಕಿ

ಮೇಲಿನ ನಿರ್ದೇಶನಗಳನ್ನು ಗಮನಿಸಿದಾಗ ‘ಕ’ ಮತ್ತು ‘ಮ’ ಕಾರದ ಮುಂದೆ ಸಜಾತಿಯ ದ್ವಿತ್ವ ಬಂದಾಗ ‘ಅ’ ಕಾರ ‘ಒ’ ಕಾರವಾಗಿದೆ. ಬೇರೆ ಅಕ್ಷರಗಳ ಮುಂದೆ ಸಜಾತಿಯ ದ್ವಿತ್ವ ಬಂದರೆ ‘ಅ’ ಕಾರ ‘ಒ’ ಕಾರವಾಗಿಲ್ಲ ಎನ್ನುವುದು ಖಚಿತವಾಗುತ್ತವೆ. ಇದು ಆದೋನಿ ಕನ್ನಡದ ವೈಶಿಷ್ಟ್ಯವಾಗಿದೆ.

* ಪದಾದಿಯ ವಿಸೃತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರವು ಸಂಬಂಧವಾಚಕಗಳ ಸಂಬೋಧನೆಯಲ್ಲಿ ತಾಲವ್ಯ ವಿರಳ ಘರ್ಷ 'ಯ' ಕಾರವಾಗಿ ಉಚ್ಚಾರಣೆಯಲ್ಲಿದೆ.

ಬ.ಕ.	ಆ.ಕ.
ಅಪ್ಪ	ಯಪ್ಪ
ಅಕ್ಕ	ಯಕ್ಕ
ಅವ್ವ	ಯವ್ವ
ಅಮ್ಮ	ಯಮ್ಮ
ಅಣ್ಣ	ಯಣ್ಣ

ಈ ಧ್ವನಿ ನಿಯಮವು ಅನಕ್ಷರಸ್ಥ ಕೆಳಸಮುದಾಯದಲ್ಲಿ ಉಚ್ಚಾರಣೆಯಲ್ಲಿ ಕಂಡುಬರುತ್ತದೆ. ಇದು ಆದೋನಿ ಕನ್ನಡದ ಉಚ್ಚಾರಣೆಯ ವೈಶಿಷ್ಟ್ಯತೆಯನ್ನು ನಿರ್ಧರಿಸುವ ಅಂಶವಾಗಿದೆ.

* ಪದಮಧ್ಯ ವಿಸೃತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಲೋಪ.

ಬ.ಕ.	ಆ.ಕ.
ಅವರು	ಅವ್ರು
ಗರತಿಯರು	ಗರ್ತ್ಯೇರು
ನಿನಗೆ	ನಿಂಗೆ
ನೆನಪು	ನೆಪ್ಪು
ತನಕ	ತಂಕ

ಮಧ್ಯ ಸ್ವರ 'ಅ' ಕಾರವು ಅವಿದ್ಯಾವಂತರ ಆಡುನುಡಿಯಲ್ಲಿ ಲೋಪವಾಗಿದೆ. ವಿದ್ಯಾವಂತರಲ್ಲಿ ಲೋಪವಾಗುವುದಿಲ್ಲ. ಹಿರಿಯ ತಲೆಮಾರಿನಲ್ಲಿ ಯತೇಚ್ಛವಾಗಿ ಬಳಕೆಯಲ್ಲಿವೆ. ಇತ್ತೀಚಿನ ತಲೆಮಾರಿನಲ್ಲಿ 'ಅ' ಕಾರವು ಲೋಪವಾಗುವುದು ಕಡಿಮೆಯಾಗುತ್ತಿದೆ.

ಆದೋನಿ ಕನ್ನಡದ ಉಚ್ಚಾರಣೆಯಲ್ಲಿ ವಿಸ್ರತೌಷ್ಠ ಪೂರ್ವ ಸಂವೃತ್ತ ಹ್ರಸ್ವಸ್ವರ 'ಇ' ಸ್ವರಾಂತ ಕ್ರಿಯಾ ಪ್ರಕೃತಿಗೆ ಗೌರವಾರ್ಥ 'ರಿ' ಸೇರಿದಾಗ 'ಇ' ಲೋಪವಾಗುತ್ತದೆ.

ಬ.ಕ.	ಆ.ಕ.
ನಡಿ+ರಿ = ನಡಿರಿ	ನಡಿ+ರಿ = ನಡ್ರಿ
ಬಡಿ+ರಿ = ಬಡಿರಿ	ಬಡಿ+ರಿ = ಬಡ್ರಿ
ತಡಿ+ರಿ = ತಡಿರಿ	ತಡಿ+ರಿ = ತಡ್ರಿ
ಕೊಡಿ+ರಿ = ಕೊಡಿರಿ	ಕೊಡಿ+ರಿ = ಕೊಡ್ರಿ

ಮೇಲಿನ ಧ್ವನಿನಿಯಮವು ಬ್ರಾಹ್ಮಣರನ್ನು ಹೊರತುಪಡಿಸಿ ಎಲ್ಲಾ ಸಮುದಾಯಗಳಲ್ಲಿ ಬಳಕೆಯಲ್ಲಿದೆ.

*** ಪದಮಧ್ಯ ವಿಸ್ತೃತೌಷ್ಠ ಪೂರ್ವ ಸಂವೃತ್ತ ಹ್ರಸ್ವ ಪದ ಮಧ್ಯ 'ಇ' ಸ್ವರ ಲೋಪ.**

ಬ.ಕ.	ಆ.ಕ.
ಕಂಡಿತು	ಕಾಣ್ತು
ಹೋಗಿದ್ದಾನೆ	ವೊಗ್ಯಾನ
ಹೇಳಿದ್ದಾರೆ	ಏಳ್ಯಾರ
ಕತ್ತಲಾಯಿತು	ಕತ್ತಲಾತು
ಸಾಕಾಯಿತು	ಸಾಕಾತು
ಹಾಕಿದ್ದಾರೆ	ಆಕ್ಯಾರ
ಸಾವಿರ	ಸಾವ್ರ
ಆಯಿತು	ಆತು
ತಿಂದಿತು	ತಿಂತು
ಅಂದಿತು	ಅಂತು

ಮೇಲಿನ ಉದಾಹರಣೆಗಳಿಂದ ಕ್ರಿಯಾಪದಗಳ ಪದಮಧ್ಯ ಪರಿಸರದ 'ಇ' ಕಾರ ಲೋಪವಾಗಿರುವುದು ಗುರುತಿಸಬಹುದಾಗಿದೆ. ಜೊತೆಗೆ ಅಕ್ಷರಗಳೂ ಸಹ ಲೋಪವಾಗಿವೆ. ಉದಾ. ಕಂಡಿತು ಎನ್ನುವ ಪದದಲ್ಲಿ 'ಡ' ಕಾರ ಲೋಪ. ಹೋಗಿದ್ದಾನೆ ಎನ್ನುವ ಪದದಲ್ಲಿ 'ದ' ಕಾರ ಲೋಪ. ಹೇಳಿದ್ದಾರೆ ಎನ್ನುವ ಪದದಲ್ಲಿ 'ದ' ಕಾರ ಲೋಪ. ಕತ್ತಲಾಯಿತು ಎನ್ನುವ ಪದದಲ್ಲಿ 'ಯ' ಕಾರ ಲೋಪ. ಸಾಕಾಯಿತು ಎನ್ನುವ ಪದದಲ್ಲಿ 'ಯ' ಕಾರ ಲೋಪ. ಹಾಕಿದ್ದಾರೆ ಎನ್ನುವ ಪದದಲ್ಲಿ 'ಹ' ಮತ್ತು 'ದ' ಕಾರಗಳು ಲೋಪ. ತಿಂದಿತು

ಎನ್ನುವ ಪದದಲ್ಲಿ 'ದ' ಕಾರ ಲೋಪ ಮತ್ತು ಅಂದಿತು ಎನ್ನುವ ಪದದಲ್ಲಿ 'ದ' ಕಾರ ಲೋಪವಾಗಿರುವುದನ್ನು ಆದೋನಿ ಕನ್ನಡದ ಉಚ್ಚಾರಣೆಯಲ್ಲಿ ಕಾಣಬಹುದು.

* ಪದಾಂತ್ಯದ ವೃತ್ತೌಷ್ಠ ಸಂವೃತ್ತ ಪಶ್ಚ ಹ್ರಸ್ವ 'ಉ'ಕಾರವು ವಿಸ್ತೃತೌಷ್ಠ ಮಧ್ಯ ಹ್ರಸ್ವ 'ಅ' ಕಾರವಾಗಿದೆ.

ಬ.ಕ.	ಆ.ಕ.
ಬುಕ್ಕು	ಬುಕ್ಕ
ಕೆಚ್ಚಲು	ಕೆಚ್ಚ್ಲ
ಬಾಗಿಲು	ಬಾಗ್ಲ

* ಪದಾಂತ್ಯ ಪರಿಸರದ ವಿಸ್ತೃತೌಷ್ಠ ಪೂರ್ವ ಅರ್ಧ ಸಂವೃತ್ತ ಹ್ರಸ್ವಸ್ವರ 'ಎ' 'ಕಾರವು ಆದೋನಿ ಕನ್ನಡದಲ್ಲಿ ವಿಸ್ತೃತೌಷ್ಠ ಪೂರ್ವ ಸಂವೃತ್ತ ಹ್ರಸ್ವಸ್ವರ 'ಇ' ಕಾರವಾಗಿ ಉಚ್ಚಾರಣೆಯಲ್ಲಿದೆ.

ಬ.ಕ.	ಆ.ಕ.
ಬರೆ	ಬರಿ
ಕರೆ	ಕರಿ
ನಡೆ	ನಡಿ
ಹೊಡೆ	ವಡಿ

ಮೇಲಿನ ನಿರ್ದೇಶನದಲ್ಲಿ ಬರಹದ ಕನ್ನಡದ ಬರೆ, ಕರೆ, ನಡೆ, ಎನ್ನುವ ಕ್ರಿಯಾಪದಗಳು ಬರಿ, ಕರಿ, ನಡಿಯಾಗಿ ಉಚ್ಚಾರಣೆಯಲ್ಲಿವೆ. ಕ್ರಿಯಾಪದಗಳಲ್ಲಿ ಪದಂತ್ಯದ 'ಎ' ಕಾರವು 'ಇ' ಕಾರವಾಗಿದೆ. ನಾಮಪದಗಳು 'ಎ' ಕಾರಂತವಾಗಿದ್ದು 'ಇ' ಕಾರಂತವಾಗಿ ಬಳಕೆಯಲ್ಲಿಲ್ಲ.

* ಆದೋನಿ ಕನ್ನಡದ ನಾಮಪದಗಳು ಪದಾಂತ್ಯ ಪರಿಸರದಲ್ಲಿ ವಿಸ್ತೃತೌಷ್ಠ ಪೂರ್ವ ಅರ್ಧ ಸಂವೃತ್ತ ಹ್ರಸ್ವಸ್ವರ 'ಎ' ಕಾರಂತವಾಗಿವೆ.

ಉದಾ : ಆನೆ, ಒಂಟೆ, ಕುದುರೆ, ಎಮ್ಮೆ, ಅವರೆ, ತೊಗರೆ, ತೆನೆ,

ಮಳೆ, ಬೆಳೆ, ತೆರೆ, ಮುಸುರು, ಕಳೆ, ಇರುವೆ, ಮದುವೆ, ಮನೆ,

ದ್ರಾಸೆ, ಮಡಿಕೆ, ಮ್ಯಾಕೆ, ಕಾಡಿಗೆ, ಬಾಡಿಗೆ, ಕುಂಟೆ, ಬದನೆ ಇತ್ಯಾದಿ.

ಈ ಪದಗಳನ್ನು ಗಮನಿಸಿದಾಗ ಚಾರಿತ್ರಿಕ ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ಆದೋನಿ ಬಳ್ಳಾರಿ ಜಿಲ್ಲೆಗೆ ಸೇರಿತ್ತು. ಬಳ್ಳಾರಿ ಜಿಲ್ಲೆ ಒಂದು ಐತಿಹಾಸಿಕ ಪರಂಪರೆಯುಳ್ಳ ಜಿಲ್ಲೆಯಾಗಿದ್ದು, ಇದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು ಎಂಬುದು ಚರಿತ್ರಾರ್ಹವಾದ ವಿಚಾರ. ಕೃಷ್ಣದೇವರಾಯನು ಈ ವಿಜಯನಗರ ಸಾಮ್ರಾಜ್ಯದ ಚಕ್ರಾಧಿಪತ್ಯವನ್ನು ಪಡೆದು ಶ್ರೀರಂಗಪಟ್ಟಣದ ರಾಜಕುಮಾರಿಯನ್ನು ವಿವಾಹವಾಗಿದ್ದನು. ನಂತರದಲ್ಲಿ ಈ ಸಂಬಂಧ ವಿಜಯನಗರ ಮತ್ತು ಶ್ರೀರಂಗಪಟ್ಟಣದ ನಡುವೆ ಬೆಳೆಯತೊಡಗಿತು.

ಶ್ರೀರಂಗಪಟ್ಟಣದಿಂದ ವಿಜಯನಗರಕ್ಕೆ ವಿಜಯನಗರದಿಂದ ಶ್ರೀರಂಗಪಟ್ಟಣಕ್ಕೆ ವ್ಯವಹಾರ ಪ್ರಾರಂಭವಾಯಿತು. ಅಂದಿನಿಂದ ಮೈಸೂರು ಪ್ರಾಂತ್ಯದ ಉಪಭಾಷೆ ಲಕ್ಷಣಗಳು ವಿಜಯನಗರ ಸಾಮ್ರಾಜ್ಯದ ಭಾಷೆಯ ಮೇಲೆ ಪ್ರಭಾವ ಬೀರಿರಬಹುದು ಎಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ.

ಈ ಊಹಾಪೋಹಗಳು ಇಷ್ಟಕ್ಕೆ ನಿಲ್ಲದೆ, 'ಆನೆ ಬಂತಾನೆ, ಯಾವೂರಾನೆ, ಮೈಸೂರಾನೆ' ಎಂಬ ಮಕ್ಕಳ ಹಾಡಿನ ಮೂಲಕ ಮತ್ತಷ್ಟು ಮಾಹಿತಿ ಲಭ್ಯವಿದೆ. ಈ ಹಾಡಿನಲ್ಲಿ ಬಳಕೆಯಾಗಿರುವ 'ಮೈಸೂರಾನೆ' ಪದದಿಂದ ಮೈಸೂರು ಕನ್ನಡ ಪ್ರಭಾವ ಈ ಪ್ರಾಂತ್ಯದ ಕನ್ನಡದ ಮೇಲೆ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಅತ್ಯಂತ ಪ್ರಚಲಿತವಿರುವ ಈ ಹಾಡಿನಲ್ಲಿ 'ವಿಜಾಪೂರಾನೆ' ಎನ್ನದೆ ಮೈಸೂರಾನೆ ಎಂದು ವ್ಯಾಪಕವಾಗಿ ಉಚ್ಚಾರಣೆಯಲ್ಲಿದೆ. ಈ ಹಿನ್ನೆಲೆಯಿಂದ 'ಎ' ಕಾರಂತ ಪದಗಳು ಕಂಡುಬರುತ್ತವೆ ಎಂದು ವೀರಭದ್ರಶರ್ಮ ಅವರು ಅಭಿಪ್ರಾಯ ಪಡುತ್ತಾರೆ.

*** ಪದಾದಿಯ ವಿಸ್ತೃತೌಷ್ಠ ಪೂರ್ವ ಅರ್ಧ ಸಂವೃತ್ತ ಸ್ವರ 'ಎ' ಕಾರವು ಆದೋನಿ ಕನ್ನಡದಲ್ಲಿ ತಾಲವ್ಯ ವಿರಳ ಘರ್ಷ 'ಯ' ಕಾರವಾಗಿದೆ.**

ಬ.ಕ.	ಆ.ಕ.
ಎಲೆ	ಯಲೆ
ಏಲಕ್ಕಿ	ಯಾಲಕ್ಕಿ
ಎಲ್ಲ	ಯಲ್ಲ
ಏಕೆ	ಯಾಕೆ

ಬರಹದ ಕನ್ನಡದ 'ಎ' ಕಾರವು ಆದೋನಿ ಕನ್ನಡದಲ್ಲಿ 'ಯ' ಕಾರವಾಗಿ ಉಚ್ಚಾರಣೆಯಾಗುತ್ತಿದೆ. ಈ ಧ್ವನಿ ಪ್ರಕ್ರಿಯೆಯನ್ನು ಭಾಷಾ ವಿಜ್ಞಾನದಲ್ಲಿ 'ಧ್ವನಿಜಾರು' (Glide) ಎಂದು ಕರೆಯುತ್ತಾರೆ. ಇದು ತಪ್ಪು ಉಚ್ಚಾರಣೆಯಿಂದ ಆಗುವುದೇ ಹೊರತು ಬೇರಾವುದೇ ಕಾರಣವಿಲ್ಲ.

*** ಪದಾದಿಯ ವಿಸ್ಮತೌಷ್ಠ ಪೂರ್ವ ಅರ್ಧ ಸಂವೃತ್ತ ಸ್ವರ 'ಎ' ಕಾರವು 'ಅ್ಯ' ಕಾರವಾಗಿದೆ. 'ಅ್ಯ' ಕಾರವು ತಾಲವ್ಯ ವಿರಳ ಘರ್ಷ 'ಯ' ಕಾರದ ಉಪಧ್ವನಿಯಾಗಿ ಉಚ್ಚಾರಣೆಯಲ್ಲಿದೆ.**

ಬ.ಕ	ಆ.ಕ
ಬೇಸಿಗೆ	ಬ್ಯಾಸಿಗೆ
ಬೇಸರ	ಬ್ಯಾಸರ
ಬೇಟೆ	ಬ್ಯಾಟೆ
ಬೇರೆ	ಬ್ಯಾರೆ
ಬೇನೆ	ಬ್ಯಾನೆ
ಮೇಕೆ	ಮ್ಯಾಕೆ
ಮೇಲೆ	ಮ್ಯಾಲೆ
ಪೇಟೆ	ಪ್ಯಾಟೆ

ಮೇಲಿನ ನಿರ್ದೇಶನದಂತೆ ನಾಮಪದಗಳಲ್ಲಿ 'ಎ' ಧ್ವನಿ 'ಅ್ಯ' ಆಗಿ ಉಚ್ಚಾರಣೆಯಲ್ಲಿದೆ. ಈ ಧ್ವನಿ ಪ್ರಕ್ರಿಯೆ ಕ್ರಿಯಾಪದಗಳಲ್ಲಿ ಕಂಡುಬರುವುದಿಲ್ಲ. ಇದು ಆದೋನಿ ಕನ್ನಡದ ವೈಶಿಷ್ಟ್ಯ.

*** ಪದ ಮಧ್ಯ ವಿಸ್ಮತೌಷ್ಠ ಅರ್ಧ ಸಂವೃತ್ತ ಹ್ರಸ್ವಸ್ವರ 'ಎ' ಕಾರ ಲೋಪ.**

ಬ.ಕ.	ಆ.ಕ
ಕರೆದ	ಕರ್ದ
ಮೂಲೆಗೆ	ಮೂಲ್ಗೆ

*** ಪದಾದಿಯ ವೃತ್ತೌಷ್ಠ ಅರ್ಧ ಸಂವೃತ್ತ ಪಶ್ಚ ಹ್ರಸ್ವಸ್ವರ 'ಒ' ಕಾರವು ಆದೋನಿ ಕನ್ನಡದಲ್ಲಿ ವಿಸ್ಮತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರ ಮತ್ತು ದೀರ್ಘಸ್ವರ 'ಆ' ಕಾರಗಳಾಗಿವೆ.**

ಬ.ಕ	ಆ.ಕ
ಮೋಕ	ಮಾಕ
ಮೋಡ	ಮಾಡ
ಮೊನ್ನೆ	ಮನ್ನೆ
ಮೊಲ	ಮಲ

ಮೇಲಿನ ಪದಗಳನ್ನು ಗಮನಿಸಿದರೆ ಬರಹದ ಕನ್ನಡದ 'ಮೊಲ' ಆದೋನಿ ಕನ್ನಡದಲ್ಲಿ 'ಮಲ' ಎಂದು ಉಚ್ಚಾರಣೆಯಲ್ಲಿದೆ. ಆದೋನಿ ವ್ಯವಹಾರಿಕ ಕನ್ನಡದ ಪ್ರಬೇಧಗಳಲ್ಲಿ 'ಮ' ಕಾರದ ಅನಂತರ ಬರುವ 'ಒಓ'ಗಳು ಅನುಕ್ರಮವಾಗಿ 'ಅಆ'ಗಳಾಗಿ ಉಚ್ಚಾರಣೆಯಲ್ಲಿವೆ. ಅರ್ಥ ದೃಷ್ಟಿಯಿಂದಲೂ ಭಿನ್ನವಾಗಿವೆ. ಮೊಲ ಮತ್ತು ಮಲ ಪದಗಳ ನಡುವೆ ಆಗಿರುವ ಧ್ವನಿ ವ್ಯತ್ಯಾಸದಿಂದ 'ಮೊಲ' ಪದವು ಪ್ರಾಣಿಯನ್ನು ಮಲ ಪದವು 'ಕಕ್ಕಸ್ಸು' ಎಂಬ ಅರ್ಥದಲ್ಲಿ ಒಂದು ಕಡೆ ಬಳಕೆಯಾಗಿದ್ದರೆ, ಮತ್ತೊಂದು ಕಡೆ ಸಂಬಂಧ ಸೂಚಕಗಳಲ್ಲಿ 'ಮಲತಾಯಿ' ಬೇರೊಂದು ಅರ್ಥ ನೀಡುತ್ತದೆ. 'ಮ' ಕಾರದ ಮುಂದೆ 'ಒ' ಕಾರ ಬಂದು 'ಅ' ಕಾರವಾಗಿ ಉಚ್ಚಾರಣೆಯಲ್ಲಿರುವುದು ಆದೋನಿ ವ್ಯವಹಾರಿಕ ಕನ್ನಡದ ಮತ್ತೊಂದು ವೈಶಿಷ್ಟ್ಯ.

* ಪದಾದಿಯ ವೃತ್ತೌಷ್ಠ್ಯ ಅರ್ಧ ಸಂವೃತ್ತ ಪಶ್ಚ ಹ್ರಸ್ವಸ್ವರ 'ಒ' ಕಾರವು ಆದೋನಿ ವ್ಯವಹಾರಿಕ ಕನ್ನಡದ ಉಚ್ಚಾರಣೆಯಲ್ಲಿ ದಂತೌಷ್ಠ್ಯ ವಿರಳ ಘರ್ಷ 'ವ' ಕಾರವಾಗಿದೆ.

ಬ.ಕ	ಆ.ಕ
ಒಲೆ	ವಲೆ
ಓಲೆ	ವಾಲೆ
ಒಳಗೆ	ವಳಗೆ
ಒಂದು	ವಂದು
ಓಡು	ವೋಡು
ಒಬ್ಬ	ವೊಬ್ಬ

ಬ್ರಾಹ್ಮಣೇತರರು ಮೇಲಿನ ಪದಗಳನ್ನು ಬಳಸುತ್ತಾರೆ. ಅಕ್ಷರಸ್ಥರಲ್ಲಿ ಈ ಪದಗಳ ಬಳಕೆ ಕಡಿಮೆ ಪ್ರಮಾಣದಲ್ಲಿದೆ.

* ಪದಾದಿಯ ವೃತ್ತೌಷ್ಠ್ಯ ಅರ್ಧ ಸಂವೃತ್ತ ಪಶ್ಚ ದೀರ್ಘಸ್ವರ 'ಓ' ಕಾರವು ಆದೋನಿ ವ್ಯವಹಾರಿಕ ಕನ್ನಡದಲ್ಲಿ ದಂತೌಷ್ಠ್ಯ ವಿರಳ ಘರ್ಷ 'ವ'ಕಾರವಾಗಿದೆ.

ಬ.ಕ.	ಆ.ಕ.
ಕೋರೆ	ಕ್ವಾರೆ
ಗೋಡೆ	ಗ್ವಾಡೆ
ತೋಳ	ತ್ವಾಳ
ಜೋಳ	ಜ್ವಾಳ
ಕೋಣ	ಕ್ವಾಣ
ರೋಷ	ರ್ವಾಸ
ತೋಟ	ತ್ವಾಟ
ಕೋಟೆ	ಕ್ವಾಟೆ[೧೦]
ದೋಸೆ	ದ್ವಾಸಿ/ದ್ವಾಸೆ[೧೧]

ಪದಾದಿಯ 'ಓ' ಕಾರವು 'ವ' ಕಾರವಾಗಿ ಮಾರ್ಪಟ್ಟಂತೆ 'ವ' ಕಾರವು ಯಾವುದೇ ಬದಲಾವಣೆ ಇಲ್ಲದೆ ಆದೋನಿ ಕನ್ನಡದಲ್ಲಿ 'ವ' ಕಾರವಾಗಿ ಬಳಕೆಯಲ್ಲಿದೆ.

* ಆದೋನಿ ಕನ್ನಡದಲ್ಲಿ ಒಂದು ಸ್ವರಕ್ಕೆ ಮತ್ತೊಂದು ಸ್ವರ ಆಗಮವಾಗಿ ಉಚ್ಚರಿಸುವುದು ಮತ್ತೊಂದು ವೈಶಿಷ್ಟ್ಯ.

ಬ.ಕ.	ಆ.ಕ.
ಬಿಡು	ಬುಡು
ಮುಖ	ಮಕ
ಕಬ್ಬಿಣ	ಕೆಬ್ಬಣ

ಮೊದಲನೇ ಉದಾಹರಣೆಯಲ್ಲಿ ಪದಾದಿಯಲ್ಲಿ ವಿಸ್ತೃತೌಷ್ಠ್ಯ ಪೂರ್ವ ಸಂವೃತ್ತ ಹ್ರಸ್ವಸ್ವರ 'ಇ' ಕಾರವು ವೃತ್ತೌಷ್ಠ್ಯ ಸಂವೃತ್ತ ಪಶ್ಚ ಹ್ರಸ್ವಸ್ವರ 'ಉ' ಕಾರವಾಗಿ ಮಾರ್ಪಟ್ಟಿದೆ. ಎರಡನೇ ಉದಾಹರಣೆಯಲ್ಲಿ

ಪದಾದಿಯ ವಿಸ್ಪತೌಷ್ಠ ಸಂವೃತ್ತ ಪಶ್ಚ ಹ್ರಸ್ವ ಸ್ವರ 'ಉ' ಕಾರವು ವಿಸ್ಪತೌಷ್ಠ ಮಧ್ಯಹ್ರಸ್ವ 'ಅ' ಕಾರವಾಗಿ ಮಾರ್ಪಟ್ಟಿದೆ. ಮೂರನೇ ಉದಾಹರಣೆಯಲ್ಲಿ ಪದಾದಿಯ ವಿಸ್ಪತೌಷ್ಠ ಹ್ರಸ್ವಸ್ವರ 'ಅ' ಕಾರವು ವಿಸ್ಪಷ್ಠ ಪೂರ್ವ ಅರ್ಧ ಸಂವೃತ್ತ ಹ್ರಸ್ವ 'ಎ' ಕಾರವಾಗಿದೆ.

* ಪದಾದಿಯ ತಾಲವ್ಯ ಸ್ಪರ್ಶ 'ಚ' ಕಾರವು ಲೋಪವಾಗಿ ವರ್ತ್ಸ್ಯ ಘರ್ಷ 'ಸ' ಕಾರ ಉಚ್ಚಾರಣೆಯಲ್ಲಿದೆ.

<u>ಬ.ಕ.</u>	<u>ಆ.ಕ.</u>
ಚೆಂಡು	ಸೆಂಡು
ಚಾಳಿ	ಸಾಳಿ
ಚೀಲ	ಸೀಲ
ಚಿಂತೆ	ಸಿಂತೆ
ಚಿಕ್ಕಪ್ಪ	ಸಿಗಪ್ಪ
ಚಿಕ್ಕಮ್ಮ	ಸಣ್ಣಪ್ಪ
ಚಾಪೆ	ಸ್ಯಾಪೆ
ಚಪ್ಪಲಿ	ಸೆಪ್ಪಲಿ
ಚಾಕು	ಸ್ಯಾಕು
ಚೆಕ್ಕು	ಸೆಕ್ಕು
ಚಕ್ಕೆ	ಸೆಕ್ಕೆ
ಚಳಿ	ಸೆಳಿ

ಕುರುಬ, ನಾಯಕ, ಹರಿಜನ, ಉಪ್ಪಾರರು, ಮುಸ್ಲಿಂ, ಲಿಂಗಾಯತ, ಅನಕ್ಷರಸ್ಥರಲ್ಲಿ ಮೇಲಿನ ಪದಗಳು ಬಳಕೆಯಲ್ಲಿವೆ. ಅಕ್ಷರಸ್ಥರು ಮಾತ್ರ 'ಚ' ಕಾರವನ್ನು ಬಳಸುತ್ತಾರಾದರೂ ಆಪ್ತ ವಲಯಗಳಲ್ಲಿ ಅಕ್ಷರಸ್ಥರೂ ಸಹ ಮೇಲಿನ ಪದಗಳನ್ನು ಉಚ್ಚರಿಸುತ್ತಾರೆ.

* ವರ್ತ್ಸ್ಯ ನಾಸಿಕ ವ್ಯಂಜನ 'ನ' ಕಾರಕ್ಕೆ ಬದಲು ವರ್ತ್ಸ್ಯ ಪಾರ್ಶ್ವಿಕ 'ಲ' ಕಾರವಾಗಿರುವ ಪದಗಳು.

ಬ.ಕ.	ಆ.ಕ.
ನೋಟು	ಲೋಟು
ಜನ್ಮ	ಜಲ್ಮ

ಕೂಲಿ ಕಾರ್ಮಿಕರಲ್ಲಿ ಮೇಲಿನ ಪದಗಳು ಬಳಕೆಯಲ್ಲಿವೆ.

* ಮೂರಕ್ಷರ ಪದಗಳು ಆದೋನಿ ವ್ಯವಹಾರಿಕ ಕನ್ನಡದಲ್ಲಿ ವರ್ತ್ಸ್ಯತಾಡಿತ 'ರ' ಕಾರಕ್ಕೆ ಬದಲು ವರ್ತ್ಸ್ಯ ಪಾರ್ಶ್ವಿಕ 'ಲ' ಕಾರ ಬಂದು ವ್ಯಂಜನ ಗುಚ್ಛಗಳಾಗಿ ಉಚ್ಚಾರಣೆಯಲ್ಲಿದೆ.

ಬ.ಕ.	ಆ.ಕ.
ಕುರುಡ	ಕುಲ್ಡ
ಕರಡಿ	ಕಲ್ಡಿ
ಬುರುಡೆ	ಬಲ್ಡೆ
ಎರಡು	ಎಲ್ಡು
ಹೊರಡು	ವಲ್ಡು

ಬ್ರಾಹ್ಮಣೇತರರು ಮೇಲಿನ ಪದಗಳನ್ನು ಉಚ್ಚಾರಣೆ ಮಾಡುತ್ತಾರೆ. ಆಪ್ತ ವಲಯಗಳಲ್ಲಿ ಈ ಪದಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಅನಕ್ಷರಸ್ಥರು ವ್ಯವಹಾರಿಕ ವಲಯಗಳಲ್ಲೂ ಮೇಲಿನ ಪದಗಳನ್ನು ಬಳಕೆ ಮಾಡುತ್ತಾರೆ.

* ಆದೋನಿ ಕನ್ನಡದಲ್ಲಿ ದಂತೌಷ್ಠ್ಯ ವಿರಳ ಘರ್ಷ 'ವ' ಕಾರವು ವಿಸ್ತೃತೌಷ್ಠ ಪೂರ್ವ ಸಂವೃತ್ತ ಹ್ರಸ್ವ 'ಇ' ಕಾರವಾಗಿ ಉಚ್ಚಾರಣೆಯಲ್ಲಿದೆ.

ಬ.ಕ	ಆ.ಕ.
ವಿಚಾರ	ಇಚಾರ
ವಿಪರೀತ	ಇಪರೀತ
ವಿಮಾನ	ಇಮಾನ

ವಿರುಪಾಕ್ಷಿ	ಇರಪಾಕ್ಷಿ
ವಿಧಿ	ಇದಿ
ವಿಷ	ಇಸ

* ಪದಾದಿಯ ದಂತೌಷ್ಟ್ಯ ವಿರಳ ಘರ್ಷ 'ವ' ಕಾರ ಲೋಪ.

ಬ.ಕ.	ಆ.ಕ.
ಜ್ವರ	ಜರ
ವ್ಯವಹಾರ	ಯವಾರ
ವ್ಯಸನ	ಯಸನ
ಸ್ವಾಮಿ	ಸಾಮಿ

* ಪದಾದಿಯ ಷ.ಶ ಕಾರವು ಆದೋನಿ ವ್ಯವಹಾರಿಕ ಕನ್ನಡದಲ್ಲಿ 'ಸ' ಕಾರವಾಗಿ ಉಚ್ಚಾರಣೆಗೊಳ್ಳುತ್ತಿದೆ.

ಬ.ಕ.	ಆ.ಕ.
ಶಿವರಾತ್ರಿ	ಸಿವರಾತ್ರಿ
ಶೀತ	ಸೀತ
ಶುರು	ಸುರು
ಶಕ್ತಿ	ಸಕ್ತಿ
ಷರತ್ತು	ಸರತಿ
ವಿಷಯ	ಇಸಯ
ವಿಷ	ಇಸ
ಷಣ್ಮುಕ	ಸಣ್ಮುಕ

ಸಾಮಾನ್ಯವಾಗಿ ಕನ್ನಡ ಪ್ರಭೇದಗಳಲ್ಲಿ ಈ ಧ್ವನಿ ಪ್ರಕ್ರಿಯೆ ಸಹಜವಾದ ಲಕ್ಷಣವಾಗಿದೆ. ಅಂದರೆ ಸಾಮಾಜಿಕ ಉಪಭಾಷೆಗಳಲ್ಲಿ ಅವಿದ್ಯಾವಂತರ ಕನ್ನಡದಲ್ಲಿ ಶ,ಷ ಕಾರಗಳು 'ಸ'ಕಾರವಾಗಿ ಉಚ್ಚಾರಣೆಗೊಳ್ಳುತ್ತಿದೆ. ಇದಕ್ಕೆ ಕಾರಣ ಸೌಲಭ್ಯಕಾಂಕ್ಷೆ ಅಷ್ಟೆ.

* ಪದಾದಿಯ ಮೂರ್ಧನ್ಯ ಘರ್ಷ 'ಷ' ಕಾರ ಲೋಪ.

<u>ಬ.ಕ.</u>	<u>ಆ.ಕ.</u>
ಎಷ್ಟು	ಏಟು
ಇಷ್ಟು	ಈಟು
ಅಷ್ಟು	ಆಟು

* ಪದಾದಿಯ ಕೃಕೋತ್ತರ 'ಹ' ಕಾರವು ಆದೋನಿ ವ್ಯವಹಾರಿಕ ಕನ್ನಡದಲ್ಲಿ ವಿಸ್ತೃತೌಷ್ಠ ಮಧ್ಯ ಹ್ರಸ್ವಸ್ವರ 'ಅ' ಕಾರವಾಗಿದೆ.

<u>ಬ.ಕ.</u>	<u>ಆ.ಕ.</u>
ಹಂಚು	ಅಂಚು
ಹಾಲು	ಆಲು
ಹಣ್ಣು	ಅಣ್ಣು
ಹಾವು	ಆವು
ಹಳ್ಳಿ	ಅಳ್ಳಿ

* ಪದಾದಿಯ ಕೃಕೊತ್ತರ 'ಹ' ಕಾರವು ಆದೋನಿ ವ್ಯವಹಾರಿಕ ಕನ್ನಡದಲ್ಲಿ ವೃತೌಷ್ಠ ಸಂವೃತ್ತ ಪಶ್ಚ ಹ್ರಸ್ವ ಹಾಗೂ ದೀರ್ಘ 'ಉ' 'ಊ' ಕಾರಗಳಾಗಿವೆ.

<u>ಬ.ಕ.</u>	<u>ಆ.ಕ.</u>
ಹುಟ್ಟಿಬಂದ	ಉಟ್ಟಿಬಂದ
ಹೂವ	ಊವ
ಹುಲಿ	ಉಲಿ

ಮೇಲಿನ ನಿರ್ದೇಶನದಲ್ಲಿ ನೀಡಿರುವ ಉದಾಹರಣೆಗಳಲ್ಲಿ 'ಹ' ಕಾರವು ಕೆಳವರ್ಗದ ಸಾಮಾಜಿಕ ಪ್ರಭೇದಗಳಲ್ಲಿ (Sociodialect) ಲೋಪವಾಗಿದೆ. ಇದು ಆದೋನಿ ಕನ್ನಡದ ಮತ್ತೊಂದು ಉಚ್ಚಾರಣೆಯ ವೈಶಿಷ್ಟ್ಯ.

* ಪದಾದಿಯ ಕೃಕೋತ್ತರ ಘರ್ಷ 'ಹ' ಕಾರವು ಆದೋನಿ ವ್ಯವಹಾರಿಕ ಕನ್ನಡದಲ್ಲಿ ದಂತೌಷ್ಠ್ಯ ವಿರಳ ಘರ್ಷ 'ವ' ಕಾರವಾಗಿದೆ.

ಬ.ಕ.	ಆ.ಕ.
ಹೊಗಳು	ವಗಳು
ಹೊಗೆ	ವಗೆ
ಹೋದ	ವೋದ
ಹೊಲ	ವಲ

* ಪದಮಧ್ಯ ಕೃಕೋತ್ತರ 'ಹ' ಕಾರ ಲೋಪ.

ಬ.ಕ.	ಆ.ಕ.
ಬಹಳ	ಬಾಳ
ವ್ಯವಹಾರ	ಯವಾರ

* ಆದೋನಿ ಕನ್ನಡದಲ್ಲಿ ಪದಾದಿಯ ಮಹಾಪ್ರಾಣ ವ್ಯಂಜನಗಳು ಲೋಪವಾಗಿವೆ.

ಬ.ಕ.	ಆ.ಕ.
ಖರ್ಚು	ಕರ್ಚು
ಛತ್ರಿ	ಚತ್ರಿ
ಭಾಷೆ	ಬಾಸೆ

ಮಹಾಪ್ರಾಣಗಳು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ ಅಕ್ಷರಸ್ಥರಲ್ಲಿ ಉಳಿದುಕೊಂಡಿವೆ.

* ಆದೋನಿ ವ್ಯವಹಾರಿಕ ಕನ್ನಡದಲ್ಲಿ ಮಧ್ಯಸ್ವರ ಬಿದ್ದು ಹೋಗಿ ವ್ಯಂಜನ ದ್ವಿತ್ವಗಳು ಇಲ್ಲವೆ ಸಮಾರೂಪಗಳು ಉಚ್ಚಾರಣೆಯಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿವೆ.

ಬ.ಕ.	ಆ.ಕ.
ಮರಳು	ಮಳ್ಳು
ಕರಳು	ಕಳ್ಳು
ಕೊರಳು	ಕೊಳ್ಳು

ಮಡಿಲು	ಮಡ್ಲು
ಕಡಲೆ	ಕಡ್ಲೆ
ಕೊಡಲಿ	ಕೊಡ್ಲಿ
ಬಾಗಿಲು	ಬಾಗ್ಲು

* ಪದ ಮಧ್ಯಕ್ಷರ ಕೃಕೋತ್ತರ ಘರ್ಷ 'ಹ' ಕಾರ ಲೋಪವಾಗಿದೆ.

ಬ.ಕ	ಆ.ಕ.
ಮಹಾಕಾಳಿ	ಮಾಂಕಾಳಿ
ಮಹಡಿ	ಮಾಡಿ
ಮಹದೇವ	ಮಾದೇವ
ಮಹರಾಜ	ಮಾರಾಜ

ಇಲ್ಲಿ ಬಳಕೆಯಾಗಿರುವ ಧ್ವನಿಗಳು ಬ.ಕ. ಕನ್ನಡಕ್ಕಿಂತ ಆ.ಕ. ದಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿವೆ. ಪದ ಮಧ್ಯ ಪರಿಸರದ 'ಹ' ಕಾರ ಮೇಲಿನ ನಿದರ್ಶನ್ನದಲ್ಲಿ ಲೋಪವಾಗಿರುವುದು ಕಂಡುಬಂದಿದೆ.

ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿರುವ ಧ್ವನಿಗಳು ಶಿಷ್ಟ ಕನ್ನಡಕ್ಕಿಂತ ಭಿನ್ನವಾಗಿರುವ ಮತ್ತು ಪ್ರಮಾಣ ತೆಲುಗಿಗೆ ಯಾವ ರೀತಿ ಸಾಮ್ಯವಾಗಿದೆ ಎನ್ನುವುದನ್ನು ಕೆಳಗಿನ ಉಲ್ಲೇಖಗಳಿಂದ ತಿಳಿಯಬಹುದು.

ಪದಾದಿಯ ಬದಲಾವಣೆ ಪ್ರಕ್ರಿಯೆ :

ಆ.ಕ.	ಬ.ಕ.	ಆ.ತೆ.	ಬ.ತೆ
ಆತ	ಆತನು	ಆತಿನಿ	ಅತನು
ರೊವಟು	ಸ್ವಲ್ಪ	ರೊವಂತ	ಕೊಂತ
ರಾತ್ರಿ	ರಾತ್ರಿ	ರಾತ್ರಿ	ರೇತ್ರಿ
ಈತ	ಈತನು	ಈತನಿ	ಇತನು
ಉಸುಗು	ಮರಳು	ಉಸುಕು/ಉಸುಗು	'ಇಸುಕು'
ಉಚ್ಚು	ಬಿಚ್ಚು	ಉಪ್ಪು/ಉಚ್ಚು	ವಿಪ್ಪು/ಇಪ್ಪು

ಮಡತೆ	ಮಡತೆ	ಮಡತ	ಮಡತ
ನಾನು	ನಾನು	ನಾನು	ನೇನು
ನಾವು	ನಾವು	ಮಾಮು	ಮೇಮು
ಮನ್ನೆ	ಮೊನ್ನೆ	ಮನ್ನ	ಮೊನ್ನ

ಆದೋನಿ ಕನ್ನಡ ಮತ್ತು ಆದೋನಿ ತೆಲುಗಿನಲ್ಲಿ ಪದಾದಿಯಲ್ಲಿ ದೀರ್ಘಸ್ವರ 'ಆ' ಕಾರ ಬಳಕೆಯಲ್ಲಿದೆ. ಆದರೆ ಬರಹದ ಕನ್ನಡ ಮತ್ತು ತೆಲುಗಿನಲ್ಲಿ ಪದಾದಿಯಲ್ಲಿ ಹ್ರಸ್ವಸ್ವರ 'ಅ' ಬಳಕೆಯಲ್ಲಿದೆ. ಉದಾ. ಅವನು ಮತ್ತು ಅತನು ಎನ್ನುವ ಪದಗಳು ಆತ ಮತ್ತು ಆತಿನಿ ಎಂದು ವಿಶಿಷ್ಟವಾಗಿ ಬಳಕೆಯಲ್ಲಿವೆ. ಇದೇ ರೀತಿ ಇವರು, ಇತನು ಎನ್ನುವ ಪದಗಳು ಈತ, ಈತನಿ ಎಂದು ಉಚ್ಚಾರಣೆಯಲ್ಲಿವೆ. ರಾತ್ರಿ ಎನ್ನುವ ಪದವು ಆದೋನಿ ಕನ್ನಡದಲ್ಲಿ ಯಾವುದೇ ಬದಲಾವಣೆಗೊಂಡಿಲ್ಲವಾದರೂ ಆದೋನಿ ತೆಲುಗಿನಲ್ಲಿ ಕನ್ನಡದ ಪ್ರಭಾವವನ್ನು ಗಮನಿಸಬಹುದು. ಬ.ತೆ.ನಲ್ಲಿ ರೇತ್ರಿ ಎನ್ನುವ ಪದ ಆ.ತೆ ನಲ್ಲಿ ರಾತ್ರಿ ಎಂದು ಬಳಕೆಯಲ್ಲಿದ್ದು ಪದಾದಿಯಲ್ಲಿ ಆದೋನಿ ಕನ್ನಡದ ಪ್ರಭಾವ ಈ ಪದದ ಮೇಲಾಗಿದೆ. ಇದೇ ರೀತಿ ತೆಲುಗಿನ ನೇನು ಎನ್ನುವ ಪದವು ಆದೋನಿ ತೆಲುಗಿನಲ್ಲಿ ನಾನು ಎಂದು ಬಳಕೆಗೊಂಡು ಕನ್ನಡ ಪ್ರಭಾವವನ್ನು ತೋರಿಸುತ್ತದೆ.

ಆ.ಕ.ದಲ್ಲಿ ರೊವಟು ಎನ್ನುವ ಪದವು ಆದೋನಿ ತೆಲುಗಿನಲ್ಲಿ ರೊವಂತ ಎಂದು ಬಳಕೆಯಲ್ಲಿದೆ. ಬ.ತೆ.ನಲ್ಲಿ 'ಕೊಂತ' ಎಂದು ಬಳಕೆಯಲ್ಲಿದೆ. ಪದಾದಿಯ ತೆಲುಗಿನ 'ಒ' ಕಾರವು ಆ.ಕ.ದ ಮೇಲೆ ಪ್ರಭಾವ ಬೀರಿ 'ರೊವಟು' ಎಂದು ಬಳಕೆಯಲ್ಲಿದೆ. ಆ.ಕ. ಮತ್ತು ಆ.ತೆ.ನಲ್ಲಿ ಮನ್ನೆ, ಮನ್ನ ಎಂದು ಬಳಕೆಯಲ್ಲಿದೆ. ಆದರೆ ಬ.ಕ. ಮತ್ತು ಬ.ತೆ. ಮೊನ್ನೆ, ಮೊನ್ನ ಎಂದು ಬಳಕೆಯಲ್ಲಿದೆ. ಆ.ಕ. ಮತ್ತು ಆ.ತೆ. ಪದಾದಿಯ 'ಒ' ಕಾರ 'ಅ' ಕಾರವಾಗಿ ಬಳಕೆಯಲ್ಲಿದೆ.

ಪದ ಮಧ್ಯದಲ್ಲಾಗುವ ಬದಲಾವಣೆಗಳು :

ಆ.ಕ.	ಬ.ಕ	ಆ.ತೆ.	ಬ.ತೆ
ಆಟೊಂದು / ಆಸೊಂದು	ಅಷ್ಟೊಂದು	ಅಂತೊಟ್ಟು	ಅಂತ
ಈಟೊಂದು / ಈಸೊಂದು	ಇಷ್ಟೊಂದು	ಇಂತೊಟ್ಟು	ಇಂತ
ಏಟೊಂದು / ಏಸೊಂದು	ಎಷ್ಟೊಂದು	ಎಂತೊಟ್ಟು	ಎಂತ

ಬ.ಕ.ದ ಅಷ್ಟೊಂದು, ಇಷ್ಟೊಂದು ಮತ್ತು ಎಷ್ಟೊಂದು ಎನ್ನುವ ಪದಗಳು ಆದೋನಿ ಕನ್ನಡದಲ್ಲಿ ಆಟೊಂದು, ಈಟೊಂದು, ಮತ್ತು ಏಟೊಂದು ಎಂದು ಬಳಕೆಗೊಳ್ಳುತ್ತಿದೆ. ಇಲ್ಲಿ ಪದಾದಿಯ ಪರಿಸರದ ದೀರ್ಘಸ್ವರ 'ಆ' ಕಾರ ಬಳಕೆಯಲ್ಲಿದೆ ಹಾಗೂ ಪದ ಮಧ್ಯ 'ಷ' ಕಾರ ಲೋಪಗೊಂಡಿದೆ. ಇದೇ ಪದ ಕೆಲವೊಂದು ಸಂದರ್ಭದಲ್ಲಿ ಆಸೊಂದು, ಈಸೊಂದು ಮತ್ತು ಏಸೊಂದು ಎಂದು ಬಳಕೆಯಲ್ಲಿರುವುದಲ್ಲದೆ ಈ ಪದಗಳ ಪ್ರಭಾವದಿಂದ ಆ.ತೆ.ನಲ್ಲಿ ಪದಾಂತ್ಯದಲ್ಲಿ 'ಉ' ಕಾರದಿಂದ ಕೂಡಿದ ಪದಗಳು ಬಳಕೆಯಲ್ಲಿವೆ.

ಸಂಬೋಧನೆ ಸಂದರ್ಭದಲ್ಲಿ ಬಳಕೆಯಲ್ಲಿರುವ ಕೆಲವು ವಿಶಿಷ್ಟ ಪದಗಳು :

ಆ.ಕ.	ಬ.ಕ.	ಆ.ತೆ.	ಬ.ತೆ.
ಆಯಮ್ಮ/ಆಕೆ	ಅವಳು	ಆಯಮ್ಮ	ಆಮೆ
ಈಯಮ್ಮ/ಈಕೆ	ಇವಳು	ಈಯಮ್ಮ	ಈಮೆ
ಆಯಪ್ಪ/ಆತ	ಅವನು	ಆಯಪ್ಪ	ವಾಡು
ಈಯಪ್ಪ/ಈತ	ಇವನು	ಈಯಪ್ಪ	ವೀಡು

ಆಯಮ್ಮ ಮತ್ತು ಆಕೆ ಎನ್ನುವ ಪದಗಳು 'ಅವಳು' ಎನ್ನುವ ಪದಕ್ಕೆ ಪರ್ಯಾಯವಾಗಿ ಬಳಕೆ ಮಾಡಿದರೂ 'ಆಯಮ್ಮ, ಈಯಮ್ಮ' ಎನ್ನುವ ಪದ ಉಚ್ಚಾರಣೆ ಮಾಡುವಾಗ ಇರುವಂತ ಗೌರವ ಭಾವನೆಯು 'ಆಕೆ, ಈಕೆ' ಎನ್ನುವ ಪದವನ್ನು ಉಚ್ಚಾರಣೆ ಮಾಡುವಾಗ ಇರುವುದಿಲ್ಲ. ಆಯಮ್ಮ ಈಯಮ್ಮ ಎನ್ನುವ ಪದಗಳು ಪುರುಷರ ಮತ್ತು ಸ್ತ್ರೀಯರು ಬಳಕೆಯಲ್ಲಿ ಕಂಡುಬರುತ್ತವೆ. ಆಯಪ್ಪ, ಈಯಪ್ಪ ಎನ್ನುವ ಪದಗಳು ಹೆಚ್ಚಾಗಿ ಸ್ತ್ರೀಯರಲ್ಲಿ ಬಳಕೆಯಲ್ಲಿವೆ. ಪುರುಷರಲ್ಲಿ ಈ ಪದಗಳ ಬಳಕೆ ತುಂಬಾ ವಿರಳ. ಆತ, ಈತ ಎನ್ನುವ ಪದಗಳು ಪುರುಷರಲ್ಲಿ ಬಳಕೆಯಲ್ಲಿವೆ.

ಆದೋನಿ ಕನ್ನಡ ಬರಹ ಕನ್ನಡಕ್ಕಿಂತ ಉಚ್ಚಾರಣೆಯಲ್ಲಿ ವೈಶಿಷ್ಟ್ಯವಾಗಿದೆ ಮತ್ತು ತನ್ನದೇ ಆದ ಭಾಷಿಕ ಸ್ವರೂಪವನ್ನು ಹೊಂದಿದೆ ಎನ್ನುವ ಅಂಶವು ಈ ಅಧ್ಯಾಯದಲ್ಲಿ ಚರ್ಚಿಸಿರುವ ಧ್ವನಿ ನಿಯಮಗಳಿಂದ ಸ್ಪಷ್ಟವಾಗಿದೆ. ಆದ್ದರಿಂದ ಆದೋನಿ ಕನ್ನಡ ಒಂದು ಪ್ರಭೇದವೆಂದು ಹೇಳಬಹುದಾಗಿದೆ.

ಅಡಿಟಿಪ್ಪಣಿ

೧. ಸಾಮಾನ್ಯ ಭಾಷಾವಿಜ್ಞಾನ, ಡಾ.ಕೆ. ಕೆಂಪೇಗೌಡ, ಭಾರತೀ ಪ್ರಕಾಶನ, ಮೈಸೂರು, ೧೯೯೩

೨. ಸಾಮಾನ್ಯ ಭಾಷಾವಿಜ್ಞಾನ, ಡಾ.ಕೆ. ಕೆಂಪೇಗೌಡ, ಭಾರತೀ ಪ್ರಕಾಶನ, ಮೈಸೂರು, ೧೯೯೩, ಪು.೨

೩. ಸಾಮಾನ್ಯ ಭಾಷಾವಿಜ್ಞಾನ, ಡಾ.ಕೆ. ಕೆಂಪೇಗೌಡ, ಭಾರತೀ ಪ್ರಕಾಶನ, ಮೈಸೂರು, ೧೯೯೩, ಪು.೨೨

೪. ಶೋಧನ, ಎಸ್.ಎಸ್.ಅಂಗಡಿ, ಪಾರ್ವತಮ್ಮ ಪ್ರಕಾಶನ, ಯರಝುರವಿ

೫. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಡಿ.ಎನ್. ಶಂಕರಭಟ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೫-೬೭

೬. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಡಿ.ಎನ್. ಶಂಕರಭಟ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೭

೭. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಡಿ.ಎನ್. ಶಂಕರಭಟ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭೪

೮. ಅದೇ ಪುಟ

೯. ಕನ್ನಡ ಉಪಭಾಷೆಗಳ ಅಧ್ಯಯನ, ಡಾ.ಕೆ. ಕೆಂಪೇಗೌಡ, ಭಾರತೀ ಪ್ರಕಾಶನ, ಮೈಸೂರು, ಪು.೩೮೩

೧೦. ಅದೇ ಪುಟ

೧೧. ಅದೇ ಪುಟ

□□

ಅಧ್ಯಾಯ ೪

ಆದೋನಿ ಕನ್ನಡದ ಪದರಚನೆ

ಅಧ್ಯಾಯ ೪

ಆದೋನಿ ಕನ್ನಡದ ಪದರಚನೆ

"ಸಂಸ್ಕೃತ ವ್ಯಾಕರಣದಲ್ಲಿ ಪದ ಮತ್ತು ಶಬ್ದ ಎರಡನ್ನು ಒಂದೇ ಅರ್ಥದಲ್ಲಿ ಬಳಸುವ ಕ್ರಮವಿದೆ. ಈ ಬಳಕೆಯನ್ನು ಅನುಸರಿಸಿ, ಕನ್ನಡ ವ್ಯಾಕರಣಗಳಲ್ಲೂ ಪದ ಮತ್ತು ಶಬ್ದ ಎರಡು ಒಂದೇ ಅರ್ಥದಲ್ಲಿ ಬಳಕೆಗೆ ಬಂದಿವೆ. ಆದರೂ ಬೇರೆ ಬೇರೆ ಪ್ರತ್ಯಯಗಳೊಂದಿಗೆ ಬಂದಿರುವ ಪದಗಳನ್ನು 'ಪದರೂಪ' ಗಳೆಂದು ಕರೆಯಲು ಸಾಧ್ಯವಿದೆಯಾದ ಕಾರಣ 'ಪದ' ಮತ್ತು 'ಶಬ್ದ' ಎಂಬ ಎರಡು ಬೇರೆ ಬೇರೆ ಪಾರಿಭಾಷಿಕ ಪದಗಳನ್ನು ಬಳಸುವ ಅವಶ್ಯಕತೆಯಿಲ್ಲ. ಹಾಗಾಗಿ ಈ ಅಧ್ಯಯನದಲ್ಲಿ ಎಲ್ಲಾ ಕಡೆಯಲ್ಲೂ ಪದ ಎಂಬುದನ್ನೇ ಬಳಸಲಾಗಿದೆ. ಮರ ಎಂಬುದೊಂದು ಪದ. ಅದಕ್ಕೆ ಮರಗಳು, ಮರಗಳನ್ನು, ಮರಕ್ಕೆ ಮೊದಲಾದ ಪದರೂಪಗಳಿವೆ."[೧] ಈ ಪದ ಮತ್ತು ಪದರೂಪಗಳು ಆದೋನಿ ಕನ್ನಡದಲ್ಲಿ ಯಾವ ರೀತಿ ಭಿನ್ನವಾಗಿವೆ ಎನ್ನುವುದು ಚರ್ಚಿಸುವುದೇ ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ.

ನಾಮಪದ ಗುಚ್ಛ :

"ಕನ್ನಡದಲ್ಲಿ ನಾಮಪದ ಗುಚ್ಛದ ರಚನೆ ಕ್ರಿಯಾಪದ ಗುಚ್ಛದ ರಚನೆಗಿಂತ ಸರಳವಾದುದು. ಅದರ ರಚನೆ ಹೀಗಿರುತ್ತದೆ. (ನಾಮಪದ ಸೂಚಕಾವ್ಯಯ)+(ವಿಶೇಷಣ)+(ನಾಮಪದ). ಹೀಗೆಂದರೆ ನಾಮಪದ ಗುಚ್ಛವು ಕೇವಲ ನಾಮಪದವೊಂದನ್ನೇ ಒಳಗೊಂಡಿರಬಹುದು ಅಥವಾ ಅದರ ಜೊತೆಗೆ ವಿಶೇಷಣ ಹಾಗೂ ನಾಮಸೂಚಕಾವ್ಯಯಗಳಲ್ಲಿ ಯಾವುದೇ ಒಂದನ್ನು ಅಥವಾ ಎರಡನ್ನು ಒಳಗೊಂಡಿರಬಹುದು."[೨]

	ಬರಹ ಕನ್ನಡ	ಆದೋನಿ ಕನ್ನಡ
ಉದಾ :	ಒಬ್ಬ ಹುಡುಗಾ	ವಬ್ಬೋನು ವುಡ್ಗ
	ಆ ಚಿಕ್ಕ ಗುಡಿಸಲು	ಆ ಸಣ್ಣ ಗುಡಿಸ್ಲು

ನಾಮಪ್ರಕೃತಿ

ಸರಳ ನಾಮಪ್ರಕೃತಿಗಳು : ಆದೋನಿ ಕನ್ನಡದಲ್ಲಿ ಪ್ರಕೃತಿಗಳನ್ನು ನಾಲ್ಕು ಒಳವರ್ಗಗಳಾಗಿ ವಿಂಗಡಿಸಬಹುದು.

ಅ. ನಿರ್ದೇಶಕ ಮೂಲರೂಪದಿಂದ ಸಿದ್ಧವಾದವುಗಳು.

ಆ. ಆತ್ಮಾರ್ಥಕ ಮೂಲರೂಪದಿಂದ ಸಿದ್ಧವಾದವುಗಳು.

ಇ. ಪ್ರಶ್ನಾರ್ಥಕ ಮೂಲರೂಪದಿಂದ ಸಿದ್ಧವಾದವುಗಳು.

ಈ. ಇತರ ಸರಳ ನಾಮಪ್ರಕೃತಿಗಳು.

ನಿರ್ದೇಶಕ ಪದಗಳು

"ಮಾತಿನ ಸನ್ನಿವೇಶದಲ್ಲಿ ಆಡುಗನ ಜಾಗ, ಸಮಯ, ಮೊದಲಾದವಕ್ಕೆ ಸಂಬಂಧಿಸಿದಂತೆ ವ್ಯಕ್ತಿ, ವಸ್ತು ಮೊದಲಾದವುಗಳ ಜಾಗ, ಸಮಯ, ಮೊದಲಾದವನ್ನು ಸೂಚಿಸುವುದರ ಮೂಲಕ ಅವನ್ನು ಗುರುತಿಸಿ ಹೇಳುವುದು ನಿರ್ದೇಶಕ ಸರ್ವನಾಮಗಳ ಕೆಲಸ."

ಸರ್ವನಾಮಗಳು ಪಟ್ಟಿಯಲ್ಲಿ ನಿರ್ದೇಶಕ ಪದಗಳು ಎರಡು ರೀತಿಯಲ್ಲಿ ಬಳಕೆಯಲ್ಲಿವೆ. ಅವನು, ಅವಳು, ಅದು ಮೊದಲಾದವುಗಳು ಒಂದು ರೀತಿಯಾದರೆ ಇವನು, ಇವಳು, ಇದು ಮೊದಲಾದವುಗಳು ಇನ್ನೊಂದು ಬಗೆಯವು. ಇವು ಮೇಲೆ ಸೂಚಿಸಿದಂತೆ 'ಆಡುಗನಿಂದ ದೂರ' ಮತ್ತು 'ಆಡುಗನ ಹತ್ತಿರ' ಎಂಬುದಾಗಿ ಎರಡು ರೀತಿಯ ಜಾಗಗಳನ್ನು ಸೂಚಿಸುವುದರ ಮೂಲಕ ವ್ಯಕ್ತಿ, ವಸ್ತು, ಮೊದಲಾದವನ್ನು ಗುರುತಿಸುತ್ತವೆ."[೩]

ಬ.ಕ.	ಆ.ಕ.
ಅವನು	ಅವ್ನ
ಅವಳು	ಅವ್ಳು
ಅವರು	ಅವ್ರು

ಆತ್ಮಾರ್ಥಕ ಪದಗಳು

"ತಾನು ಮತ್ತು ತಾವು ಎಂಬ ಪದಗಳನ್ನು ಕನ್ನಡ ವ್ಯಾಕರಣಗಳಲ್ಲಿ 'ಆತ್ಮಾರ್ಥಕ' ಸರ್ವನಾಮಗಳು ಎಂಬುದಾಗಿ ಕರೆಯುವುದು ರೂಢಿ. ಈ ಹೆಸರು ಒಂದು ಮಟ್ಟಿಗೆ ಸರಿ, ಆದರೆ ಇನ್ನೊಂದು ಮಟ್ಟಿಗೆ ಅಷ್ಟು ಸರಿಯಲ್ಲ. ಸಾಮಾನ್ಯವಾಗಿ ಈ ಪದಗಳು ವಾಕ್ಯವು ತಿಳಿಸುವ ಕೆಲಸವನ್ನು ನಡೆಸಿಕೊಡುವ ವ್ಯಕ್ತಿಯನ್ನು ಸೂಚಿಸುತ್ತವೆ ಎಂಬ ಅರ್ಥದಲ್ಲಿ ಇವಕ್ಕೆ ಆತ್ಮಾರ್ಥಕ ಪದಗಳೆಂಬ ಹೆಸರು ಹೊಂದಿಕೆಯಾಗುತ್ತದೆ. ಆದರೆ ವಾಕ್ಯವೊಂದರಲ್ಲಿ ಕೆಲಸವನ್ನು ನಡೆಸಿ ಕೊಡುವಂತಹ ವ್ಯಕ್ತಿಯೊಬ್ಬನ್ನನ್ನು ಹೆಸರಿಸಿಲ್ಲವಾದಲ್ಲಿ ಅಂತಹ ವಾಕ್ಯದಲ್ಲಿ ಈ ಪದಗಳು ಇತರ ವ್ಯಕ್ತಿಗಳನ್ನು ಸೂಚಿಸಬಲ್ಲವಾದ ಕಾರಣ ಎಲ್ಲಾ ಸಂದರ್ಭದಲ್ಲಿ ಇವು ಆತ್ಮಾರ್ಥಕಗಳಾಗಿ ಬರುವುದಿಲ್ಲ."[೪]

"ಇದಲ್ಲದೆ 'ಆತ್ಮಾರ್ಥಕ' ಎಂಬ ಪದಕ್ಕೆ ವ್ಯಾಕರಣದಲ್ಲಿ ಇನ್ನೊಂದು ಬಹಳ ಪ್ರಾಮುಖ್ಯವಾದ ಬಳಕೆಯಿದೆ. ವಾಕ್ಯದಲ್ಲಿ ಕ್ರಿಯಾಪದವು ನಿರ್ದೇಶಿಸುವ ಕೆಲಸ ಬೇರೆಯವರ ಹಿತಕ್ಕಾಗಿ ನಡೆಯುವ ಬದಲು ಅದನ್ನು ಮಾಡುವ ವ್ಯಕ್ತಿಯ ಹಿತಕ್ಕಾಗಿ ನಡೆಯುವ ಬದಲು ಅದನ್ನು ಮಾಡುವ ವ್ಯಕ್ತಿಯ ಹಿತಕ್ಕಾಗಿ ನಡೆಯುತ್ತಿದೆಯಾದರೂ ಅಂತಹ ವಾಕ್ಯವನ್ನು ಇಲ್ಲವೆ ಕ್ರಿಯಾಪದವನ್ನು ಆತ್ಮಾರ್ಥಕವೆಂದು ಕರೆಯುವ ಕ್ರಮವಿದೆ. ಕನ್ನಡದಲ್ಲಿ ಈ ಅರ್ಥವನ್ನು ನಿರ್ದೇಶಿಸುವುದಕ್ಕಾಗಿ ಕ್ರಿಯಾಪದದೊಂದಿಗೆ 'ಕೊಳ್ಳು' ಎಂಬ ಉಪ ಕ್ರಿಯಾಪದವನ್ನು ಬಳಸಬೇಕಾಗುತ್ತದೆ. 'ತಾನು' ಎಂಬ ಪ್ರತಿನಾಮಕ್ಕೆ ಈ ಅರ್ಥ ಇದೆಯೆಂದು ಅನಿಸುವುದಾದರೆ ಈ ಅನಿಸಿಕೆ ತಪ್ಪು ಎಂಬುದನ್ನು ಕೆಳಗಿನ ಪರಿಶೀಲನೆಯಿಂದ ಸ್ಪಷ್ಟಪಡಿಸುತ್ತದೆ."[೫]

"ಹಾಗಾಗಿ ಕನ್ನಡದ ವ್ಯಾಕರಣದ ಮಟ್ಟಿಗೆ 'ಕೊಳ್ಳು' ಎಂಬ ಉಪಕ್ರಿಯಾಪದವನ್ನೇ 'ಆತ್ಮಾರ್ಥಕ'ವೆಂದು ಪರಿಗಣಿಸಿ, ತಾನು ಮತ್ತು ತಾವು ಎಂಬುವುಗಳನ್ನು ಅವುಗಳ ಮುಖ್ಯ ಕೆಲಸದ ಆಧಾರದ ಮೇಲೆ 'ಪ್ರತಿನಾಮ'ಗಳೆಂದು ಹೆಸರಿಸುವುದೇ ಲೇಸೆಂದು ತೋರುತ್ತದೆ. ಸಾಮಾನ್ಯವಾಗಿ ವಾಕ್ಯದಲ್ಲೇನೇ ಬೇರೆಡೆಯಲ್ಲಿ ಬಂದಿರುವ ನಾಮಪದಕ್ಕೆ ಪ್ರತಿಯಾಗಿ ಬರುವುದೇ ಈ ಪದಗಳ ಮುಖ್ಯ ಕೆಲಸವಾದ ಕಾರಣ 'ಪ್ರತಿನಾಮ' ಎಂಬ ಹೆಸರು ಇವಕ್ಕೆ ಹೊಂದಿಕೆಯಾಗುತ್ತದೆ."[೬] (ಡಿ.ಎನ್. ಶಂಕರಭಟ್ಟ ೨೦೦೩:೬೮) ಆದರೆ ಆದೋನಿ ಕನ್ನಡದಲ್ಲಿ 'ತಾನು, ತಾವು' ಎನ್ನುವ ಪದಗಳು ಬಳಕೆಯಾಗದೆ 'ನಾನು, ನಾವು' ಎನ್ನುವ ಪದಗಳೇ ಆತ್ಮಾರ್ಥಕ ಸರ್ವನಾಮಗಳಾಗಿ ಬಳಕೆಯಾಗುತ್ತಿವೆ.

ಬ.ಕ.	ಆ.ಕ.
ತಾನು, ತಾವು	ನಾನು, ನಾವು

ಪ್ರಶ್ನಾರ್ಥಕ ಪದಗಳು

"ಯಾವನು, ಯಾವಳು, ಯಾವುದು, ಯಾರು, ಎಲ್ಲಿ ಮೊದಲಾದ ಪದಗಳು ಪ್ರಶ್ನಾರ್ಥಕ ವಾಕ್ಯಗಳಲ್ಲಿ ಬಳಕೆಯಾಗುವುದರ ಕಾರಣ ಅವನ್ನು ಪ್ರಶ್ನಾರ್ಥಕ ಪದಗಳು ಇಲ್ಲವೆ 'ಪ್ರಶ್ನಾರ್ಥಕ ಸರ್ವನಾಮಗಳು' ಎಂದು ಕರೆಯುವುದು ರೂಢಿ.

ಈ ಪದಗಳಲ್ಲಿ ಮೊದಲಿಗೆ ಕಾಣಿಸುವ 'ಎ' ಕಾರ ಇಲ್ಲವೇ 'ಏ' ಕಾರಕ್ಕೆ ಈ ರೀತಿ ಅನಿಶ್ಚಿತತೆಯನ್ನು ಸೂಚಿಸುವ ಕೆಲಸವಿದೆಯೆಂದು ಮತ್ತು ಅದರ ಅನಂತರ ಬರುವ ಅಂಗಕ್ಕೆ (ಲ್ಲಿ, ಷ್ಟು, ಂತಹ, ನು ಮೊದಲಾದವಕ್ಕೆ) ಅವುಗಳ ವ್ಯಾಪ್ತಿಯನ್ನು ಸೂಚಿಸುವ ಕೆಲಸವಿದೆಯೆಂದೂ ಹೇಳಬಹುದು. ಆದರೆ ಈ 'ಎ' ಕಾರ ಇಲ್ಲವೆ 'ಏ' ಕಾರ ಎಲ್ಲಾ ಪದಗಳಲ್ಲೂ ಹಾಗೆಯೇ ಉಳಿದಿಲ್ಲ. ಚಾರಿತ್ರಿಕ ಕಾರಣಗಳಿಂದಾಗಿ ಅದು ಬೇರೆ ಬೇರೆ ಪದಗಳಲ್ಲಿ ಬೇರೆ ಬೇರೆ ರೀತಿಯ ಬದಲಾವಣೆಗೊಳಗಾಗಿದೆ."[2]

ಎಲ್ಲಿ, ಎಷ್ಟು ಮತ್ತು ಎಂತಹ ಎಂಬ ಪದಗಳು ಆದೋನಿ ಕನ್ನಡದಲ್ಲಿ ಭಿನ್ನವಾಗಿ ಬಳಕೆಯಾಗಿವೆ. ಅದೇ ರೀತಿ ಯಾವನು, ಯಾವಳು ಎಂಬ ಪದಗಳು ಆದೋನಿ ಕನ್ನಡದಲ್ಲಿ ಭಿನ್ನವಾಗಿ ಬಳಕೆಯಾಗಿವೆ. ಅದೇ ರೀತಿ ಯಾವನು, ಯಾವಳು, ಮೊದಲಾದ ಪದಗಳು ಪದ ಮಧ್ಯ ಪರಿಸರದಲ್ಲಿ ವಿಶಿಷ್ಟವಾಗಿ ಬಳಕೆಯಾಗಿವೆ.

ಬ.ಕ.	ಆ.ಕ.
ಎಲ್ಲಿ	ಎಲ್ಲಿ
ಎಷ್ಟು	ಏಸು/ಏಟು
ಯಾವನು	ಯಾವೋನು
ಯಾವಳು	ಯಾವೋಳು

ಸಾದಿತ ನಾಮಪ್ರಕೃತಿಗಳು

ಆದೋನಿ ಕನ್ನಡದಲ್ಲಿ ನಾಮ, ಕ್ರಿಯಾ ಹಾಗೂ ವಿಶೇಷಣ ಪ್ರಕೃತಿಗಳಿಗೆ ಕೆಲವು ಪ್ರತ್ಯಯಗಳನ್ನಂಟಿಸಿ ಸಾಧಿತ ನಾಮಪ್ರಕೃತಿಗಳನ್ನು ಪಡೆಯಲಾಗುತ್ತದೆ. ಇಂತಹ ಶಬ್ದಸಾಧಕ ಪ್ರತ್ಯಯಗಳು ಕೆಳಗಿನಂತಿವೆ.

ಪ್ರತ್ಯಯ	ಪ್ರಕೃತಿವರ್ಗ	ಬ.ಕ.	ಆ.ಕ.
ಅ (ಪು.ವಾ)	ಕೆಲವು ಬದ್ಧರೂಪಗಳು	ಹುಡುಗ	ವುಡ್ಗ
		ಕುಂಟ	ಕುಂಟ
		ಕುರುಡ	ಕುಲ್ಡ

ಇ (ಸ್ತ್ರೀ.ವಾ.)		ಹುಡುಗಿ	ವುಡ್ಗಿ
		ಕುಂಟಿ	ಕುಂಟಿ
		ಕುರುಡಿ	ಕುಲ್ಡಿ
ಇಗ (ಪು.ವಾ)	ವೃತ್ತಿಸೂಚಕ	ಮಾದಿಗ	ಮಾದಿಗ
		ಕ್ಷೌರಿಕ	ಕೆತ್ರಗ/ಅಜಾಮ
		ಗಟ್ಟಿಗೆ	ಗಟ್ಟಿಗ
ತನ (ನಪುಂ.ವಾ)		ಕಳ್ಳತನ	ಕಳ್‌ತನ
		ಮನೆತನ	ಮನ್‌ತನ
		ತುಂಟತನ	ತುಂಟ್‌ತನ
		ಮೊಂಡುತನ	ಮೊಂಡ್‌ತನ
ಇತ್ತಿ (ಸ್ತ್ರೀ.ವಾ)		ಮದುವಣಗಿತ್ತಿ	ಮದ್ಲಗಿತ್ತಿ
		ಹಾದರಗಿತ್ತಿ	ಆದರ್‌ಗಿತ್ತಿ
		ತಾಟಗಿತ್ತಿ	ಕುಂಟ್ಲಗಿತ್ತಿ
ಎ (ಸ್ತ್ರೀ. ವಾ)		ಬುದ್ಧಿವಂತೆ	ಬುದ್ಧಿವಂತಿ
		ಜಾಣೆ	ಜಾಣಿ
		ಗುಣವಂತೆ	ಗುಣವಂತಿ
ಕು.		ಹರಕು	ಅರಕು/ಅರ್ಕು
		ಮುರುಕು	ಮುರ್ಕು
ಇಕೆ		ನಾಚಿಕೆ	ನಾಚ್ಕೆ
		ಬಾಳಿಕೆ	ಬಾಳ್ಕೆ

ನಾಮೀಕರಣ

ಆದೋನಿ ಕನ್ನಡದಲ್ಲಿ ಕೃದಂತ ವಿಶೇಷಣ, ಗುಣವಾಚಕ ಹಾಗೂ ಸ್ಥಾನಸೂಚಕ ಕ್ರಿಯಾ ವಿಶೇಷಣಗಳಿಗೆ ಪ್ರಥಮ ಪುರುಷ ಸರ್ವನಾಮ ರೂಪಗಳನ್ನು ಪ್ರತ್ಯಯವಾಗಿಸಿ ಅವನ್ನು ನಾಮಪದಗಳಂತೆ ಬಳಸಿಕೊಳ್ಳಲಾಗಿದೆ.

ಬ.ಕ.	ಆ.ಕ.
ದೊಡ್ಡವನು	ದೊಡ್ಡೋನು
ಚಿಕ್ಕವಳು	ಸಿಕ್ಕೋಳು
ಬಿಳಿಯದು	ಬಿಳೇದು
ಬಂದವರು	ಬಂದೋರು
ಹೋಗಿರುವವರು	ಹೋದೋರು
ಇರುವುದು	ಇರೋದು
ಮೇಲಿನವರು	ಮ್ಯಾಲಿನೋರು

ಆದೋನಿ ಕನ್ನಡದಲ್ಲಿ ಕೆಲವು ನಾಮಪ್ರಕೃತಿಗಳಿಗೂ ಸರ್ವನಾಮ ಪ್ರತ್ಯಯವನ್ನಂಟಿಸಲಾಗುತ್ತದೆ. ಬ.ಕ.ದಲ್ಲಿ ಸ್ಥಳವಾಚಕ ನಾಮಪ್ರಕೃತಿಗಳಿಗೆ ಮಾತ್ರ ಷಷ್ಠ್ಯಂತ ರೂಪಗಳಿಗೆ ಸರ್ವನಾಮ ಪ್ರತ್ಯಯಗಳನ್ನು ಅಂಟಿಸಲಾಗುತ್ತದೆ. ಆದರೆ ಆದೋನಿ ಕನ್ನಡದಲ್ಲಿ ಬರಹದ ಕನ್ನಡದ ಯಾವುದೇ ಶೈಲಿಯಲ್ಲೂ ಸರ್ವನಾಮ ಪ್ರತ್ಯಯ ಪಡೆಯದ ಕೆಲವು ನಾಮಪ್ರಕೃತಿಗಳು ಸಾಮಾನ್ಯವಾಗಿ ಬಹುವಚನ ರೂಪದ ಮುಂದೆ ಸರ್ವನಾಮ ಪ್ರತ್ಯಯಗಳನ್ನು ಹೊಂದಿ ನಾಮೀಕರಣಗೊಳ್ಳುತ್ತವೆ.

ಬ.ಕ.	ಆ.ಕ.
ಮನೆಯವನು	ಮನೆಯೋನು
ಹಳ್ಳಿಯವನು	ಅಳಿಯೋನು
ಸುಳ್ಳಿನವನು	ಸುಳ್ಳಿನೋನು
ಮಾತಿನವನು	ಮಾತಿನೋನು

ಲಿಂಗವ್ಯವಸ್ಥೆ

"ನಾಮಪ್ರಕೃತಿಗಳೆಲ್ಲ ಸ್ಥೂಲವಾಗಿ ಮಹತ್ ಹಾಗೂ ಅಮಹತ್ ಎಂಬ ದ್ವಿವಿಧ ವರ್ಗೀಕರಣಕ್ಕೆ ಒಳಪಡುತ್ತದೆ. ಆಲೋಚನಾ ಶಕ್ತಿಯುಳ್ಳ ಜೀವಿಗಳು ಮೊದಲ ವರ್ಗಕ್ಕೂ, ಆಲೋಚನಾ ಶಕ್ತಿಯಿಲ್ಲದ ಜೀವಿ-ಅಜೀವಿಗಳು ಎರಡನೇ ವರ್ಗಕ್ಕೂ ಸೇರುತ್ತವೆ. ಮಹತ್ ವರ್ಗದಲ್ಲಿ ಗಂಡು-ಹೆಣ್ಣು ಎಂಬ ಜೈವಿಕ ಭಿನ್ನತೆಯನ್ನು ಹೇಳುವ ಪ್ರತ್ಯೇಕ ರೂಪಗಳಿದ್ದರೂ (ಉದಾ. ಎಮ್ಮೆ, ಕೋಣ, ಹಸು, ಎತ್ತು, ಆಡು-ಹುಂಜ) ಅವು ವಾಕ್ಯ ರಚನೆಯಲ್ಲಿ ನಾಮ ಕ್ರಿಯಾಪದಗಳ ಅನುಸರಣೆಯ ವಿಚಾರದಲ್ಲಿ ಒಂದೇ ರೀತಿಯಾಗಿ ನಡೆದುಕೊಳ್ಳುತ್ತವೆ. ಹಾಗೂ ನಪುಂಸಕ ಲಿಂಗಗಳು ಎನಿಸಿಕೊಳ್ಳುತ್ತವೆ. ಹೀಗೆ ವಾಕ್ಯ ರಚನೆಯ ದೃಷ್ಟಿಯಿಂದ ನಾಮಪ್ರಕೃತಿಗಳೆನ್ನೆಲ್ಲಾ ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕಲಿಂಗಗಳೆಂದು ವಿಂಗಡಿಸಬಹುದಾಗಿದೆ. ಈ ತ್ರಿವಿಧವಾದ ಬೇಧ ತೋರುವುದು ಏಕವಚನ ರೂಪಗಳಲ್ಲಿ ಮಾತ್ರ. ಬಹುವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗಗಳನ್ನು ಹೇಳುವ ಪ್ರತ್ಯೇಕ ಪ್ರಕೃತಿಗಳಿರುವಡೆಗಳನ್ನುಳಿದು (ಅತ್ತೆ-ಮಾವ) ಇತರೆಡೆ ಪುಲ್ಲಿಂಗ ಬಹುವಚನ ರೂಪಗಳು ಸ್ತ್ರೀಲಿಂಗ ಬಹುವಚನಾರ್ಥವನ್ನು ನೀಡುವ ಉಭಯ ಲಿಂಗಗಳಾಗಿರುತ್ತವೆ. (ಉದಾ. ಹುಡುಗರು, ಅಗಸರು, ಬುದ್ಧಿವಂತರು) ನಪುಂಸಕ ಬಹುಚನ ರೂಪ ಮಾತ್ರ ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಬಹುವಚನದಲ್ಲಿ ಮಹತ್-ಅಮಹತ್ ಎಂಬ ದ್ವಿವಿಧ ವಿಂಗಡಣೆಯೇ ಇದೆ."[೫] ಬರಹ ಕನ್ನಡದಲ್ಲಿ ಹೇಳಿದ ಮಾತುಗಳೇ ಆದೋನಿ ಕನ್ನಡದಲ್ಲಿ ಬಳಕೆಯಾಗುತ್ತವೆ. ಆದರೂ ಉಚ್ಚಾರಣೆಯಲ್ಲಿ ಕೆಲವು ಬದಲಾವಣೆಗಳಾಗುತ್ತವೆ. ಅವುಗಳನ್ನು ಕೆಳಗೆ ನೀಡಲಾಗಿದೆ.

ಪುಲ್ಲಿಂಗ : ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' ಅರ್ಥವು ಮನಸ್ಸಿಗೆ ಹೊಳೆಯುವುದೋ ಅದು ಪುಲ್ಲಿಂಗವೆನಿಸುವುದು.

ಬ.ಕ.	ಆ.ಕ.
ದೊಡ್ಡವನು	ದೊಡ್ಡೋನು
ಹುಡುಗ	ವುಡ್ಗ
ತಂದೆ	ಅಪ್ಪ/ಯಪ್ಪ
ಚಿಕ್ಕಪ್ಪ	ಸಿಗಪ್ಪ
ಮದುಮಗ	ಮದ್ಲಿಂಗ
ರಾಮಣ್ಣ	ರಾಮುಡು
ಅಜ್ಜ	ತಾತ

ಸ್ತ್ರೀಲಿಂಗ : ಯಾವ ಶಬ್ದ ಪ್ರಯೋಗ ಮಾಡಿದಾಗ ನಮ್ಮ ಭಾವನೆಗೆ 'ಹೆಂಗಸು' ಎಂಬ ಅರ್ಥವು ಹೊಳೆಯುವುದೇ ಅದು ಸ್ತ್ರೀಲಿಂಗವೆನಿಸುವುದು.

<u>ಬ.ಕ.</u>	<u>ಆ.ಕ.</u>
ದೊಡ್ಡವಳು	ದೊಡ್ಡೋಳು
ಹುಡುಗಿ	ಪುಡ್ಗಿ
ತಾಯಿ	ಅಮ್ಮ
ಚಿಕ್ಕಮ್ಮ	ಸಿಗಮ್ಮ
ಮದುಮಗಳು	ಮದ್ಲಿಗಿತ್ತಿ
ದೊಡ್ಡ ಅಕ್ಕ	ಪೆದ್ದಕ್ಕ
ಎರ್ರೆಮ್ಮ	ಯರ್ರೆಮ್ಮ
ಅಜ್ಜಿ	ಅವ್ವ

ನಪುಂಸಕ ಲಿಂಗ : ಯಾವ ಶಬ್ದವು ಪ್ರಯೋಗ ಮಾಡಿದಾಗ ಹೆಂಗಸು, ಗಂಡಸು ಎರಡೂ ಅಲ್ಲದ ಅರ್ಥವು ಮನಸ್ಸಿಗೆ ಹೊಳೆಯುವುದೋ ಅದು ನಪುಂಸಕವೆನಿಸುವುದು.

<u>ಬ.ಕ.</u>	<u>ಆ.ಕ.</u>
ಹೊಲ	ವಲ
ಕಟ್ಟಿಗೆ	ಕಟಿಗೆ
ಕಲ್ಲು	ಕೊಲ್ಲು
ಕಣ್ಣು	ಕೊಣ್ಣು
ಕೊಡಲಿ	ಕೊಡ್ಲಿ

ಲಿಂಗ ವ್ಯವಸ್ಥೆಯಲ್ಲಿ ಮೇಲ್ಕಾಣಿಸಿದಂತೆ ಬ.ಕ.ಕ್ಕಿಂತ ಆದೋನಿ ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳು ಭಿನ್ನವಾಗಿ ಬಳಕೆಯಾಗಿವೆ.

ವಚನ ವ್ಯವಸ್ಥೆ

ವ್ಯಕ್ತಿಗಳ ಮತ್ತು ವಸ್ತುಗಳ ಸಂಖ್ಯೆಯನ್ನು ಸೂಚಿಸುವುದು ವಚನ. ಕನ್ನಡದಲ್ಲಿ ಒಬ್ಬ ವ್ಯಕ್ತಿಯನ್ನು ಒಂದು ವಸ್ತುವನ್ನು ಸೂಚಿಸಲು (ರಾಮ, ಮರ), ಏಕವಚನ, ಇಬ್ಬರಿಗಿಂತ ಹೆಚ್ಚು ಜನರನ್ನು, ಎರಡಕ್ಕಿಂತ ಹೆಚ್ಚು ವಸ್ತುಗಳನ್ನು (ಜನರು, ಮರಗಳು) ಸೂಚಿಸಲು ಬಹುವಚನವನ್ನು ಬಳಸುತ್ತೇವೆ. ವಚನಗಳಲ್ಲಿ ಏಕವಚನ ಸೂಚಿಸಲು ನಾಮಪ್ರಕೃತಿಗಳಲ್ಲಿ ಪ್ರತ್ಯೇಕವಾದ ಪ್ರತ್ಯಯಗಳಿಲ್ಲ. ಬಹುವಚನ ಸೂಚಿಸಲು ಪ್ರತ್ಯೇಕವಾದ ಪ್ರತ್ಯಯಗಳಿವೆ.

ಆದೋನಿ ಕನ್ನಡದ ಬಹುವಚನ ಪ್ರತ್ಯಯಗಳು

- ಉರು	<u>ಬ.ಕ.</u>	<u>ಆ.ಕ.</u>
	ದೇವರು	ದೇವ್ರು
	ಇವರು	ಇವ್ರು
	ಹುಡುಗರು	ವುಡುಗ್ರು
	ಬೇಡರು	ಬ್ಯಾಡ್ರು
	ವಡ್ಡರು	ವಡ್ರು
- ಓರು	<u>ಬ.ಕ.</u>	<u>ಆ.ಕ.</u>
	ತಂಗಿಯಂದಿರು	ತಂಗ್ಯೋರು
	ಅತ್ತೆಯರು	ಅತ್ತ್ಯೋರು
	ಅಣ್ಣನವರು	ಅಣ್ಣೋರು
	ಮಂತ್ರಿಯವರು	ಮಂತ್ರ್ಯೋರು
	ಸ್ವಾಮಿಯವರು	ಸ್ವಾಮ್ಯೋರು

ಗೌರವಾರ್ಥಕ ಏಕವಚನ

ಆದೋನಿ ಕನ್ನಡದಲ್ಲಿ ಗೌರವವನ್ನು ಸೂಚಿಸುವಾಗ ಏಕವಚನಾರ್ಥವಿದ್ದರೂ ಬಹುವಚನ ಪ್ರತ್ಯಯವನ್ನು ಸರ್ವನಾಮ ಪ್ರತ್ಯಯ-ಅವರು ಎಂಬುದನ್ನು ಸೇರಿಸಲಾಗುತ್ತದೆ. ಅಧಿಕಾರ ಸೂಚಕ ಪ್ರಕೃತಿಗಳಿಗೆ - ಗಳು / ಅವರು, ಸಂಬಂಧವಾಚಕಗಳಿಗೆ ಅವರು ಹಾಗೂ ಇತರೆಡೆ - ಅರು ಪ್ರತ್ಯಯವನ್ನು ಬಳಸಲಾಗುತ್ತದೆ.

ಬ.ಕ.	ಆ.ಕ.
ಮಂತ್ರಿಗಳು	ಮಂತ್ರಿಗ್ಳು
ತಂದೆಯವರು	ಅಪ್ಪನೋರು
ಅಣ್ಣನವರು	ಅಣ್ಣೋರು
ಮಾವನವರು	ಮಾವನೋರು

ವಿಭಕ್ತಿ ಪ್ರತ್ಯಯಗಳು

ವಾಕ್ಯಗಳಲ್ಲಿ ನಾಮಪದ, ಸರ್ವನಾಮ ಮತ್ತು ಕ್ರಿಯಾಪದಗಳಿಗೆ ಇರುವ ಸಂಬಂಧವನ್ನು ನಿರ್ದೇಶಿಸುವ ರೂಪಗಳನ್ನು ವಿಭಕ್ತಿ ಪ್ರತ್ಯಯಗಳೆಂದು ಗುರುತಿಸಲಾಗಿದೆ. ಇವು ನಾಮಪ್ರಕೃತಿ ಮತ್ತು ಕ್ರಿಯಾಪದಗಳ ನಡುವಣ ಸಂಬಂಧವನ್ನು ಹೇಳುತ್ತವೆ. ಆದೋನಿ ಕನ್ನಡದಲ್ಲಿ ಬಳಕೆಯಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿದಾಗ ಅವು ತಮ್ಮದೇ ಆದ ರೀತಿಯಲ್ಲಿರುವುದು ಕಂಡುಬರುತ್ತದೆ. ನಾಮ ಮತ್ತು ಸರ್ವನಾಮ ಪ್ರಕೃತಿಗಳು ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವುಗಳ ಮೂಲ ರೂಪಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆ. ಈ ವ್ಯತ್ಯಾಸವನ್ನು ಸುಲಭವಾಗಿ ಗುರುತಿಸಿ ವಿವರಿಸಿಕೊಳ್ಳಬಹುದು.

೧. ಪ್ರಥಮ ವಿಭಕ್ತಿಗೆ ಆದೋನಿ ಕನ್ನಡದಲ್ಲಿ ಪ್ರತ್ಯೇಕವಾದ ಪ್ರತ್ಯಯ ಬಳಕೆಯಲ್ಲಿಲ್ಲ. ಈ ಕೆಲಸವನ್ನು ನಾಮಪ್ರಕೃತಿಗಳೇ ನಿರ್ವಹಿಸುತ್ತವೆ.

ಉದಾ. ಅವ್ನು, ಇವ್ನು, ಉವು ಇತ್ಯಾದಿ

೨. ದ್ವಿತೀಯ ವಿಭಕ್ತಿಗೆ (ಅ) ನ್ನ, ನ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ.

ಬ.ಕ.	ಆ.ಕ.
ರಾಮನನ್ನು	ರಾಮನ್ನ
ಅಕ್ಕನನ್ನು	ಅಕ್ಕನ್ನ
ಅಣ್ಣನನ್ನು	ಅಣ್ಣನ್ನು
ಅವನನ್ನು	ಅವುನ್ನ
ಇವನನ್ನು	ಇವುನ್ನ

- ನ

ಬ.ಕ.	ಆ.ಕ.
ಕಾಗೆಯನ್ನು	ಕಾಗೆನ
ಕೋಳಿಯನ್ನು	ಕೋಳಿನ
ಕರುವನ್ನು	ಕರುನ

೩. ತೃತೀಯ ವಿಭಕ್ತಿಗೆ ಲಿಂದ ಪ್ರತ್ಯಯ ಬಳಕೆಯಲ್ಲಿದೆ. ಆದೋನಿ ಕನ್ನಡದಲ್ಲಿ ಪಂಚಮಿ ವಿಭಕ್ತಿಯ ಕೆಲಸವನ್ನು ತೃತೀಯ ವಿಭಕ್ತಿಯೇ ನಿರ್ವಹಿಸುವುದು. ಇಲ್ಲಿನ ಕನ್ನಡದಲ್ಲಿ ಪಂಚಮಿ ವಿಭಕ್ತಿ ಪ್ರತ್ಯೇಕವಾಗಿಲ್ಲ.

ಬ.ಕ.	ಆ.ಕ.
ಅಣ್ಣನಿಂದ	ಅಣ್ಣಲಿಂದ
ಇವನಿಂದ	ಇವನ್‌ಲಿಂದ
ಮರದಿಂದ	ಮರದ್‌ಲಿಂದ
ಹೊಲದಿಂದ	ವಲಲಿಂದ

೪. ಚತುರ್ಥಿ ವಿಭಕ್ತಿಗೆ ಕ್ಕೆ, ಅಗೆ ಪ್ರತ್ಯಯಗಳು ಬಳಕೆಯಲ್ಲಿವೆ.

- ಕ್ಕೆ

ಬ.ಕ.	ಆ.ಕ.
ಹೊಲಕ್ಕೆ	ವಲಕ್ಕೆ
ನೆಲಕ್ಕೆ	ನೆಲಕ್ಕೆ
ಅದಕ್ಕೆ	ಅದಕ್ಕೆ
ಇದಕ್ಕೆ	ಇದಕ್ಕೆ

- ಅಗೆ

ಬ.ಕ.	ಆ.ಕ.
ಅಣ್ಣನಿಗೆ	ಅಣ್ಣಗೆ
ತಮ್ಮನಿಗೆ	ತಮ್ಮಗೆ
ಅಪ್ಪನಿಗೆ	ಅಪ್ಪಗೆ
ಮಗನಿಗೆ	ಮಗಗೆ, ಮಗ್ಗೆ

೫. ಷಷ್ಠಿ ವಿಭಕ್ತಿ 'ಅ' ಪ್ರತ್ಯಯ ಬಳಕೆಯಲ್ಲಿದೆ.

ಬ.ಕ.	ಆ.ಕ.
ಅದರ	ಅದ್ರ
ಇದರ	ಇದ್ರ
ಅಣ್ಣನ	ಅಣ್ಣನ
ಮರದ	ಮರದ
ಮನೆಯ	ಮನೆಯ

೬. ಸಪ್ತಮಿ ವಿಭಕ್ತಿಗೆ -ಲಿ, -ಲ್ಲಿ, -ತಾಗ, -ಆ್ಯಗ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ.

	ಬ.ಕ.	ಆ.ಕ.
- ಲಿ		
	ಕೆರೆಯಲ್ಲಿ	ಕೆರೆಲಿ
	ಮನೆಯಲ್ಲಿ	ಮನೆಲಿ
	ಊರಿನಲ್ಲಿ	ಊರಲಿ
- ಲ್ಲಿ	ಬ.ಕ.	ಆ.ಕ.
	ಗುರುವಿನಲ್ಲಿ	ಗುರುವಲ್ಲಿ
	ಮಡುವಿನಲ್ಲಿ	ಮಡುವಲ್ಲಿ
	ನೀರಿನಲ್ಲಿ	ನೀರಲ್ಲಿ
- ತಾಗ	ಬ.ಕ.	ಆ.ಕ.
	ಮಗನಲ್ಲಿ	ಮಗನ್‌ತಾಗ
	ಅವನಲ್ಲಿ	ಅವನ್‌ತಾಗ
	ಅಕ್ಕನಲ್ಲಿ	ಅಕ್ಕನತಾಗ
	ಇವನಲ್ಲಿ	ಇವನ್‌ತಾಗ

- ಆ್ಯಗ	ಬ.ಕ.	ಆ.ಕ.
	ಮನೆಯಲ್ಲಿ	ಮನ್ಯಾಗ
	ಹೊಲದಲ್ಲಿ	ವಲ್ದಾಗ
	ಊರಿನಲ್ಲಿ	ಊರ್ಯಾಗ

ತರಸೂಚಕ ಪ್ರತ್ಯಯಗಳು

- ಕಿಂತ	ಬ.ಕ.	ಆ.ಕ.
	ನನಗಿಂತ	ನನಕಿಂತ
	ನಿನಗಿಂತ	ನಿನಕಿಂತ
	ಅವನಿಗಿಂತ	ಅವನ್‌ಕಿಂತ
	ಇವನಿಗಿಂತ	ಇವನ್‌ಕಿಂತ

- ಗಿನ್ನ	ಬ.ಕ.	ಆ.ಕ.
	ನನಗಿಂತ	ನನಗಿನ್ನ
	ನಿನಗಿಂತ	ನಿನಗಿನ್ನ
	ಅವನಿಗಿಂತ	ಅವನ್‌ಗಿನ್ನ
	ಇವನಿಗಿಂತ	ಇವನ್‌ಗಿನ್ನ

- ಕಿನ್ನ	ಬ.ಕ	ಆ.ಕ.
	ನನಗಿಂತ	ನನಕಿನ್ನ
	ನಿನಗಿಂತ	ನಿನಕಿನ್ನ
	ಅವನಿಗಿಂತ	ಅವನ್‌ಕಿನ್ನ
	ಇವನಿಗಿಂತ	ಇವನ್‌ಕಿನ್ನ

ಸರ್ವನಾಮ

ಸರ್ವನಾಮವು ನಾಮವರ್ಗದಲ್ಲಿಯ ಒಂದು ಒಳವರ್ಗವಾಗಿದ್ದು ಸೀಮಿತ ಸಂಖ್ಯೆಯ ರೂಪಗಳನ್ನು ಒಳಗೊಳ್ಳುತ್ತದೆ. ಇವುಗಳ ವರ್ಗ ಭಿನ್ನತೆ ಮುಖ್ಯವಾಗಿ ಅರ್ಥವನ್ನು ಆಧರಿಸಿದೆ. ಸರ್ವನಾಮದ ಕೆಲವು ಪ್ರಕಾರಗಳು ಪದರಚನೆಯ ಹಂತದಲ್ಲಿಯೂ ಇನ್ನು ಕೆಲವು ವಾಕ್ಯ ಹಾಗೂ ವಾಕ್ಯೋತ್ತರ ಹಂತಗಳಲ್ಲಿಯೂ ಉಳಿದು ನಾಮಪ್ರಕೃತಿಗಳಿಗಿಂತ ಭಿನ್ನವಾಗಿ ವರ್ತಿಸುತ್ತಿವೆ. ಸರ್ವನಾಮಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು.

೧. ಪುರುಷವಾಚಕ ಸರ್ವನಾಮ

೨. ನಿರ್ದೇಶಕ ಸರ್ವನಾಮ

೩. ಆತ್ಮಾರ್ಥಕ ಸರ್ವನಾಮ

೪. ಪ್ರಶ್ನಾರ್ಥಕ ಸರ್ವನಾಮ

೫. ಸಾಪೇಕ್ಷಕ ಸರ್ವನಾಮ

೬. ಅನಿರ್ದಿಷ್ಟಾರ್ಥಕ ಸರ್ವನಾಮ

೭. ಪರಿಮಾಣವಾಚಕ ಸರ್ವನಾಮ

ಆದೋನಿ ಕನ್ನಡದಲ್ಲಿ ಉತ್ತಮ, ಮಧ್ಯಮ ಹಾಗೂ ಪ್ರಥಮ ಎಂಬ ಮೂರು ವಿಧವಾದ ಪುರುಷ ಬೇಧಗಳನ್ನು ಏಕವಚನ, ಬಹುವಚನ ಎಂಬ ವಚನಬೇಧ ಬಳಕೆಯಲ್ಲಿದೆ. ಏಕವಚನದಲ್ಲಿ ಪ್ರಥಮ ಪುರುಷದಲ್ಲಿ ಮಾತ್ರ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗ ಎಂಬ ಲಿಂಗಬೇಧವನ್ನು ತೋರಿಸಲಾಗುತ್ತದೆ. ಪ್ರಥಮ ಪುರುಷ ಬಹುವಚನದಲ್ಲಿ ಮಹತ್-ಅಮಹತ್ ಬೇಧ ಮಾತ್ರ ವ್ಯಕ್ತವಾಗುತ್ತದೆ. ಉಳಿದೆರೆಡು ಪುರುಷಗಳಲ್ಲಿ ಲಿಂಗಬೇಧ ವ್ಯಕ್ತವಾಗದು.

ಸರ್ವನಾಮ ರೂಪಗಳು

	ಬ.ಕ.		ಆ.ಕ.	
	ಏ.ವ.	ಬ.ವ.	ಏಕವಚನ	ಬಹುವಚನ
ಉತ್ತಮ ಪುರುಷ	ನಾನು	ನಾವು	ನಾನು	ನಾವು
ಮಧ್ಯಮ ಪುರುಷ	ನೀನು	ನೀವು	ನೀನು	ನೀವು
ಪ್ರಥಮ ಪುರುಷ	ಅವನು		ಅವ್ನು/ಆತ	ಅವ್ರು/ಅವ್ರಟ್ರನ
	ಅವಳು	ಅವರು	ಅವ್ಳು/ಆಕೆ	
	ಅದು	ಅವು	ಅದು	ಅವು/ಅವುಟ್ರನ

ವಿಭಕ್ತಿ ರೂಪಗಳು

ಉತ್ತಮ ಪುರುಷ

	ದ್ವಿತೀಯ	ತೃತೀಯ	ಚತುರ್ಥಿ	ಷಷ್ಠಿ	ಸಪ್ತಮಿ
ಬ.ಕ.	ನನ್ನನ್ನು	ನನ್ನಿಂದ	ನನಗೆ	ನನ್ನ	ನನ್ನಲ್ಲಿ
	ನಮ್ಮನ್ನು	ನಮ್ಮಿಂದ	ನಮಗೆ	ನಮ್ಮ	ನಮ್ಮಲ್ಲಿ
ಆ.ಕ.	ನನ್ನ	ನನ್ನಿಂದ	ನಂಗೆ	ನನ್ನ	ನನ್‌ತಲ್ಲಿ
	ನಮ್ಮನ್ನ	ನಮ್ಮಿಂದ	ನಮಗೆ	ನಮ್ಮ	ನಮ್‌ತಲ್ಲಿ

ಮಧ್ಯಮ ಪುರುಷ

	ದ್ವಿತೀಯ	ತೃತೀಯ	ಚತುರ್ಥಿ	ಷಷ್ಠಿ	ಸಪ್ತಮಿ
ಬ.ಕ.	ನಿನ್ನನ್ನು	ನಿನ್ನಿಂದ	ನಿನಗೆ	ನಿನ್ನ	ನಿನ್ನಲ್ಲಿ
	ನಿಮ್ಮನ್ನು	ನಿಮ್ಮಿಂದ	ನಿಮಗೆ	ನಿಮ್ಮ	ನಿಮ್ಮಲ್ಲಿ
ಆ.ಕ.	ನಿನ್ನ	ನಿನ್ನಿಂದ	ನಿಂಗೆ	ನಿನ್ನ	ನಿನ್ನತಲ್ಲಿ
	ನಿಮ್ಮನ್ನ	ನಿಮ್ಮಿಂದ	ನಿಮಗೆ	ನಿಮ್ಮ	ನಿಮ್ಮತಲ್ಲಿ

ಪ್ರಥಮ ಪುರುಷ

	ದ್ವಿತೀಯ	ತೃತೀಯ	ಚತುರ್ಥಿ	ಷಷ್ಠಿ	ಸಪ್ತಮಿ
ಬ.ಕ.	ಅವನನ್ನು	ಅವನಿಂದ	ಅವನಿಗೆ	ಅವನ	ಅವನಲ್ಲಿ
	ಅವಳನ್ನು	ಅವಳಿಂದ	ಅವಳಿಗೆ	ಅವಳ	ಅವಳಲ್ಲಿ
	ಅವರನ್ನು	ಅವರಿಂದ	ಅವರಿಗೆ	ಅವರ	ಅವರಲ್ಲಿ
	ಅದನ್ನು	ಅದರಿಂದ	ಅದಕ್ಕೆ	ಅದರ	ಅದರಲ್ಲಿ
ಆ.ಕ.	ಆತ್ನ	ಆತನಿಂದ	ಆತಗ	ಆತನ	ಆತನ್‌ತಲ್ಲಿ
	ಆಕಿನ್ನ	ಆಕಿಲಿಂದ	ಆಕಿಗೆ	ಆಕೆಯ	ಆಕಿನ್‌ತಲ್ಲಿ

ಅವರನ್ನ	ಅವರಿಂದ	ಅವರಿಗೆ	ಅವರ	ಅವರ್‌ತಲ್ಲಿ
ಅದ್ನ	ಅದರಿಂದ	ಅದಕೆ	ಅದರ	ಅದರ್‌ತಲ್ಲಿ
ಅವ್ನ	ಅವುಟ್ರಲಿಂದ	ಅವುಕೆ	ಅವ್ನ	ಅವುಟ್ರತಲ್ಲಿ

ನಿರ್ದೇಶಕ ಸರ್ವನಾಮ

ಆದೋನಿ ಕನ್ನಡದಲ್ಲಿ ನಿರ್ದೇಶಕ ಮೂಲ ರೂಪಗಳಾದ ಇ/ಈ ಅ/ಆ ಕ್ರಮವಾಗಿ ಸಮೀಪ ಹಾಗೂ ದೂರವಾಚಿಗಳಾಗಿದ್ದು ಅವುಗಳಿಗೆ ಪುರುಷವಾಚಕ ಪ್ರತ್ಯಯಗಳನ್ನು ಅಂಟಿಸುವುದರ ಮೂಲಕ ಸರ್ವನಾಮ ರೂಪಗಳನ್ನು ಪಡೆಯಲಾಗುತ್ತದೆ. ಈ ರೂಪಗಳನ್ನೇ ಪ್ರ.ಪುರುಷ ಸರ್ವನಾಮಗಳನ್ನಾಗಿಯೂ ಬಳಸಲಾಗುತ್ತದೆ.

- ಸಮೀಪವಾಚಿ

<u>ಬ.ಕ.</u>		<u>ಆ.ಕ.</u>	
ಇವನು	ಇವರು	ಇವ್ನ/ಈತ	
ಇವಳು		ಇವ್ನ/ಈಕೆ	ಇವ್ರು
ಇದು	ಇವು	ಇದು	ಇವು

- ದೂರವಾಚಿ

<u>ಬ.ಕ.</u>		<u>ಆ.ಕ.</u>	
ಅವನು		ಅವ್ನ/ಆತ	
	ಅವರು		ಅವ್ರು
ಅವಳು		ಅವ್ನ/ಆಕೆ	
ಅದು	ಅವು	ಅದು	ಅವು

ಆತ್ಮಾರ್ಥಕ ಸರ್ವನಾಮ

ಆದೋನಿ ಕನ್ನಡದಲ್ಲಿ ಉತ್ತಮ ಹಾಗೂ ಮಧ್ಯಮ ಪುರುಷಗಳಲ್ಲಿ ಪುರುಷವಾಚಕ ಸರ್ವನಾಮಗಳೇ ಅವಧಾರಣಾರ್ಥಕ 'ಎ' ಪ್ರತ್ಯಯದೊಡನೆ ಸೇರಿ ಆತ್ಮಾರ್ಥಕವಾಗಿ ಬಳಕೆಯಾಗುತ್ತವೆ.

ಬ.ಕ.	ಆ.ಕ.
ನಾನೇ ಬರೆದುಕೊಂಡೆ	ನಾನೇ ಬರ್‌ಕಂಡೆ
ನೀನೆ ಮಲಗಿಕೊಂಡೆ	ನೀನೇ ಮಕ್ಕಂಡೆ
ನನ್ನನ್ನೇ ಕರೆದುಕೊಂಡು ಹೋದರು	ನನ್ನೇ ಕರಕಂಡು ವೋದರು

ಪ್ರಶ್ನಾರ್ಥಕ ಸರ್ವನಾಮ

ಪ್ರಶ್ನಾರ್ಥಕ ಏ/ಯಾ ಧಾತುವಿಗೆ ಪುರುಷವಾಚಕ ಪ್ರತ್ಯಯಗಳು ಸೇರಿ ಪ್ರಶ್ನಾರ್ಥಕ ಸರ್ವನಾಮ ರೂಪಗಳು ಸಿದ್ಧವಾಗುತ್ತವೆ. ಬರೆಹ ಕನ್ನಡದಲ್ಲಿ ಮಹತ್ ಹಾಗೂ ಅಮಹತ್ ವಿಂಗಡನೆಗೆ ಅನುಸಾರವಾಗಿ ಎರಡು ರೂಪಗಳು ವಸ್ತು ಭಿನ್ನತೆಯನ್ನು ಹೇಳುವ ಏಕವಚನ ಹಾಗೂ ಬಹುವಚನ ಎರಡು ರೂಪಗಳೂ ಇವೆ. ಆದೋನಿ ಕನ್ನಡದಲ್ಲಿರುವ ವಿವರಗಳ ಜೊತೆಗೆ ಪ್ರಥಮ ಪುರುಷ ಏಕವಚನದಲ್ಲಿ ಲಿಂಗಬೇಧವನ್ನು ಹೇಳಲಾಗುತ್ತದೆ.

ಸರ್ವನಾಮ ರೂಪಗಳು

ಬ.ಕ	ಏಕವಚನ	ಬಹುವಚನ
	ಯಾರು	ಯಾರು
	ಯಾವುದು	ಯಾವುವು
	ಏನು	ಏನು
	ಯಾರು	ಏನ್ರೀ (ಗೌರವ ಸೂಚಕ)
ಆ.ಕ	ಯಾವೋನು	ಯಾರು
	ಯಾವೋಳು	
	ಯಾವೋದು/ಯಾದು	ಯಾವು
	ಏನು	ಏನು

ಬ.ಕ	ಆ.ಕ
ಅವರು ಯಾರು	ಅವ್ರು ಯಾರು? ಯಾರು ಹೇಳಿದ?
ಅವನು ಯಾರು	ಅವ್ನು ಯಾರು? ಯಾವೋನು ಹೇಳಿದ್ನು?

ಅವಳು ಯಾರು	ಅವ್ಳು ಯಾರು? ಯಾವೋಳು ಹೇಳಿದ್ದು?
ಅದು ಯಾವುದು	ಅದು ಯಾವ್ದು? ಯಾದು ಅದು?
ಅವು ಯಾವುವು	ಅವು ಯಾವು? ಯಾವು ಅವು?

ವಿಭಕ್ತಿ ರೂಪಗಳು

ಪ್ರಶ್ನಾರ್ಥಕ ಸರ್ವನಾಮಗಳ ವಿಭಕ್ತಿ ರೂಪಗಳ ಪಟ್ಟಿ.

- ಯಾರು

	ದ್ವಿತೀಯ	ತೃತೀಯ	ಚತುರ್ಥಿ	ಷಷ್ಠಿ	ಸಪ್ತಮಿ
ಬ.ಕ.	ಯಾರನ್ನು	ಯಾರಿಂದ	ಯಾರಿಗೆ	ಯಾರ	ಯಾರಲ್ಲಿ
ಆ.ಕ.	ಯಾರನ್ನ	ಯಾರಲಿಂದ	ಯಾರಿಗೆ	ಯಾರ	ಯಾರತಲ್ಲಿ/ಯಾರತಾಗ

- ಏನು

	ದ್ವಿತೀಯ	ತೃತೀಯ	ಚತುರ್ಥಿ	ಷಷ್ಠಿ	ಸಪ್ತಮಿ
ಬ.ಕ.	ಏನನ್ನು	ಏನಿಂದ	ಏಕೆ	___	ಎಲ್ಲಿ
ಆ.ಕ.	ಏನ್ನ	ಏನಿಂದ	ಯಾಕೆ	___	ಎಲ್ಲಿ

ಸಾಪೇಕ್ಷಕ ಸರ್ವನಾಮ

ಬರಹದ ಕನ್ನಡದಲ್ಲಿ ಪ್ರಶ್ನಾರ್ಥಕ ರೂಪಗಳಾದ ಯಾರು, ಎಂಥಾದ್ದು, ಯಾವುದು, ಯಾವಾಗ, ಎಲ್ಲಿಗೆ, ಹೇಗೆ ಗಳೊಡನೆ ಕ್ರಮವಾಗಿ ಅವರು (ಅವನು/ಅವಳು) ಅಂಥಾದ್ದು, ಅದು, ಆವಾಗ, ಅಲ್ಲಿಗೆ, ಹಾಗೆ ರೂಪಗಳನ್ನು ಬಳಸಿ ಸಾಪೇಕ್ಷ ರಚನೆಯನ್ನು ಬಳಸಬಹುದಾದರೂ ಅವುಗಳ ಪ್ರಯೋಗ ತೀರ ಕಡಿಮೆ. ಬದಲಾಗಿ ಕೃದಂತ ರಚನೆಗಳನ್ನೇ ಹೆಚ್ಚಾಗಿ ಬಳಸಲಾಗುತ್ತದೆ. ಆದರೆ ಆದೋನಿ ಕನ್ನಡದಲ್ಲಿ ಸಾಪೇಕ್ಷ ಸರ್ವನಾಮ ಸಹಿತವಾದ ವಾಕ್ಯ ರಚನೆಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

ಉದಾ : <u>ಬ.ಕ.</u> ಆತನಿಗೆ <u>ಎಂಥಾದ್ದು</u> ಬೇಕೋ <u>ಅಂಥಾದ್ದು</u> ತೆಗೆದುಕೊಳ್ಳಲಿ.

<u>ಆ.ಕ.</u> ಆತಗ <u>ಎಂತಾದು</u> ಬೇಕೋ <u>ಅಂತಾದು</u> ತಗಳ್ಳಿ.

<u>ಬ.ಕ.</u> ನಿನಗೆ <u>ಯಾವುದು</u> ಬೇಕೋ ಅದನ್ನು ತೆಗೆದುಕೋ.

ಆ.ಕ. ನಿಂಗೆ ಯಾದು ಬೇಕೋ ಅದರ್ನ ತಗ.

ಬ.ಕ. ನಿನ್ನೆ ಯಾರೋ ಒಬ್ಬರು ಬಂದಿದ್ದರು.

ಆ.ಕ. ನಿನ್ನೆ ಯಾವನೋ ಒಬ್ನು ಬಂದಿದ್ದ.

ಬ.ಕ. ಪೆಟ್ಟಿಗೆಯಲ್ಲಿ ಏನೋ ಇತ್ತು.

ಆ.ಕ. ಪೆಟ್ಟಿಗ್ಯಾಗ ಯೇನೋ ಇತ್ತು.

ಬ.ಕ. ದಾರಿಯಲ್ಲಿ ಒಂದು ಬೆಕ್ಕು ಅಡ್ಡ ಬಂತು.

ಆ.ಕ. ದಾರ್‍ಯಾಗ ಯಾವ್ದೋ ಒಂದು ಬೆಕ್ಕು ಅಡ್ಡಬಂತು.

ಇವಲ್ಲದೆ ಬರಹದ ಕನ್ನಡದಲ್ಲಿ ಸಂಖ್ಯೆಯ ಅನಿರ್ದಿಷ್ಟತೆಯನ್ನು ಹೇಳುವ ಹಲವರು, ಕೆಲವರು, ಕೆಲವು ಸರ್ವನಾಮಗಳು, ಆದೋನಿ ಕನ್ನಡದಲ್ಲಿ ಅಷ್ಟು-ಆಸು/ಆಟು ಇಷ್ಟು-ಈಸು, ಈಟು ಎಂಬ ಪರಿಮಾಣ ವಾಚಕಗಳಾಗಿ ಬಳಕೆಯಾಗುತ್ತವೆ.

ಉದಾ: ಬ.ಕ. ಕೆಲವು ಬುಕ್ಕುಗಳನ್ನು ಚೀಲದಲ್ಲಿ ತುಂಬಿಕೊಂಡಳು.

ಆ.ಕ. ಒಂದೀಸು ಬುಕ್ಕುನ ಸೀಲದಾಗ ತುಂಬಿಕ್ಯಂಡಳು.

ಬ.ಕ. ಯಾರೋ ಕೆಲವರು ಬಂದಿದ್ದರು.

ಆ.ಕ. ಯೊರೋ ಒಂದಾಸು ಜನ ಬಂದಿದ್ದರು.

ಪರಿಮಾಣವಾಚಕ ಸರ್ವನಾಮಗಳು

ಬರಹದ ಕನ್ನಡದಲ್ಲಿ ಅಷ್ಟು, ಇಷ್ಟು ಎಂಬ ಪರಿಮಾಣವಾಚಕ ರೂಪಗಳಿವೆ. ಆದೋನಿ ಕನ್ನಡದಲ್ಲಿ ಈ ಎರಡೂ ರೂಪಗಳ ಜೊತೆಗೆ ಆಸು, ಆಟು, ಈಸು, ಈಟು, ಎಂಬ ರೂಪಗಳು ಬಳಕೆಯಲ್ಲಿವೆ.

ಬ.ಕ. ಅಕ್ಕಾ ಒಂದಿಷ್ಟು ಮಜ್ಜಿಗೆ ಕೊಡೇ.

ಆ.ಕ. ಯಕ್ಕಾ ಒಂದಾಸು ಮಜ್ಜಿಗೆ ಕೊಡೆ.

ಬ.ಕ. ಮದುವೆಗೆ ಒಂದಿಷ್ಟು ಜನ ಬಂದಿದ್ದರು.

ಆ.ಕ. ಮದುವೆಗೆ ಒಂದಾಟು ಜನ ಬಂದಿದ್ದರು.

ವಿಶೇಷಣಗಳು

ವಿಶೇಷಣಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಭಜಿಸಬಹುದು.

೧. ಸ್ವತಸಿದ್ಧ ವಿಶೇಷಣಗಳು ೨. ನಿಷ್ಪನ್ನ ವಿಶೇಷಣಗಳು

೧. ಸ್ವತಸಿದ್ಧ ವಿಶೇಷಣಗಳು :

ಇವುಗಳನ್ನು ಎಂಟು ಪ್ರಕಾರಗಳಾಗಿ ವಿಭಜಿಸಬಹುದು.

ಅ. ಗುಣವಾಚಕ ವಿಶೇಷಣಗಳು (Qualitative adjectives)

ಆ. ನಿರ್ದೇಶಕ ವಿಶೇಷಣಗಳು (Demostrative adjectives)

ಇ. ಪ್ರಶ್ನಾರ್ಥಕ ವಿಶೇಷಣಗಳು (Interogative adjectives)

ಈ. ಪರಿಮಾಣಾತ್ಮಕ ವಿಶೇಷಣಗಳು (Quntitative adjectives)

ಉ. ಪ್ರಕಾರಾರ್ಥಕ ವಿಶೇಷಣಗಳು (Manner adjectives)

ಊ. ಪರಿಗಣನಾರ್ಥಕ ವಿಶೇಷಣಗಳು (Adjective of totality)

ಋ. ಅನಿಶ್ಚಿತ ವಿಶೇಷಣಗಳು (Indefinite adjectives)

ೠ. ಸಂಖ್ಯಾವಾಚಕ ವಿಶೇಷಣಗಳು (Numeral adjectives)

ಅ. ಗುಣವಾಚಕ ವಿಶೇಷಣಗಳು :

ಕಾಲ, ಸ್ಥಾನ, ಆಕಾರ, ವರ್ಣ, ದೇಶ ಗುಣಾದಿ ಬೇಧಗಳೊಂದಿಗೆ ಇವು ವಿವಿಧ ರೀತಿಯಲ್ಲಿರುತ್ತವೆ.

	ಬ.ಕ.	ಆ.ಕ.
ಕಾಲ :	ಹೊಸಮಾತು	ವಸಮಾತು
ಸ್ಥಾನ :	ಎತ್ತರ	ಎತ್ರ
	ಒಳಗೆ	ವಳಾಗ
ಆಕಾರ :	ಚೌಕುಬಟ್ಟೆ/ ಕೈವಸ್ತ್ರ	ಕೈಬಟ್ಟೆ

ವರ್ಣ : ಬಿಳಿ ಹುಡುಗಿ ಬೆಳ್ಳಾನ ವುಡ್ಗಿ

ಹಸಿರು ಎಲೆ ಅಚ್ಚಾನ ಎಲೆ

ಆ. ನಿರ್ದೇಶಾತ್ಮಕ ವಿಶೇಷಣಗಳು :

	ಬ.ಕ.	ಆ.ಕ.
ದೂರವಾಚಿ	ಅವಳು	ಆಯಮ್ಮ / ಆಕೆ / ಅವ್ಳು
	ಅವನು	ಆಯಪ್ಪ / ಆತ / ಅವ್ನ
ಸಮೀಪವಾಚಿ	ಇವಳು	ಈಯಮ್ಮ / ಈಕೆ / ಇವ್ಳು
	ಇವನು	ಈಯಪ್ಪ / ಈತ / ಇವ್ನ

ಇ. ಪ್ರಶ್ನಾರ್ಥಕ ವಿಶೇಷಣಗಳು :

ಬ.ಕ.	ಆ.ಕ.
ಯಾವುದು	ಯಾದು
ಯಾವ ದಿಕ್ಕು	ಯಾ ದಿಕ್ಕು
ಯಾವನು	ಯಾವ್ನೋನು / ಯಾಯಪ್ಪ

ಈ. ಪರಿಮಾಣಾತ್ಮಕ ವಿಶೇಷಣಗಳು :

ಬ.ಕ.	ಆ.ಕ.
ಅಷ್ಟು	ಆಸು / ಆಟು
ಇಷ್ಟು	ಈಸು / ಈಟು
ಎಷ್ಟು	ಏಸು / ಏಟು
ರೊವಷ್ಟು	ರೊವಸು / ರೊವಟು

ಉ. ಪ್ರಕಾರಾರ್ಥಕ ವಿಶೇಷಣಗಳು :

ಬ.ಕ.	ಆ.ಕ.
ಅಂಥಾವನು	ಅಂತೋನು
ಇಂಥಾವನು	ಇಂತೋನು
ಎಂಥಾವನು	ಎಂತೋನು

೧ಉ. ಪರಿಗಣನಾರ್ಥಕ ವಿಶೇಷಣಗಳು :

<u>ಬ.ಕ.</u>	<u>ಆ.ಕ.</u>
ಅಷ್ಟು ಜನ	ಆಸ್‌ಜನ
ಇಷ್ಟು ಜನ	ಈಸ್‌ಜನ
ಎಷ್ಟು ಜನ	ಏಸ್‌ಜನ
ಐದು ಜನ	ಅಯ್‌ಜನ

೧ಉ. ಅನಿಶ್ಚಿತ ವಿಶೇಷಣಗಳು :

<u>ಬ.ಕ.</u>	<u>ಆ.ಕ.</u>
ಬಹಳ	ಬಾಳ / ಸ್ಯಾನ
ರೊವಷ್ಟು	ರೊವಟು

೧ಊ. ಸಂಖ್ಯಾವಾಚಕ ವಿಶೇಷಣಗಳು :

<u>ಬ.ಕ.</u>	<u>ಆ.ಕ.</u>
ಒಬ್ಬನು	ವಬ್ಬೋನು
ಒಬ್ಬಳು	ವಬ್ಬೋಳು
ಎರಡು ನೂರು	ಇನ್ನೂರು
ಮೂರು ನೂರು	ಮುನ್ನೂರು
ನಾಲ್ಕು ನೂರು	ನಾನ್ನೂರು
ಐದು ನೂರು	ಅಯ್‌ನೂರು

೨. ನಿಷ್ಪನ್ನ ವಿಶೇಷಣಗಳು :

ಇವು ಪ್ರಾಥಮಿಕ ವಿಶೇಷಣಗಳಿಂದ ನಿಷ್ಪನ್ನವಾಗುತ್ತವೆ. ನಾಮ, ಕ್ರಿಯಾಧಾತುಗಳಿಗೆ ಪ್ರತ್ಯಯ ಸೇರುವುದರೊಂದಿಗೆ ಏರ್ಪಡುತ್ತವೆ.

ಅ. ನಾಮಧಾತು ರೂಪಗಳನ್ನು ವಿಶೇಷಣವಾಗಿ ಬಳಕೆ ಮಾಡುವುದು.

ಬ.ಕ.	ಆ.ಕ.
ಪುಂಡಿಪಲ್ಯ	ಪುಂಡಿಎಲೆ
ಬಡಿಗೆಯವನು	ಬಡಿಗೆಯೋನು
ಬೋರೆಹಣ್ಣು	ಬಾರೆ ಅಣ್ಣು
ಬಾಳೆ ಹಣ್ಣು	ಬಾಳೆ ಅಣ್ಣು
ಅವಳಿ ಮಕ್ಕಳು	ಅವಳಿ ಜವಳಿ

ಆ. ಅವ್ಯಯಗಳನ್ನು ವಿಶೇಷಗಳಾಗಿ ಬಳಕೆ ಮಾಡುವುದು.

ಬ.ಕ.	ಆ.ಕ.
ಬಹಳ ಒಳ್ಳೆಯವನು	ಸ್ಯಾನ ಒಳ್ಳೇನು
ಸ್ವಲ್ಪ ಹೊತ್ತು	ರೊವಟೊತ್ತು

ಕ್ರಿಯಾಪದಗಳು

ವಾಕ್ಯದಲ್ಲಿಯ ಕ್ರಿಯೆಯ ಅರ್ಥವನ್ನು ಪೂರ್ಣಗೊಳಿಸುವ ಅಥವಾ ಕ್ರಿಯೆಯು ಪೂರ್ಣವಾಗಿರುವುದನ್ನು ತಿಳಿಸುವ ಶಬ್ದವು ಕ್ರಿಯಾಪದ. ಉದಾ. ನೋಡಿದನು, ಬರೆದಳು, ಬಂದರು, ತಿನ್ನುತ್ತದೆ, ಓಡುತ್ತದೆ, ಆಗುತ್ತದೆ ಮುಂತಾದ ಶಬ್ದಗಳಲ್ಲಿ ಕ್ರಿಯೆಯು ಪೂರ್ಣವಾಗಿರುತ್ತದೆ. ಇಂತಹ ಕ್ರಿಯಾಪದಗಳು ಆದೋನಿ ಕನ್ನಡದಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿವೆ.

'ಓಡುತ್ತದೆ' ಇದರಲ್ಲಿ ಓಡುವ ಕ್ರಿಯೆ ಪೂರ್ಣಗೊಂಡಿದೆ.

'ಆಗುತ್ತದೆ' ಇದರಲ್ಲಿ ಆಗುವ ಕ್ರಿಯೆ ಪೂರ್ಣಗೊಂಡಿದೆ.

'ಕುಡಿಯುತ್ತದೆ' ಇದರಲ್ಲಿ ಕುಡಿಯುವ ಕ್ರಿಯೆ ಪೂರ್ಣಗೊಂಡಿದೆ.

ಬ.ಕ.	ಆ.ಕ.
ಓಡುತ್ತದೆ	ಓಡ್‌ತೈತೆ
ಆಗುತ್ತದೆ	ಆಗ್‌ತೈತೆ
ಕುಡಿಯುತ್ತದೆ	ಕುಡಿತೈತೆ
ಇರುತ್ತದೆ	ಇರ್‌ತೈತೆ

ಆದೋನಿ ಕನ್ನಡದಲ್ಲಿ ಪದಮಧ್ಯ ಪರಿಸರದಲ್ಲಿ 'ಐ'ಕಾರ ಆಗಮವಾಗಿದೆ. ಮತ್ತು ಪದಾಂತ್ಯದ 'ದ' ಕಾರವು ಲೋಪವಾಗಿದೆ.

ಬ.ಕ.	ಆ.ಕ.
ದಬ್ಬುತ್ತಾ	ದೊಬ್ಬಿಕ್ಯಾಂತ
ಮಾಡುತ್ತಾ	ಮಾಡಿಕ್ಯಾಂತ
ಆಡುತ್ತಾ	ಆಡಿಕ್ಯಾಂತ
ಕೊಡುವುದಕ್ಕೆ	ಕೊಡಾಕ
ತಿನ್ನುವುದಕ್ಕೆ	ತಿನ್ನಾಕ, ತಿಂದಾಳ
ಅನ್ನುವುದಕ್ಕೆ	ಅಂಬಾಕ
ಹಿಡಿದುಕೊಂಡು	ಇಡ್ಕಂಡು
ಹೊತ್ತುಕೊಂಡು	ವತ್ಕಂಡು
ತೊಳೆದುಕೊಂಡು	ತೊಳ್ಕಂಡು
ಹೋದ	ವಂಟ
ಕುದಿಸು	ಕುಚ್ಚು
ಹೋಗುತ್ತೀಯ	ಓತೀಯ

ಮೇಲಿನ ಪಟ್ಟಿಯಲ್ಲಿ ಬ.ಕ.ದ ದಬ್ಬುತ್ತಾ, ಮಾಡುತ್ತಾ, ಆಡುತ್ತಾ ಎನ್ನುವ ಪದಗಳು ಆ.ಕ.ದಲ್ಲಿ ದೊಬ್ಬಿಕ್ಯಾಂತ, ಮಾಡಿಕ್ಯಾಂತ, ಆಡಿಕ್ಯಾಂತ ಎಂದು ಬಳಕೆಯಲ್ಲಿವೆ. ಆ.ಕ.ದಲ್ಲಿ 'ಕ' ಕಾರ 'ಯ' ಕಾರದ ದಿತ್ವ ಆಗಮವಾಗಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಅದೇ ರೀತಿ ಕೊಡುವುದಕ್ಕೆ, ತಿನ್ನುವುದಕ್ಕೆ, ಅನ್ನುವುದಕ್ಕೆ ಎನ್ನುವ ಪದಗಳು ಕ್ರಮವಾಗಿ ಕೊಡಾಕ, ತಿಂಬಾಕ, ಅಂಬಾಕ ಎಂದು ಬಳಕೆಯಲ್ಲಿವೆ. ಇಲ್ಲಿ 'ವು' ಕಾರ ಮತ್ತು 'ದ' ಕಾರ ಆದೋನಿ ಕನ್ನಡದಲ್ಲಿ ಲೋಪವಾಗಿದೆ. ಅದೇ ರೀತಿ ಇಡಿದುಕೊಂಡು, ತೊಳೆದುಕೊಂಡು ಎನ್ನುವ ಪದಗಳು ಇಡ್ಕಂಡು, ತೊಳ್ಕಂಡು ಎಂದು ಆದೋನಿ ಕನ್ನಡದಲ್ಲಿ ಬಳಕೆಯಾಗುತ್ತಿವೆ. ಇಲ್ಲಿ 'ದ' ಕಾರ ಆದೋನಿ ಕನ್ನಡದಲ್ಲಿ ಲೋಪವಾಗಿದೆ. ಅದೇ ರೀತಿ ಹೋದ, ಹೋಗುತ್ತೀಯ ಎನ್ನುವ

ಪದಗಳು ವಂಟ, ಓತೀಯ ಎಂದು ಬಳಕೆಯಾಗುತ್ತಿದ್ದು 'ಹ' ಕಾರದ ಸ್ಥಾನದಲ್ಲಿ 'ವ' ಕಾರ ಬಳಕೆಯಲ್ಲಿರುವುದು ಗಮನಿಸಬಹುದು.

೧. **ಪ್ರೇರಣಾರ್ಥಕ ಕ್ರಿಯಾರೂಪಗಳು :** ಇವು ಕ್ರಿಯಾಧಾತುಗಳಿಗೆ - ಇಸು, ಸು ಪ್ರತ್ಯಯ ಸೇರಿದಾಗ ಸಿದ್ಧಿಸುತ್ತವೆ.

ಬ.ಕ.	ಆ.ಕ.
ನೋಡಿಸು	ನೋಡ್ಸು
ಮಾಡಿಸು	ಮಾಡ್ಸು
ಬರಿಸು	ಬರ್ಸು
ಕೇಳಿಸು	ಕೇಳ್ಸು
ಕೂರಿಸು	ಕುದ್ರ್ಸು
ತರಿಸು	ತರ್ಸು

೨. **ಆಜ್ಞಾರ್ಥಕ ಕ್ರಿಯಾರೂಪಗಳು :** ಇವು ಯಾವಾಗಲೂ ಮಧ್ಯಮ ಪುರುಷದಲ್ಲೇ ಬಳಕೆಯಾಗುತ್ತವೆ.

ಬ.ಕ.	ಆ.ಕ.
ಮಾಡಿರಿ	ಮಾಡ್ರಿ
ನೋಡಿರಿ	ನೋಡ್ರಿ
ಕೇಳಿರಿ	ಕೇಳ್ರಿ
ಕೊಡು	ಕೊಡ್ರಿ

೩. **ವಿಧ್ಯರ್ಥಕ ಕ್ರಿಯಾರೂಪಗಳು :** ಲಿ, ಳಿ - ಎಂಬ ಪ್ರತ್ಯಯಗಳು ಕ್ರಿಯಾಧಾತುಗಳಿಗೆ ಸೇರುವುದರಿಂದ ಸಿದ್ಧಿಸುತ್ತವೆ.

ಬ.ಕ.	ಆ.ಕ.
ಮಾಡಲಿ	ಮಾಡ್ಲಿ
ಹೋಗಲಿ	ವೋಗ್ಲಿ

ಹೇಳಲಿ	ಏಳ್ಲಿ
ತಿನ್ನಲಿ	ತಿನ್ಲಿ
ಕಾಣಲಿ	ಕಾಣ್ಲಿ

೪. ಆಪೇಕ್ಷಾರ್ಥಕ ಕ್ರಿಯಾರೂಪಗಳು : 'ರೆ' ಎಂಬ ಪ್ರತ್ಯಯ ಕ್ರಿಯಾಧಾತುಗಳಿಗೆ ಸೇರುವುದರಿಂದ ಸಿದ್ಧಿಸುತ್ತದೆ.

ಬ.ಕ.	ಆ.ಕ.
ಅತ್ತರೆ	ಅತ್ರೆ
ಬಂದರೆ	ಬಂದ್ರೆ
ಗೆದ್ದರೆ	ಗೆದ್ರೆ
ತಿಂದರೆ	ತಿಂದ್ರೆ
ಕೊಟ್ಟರೆ	ಕೊಟ್ರೆ

೫. ಬುಟ್ಟೆ, ಬಿಟ್ಟೆ ಎಂಬ ರೂಪಗಳು ಕ್ರಿಯಾಪದಗಳಿಗೆ ಸೇರಿದಾಗ ಕೆಲವು ಕ್ರಿಯಾರ್ಥಕ ರೂಪಗಳು ಲಭಿಸುತ್ತವೆ.

ಬ.ಕ.	ಆ.ಕ.
ನೋಡಿಬಿಟ್ಟೆ	ನೋಡ್ಬಿಟ್ಟೆ, ನೋಡ್ಬುಟ್ಟೆ
ಕೇಳಿಬಿಟ್ಟೆ	ಕೇಳ್ಬುಟ್ಟೆ
ಹೇಳಿಬಿಟ್ಟೆ	ಹೇಳ್ಬಿಟ್ಟೆ
ಕೊಟ್ಟುಬಿಟ್ಟೆ	ಕೊಟ್ಬುಟ್ಟೆ

೬. ಸಂಬಂಧಾರ್ಥಕ ಕ್ರಿಯಾರೂಪಗಳು : 'ಓನು' ಎಂಬ ಪ್ರತ್ಯಯ ಕ್ರಿಯಾಧಾತುಗಳಿಗೆ ಸೇರಿದಾಗ ಸಿದ್ಧಿಸುತ್ತದೆ.

ಬ.ಕ.	ಆ.ಕ.
ಬರುವವನು	ಬರೋನು
ಮಾಡುವವನು	ಮಾಡೋನು

ಕೇಳುವವನು	ಕೇಳೋನು
ಹೇಳುವವನು	ಹೇಳೋನು
ಮಾಡಿದವನು	ಮಾಡಿದೋನು
ತಿಂದವನು	ತಿಂದೋನು
ಬಂದವನು	ಬಂದೋನು

೭. **ನಿಷೇದಾರ್ಥಕ ಕ್ರಿಯಾರೂಪಗಳು** : ಬೇರೆ ಬೇರೆ ಪ್ರತ್ಯಯಗಳು ಕ್ರಿಯಾಧಾತುಗಳಿಗೆ ಸೇರಿದಾಗ ಲಭಿಸುತ್ತವೆ.

	ಬ.ಕ.	ಆ.ಕ.
ಮಾಡ	ಮಾಡಲಾರ	ಮಾಡಕೊಲ್ಲ
ಕೇಳ	ಕೇಳಲಾರ	ಕೇಳಕೊಲ್ಲ
ಬರ	ಬರಲಾರ	ಬರಾಕೊಲ್ಲ
ತಿನ್ನ	ತಿಂಬಲಾರ	ತಿಂಬಾಕೊಲ್ಲ
ನಿಲ್ಲು	ನಿಲ್ಲಲಾರ	ನಿಲ್ಲಕೊಲ್ಲ
ಕೊಡು	ಕೊಡಲಾರ	ಕೊಡಾಕೊಲ್ಲ

೮. **ಆತ್ಮಾರ್ಥಕ ಕ್ರಿಯಾರೂಪಗಳು :**

ಬ.ಕ.	ಆ.ಕ.
ಮಲಿಗಿಕೋ	ಮಕ್ಕಾ
ನೆನೆದುಕೋ	ನೆನ್ಸ್ಕಾಂ
ಮಾಡಿಕೊಳ್ಳುತ್ತೇನೆ	ಮಾಡ್ಕಂತೀನಿ
ಮಾಡಿಕೊಳ್ಳುತ್ತೇನೆ	ಮಾಡ್ಕಂತೀವಿ

ಕಾಲಾರ್ಥಕ ಕ್ರಿಯಾಪದಗಳು : ಅಖ್ಯಾತ ಪ್ರತ್ಯಯಗಳು

ಕಾಲವನ್ನು ಸೂಚಿಸುವಂತವು ಕಾಲಾರ್ಥಕಗಳು. ಅವು ವರ್ತಮಾನ ಭೂತ ಭವಿಷತ್ ಕಾಲಗಳನ್ನು ಸೂಚಿಸುತ್ತವೆ ಮತ್ತು ಒಂದೊಂದು ಕಾಲವು ಒಂದೊಂದು ಆಗಮವನ್ನು ಹೊಂದಿರುತ್ತದೆ.

೧. ಆದೋನಿ ಕನ್ನಡದ ವರ್ತಮಾನ ಕಾಲದ ಆಖ್ಯಾತ ಪ್ರತ್ಯಯಗಳು

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ ಪುರುಷ	ಪು.ಸ್ತ್ರೀ	ಈನಿ	ಈವಿ
ಮಧ್ಯಮ ಪುರುಷ	ಪು.ಸ್ತ್ರೀ	ಇ	ಈರಿ
ಪ್ರಥಮ ಪುರುಷ	ಪು.	ಆನ	ಆರ
	ಸ್ತ್ರೀ.	ಆಳ	
	ನಂ.	ಅಯ್‌ತೆ	ಅಯ್‌ದಾರ

ಪ್ರಯೋಗ :

ಪುರುಷ	ಲಿಂಗ	ಏಕವಚನ	ಬಹುವಚನ
ಬ.ಕ. ಉತ್ತಮ ಪುರುಷ	ಪು.ಸ್ತ್ರೀ.	ನೋಡುತ್ತೇನೆ	ನೋಡುತ್ತೇವೆ
ಆ.ಕ. ಉತ್ತಮ ಪುರುಷ	ಪು.ಸ್ತ್ರೀ.	ನೋಡತ್ತೀನಿ	ನೋಡತ್ತೀವಿ
ಬ.ಕ. ಮಧ್ಯಮ ಪುರುಷ	ಪು.ಸ್ತ್ರೀ.	ನೋಡುತ್ತೀ	ನೋಡುತ್ತೀರಿ
ಆ.ಕ. ಮಧ್ಯಮ ಪುರುಷ	ಪು.ಸ್ತ್ರೀ.	ನೋಡ್‌ತ್ತಿ	ನೋಡ್‌ತ್ತೀರಿ
ಬ.ಕ. ಪ್ರಥಮ ಪುರುಷ	ಪು.	ನೋಡುತ್ತಾನೆ	ನೋಡುತ್ತಾರೆ
	ಸ್ತ್ರೀ	ನೋಡುತ್ತಾಳೆ	
	ನಂ.	ನೋಡುತ್ತದೆ	ನೋಡುತ್ತದೆ.
ಆ.ಕ. ಪ್ರಥಮ ಪುರುಷ	ಪು.	ನೋಡತಾನ	ನೋಡತಾರ
	ಸ್ತ್ರೀ.	ನೋಡತಾಳ	
	ನಂ.	ನೋಡತೈತೆ	ನೋಡತೈದಾವ

i. ವರ್ತಮಾನದ ಕಾಲದಲ್ಲಿ ಧಾತುವಿಗೆ ಆಖ್ಯಾತ ಪ್ರತ್ಯಯಕ್ಕೂ ನಡುವೆ ಕಾಲಸೂಚಕ 'ಉತ್ತ' ಆಗಮ ಬಂದು ವರ್ತಮಾನ ಕಾಲದ ಕ್ರಿಯಾಪದಗಳಾಗುತ್ತವೆ.

ii. ವಿಕೃತ ರೂಪ : 'ಇರು' ಧಾತುವಿಗೆ ವರ್ತಮಾನ ಕಾಲದ ರೂಪಗಳು 'ಉತ್ತ' ಆಗಮ ಹೊಂದದೆ ಒಮ್ಮೊಮ್ಮೆ 'ದ' ಆಗಮ ಹೊಂದಿ ವಿಕೃತ ರೂಪ ತಾಳಿದ ಕ್ರಿಯಾಪದಗಳಾಗುತ್ತವೆ.

ಪ್ರಯೋಗ :

	ಪುರುಷ	ಲಿಂಗ	ಏಕವಚನ	ಬಹುವಚನ
ಬ.ಕ.	ಉ.ಪು.	ಪು.ಸ್ತ್ರೀ.	ಇದ್ದೇನೆ	ಇದ್ದೇವೆ
ಆ.ಕ.	ಉ.ಪು.	ಪು.ಸ್ತ್ರೀ.	ಅಯ್‌ದೀನಿ	ಅಯ್‌ದೀವಿ
ಬ.ಕ.	ಮ.ಪು.	ಪು.ಸ್ತ್ರೀ.	ಇದ್ದೀಯ	ಇದ್ದೀರಿ
ಆ.ಕ.	ಮ.ಪು.	ಪು.ಸ್ತ್ರೀ.	ಅಯ್‌ದೀಯ	ಅಯ್‌ದೀರ
ಬ.ಕ.	ಪ್ರ.ಪು.	ಪು.	ಇದ್ದಾನೆ	ಇದ್ದಾರೆ
		ಸ್ತ್ರೀ	ಇದ್ದಾಳೆ	
		ನಂ.	ಇದೆ	ಇವೆ
ಆ.ಕ.	ಪ್ರ.ಪು.	ಪು.	ಅಯ್‌ದಾನ	ಅಯ್‌ದಾರ
		ಸ್ತ್ರೀ	ಅಯ್‌ದಾಳ	
		ನಂ.	ಅಯ್‌ತೆ	ಅಯದಾವ

೨. ಆದೋನಿ ಕನ್ನಡದ ಭೂತಕಾಲದ ಅಖ್ಯಾತ ಪ್ರತ್ಯಯಗಳು :

ಪುರುಷ	ಲಿಂಗ	ಏಕವಚನ	ಬಹುವಚನ
ಉ.ಪು.	ಪು.ಸ್ತ್ರೀ.	ಇದೆ	ಇವಿ
ಮ.ಪು.	ಪು.ಸ್ತ್ರೀ.	ಎ	ಇರಿ
ಪ್ರ.ಪು.	ಪು.	ಇದ	ಇರಿ
	ಸ್ತ್ರೀ	ಇಳು	ಇರಿ
	ನಂ.	ಇತು	ಉವು

ಪ್ರಯೋಗ :

ಪುರುಷ		ಲಿಂಗ	ಏಕವಚನ	ಬಹುವಚನ
ಬ.ಕ.	ಉ.ಪು.	ಪು.ಸ್ತ್ರೀ.	ನೋಡಿದೆನು	ನೋಡಿದೆವು
ಆ.ಕ.	ಉ.ಪು.	ಪು.ಸ್ತ್ರೀ.	ನೋಡಿದೆ	ನೋಡಿದ್ವಿ
ಬ.ಕ.	ಮ.ಪು.	ಪು.ಸ್ತ್ರೀ.	ನೋಡಿದೆ	ನೋಡಿದಿರಿ
ಆ.ಕ.	ಮ.ಪು.	ಪು.ಸ್ತ್ರೀ.	ನೋಡಿದೆ	ನೋಡಿದ್ರಿ
ಬ.ಕ.	ಪ್ರ.ಪು.	ಪು.	ನೋಡಿದನು	ನೋಡಿದರು
		ಸ್ತ್ರೀ	ನೋಡಿದಳು	
		ನಂ.	ನೋಡಿತು	ನೋಡಿದವು
ಆ.ಕ.	ಪ್ರ.ಪು.	ಪು.	ನೋಡಿದ	ನೋಡಿದ್ರು
		ಸ್ತ್ರೀ	ನೋಡಿದ್ರು	
		ನಂ.	ನೋಡಿತು	ನೋಡದ್ವು

ಭೂತಕಾಲದ ಕ್ರಿಯಾಪದ ರೂಪಗಳು ಎರಡು ಬಗೆಯಾಗಿವೆ.

i. ಭೂತಕಾಲದಲ್ಲಿ ಬರುವ ಆಗಮವು ವಿಕಾರ ಹೊಂದದ ಕ್ರಿಯಾಪದ ರೂಪ.

ii. ಆಗಮವು ವಿಕಾರ ಹೊಂದುವ ಕ್ರಿಯಾಪದ ರೂಪ.

i. **ವಿಕಾರ ಹೊಂದದ ಕ್ರಿಯಾಪದ ರೂಪ :** ಭೂತಕಾಲದಲ್ಲಿ ಧಾತುವಿಗೂ ಅಖ್ಯಾತ ಪ್ರತ್ಯಯಕ್ಕೂ ನಡುವೆ ಕಾಲಸೂಚಕ 'ದ' ಆಗಮ ಬಂದು ಭೂತಕಾಲದ ಕ್ರಿಯಾಪದ ರೂಪ ಹೊಂದುವುದು. ('ದ' ಆಗಮ ಇವುಗಳಲ್ಲಿ ವಿಕಾರ ಹೊಂದುವುದಿಲ್ಲ.)

ii. **ವಿಕಾರ ಹೊಂದುವ ಕ್ರಿಯಾಪದ ರೂಪ :** ಕೆಲವು ಧಾತುಗಳು ಕ್ರಿಯಾಪದಗಳಾಗುವಾಗ ಭೂತಕಾಲದಲ್ಲಿರುವ 'ದ' ಆಗಮವು ಲೋಪವಾಗಿ, ಕ್ರಿಯಾಪದವು ವಿಕಾರ ರೂಪ ಹೊಂದುವುದು. ('ದ' ಸ್ಥಳದಲ್ಲಿ ಹೊಸದೊಂದು ಅಕ್ಷರ ಬರುವುದು.)

ಪ್ರಯೋಗ :

	ಪುರುಷ	ಲಿಂಗ	ಏಕವಚನ	ಬಹುವಚನ
ಬ.ಕ.	ಉ.ಪು.	ಪು.ಸ್ತ್ರೀ	ಕಲಿತೆನು	ಕಲಿತೆವು
ಆ.ಕ.	ಉ.ಪು.	ಪು.ಸ್ತ್ರೀ	ಕಲಿತೆ	ಕಲಿತ್ವಿ
ಬ.ಕ.	ಮ.ಪು.	ಪು.ಸ್ತ್ರೀ	ಕಲಿತೆ	ಕಲಿತಿರಿ
ಆ.ಕ.	ಮ.ಪು.	ಪು.ಸ್ತ್ರೀ	ಕಲಿತೆ	ಕಲಿತ್ರಿ
ಬ.ಕ.	ಪ್ರ.ಪು.	ಪು.	ಕಲಿತನು	ಕಲಿತರು
		ಸ್ತ್ರೀ	ಕಲಿತಳು	ಕಲಿತರು
		ನಂ.	ಕಲಿತಿತು	ಕಲಿತವು
ಆ.ಕ.	ಪ್ರ.ಪು.	ಪು.	ಕಲ್ತ	ಕಲ್ತ್ರು
		ಸ್ತ್ರೀ	ಕಲತ್ಲು	
		ನಂ.	ಕಲಿತಿತು	ಕಲಿತ್ವು

೩. ಆದೋನಿ ಕನ್ನಡದ ಭವಿಷ್ಯತ್ ಕಾಲದ ಆಖ್ಯಾತ ಪ್ರತ್ಯಯಗಳು :

ಪುರುಷ	ಲಿಂಗ	ಏಕವಚನ	ಬಹುವಚನ
ಉ.ಪು.	ಪು.ಸ್ತ್ರೀ	ಇನಿ	ಇವಿ
ಮ.ಪು.	ಪು.ಸ್ತ್ರೀ	ಇ	ಇರಿ
ಪ್ರ.ಪು.	ಪು.	ಓನು	ಓರು
	ಸ್ತ್ರೀ	ಓಳು	ಓರು
	ನಂ.	ಓದು	ಓವು

ಪ್ರಯೋಗ :

	ಪುರುಷ	ಲಿಂಗ	ಏಕವಚನ	ಬಹುವಚನ
ಬ.ಕ.	ಉ.ಪು.	ಪು.ಸ್ತ್ರೀ.	ಬರೆಯುವೆನು	ಬರೆಯುವೆವು
ಆ.ಕ.	ಉ.ಪು.	ಪು.ಸ್ತ್ರೀ.	ಬರಿತೀನಿ	ಬರಿತೀವಿ

<u>ಬ.ಕ.</u>	ಮ.ಪು.	ಪು.ಸ್ತ್ರೀ.	ಬರೆಯುವೆ	ಬರೆಯುವಿರಿ
<u>ಆ.ಕ.</u>	ಮ.ಪು.	ಪು.ಸ್ತ್ರೀ.	ಬರಿ	ಬರಿರೀ
<u>ಬ.ಕ.</u>	ಪ್ರ.ಪು.	ಪು.	ಬರೆಯುವನು	ಬರೆಯುವರು
		ಸ್ತ್ರೀ	ಬರೆಯುವಳು	ಬರೆಯುವರು
		ನಂ.	ಬರೆಯುವುದು	ಬರೆಯುವವು
<u>ಆ.ಕ.</u>	ಪ್ರ.ಪು.	ಪು.	ಬರಿಯೋನು	ಬರಿಯೋರು
		ಸ್ತ್ರೀ	ಬರಿಯೋಳು	ಬರಿಯೋರು
		ನಂ.	ಬರಿಯೋದು	ಬರಿಯೋವು

ಭವಿಷ್ಯತ್ ಕಾಲದಲ್ಲಿ ಧಾತುವಿಗೂ ಅಖ್ಯಾತ ಪ್ರತ್ಯಯಕ್ಕೂ ನಡುವೆ ಕಾಲಸೂಚಕ 'ವ', 'ಉವ' ಬರುವುದು. ಆದರೆ ಆದೋನಿ ಕನ್ನಡದಲ್ಲಿ 'ಓ' ಪ್ರತ್ಯಯ ಬಳಕೆಯಲ್ಲಿದ್ದು ಬರಹ ಕನ್ನಡಕ್ಕಿಂತ ವೈಶಿಷ್ಟ್ಯವೆನಿಸಿದೆ. ಈ ರೀತಿಯಾಗಿ ಆದೋನಿ ಕನ್ನಡದಲ್ಲಿ ಬಳಕೆಯಾಗಿರುವ ಅಖ್ಯಾತ ಪ್ರತ್ಯಯಗಳು ಬರಹ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಗಮನಿಸಬಹುದಾಗಿದೆ.

ಅಡಿಟಿಪ್ಪಣಿ

೧. ಡಿ.ಎನ್. ಶಂಕರಭಟ್ಟ, ಕನ್ನಡ ಪದಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು, ಪು.೧೯

೨. ಡಾ. ಕೃಷ್ಣಪರಮೇಶ್ವರ ಭಟ್ಟ, ಕನ್ನಡ-ತೆಲುಗು ದ್ವಿಭಾಷಿಕತೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೫೩

೩. ಡಿ.ಎನ್. ಶಂಕರಭಟ್ಟ, ಕನ್ನಡದ ಸರ್ವನಾಮಗಳು, ಭಾಷಾ ಪ್ರಕಾಶನ, ಮೈಸೂರು, ಪು.೧೦೫

೪. ಅದೇ, ಪು.೬೭

೫. ಅದೇ, ಪು.೬೮

೬. ಅದೇ ಪುಟ

೭. ಅದೇ, ಪು.೧೧೧

೮. ಡಾ. ಕೃಷ್ಣಪರಮೇಶ್ವರ ಭಟ್ಟ, ಕನ್ನಡ-ತೆಲುಗು ದ್ವಿಭಾಷಿಕತೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೫೭

□□

ಅಧ್ಯಾಯ ೫

ಆದೋನಿ ಕನ್ನಡದ ವಿಶಿಷ್ಟ ಪದಗಳು ಮತ್ತು ಪ್ರಯೋಗಾರ್ಥ

ಅಧ್ಯಾಯ ೫

ಆದೋನಿ ಕನ್ನಡದ ವಿಶಿಷ್ಟ ಪದಗಳು ಮತ್ತು ಪ್ರಯೋಗಾರ್ಥ

ಯಾವುದೇ ಒಂದು ಭಾಷೆ ಮುಖ್ಯವಾಗಿ ಎರಡು ವಿಧದಲ್ಲಿ ವಿಭಿನ್ನ ರೂಪ ತಾಳುವುದು ನೋಡಬಹುದಾಗಿದೆ. ೧. ಪ್ರಾದೇಶಿಕವಾಗಿ ೨. ಸಾಮಾಜಿಕವಾಗಿ ಸಾಮಾಜಿಕ ರೂಪವನ್ನು ನೋಡುವುದಕ್ಕಿಂತ ಮುಖ್ಯವಾಗಿ ಒಂದು ಭಾಷೆ ಬೇರೆ ಬೇರೆ ಕಾರಣಗಳಿಂದ ಪ್ರಾದೇಶಿಕವಾಗಿ ಹೇಗೆ ಬೇರೆ ಬೇರೆ ರೂಪ ಪಡೆಯುತ್ತದೆ ಎನ್ನುವುದನ್ನು ಕೆಳಗಿನ ವಿಶಿಷ್ಟ ಪದಗಳ ಮೂಲಕ ಚರ್ಚಿಸಲಾಗಿದೆ.

ಕರ್ನಾಟಕದಾದ್ಯಂತ ಬಹುಪಾಲು ಜನರು ಕನ್ನಡ ಭಾಷೆಯನ್ನು ಮಾತನಾಡಿದರೂ ಒಂದು ಪ್ರದೇಶದ ಕನ್ನಡ ಮತ್ತೊಂದು ಪ್ರದೇಶದ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. ಕೆಲವು ಸಲ ಒಂದು ಪ್ರದೇಶದ ಕನ್ನಡದ ಪದಗಳು ಮತ್ತೊಂದು ಪ್ರದೇಶದ ಕನ್ನಡಿಗರಿಗೆ ಸಂಪೂರ್ಣವಾಗಿ ಅರ್ಥವಾಗದೇ ಹೋಗುವ ಸಾಧ್ಯತೆಯುಂಟು. ಹೀಗೆ ಆಗಲು ಅನೇಕ ಕಾರಣಗಳಿವೆ. ಒಂದು ಕರ್ನಾಟಕದ ಗಡಿಪ್ರದೇಶದಲ್ಲಿ ತೆಲುಗು, ತಮಿಳು, ಮಲೆಯಾಳಿ, ತುಳು, ಕೊಂಕಣಿ, ಮರಾಠಿ ಭಾಷೆ ಮಾತನಾಡುವ ಜನರಿದ್ದಾರೆ. ಇಂಥ ಗಡಿನಾಡ ಕನ್ನಡಿಗರು ಬೇರೆ ಭಾಷಿಕರೊಂದಿಗೆ ವ್ಯವಹರಿಸಬೇಕಾಗುತ್ತದೆ. ಹಾಗಾಗಿ ತಾವು ಮಾತನಾಡುವ ಭಾಷೆಯಲ್ಲಿ ಸಹಜವಾಗಿ ಕೂಡುಕೊಳೆ ನಡೆಯುತ್ತದೆ. ಇಂತಹ ಸಂದರ್ಭದ ಕಾಲಾಂತರದಲ್ಲಿ ಒಂದು ಭಾಷೆ ತನ್ನ ಭಾಷೆಯ ಹಲವಾರು ಪದಗಳು ಮತ್ತೊಂದು ಭಾಷೆಗೆ ವರ್ಗಾಯಿಸುವ ಅಥವಾ ತನ್ನದಾಗಿಸಿಕೊಳ್ಳುವ ಕ್ರಿಯೆ ನಡೆಯುತ್ತದೆ. ಅತ್ಯಂತ ನಿಧಾನವಾಗಿ ಈ ಪ್ರಕ್ರಿಯೆ ನಡೆಯುತ್ತದೆ. ಇದು ತನ್ನದಾಗಿಸಿಕೊಂಡ ಮೇಲೆ ಆ ಭಾಷೆಯೇ ಆಗಿ ಹೋಗುತ್ತದೆ. ಆ ಪ್ರದೇಶದ ಭಾಷೆಯ ಸಹಜ ಬೇರೆಯ ಕ್ರಮವೂ ಆಗುತ್ತದೆ. ಇದು ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯಲ್ಲಿ ಒಂದೊಂದು ಹಂತದಲ್ಲಿ

ನಡೆಯುವುದರಿಂದ ಪ್ರದೇಶದಿಂದ ಪ್ರದೇಶಕ್ಕೆ ಒಂದೇ ಭಾಷೆಯ ಹಲವಾರು ರೂಪಗಳನ್ನು ಪಡೆದುಕೊಳ್ಳಬಹುದು. ಉದಾಹರಣೆಗೆ ಬೆಳಗಾವಿ, ಬಿಜಾಪುರ, ಬೀದರ ಜಿಲ್ಲೆಯ ಕೆಲವು ಭಾಗದ ಕನ್ನಡದಲ್ಲಿ ಮರಾಠಿ ಶಬ್ದಗಳು ಕಾಣಬಹುದು. ತೆಲುಗು ಭಾಷಿಕರ ಗಡಿಯಲ್ಲಿರುವ ಭಾಗದಲ್ಲಿ ತೆಲುಗು ಶಬ್ದಗಳು ಕನ್ನಡದಲ್ಲಿ ಹಾಸು ಹೊಕ್ಕಿರುವುದನ್ನು ನೊಡಬಹುದಾಗಿದೆ. ಆದೋನಿ ಕನ್ನಡದಲ್ಲಿ ಅಂತ ಒಂದು ವಿಶಿಷ್ಟ ಪದಗಳ ಪ್ರಯೋಗವು ಆಗಿರುವುದನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಆದೋನಿ ಕನ್ನಡ ಒಂದು ವಿಶಿಷ್ಟ ಪ್ರಾದೇಶಿಕ ಪ್ರಭೇದ ಹಾಗೆಯೇ ಆದೋನಿ ಪರಿಸರ ಒಂದು ಮಹತ್ವವಾದ 'ದ್ವಿಭಾಷಿಕ ಪರಿಸರ' ಎಂದು ನಿರ್ಧರಿಸಲು ಕೆಲವು ಹೊಸ ಪದಗಳ ಬಳಕೆಯನ್ನು ಗಮನಿಸಬಹುದು. ಓಸು, ಯೇಸು, ಯಸೊಂದು, ವಂಟುಂಟ್ಲೆ, ಉಂಬಾನ, ತಿಂಬಾನ, ಜಗ್ಗಿ, ಆಗದಿದ್ರೆಗಿನ, ಅವುಟ್ರನ, ಇವುಟ್ರನ, ಗೂಣ್‌ಮಕ್ಳು, ಯಣ್‌ಮಕ್ಳು, ರೊಕ್ಕ, ಕುಂದ್ರು, ನಿಂದ್ರು, ನಿಂತಗಮ್‌ತಾನ, ಕುಂತಗಮ್‌ತಾನ, ಯದಕ ಮುಂತಾದ ಪ್ರಾದೇಶಿಕ ಪ್ರಭೇದ ನಿರ್ವಹಿಸುವ ಪದಗಳಾಗಿ ಉಚ್ಚಾರಣೆಯಲ್ಲಿರುವುದು ಗಮನಿಸುವಂತಹ ಅಂಶ. ಆದೋನಿ ತೆಲುಗರ ಆಡಳಿತಕ್ಕೆ ಒಳಪಟ್ಟಿರುವುದರಿಂದ ಕೆಲವು ಪದಗಳು ತೆಲುಗು ಪ್ರಭಾವಕ್ಕೆ ಒಳಪಟ್ಟಿವೆ. ಈ ಹಿನ್ನೆಲೆಯಿಂದ ಒಕರೂಪಾಯಿ, ಡಬ್ಬು, ಪಿಳ್ಳೆ, ಪೊಗರು, ಎಮ್ಮೆ, ಸೆದ್ಯಂ, ಪಾಪಿಡಿ, ಉಡ್ಕು, ಬುರದ, ಕಮ್ಮಗ, ಕುನೆಮ್ಮನೆಂಗ, ಉರ್ಲಗಡ್ಡೆ, ಉಳ್ಳಾಗಡ್ಡೆ, ಟೆಂಗಿನಕಾಯಿ, ಮುಂತಾದ ಪದಗಳು ಆದೋನಿ ಕನ್ನಡದಲ್ಲಿ ಉಚ್ಚಾರಣೆಯಲ್ಲಿವೆ. ಈ ವಿಶಿಷ್ಟ ಪದಗಳು ಮತ್ತು ಅವುಗಳ ಪ್ರಯೋಗಾರ್ಥವನ್ನು ಉದಾಹರಣೆ ಸಹಿತ ವಿಶ್ಲೇಷಣೆ ಮಾಡಲಾಗಿದೆ.

* ಅಂಗೆ : ಬರಹದ ಕನ್ನಡದಲ್ಲಿ 'ಹಾಗೆ' ಎನ್ನುವ ಅರ್ಥವಿದೆ. ಆದೋನಿ ಕನ್ನಡದಲ್ಲಿ 'ಹ' ಕಾರ ಲೋಪವಾಗಿದೆ. ಜೊತೆಗೆ ಅನುಸ್ವರ ಬಂದು ಸೇರಿಕೊಂಡು ವಿಶಿಷ್ಟ ಪದವಾಗಿ ಬಳಕೆಯಲ್ಲಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

  ಉದಾ : ಬರಬ್ಯಾಡ ಅಂತ ಯೇಳಿದರೂ <u>ಅಂಗೆ</u> ಬರ್‌ತಾನ
  ಕೊಡಾಕಿಲ್ಲ ಅಂದರೆ ಗುಡ <u>ಅಂಗೆ</u> ಬಂದ್ ಕೇಳ್ತಾನ

* ಅಡ್ಕ : ಕೈಲಾಗದವನು 'ಹೇಡಿ' ಎನ್ನುವ ಅರ್ಥದಲ್ಲಿ ಈ ಪದವು ಆದೋನಿ ಕನ್ನಡದಲ್ಲಿ 'ಅಡ್ಕ' ಎಂದು ಉಚ್ಚಾರಣೆಯಲ್ಲಿದೆ. ಕನ್ನಡ ನಿಘಂಟುವಿನಲ್ಲಿ 'ಅಡಕವಂತ' ಎಂದರೆ ಸಂಯಮದಿಂದ

ವರ್ತಿಸುವವನು, ವಿಧೇಯ ಎನ್ನುವ ಅರ್ಥವನ್ನೊಳಗೊಂಡಿದೆ. ಆದರೆ ಆದೋನಿ ಕನ್ನಡದಲ್ಲಿ 'ಅಡಕ' ಎನ್ನುವ ಪದ ವ್ಯಂಗಾರ್ಥವನ್ನು ಪಡೆದಿದೆ.

ಉದಾ : ಲೇ ಅಡ್ಕ ನಿನ್ನ ಕೈಲಿ ಏನ್ ಕೆಲಸ ಆಗ್ತೈತೆತೆಲೆ.

* ಅತ್ತತಲಿ : ಬರಹದ ಕನ್ನಡದಲ್ಲಿ 'ಅತ್ತೆಯ ಹತ್ತಿರ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಅತ್ತತಲಿ' ಎಂದು ಬಳಕೆಯಾಗುತ್ತಿದೆ. 'ತಲಿ' ಎನ್ನುವ ವಿಶಿಷ್ಟ ಪ್ರತ್ಯಯ ಬಳಕೆಯಾಗುವುದು ಇಲ್ಲಿಯ ಕನ್ನಡದ ವೈಶಿಷ್ಟ್ಯ. 'ಅತ್ತೆ' ಎನ್ನುವ ಪದವು 'ಅತ್ತ' ಎಂದು ಬಳಕೆಯಾಗುವುದು ತೆಲುಗಿನ ಪ್ರಭಾವದಿಂದ ಬರಹದ ತೆಲುಗಿನಲ್ಲಿ ಅತ್ತೆಯನ್ನು 'ಅತ್ತ' ಎಂದು ಕರೆಯುತ್ತಾರೆ. ಆದ್ದರಿಂದ ಈ ಪದದಲ್ಲಿ ನುಡಿ ಬೆರಕೆ ಪ್ರಕ್ರಿಯೆಯನ್ನು ಕಾಣಬಹುದು.

ಉದಾ : ಅತ್ತತಲಿ ಉಳ್ಳಾಗಡ್ಡೆ ತಗಂಡ್ ಬಾ

ಅತ್ತತಲಿ ಇಪ್ಪತ್ತೊಂಬತ್ತು ರೂಪಾಯಿ ಇಸಕ

* ಅನುಕ : ಬರಹದ ಕನ್ನಡದಲ್ಲಿ 'ಅಂದುಕೋ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಅನುಕ' ಎಂದು ಬಳಕೆಯಾಗುತ್ತಿದೆ. ಇಲ್ಲಿ 'ದ' ಕಾರ ಲೋಪಗೊಂಡು 'ನ' ಕಾರ ಆಗಮವಾಗಿದೆ.

೧. ಇವಳನ್ನು ನಿಮ್ಮ ತಂಗಿ ಅನಕಂಡು ಬೇಸ್ ನೋಡಿಕ್ಯಾ.

೨. ಪರಮೇಶಿನ ನಿಮ್ಮ ತಮ್ಮ ಅನುಕ.

* ಅಯ್‌ದಾನ : ಬರಹದ ಕನ್ನಡದಲ್ಲಿ 'ಇದ್ದಾನೆ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ಅಯ್‌ದಾನ' ಎಂದು ಉಚ್ಚಾರಣೆಯಲ್ಲಿದೆ. ಇಲ್ಲಿ 'ಇ' ಕಾರದ ಸ್ಥಾನದಲ್ಲಿ 'ಅಯ್' ರೂಪವು ಬಂದು ಪದಮಧ್ಯ ಪರಿಸರದ ದಿತ್ವ ಲೋಪವಾಗಿದೆ. ಅಯ್‌ದಾನ ಎನ್ನುವ ಪದ ಬಳಕೆ ಆದೋನಿ ಕನ್ನಡದ ವೈಶಿಷ್ಟ್ಯ.

೧. ನಿಮ್ಮಪ್ಪ ಮನ್ಯಾಗ ಅಯ್‌ದಾನ ಇಲ್ಲ.

೨. ನೀನ್ ಅಯ್‌ದೀಯ ಅಂತ ಮನಿಗೆ ವೋಗಿದ್ವೆ.

* ಅವುಟು : ಬರಹದ ಕನ್ನಡದಲ್ಲಿ ಪಟಾಕಿ, ಸ್ಫೋಟಕ ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ ಅವುಟು, ಬಾಣ ಎಂದು ಉಚ್ಚಾರಣೆಯಲ್ಲಿದೆ. ಅವುಟು ಎನ್ನುವ ವಿಶಿಷ್ಟ ಪದ ಬಳಕೆಯಾಗುತ್ತಿರುವುದು ಇಲ್ಲಿ ವೈಶಿಷ್ಟ್ಯ.

೧. ಮೆರಣಿಗೆ ಮಾಡಾಕ ಮುಂಚೆ ಅವುಟ ಬಿಡ್ತಾರ.

೨. ಗೌರಿ ಅಬ್ಬಕ ಬಾಣ ಬಿಡ್ತಾರ.

* ಅವುಟ್ರನ : 'ಅವುಟ್ರನ' ಎನ್ನುವ ಪದವು ನಾಮಪದದಲ್ಲಿ ಮಾತ್ರ ಬಳಕೆಯಲ್ಲಿದೆ. ಬರಹದ ಕನ್ನಡದಲ್ಲಿ ಈ ಪದ 'ಅವುಗಳನ್ನು' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. 'ಅವು' ಎನ್ನುವ ಪದ ಸಾಮಾನ್ಯವಾಗಿ ಬರಹದ ಕನ್ನಡ ಹಾಗೂ ಆದೋನಿ ಕನ್ನಡದಲ್ಲಿ ಬಳಕೆಯಲ್ಲಿದೆ. ಆದರೆ ಬಹುವಚನ ಪ್ರತ್ಯಯಗಳ ಬದಲಾಗಿ ಆದೋನಿ ಕನ್ನಡದಲ್ಲಿ 'ಟ್ರನ್' ಎನ್ನುವ ವಿಶಿಷ್ಟ ರೂಪ ಬಳಕೆಯಲ್ಲಿರುವುದು ಇಲ್ಲಿಯ ವಿಶೇಷ.

ಉದಾ : ಅವುಟ್ರನ್ ಇಡ್ಕಂಡು ಇಲ್ಲಿ ಕಟ್ಟ್ಯಾಕು.

ಅವುಟ್ರನ್ ಗಲಾಟೆ ಮಾಡಬ್ಯಾಡಂತ ಹೇಳು.

* ಅಲ್ಲೆಲಿಂದ : ಬರಹದ ಕನ್ನಡದಲ್ಲಿ 'ಅಲ್ಲಿಂದ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ ಅಲ್ಲೆಲಿಂದ ಎಂದು ಬಳಕೆಯಲ್ಲಿದೆ. 'ಇಂದ' ಎನ್ನುವ ತೃತೀಯ ವಿಭಕ್ತಿಗೆ ಬದಲಾಗಿ 'ಲಿಂದ' ಎನ್ನುವ ವಿಶಿಷ್ಟ ರೂಪ ಬಳಕೆಯಲ್ಲಿರುವುದು ಇಲ್ಲಿಯ ವೈಶಿಷ್ಟ್ಯ.

ಉದಾ : ಕೆಲ್ಸಾದ ಮ್ಯಾಲೆ ಅಲ್ಲೆಲಿಂದ ಸಿದಾ ಮನೆಗೆ ಬಾ.

* ಅಳ್ಳಲಿ : ಬರಹದ ಕನ್ನಡದಲ್ಲಿ 'ಅರಳಲಿ' ಎನ್ನುವ ಪದ ಆದೋನಿ ಕನ್ನಡದಲ್ಲಿ 'ಅಳ್ಳಲಿ' ಎಂದು ಬಳಕೆಯಲ್ಲಿದೆ. ಇಲ್ಲಿ 'ರ' ಕಾರ ಲೋಪಗೊಂಡು ಸಜಾತೀಯ ದಿತ್ವ ಆಗಮವಾಗಿರುವುದು ವಿಶಿಷ್ಟ್ಯವಾಗಿದೆ.

ಉದಾ : ೧. ಅನ್ನ ಇನ್ನು ಸ್ವಲ್ಪ ಅಳ್ಳಲಿ.

೨. ಊವ ಸರೀಗೆ ಅಳ್ಳಿಲ್ಲ.

* ಆತಡವು : ಬರಹದ ಕನ್ನಡದಲ್ಲಿ 'ಆಸಲ' ಎನ್ನುವ ಪದಕ್ಕೆ ಆದೋನಿ ಕನ್ನಡದಲ್ಲಿ 'ಆ ತಡವು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಆದರೆ ಬರೇ 'ತಡ' ಎನ್ನುವ ಪದವು ಬೇರೆ ಅರ್ಥವನ್ನು ಸೂಚಿಸುತ್ತದೆ. 'ತಡ' ಎಂದರೆ ವಿಳಂಬ ಎಂದು ಅರ್ಥ. 'ತಡುವು' ಎನ್ನುವ ಪದ 'ತಂಟೆ' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ.

ತಡ, ತಡವು ಮತ್ತು ಆತಡವು ಪದಗಳು ವಿಶಿಷ್ಟ ರೀತಿಯಲ್ಲಿ ವಿಶಿಷ್ಟ ಅರ್ಥಗಳನ್ನು ಪಡೆದು ಆದೋನಿ ಕನ್ನಡದಲ್ಲಿ ಬಳಕೆಯಲ್ಲಿರುವುದು ವೈಶಿಷ್ಟ್ಯವಾಗಿದೆ.

ಉದಾ : ೧. ಆತಡವು ನಿಮ್ಮೂರಿಗೆ ಬರಾಕ ಆಗಲಿಲ್ಲ.

೨. ಬಸ್ಸು ಬರಾದು ಇನ್ನೂ ತಡ

೩. ಅವನ ತಡವಕ ವೋಗಬ್ಯಾಡ

* ಇಕ್ಕು : ಬರಹದ ಕನ್ನಡದಲ್ಲಿ 'ನೀಡು, ಇರಿಸು' ಎನ್ನುವ ಪದಗಳಿಗೆ ಪರ್ಯಾಯವಾಗಿ ಆದೋನಿ ಕನ್ನಡದಲ್ಲಿ 'ಇಕ್ಕು' ಎನ್ನುವ ಪದ ಬಳಕೆಯಲ್ಲಿದೆ.

ಉದಾ : ಬಾನ ಇಕ್ಕತ್ತೀನ್ ಬಾ

* ಇಡ್ಕಂಡು : ಬರಹದ ಕನ್ನಡದಲ್ಲಿ 'ಇಡಿದುಕೊಂಡು' ಎನ್ನುವ ಪದಕ್ಕೆ ಆದೋನಿ ಕನ್ನಡದಲ್ಲಿ 'ಇಡ್ಕಂಡು' ಎನ್ನುವ ವಿಶಿಷ್ಟ ಪದವನ್ನು ಬಳಕೆ ಮಾಡುತ್ತಿದ್ದಾರೆ. ಇಲ್ಲಿ ಪದಮಧ್ಯ ಘರಿಸದ 'ದ' ಕಾರ ಲೋಪಗೊಂಡು 'ಓ' ಕಾರ 'ಅ' ಕಾರವಾಗಿ ಮಾರ್ಪಟ್ಟಿದೆ.

ಉದಾ : ೧. ಎತ್ತುಗಳ್‌ನ ಇಡ್ಕಂಡು ಬಂದು ಕಟ್ಟ್ಯಾಕು.

೨. ಅವುಟ್ರನ ಇಡ್ಕಂಡ ಬರ್ರಿ ಇಲ್ಲಿ.

* ಇವುಟ್ರನ : 'ಇವುಟ್ರನ' ಎನ್ನುವ ಪದವು ನಾಮಪದದಲ್ಲಿ ಮಾತ್ರ ಬಳಕೆಯಲ್ಲಿದೆ. ಬರಹ ಕನ್ನಡದಲ್ಲಿ ಈ ಪದ 'ಇವುಗಳನ್ನು' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. 'ಇವು' ಎನ್ನುವ ಪದ ಸಾಮಾನ್ಯವಾಗಿ ಬರಹ ಹಾಗೂ ಆದೋನಿ ಕನ್ನಡದಲ್ಲಿ ಬಳಕೆಯಲ್ಲಿದೆ. ಆದರೆ ಬಹುವಚನ ಪ್ರತ್ಯಯಗಳು ಬದಲಾಗಿ 'ಟ್ರನ್' ಎನ್ನುವ ವಿಶಿಷ್ಟ ರೂಪ ಬಳಕೆಯಲ್ಲಿರುವುದು ಇಲ್ಲಿಯ ವಿಶೇಷ.

ಉದಾ : ಇವುಟ್ರನ್ ನಿನ್ನತಾಗ ಇಟಕಾ ಆಮ್ಯಾಲೆ ಬಂದು ತಂಗಂಡೋಗ್ತೀನಿ.

* ಇಸ್ಕ : ಬರಹದ ಕನ್ನಡದಲ್ಲಿ 'ತೆಗೆದುಕೊಳ್ಳು' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಇಸ್ಕ' ಎಂದು ಬಳಕೆಯಾಗುತ್ತಿದೆ.

ಉದಾ : ನಿಂಗೆ ರೊಕ್ಕ ಬೇಕಂದರೆ ಅವನ್ತಾಗ ಇಸ್ಕ.

* ಇಲಿಸಿ : ಬರಹದ ಕನ್ನಡದ 'ಇಲಿ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಇಲಿಸಿ' ಎಂದು ಉಚ್ಚಾರಣೆಯಲ್ಲಿದೆ. ಇಲಿ ಎನ್ನುವ ಪದಕ್ಕೆ 'ಸ' ಕಾರ ಬಂದು ಸೇರಿ ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ನಮ್ಮ ಮನ್ಯಾಗ ಇಲಿಸಿ ನಗ್ಗ ಅಯ್ದಾವ.

* ಈಸು : ಬರಹದ ಕನ್ನಡದಲ್ಲಿ 'ಈಜು' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಈಸು' ಎಂದು ಉಚ್ಚಾರಣೆಯಲ್ಲಿದೆ. ಇಲ್ಲಿ 'ಜ' ಕಾರಕ್ಕೆ ಪರ್ಯಾಯವಾಗಿ 'ಸ' ಬಂದು ಸೇರಿ ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ನಂಗೆ ಈಸು ಬರಾದಿಲ್ಲ.

* ಉಡ್ಕು : ಬರಹದ ಕನ್ನಡದಲ್ಲಿ ಈ ಪದಕ್ಕೆ 'ಕುದಿ' ಎಂದು ಅರ್ಥ. ಆದರೆ ಆದೋನಿ ಕನ್ನಡದಲ್ಲಿ 'ಉಡ್ಕು' ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲೂ 'ಕುದಿ, ಬಿಸಿ' ಎನ್ನುವುದಕ್ಕೆ 'ಉಡುಕು' ಎಂದು

ಬಳಕೆಯಲ್ಲಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ ಆದೋನಿ ಕನ್ನಡದಲ್ಲಿ 'ಉಡ್ಕು' ಎನ್ನುವ ಪದ ಉಚ್ಚಾರಣೆಯಲ್ಲಿದೆ.

ಉದಾ : ಬಿಸಿಲ ಕಾಲದಾಗಾ ಬಸ್ಸಿನ್ಯಾಗ ಬಾಳ ಉಡ್ಕು ಇರ್‍ತೈತೆ.

* ಉಣಬಾ : ಬರಹದ ಕನ್ನಡದಲ್ಲಿ ಈ ಪದಕ್ಕೆ 'ಊಟ ಮಾಡೋಣ ಬಾ' ಎನ್ನುವ ಅರ್ಥ ಇದೆ. ಆದರೆ ಆದೋನಿ ಕನ್ನಡದಲ್ಲಿ ಈ ಪದವನ್ನು ಭಿನ್ನವಾಗಿ ಬಳಕೆ ಮಾಡುವುದನ್ನು ನಾವು ಕಾಣಬಹುದು. ಉಣ್ಣು, ಉಂಬು, ತಿಂಬು ಎನ್ನುವ ಮೂರು ಪದಗಳು ಊಟದ ಅರ್ಥವನ್ನು ಸೂಚಿಸುತ್ತವೆ.

ಉದಾ : ೧. ಉಣ್ಣಾನ್ ಬಾ, ೨. ಉಂಬಾನ್ ಬಾ,

೩. ತಿಂಬಾನ್ ಬಾ

ಉಣ್ಣಾನ್ ಬಾ ಮತ್ತು ಉಂಬಾನ್ ಬಾ ಎನ್ನುವ ಪದಗಳು 'ಊಟ ಮಾಡೋಣ ಬಾ' ಎನ್ನುವ ಅರ್ಥವನ್ನು ಸೂಚಿಸುತ್ತವೆ. 'ತಿಂಬಾನ್ ಬಾ' ಎನ್ನುವ ಪದವು 'ತಿನ್ನೋಣ ಬಾ' ಎನ್ನುವ ಅರ್ಥವನ್ನು ಸೂಚಿಸುತ್ತದೆ. ಈ ಮೂರು ಪದಗಳು ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿರುವುದು ಒಂದು ವೈಶಿಷ್ಟ್ಯ.

* ಉರ್ಲಗಡ್ಡೆ : ಬರಹದ ಕನ್ನಡದಲ್ಲಿ 'ಆಲುಗಡ್ಡೆ' ಎನ್ನುವ ಪದವು ಆದೋನಿ ಕನ್ನಡದಲ್ಲಿ ಉರ್ಲಗಡ್ಡೆ ಎಂದು ಬಳಕೆಯಾಗುತ್ತಿದೆ. ಈ 'ಉರ್ಲಗಡ್ಡ' ಎನ್ನುವ ಪದವು ತೆಲುಗಿನ ಪ್ರಭಾವದಿಂದ ಉಚ್ಚಾರಣೆಯಲ್ಲಿದೆ. ಏಕೆಂದರೆ ವ್ಯವಹಾರಿಕ' ತೆಲುಗಿನಲ್ಲಿ 'ಉರ್ಲಗಡ್ಡೆ' ಎಂದು ಬಳಕೆಗೊಳ್ಳುತ್ತಿದೆ. ಅದೇ ಪದವು ಆದೋನಿ ಕನ್ನಡದಲ್ಲಿ 'ಉರ್ಲಗಡ್ಡೆ' ಎಂದು ಉಚ್ಚಾರಣೆಯಲ್ಲಿದ್ದು, ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಉದಾ : ಉರ್ಲಗಡ್ಡೆ ಯಂಗ ಕೆ.ಜಿ.

* ಉಳ್ಳಾಗಡ್ಡೆ : ಬರಹದ ಕನ್ನಡದಲ್ಲಿ 'ಈರುಳ್ಳಿ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಉಳ್ಳಾಗಡ್ಡೆ' ಎಂದು ಉಚ್ಚಾರಣೆಯಲ್ಲಿದೆ.

ಉದಾ : ಉಳ್ಳಾಗಡ್ಡೆ ಸೋವಿ ಸಿಗತಾವಂತ ವೋಗಿ ತರಬೇಕು.

* ಉಳ್ಕಿದ್ದು : ಬರಹದ ಕನ್ನಡದಲ್ಲಿ 'ಉಳಿದದ್ದು' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ 'ಉಳ್ಕಿದ್ದು' ಎಂದು ಉಚ್ಚಾರಣೆಯಲ್ಲಿದೆ. 'ದ' ಕಾರದ ಬದಲು 'ಕ' ಕಾರ ಆದೇಶವಾಗಿ ಉಚ್ಚಾರಣೆಯಲ್ಲಿರುವುದು ಆದೋನಿ ಕನ್ನಡದ ವೈಶಿಷ್ಟ್ಯ.

ಉದಾ : ಈಗ ಅಡ್ವಾನ್ಸ್ ರೊವಟು ಕೊಡು. ಉಳ್ಕಿದ್ದು ಆಮ್ಯಾಲೆ ಕೊಡುವಂತಿ.

* ಊವಿನ್ಯಾಗ : ಬರಹದ ಕನ್ನಡದಲ್ಲಿ 'ಹೂವಿನಲ್ಲಿ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಊವಿನ್ಯಾಗ' ಎಂದು ಬಳಕೆಯಲ್ಲಿದೆ. 'ಹೂವು' ಎನ್ನುವ ಪದದಲ್ಲಿ 'ಹ' ಕಾರ ಲೋಪಗೊಂಡು 'ಉ' ಆಗಮವಾಗಿದೆ. 'ಅಲ್ಲಿ' ಎನ್ನುವ ಸಪ್ತಮಿ ವಿಭಕ್ತಿಗೆ ಪರ್ಯಾಯವಾಗಿ 'ಆಗ' ಎನ್ನುವ ಪ್ರತ್ಯಯ ಬಳಕೆಯಲ್ಲಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಉದಾ : ಪೀರ್ಲ ದೇವರನ ಊವಿನ್ಯಾಗ ಮುಳುಗಿಸಿದ್ದರು.

* ಏಗತಾನ : ಬರಹದ ಕನ್ನಡದಲ್ಲಿ 'ನಿರ್ವಹಿಸುತ್ತಾನೆ' ಎನ್ನುವ ಅರ್ಥ ಸೂಚಿಸುವ ಈ ಪದ ಆದೋನಿ ಕನ್ನಡದಲ್ಲಿ 'ಏಗತಾನ' ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗಿನ ಪ್ರಭಾವದಿಂದ ಈ ಪದವು ಆದೋನಿ ಕನ್ನಡದಲ್ಲಿ ಸೇರ್ಪಡೆಯಾಗಿದೆ. 'ನಿರ್ವಹಿಸುತ್ತಾನೆ' ಎನ್ನುವುದನ್ನು ತೆಲುಗಿನಲ್ಲಿ 'ಏಗ್‌ತಾಡು' ಎಂದು ಬಳಕೆ ಮಾಡುತ್ತಾರೆ. ಅದೇ ಪದ ಆದೋನಿ ಕನ್ನಡದಲ್ಲಿ ಉಚ್ಚಾರಣೆಯಲ್ಲಿರುವುದು ಗಮನಿಸುವಂತಹ ಅಂಶ.

ಉದಾ : ಅವನ ಏಣ್ತಿ ರೊಂಕಲಾಡಿ, ಯಂಗ ಏಗತಾನ ಆಕಿತಾಗ.

* ಏನೈತೆ : ಬರಹದ ಕನ್ನಡದಲ್ಲಿ 'ಏನಿದೆ' ಎನ್ನುವ ಅರ್ಥ ಸೂಚಿಸುವ ಈ ಪದ ಆದೋನಿ ಕನ್ನಡದಲ್ಲಿ 'ಏನೈತೆ' ಎಂದು ಉಚ್ಚಾರಣೆಯಲ್ಲಿದೆ. ಪದಮಧ್ಯ ಪರಿಸರದಲ್ಲಿ 'ಐ' ಕಾರ ಆಗಮವಾಗಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಉದಾ : ನಿನ್ನತಾಗ ಏನೈತೆ ಅಂತ ನಂಗೆ ಗೊತ್ತೇಳು.

* ಕಕ್ಕ,ಕಕ್ಕಿ : ಬರಹದ ಕನ್ನಡದಲ್ಲಿ ಚಿಕ್ಕಪ್ಪ, ಚಿಕ್ಕಮ್ಮ ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ ಕಕ್ಕ. ಕಕ್ಕಿ ಎಂದು ಉಚ್ಚಾರಣೆಯಲ್ಲಿದೆ.

ಉದಾ : ನಮ್ಮ ಕಕ್ಕ ಕಕ್ಕಿ ಇಬ್ರೂ ತೇರಿಗೆ ವೋದರು.

* ಕದಿಲೋಗ : ಬರಹದ ಕನ್ನಡದಲ್ಲಿ 'ಕದಲು' ಎಂದರೆ ಸರಿಸುವುದು, ಸ್ಥಾನ ಬದಲಾಯಿಸುವುದು. ಆದರೆ ಆದೋನಿ ಕನ್ನಡದಲ್ಲಿ 'ಕದಿಲೋಗ' ಎಂದು ಬೈಗುಳ ರೂಪ ಪಡೆದುಕೊಂಡಿದೆ. 'ಕದಲು ಹೋಗು' ಎಂದರೆ ಸುಡಿಗಾಡಿಗೆ ಕದಲು ಎಂಬ ಅರ್ಥದಲ್ಲಿ ಬೈಗುಳ ಸ್ವರೂಪ ಪಡೆದುಕೊಂಡಿದೆ. ನೇರವಾಗಿ ಸಾಯು ಎನ್ನದೇ ಪರೋಕ್ಷವಾಗಿ ಸಾಯು ಎಂದು ಅರ್ಥವನ್ನು ಸೂಚಿಸುವ ಬೈಗುಳ ರೂಪದಲ್ಲಿ ಬಳಕೆಯಲ್ಲಿದೆ.

ಉದಾ : ನಿನ್ನ ಬಂಡ ಬಾಳೇವು ಸಾಕಾಗೈತೆ ಎಲ್ಲಿನ್ನ ಕದಿಲೋಗ.

* ಕಮ್ಮಗ : ಕಮ್ಮಗೆ ಎನ್ನುವ ಪದಕ್ಕೆ ನಿಘಂಟು (ಸ.ಕ.ನಿ.ಕ.ಸಾ.ಪ.)ವಿನಲ್ಲಿ ಸುಗಂಧವಾಗಿ, ಸುವಾಸನೆಯಿಂದ ಕೂಡಿದ, ಸುಖವಾಗಿ, ಹಾಯಾಗಿ ಎನ್ನುವ ಅರ್ಥಗಳನ್ನೊಳಗೊಂಡಿದೆ. ಆದೋನಿ ಕನ್ನಡದಲ್ಲಿ ಕಮ್ಮಗ ಎನ್ನುವ ಪದವು ಎರಡು ಅರ್ಥದಲ್ಲಿ ಬಳಕೆಯಲ್ಲಿದೆ. ಚೆನ್ನಾಗಿದೆ ಎಂದು ಹೇಳುವುದಕ್ಕೆ ಮತ್ತು ಚೆನ್ನಾಗಿಲ್ಲ ಎಂದು ವ್ಯಂಗ್ಯವಾಗಿ ಹೇಳುವುದಕ್ಕೆ ಎರಡೂ ಅರ್ಥದಲ್ಲಿ ಕಮ್ಮಗ ಎನ್ನುವ ಪದ ಬಳಸುವುದನ್ನು ಗಮನಿಸಬಹುದು.

ಉದಾ : ೧. ರೆಟ್ಟಿ ಚಟ್ನಿ ಕಮ್ಮಗ ಇತ್ತು.

೨. ಕಮ್ಮಗದಿಯೋಳ್ ಕನ್ನಡ್ಯಾಗ ಮಕ ನೋಡಿಕ್ಯ.

* ಕಮ್ಮಿ : ಬರಹ ಕನ್ನಡದಲ್ಲಿ 'ಕಡಿಮೆ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ಕಮ್ಮಿ' ಎಂದು ಉಚ್ಚಾರಣೆಯಾಗುತ್ತಿದೆ. ಇಲ್ಲಿ 'ಡ' ಕಾರ ಲೋಪವಾಗಿದೆ. ಆದೋನಿ ಕನ್ನಡದಲ್ಲಿ ಒಂದೇ ಪರಿಸರದಲ್ಲಿ ಒಂದೇ ವ್ಯಕ್ತಿಯಲ್ಲಿ ಎರಡೂ ಪದಗಳೂ ಬಳಕೆಯಾಗುತ್ತಿರುವುದು ಒಂದು ವಿಶೇಷ.

ಉದಾ : ಮೊದಲೇ ಕಡಿಮೆ ಏಳೀನಿ, ನೀನು ಅದರಾಗ ಕಮ್ಮಿ ಕೇಳ್ತೀಯಲ್ಲ.

* ಕಾಟಿಗರು : ಬರಹದ ಕನ್ನಡದಲ್ಲಿ 'ಕೆಳವರ್ಗ ಕೆಳಜಾತಿ' ಎಂದು ಉಚ್ಚಾರಣೆಗೊಳ್ಳುವ ಈ ಪದವು ಆದೋನಿ ಕನ್ನಡದಲ್ಲಿ ಕಾಟಿಗರು ಎಂದು ಉಚ್ಚಾರಣೆಗೊಳ್ಳುತ್ತಿದೆ. (ಸಿರಿಗನ್ನಡ ಅರ್ಥಕೋಶ, ಡಾ. ಶಿವರಾಮಕಾರಂತ) 'ಕಾಟು' ಎಂದರೆ ಅಶಿಕ್ಷಿತ, ಅಸಂಸ್ಕೃತ ಎನ್ನುವ ಅರ್ಥವನ್ನೊಳಗೊಂಡಿದೆ. ತೆಲುಗಿನಲ್ಲಿ ಮಾಂಸವನ್ನು ಕಡಿದು ಜೀವನ ನಡೆಸುವವರನ್ನು 'ಕಟ್ಟುವಾಳ್ಳು' ಎಂದು ಬಳಕೆ ಮಾಡುವುದಿದೆ. 'ಕಾಟಿಗರು' ಎಂದರೆ ಅಶಿಕ್ಷಿತರು ಹಿಂಸೆಯನ್ನು ಮಾಡುವವರು, ಮಾಂಸವನ್ನು ತಿನ್ನುವವರು ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಉದಾ : ಅಯಿತ್‌ವಾರ ಬಂದರೆ ಸಾಕು ಕಾಟಿಗರು ಮಾಂಸದ ಅಂಗ್ಡಿ ಮುಂದೆ ಮುತ್ತಕಂಡಿರ್ತಾರ.

* ಕುನೆಮ್ಮನಂಗ : ಬರಹ ಕನ್ನಡದಲ್ಲಿ 'ಮುದ್ದಾಗಿ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ಕುನೆಮ್ಮನಂಗ' ಎನ್ನುವ ಪದವು ಬಳಕೆಯಲ್ಲಿದೆ. ಈ ಕುನೆಮ್ಮನಂಗ ಎನ್ನುವ ಪದ ತೆಲುಗಿನ ಪ್ರಭಾವದಿಂದ ಬಳಕೆಗೊಳ್ಳುತ್ತಿದೆ. ಏಕೆಂದರೆ 'ಮುದ್ದಾಗಿ' ಎನ್ನುವುದಕ್ಕೆ ವ್ಯವಹಾರಿಕ ತೆಲುಗಿನಲ್ಲಿ 'ಕುನೆಮ್ಮಗ' ಎನ್ನುವ ಪದ ಬಳಕೆಯಲ್ಲಿದೆ. ಆದ್ದರಿಂದ ಆದೋನಿ ಕನ್ನಡದಲ್ಲಿ

ಕುನೆಮ್ಮನಂಗ ಎನ್ನುವ ವಿಶಿಷ್ಟ ಪದ ಉಚ್ಚಾರಣೆಯಲ್ಲಿದೆ.

ಉದಾ : ಆ ಕೂಸು ಎಷ್ಟು ಕುನೆಮ್ಮನಂಗ ಅಯ್‌ತೆ ನೋಡು.

* ಕುಂದ್ರು/ಕುಂತ್ಗ : ಬರಹದ ಕನ್ನಡದಲ್ಲಿ 'ಕುಳಿತುಕೋ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ಕುಂದ್ರು' 'ಕುಂತ್ಗ' ಎಂದು ಬಳಕೆಯಾಗುತ್ತಿವೆ. ಅದೇ ರೀತಿ 'ನಿಂತುಕೊಳ್ಳು' ಎನ್ನುವುದಕ್ಕೆ ನಿಂದ್ರು, ನಿಂತ್ಗ ಎನ್ನುವ ಪದಗಳು ಬಳಕೆಯಾಗುತ್ತಿವೆ.

ಉದಾ : ೧. ಯವಾಗ್ ಬಂದ್ಯಾ ಮಾವ ಬಾ ಕುಂತ್ಗ

೨. ಮಂಚದ ಮ್ಯಾಲೆ ಕುಂದ್ರು

೩. ಅಲ್ಲೆ ನಿಂತಗಾ ಬರ್‍ತೀನಿ

* ಕೆ.ಟಿ. : ಆದೋನಿ ಕನ್ನಡದಲ್ಲಿ ವಿಶಿಷ್ಟವಾಗಿರತಕ್ಕಂತ ಪದ ಈ ಕೆ.ಟಿ. ಹಳ್ಳಿಯ ಚಹಾದಂಗಡಿಗಳಿಗೆ ಹೋಗಿ ಗಮನಿಸಿದರೆ ಎಲ್ಲಾ ವಯಸ್ಸಿನ ಪುರುಷ ಮತ್ತು ಸ್ತ್ರೀಯರಲ್ಲಿ ಈ ಪದ ಬಳಕೆಯಲ್ಲಿದೆ. ಕೆ.ಟಿ. ಅಂದರೆ ಏನು ಎಂದು ಸೂಕ್ಷ್ಮವಾಗಿ ಗಮನಿಸಿದರೆ ಕುತೂಹಲವುಂಟು ಮಾಡುವಂತಹ ವಿಚಾರವಾಗಿದೆ. 'ಕಡಕ್' ಎಂದರೆ Strong ಎಂದು ಅರ್ಥ. ಇದು ಬಾದಾಮಿ ಉಪಭಾಷೆಯಲ್ಲಿ ಬಳಕೆಯಾಗುತ್ತಿದೆ. ಮರಾಠಿಯಲ್ಲಿ ಕಡಕ್ ಎಂದರೆ ಬಿಸಿ (Hot) ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. ಟೀ ಎಂದರೆ ಚಹಾ ಎಂದು ಅರ್ಥ. ಕಡಕ್ ಟೀ ಕೊಡು ಎನ್ನುವ ಅರ್ಥದಲ್ಲಿ ಕೆ.ಟಿ. ಕೊಡು ಎಂದು ಆದೋನಿ ಕನ್ನಡದಲ್ಲಿ ಬಳಸುತ್ತಿರಬಹುದು. (ವಾರಿ ಜಿ.ಎಂ. ೨೦೦೦ ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ, ಪುಟ ೯೫)

ಉದಾ : ೧. ಕೆ.ಟಿ. ಬೇಕಾ?

೨. ಇಲ್ಲಿ ಎಲ್ಲು ಕೆ.ಟಿ. ಕೊಡಪಾ.

* ಕೊಡಪಾನ/ಅರವಿ : ಬರಹದ ಕನ್ನಡದಲ್ಲಿ 'ಬಿಂದಿಗೆ' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ ಕೊಡಪಾನ ಮತ್ತು ಅರವಿ ಎಂದು ಬಳಕೆಗೊಳ್ಳುತ್ತಿದೆ.

ಉದಾ : ಒಂದು ಕೊಡಪಾನ ನೀರು ಕೊಡ್ರಿ.

ಒಂದೆಲ್ನು ಅರವಿ ನೀರ್ ತಂದಾರೆ ಬರ್ತಿನಿ.

* ಕೌದಿ : ಹಳೆಯ ಬಟ್ಟೆಗಳಿಂದ, ಸೀರೆಗಳಿಂದ ತಯಾರಿಸಿದ ರಗ್ಗು. ಇದನ್ನು ಹಾಸಿಕೊಳ್ಳಬಹುದು, ಹೊದ್ದುಕೊಳ್ಳಬಹುದು. ಈ ಕೌದಿಯನ್ನು ಹೊಲೆಯುವ ವೃತ್ತಿ ಹೆಚ್ಚಾಗಿ ಜೋಗಿ ಜನಾಂಗದವರದು. ಇತ್ತೀಚೆಗೆ ಕೌದಿಯನ್ನು ಉಪಯೋಗಿಸುವವರು ಹೊಲೆಯುವುದನ್ನು ಕಲಿತಿದ್ದಾರೆ. ಕೌದಿ ಆದೋನಿ ಕನ್ನಡದಲ್ಲಿ ಬಳಕೆಯಾಗುತ್ತಿರುವ ವಿಶಿಷ್ಟ ಪದ.

ಉದಾ : ಕೌದಿ ಆಸ್ಕಕ್ಯಂಡು ಮಕ್ಕೊಂಡರೆ ಸಳಿ ಆಗಾದಿಲ್ಲಾ.

* ಗಡಗಡ/ಬಿರಿಬಿರಿ/ಬಡಬಡ : ಇವು ಆದೋನಿ ಕನ್ನಡ ಉಚ್ಚಾರಣೆಯಲ್ಲಿವೆ. ಈ ಪದಗಳೆಲ್ಲಾ ತೀವ್ರಾರ್ಥವನ್ನು ತಿಳಿಸುವ ಅವ್ಯಯಗಳಾಗಿ ಬಳಕೆಯಲ್ಲಿವೆ.

ಉದಾ : ಸಿನಿಮಾಕ ವೋಗಾನ ಬಡಬಡ ಬಾ.

ಗಡಗಡ ಬಾ ಬಸ್ ವೋಗತ್ತೈತೆ.

ಬಿರಿಬಿರಿ ಬಾ ವತ್ತಾಗತ್ತೈತಿ.

* ಗಡಾರೆ : ಬರಹದ ಕನ್ನಡದಲ್ಲಿ 'ಹಾರೆ' ಎನ್ನುವ ಪದಕ್ಕೆ ಆದೋನಿ ಕನ್ನಡದಲ್ಲಿ 'ಗಡಾರೆ' ಗಡಾರಿ ಎಂದು ಉಚ್ಚಾರಗೊಳ್ಳುತ್ತಿದೆ.

ಉದಾ : ಬುನಾದಿ ತೋಡಾಕ ನಿಮ್ಮನ್ಯಾಗ ಗಡಾರಿ ಇದ್ರ ತಗಂಬಾ.

* ಗೋಣಮಕ್ಳು : ಬರಹದ ಕನ್ನಡದಲ್ಲಿ 'ಗಂಡು ಮಕ್ಕಳು' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಗೋಣ್‌ಮಕ್ಳು' ಎಂದು ಉಚ್ಚಾರಣೆ ಗೊಳ್ಳುತ್ತಿದೆ. ಇಲ್ಲಿ 'ಡ' ಕಾರ ಲೋಪವಾಗಿ ಅದೇ ವರ್ಗದ

ಪಂಚಮಾಕ್ಷರ ಆದೇಶವಾಗಿ ಉಚ್ಚಾರಣೆ ಆಗುತ್ತಿರುವುದು ವೈಶಿಷ್ಟ್ಯವಾಗಿದೆ.

ಉದಾ : ಕೆಲ್ಸಕ್ ಗೋಣ್‌ಮಕ್ಳು ಯೇಸ್ ಜನ ಬಂದಿದ್ರು.

* ಗಲ್ಗಂಟೆ : ಎತ್ತಿನ ಕೊರಳಿಗೆ ಕಟ್ಟುವ ಗಂಟೆಯನ್ನು ಗಲ್ಗಂಟೆ ಎಂದು ಆದೋನಿ ಕನ್ನಡದಲ್ಲಿ ಬಳಕೆಯಲ್ಲಿದೆ. ಇದೇ ಗಂಟೆ ದೇವರ ಗುಡಿಯಲ್ಲಿದ್ದರೆ ಗಲ್ಗಂಟೆ ಎಂದು ಬಳಸುವುದಿಲ್ಲ. ಬರೇ ಗಂಟೆ ಎಂದು ಉಚ್ಚರಿಸುತ್ತಾರೆ. ಮದುವೆ ಮತ್ತು ಜಾತ್ರೆಯ ಸಂದರ್ಭದಲ್ಲಿ ಎತ್ತುಗಳಿಗೆ ಸಿಂಗಾರ ಮಾಡಿ ಗಲ್ಗಂಟೆಗಳನ್ನು ಕಟ್ಟಿಕೊಂಡು ಹೋಗುತ್ತಾರೆ. ಎತ್ತುಗಳು ಓಡುವಾಗ ಗಲ್‌ಗಲ್ ಎಂಬ ಶಬ್ದ ಕೇಳಿ ಬರುತ್ತದೆ. ಈ ಗಲ್‌ಗಲ್ ಎನ್ನುವ ಅನುಕರಣ ಶಬ್ದದಿಂದ ಗಲ್ಗಂಟೆ ಎಂಬ ಹೆಸರು ಬಂದಿರಬಹುದು.

* ಗಿಚ್ಚು : ಬರಹದ ಕನ್ನಡದಲ್ಲಿ 'ಚಿವುಟು' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಗಿಚ್ಚು' ಎಂದು ವಿಶಿಷ್ಟ ರೀತಿಯಲ್ಲಿ ಬಳಕೆಯಾಗುತ್ತಿದೆ.

ಉದಾ : ನೀನು ಸುಮ್‌ಸುಮ್‌ನೆ ಗಿಚ್ಚ ಬ್ಯಾಡ ನೋಡು.

* ಗಿರ್ಕಿ ಕಾಲ್ಮರಿ : ಬರಹದ ಕನ್ನಡದಲ್ಲಿ 'ಶಬ್ದ ಮಾಡುವಂತ ವಿಶಿಷ್ಟ ಚಪ್ಪಲಿ' ಎಂದು ಅರ್ಥ. ಚಪ್ಪಲಿ ಎನ್ನುವ ಪದವನ್ನು ಕಾಲ್ಮರಿ ಎಂದು ಉಚ್ಚಾರಣೆ ಮಾಡುವುದು ವಿಶೇಷ. ಅದರ ಜೊತೆಗೆ 'ಗಿರ್ಕಿ ಕಾಲ್ಮರಿ' ಎನ್ನುವ ಪದ ಇನ್ನೂ ವಿಶಿಷ್ಟವಾಗಿದೆ. ಈ ಚಪ್ಪಲಿಯನ್ನು ಹಾಕಿಕೊಂಡು ನಡೆಯುವಾಗ 'ಗಿರ್‌ಗಿರ್' ಎನ್ನುವ ಶಬ್ದ ಬರುತ್ತದೆ. 'ಗಿರ್‌ಗಿರ್' ಎನ್ನುವ ಶಬ್ದದ ಅನುಕರಣೆಯಿಂದ 'ಗಿರ್ಕಿ ಕಾಲ್ಮರಿ' ಎನ್ನುವ ಶಬ್ದ ಆದೋನಿ ಕನ್ನಡದಲ್ಲಿ ಬಳಕೆಗೊಳ್ಳುತ್ತಿರುತ್ತದೆ.

ಉದಾ : ಎರ್ರಿಸ್ವಾಮಿ ವಸ ಗಿರ್ಕಿ ಕಾಲ್ಮರಿ ತಂದಾನ.

* ಚೊಂಬು/ಸೊಂಬು : ಬರಹ ಕನ್ನಡದಲ್ಲಿ ಈ ಪದಕ್ಕೆ 'ಚೆಂಬು' ಚೊಂಬು', ಎಂದು ಅರ್ಥ. ಚೊಮ್ ಸೆಂಬು ಎಂದು ಆದೋನಿ ಕನ್ನಡದಲ್ಲಿ ಬಳಕೆಯಲ್ಲಿದೆ. 'ಚ' ಕಾರದ ಬದಲಾಗಿ 'ಸ' ಕಾರ ಆಗಮವಾಗಿದೆ. ಹಾಗೂ ಪದ ಮಧ್ಯ ಅನುಸ್ವಾರ ಲೋಪಗೊಂಡಿದೆ.

ಉದಾ : ಸೂಮ್ ತಂಗಡ ವೋಗಿ ಬರಾನ ಬಾ.

* ಜಗ್ಗಿ : ಬರಹದ ಕನ್ನಡದಲ್ಲಿ 'ಬಹಳ' ಎನ್ನುವ ಅರ್ಥದಲ್ಲಿ ಈ ಪದವು ಬಳಕೆಯಲ್ಲಿದೆ. ಆದೋನಿ ಕನ್ನಡದಲ್ಲಿ ಈ ಪದದ ಜೊತೆ ಸ್ಯಾನ, ತಪಾತರ, ಬರ್ತಿ, ನಗ್ಗ ಈ ಎಲ್ಲಾ ಪದಗಳು 'ಬಹಳ' ಎನ್ನುವ ಅರ್ಥವನ್ನೇ ಸೂಚಿಸುತ್ತವೆ.

ಉದಾ : ೧. ಮದುವೆಗೆ ಜಗ್ಗಿ ಜನ ಬಂದಿದ್ದರು.

೨. ಮಟಕ್ಕೆ ವೋಗಿ ಬರಬೇಕಂತ ಸ್ಯಾನ ದಿನಲಿಂದ ಅನಕಂಡಿದ್ದೆ.

೩. ಮಲ್ಲಯ್ಯ ತೇರಿಗೆ ನಗ್ಗ ಜನ ಬಂದಿದ್ದರು.

* ಜಿಗೂದು : ಬರಹದ ಕನ್ನಡದಲ್ಲಿ 'ಜೋರಾಗಿ' ಎನ್ನುವ ಪದ ಆದೋನಿ ಕನ್ನಡದಲ್ಲಿ 'ಜಿಗೂದು' ಎಂದು ಉಚ್ಚಾರಣೆಯಲ್ಲಿದೆ.

ಉದಾ : ಆ ಗುಂಡನ ಜಿಗೂದು ಎತ್ತು.

* ಜಿಬಕ : ಬರಹದ ಕನ್ನಡದಲ್ಲಿ 'ಜುಗ್ಗ' ಎನ್ನುವ ಪದ ಆದೋನಿ ಕನ್ನಡದಲ್ಲಿ ಜಿಬಕ ಎಂದು ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ಅವನು ಬಾರಿ ಜಿಬಕ ಒಂದ್‌ರೂಪಾಯಿ ಕರ್ಚು ಮಾಡಾದಿಲ್ಲ.

* ಜಮ : ಆದೋನಿ ಕನ್ನಡದ ಉಚ್ಚಾರಣೆ ಪ್ರಕ್ರಿಯೆಯಲ್ಲಿ ವರ್ಣ ಪಲ್ಲಟ ಕಂಡು ಬರುತ್ತದೆ. 'ಜಮ' ಎನ್ನುವ ಪದವು ಬರಹದ ಕನ್ನಡದಲ್ಲಿ 'ಮಜ' ಎಂಬಾರ್ಥದಲ್ಲಿ ಬಳಕೆಯಲ್ಲಿದೆ. ಈ ಮಾದರಿಯ ವರ್ಣ ಪಲ್ಲಟ ಆದೋನಿ ಕನ್ನಡದ ಮತ್ತೊಂದು ವೈಶಿಷ್ಟ್ಯ.

ಉದಾ : ೧. ಮದುವ್ಯಾಗ ಒಳ್ಳೆ ಜಮ ಇತ್ತು.

೨. ಅವನು ಬಾರಿ ಜಮ ಮಾಡ್ತಾನ.

* ಜರಮೇಲು : ಬರಹದ ಕನ್ನಡದಲ್ಲಿ ಈ ಪದಕ್ಕೆ ಜರ ಕಡಿಮೆಯಾಗಿದೆ ಎಂದು ಅರ್ಥ. ಆದರೆ ಆದೋನಿ ಕನ್ನಡದಲ್ಲಿ ಜರಮೇಲು ಎಂದು ಬಳಕೆಗೊಳ್ಳುತ್ತಿದೆ. 'ಕಡಿಮೆ' ಎನ್ನುವ ಪದದ ಬದಲು ಮೇಲು ಅನ್ನುವ ಪದ ಬಳಸುವುದು ಇಲ್ಲಿಯ ವೈಶಿಷ್ಟ್ಯ. ಇದರ ಜೊತೆಗೆ 'ಜ್ವರ' ಎನ್ನುವ ಪದಕ್ಕೆ 'ಸುಸ್ತಿ' ಎನ್ನುವ ಪದವೂ ಬಳಕೆಯಲ್ಲಿರುವುದು ಆದೋನಿ ಕನ್ನಡದ ಮತ್ತೊಂದು ವೈಶಿಷ್ಟ್ಯ.

ಉದಾ : ೧. ಜರ ಬಂದಿದ್ವಲ್ಲ ಮೇಲಾ?

೨. ಪರ್‌ವಿಲ್ಲ ಜರ ಮೇಲು.

* ಜಾಮಣ್ಣು : ಬರಹದ ಕನ್ನಡದಲ್ಲಿ 'ಪೇರಲಹಣ್ಣು' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ ಜಾಮಣ್ಣ ಎಂದು ವಿಶಿಷ್ಟವಾಗಿ 'ಬಳಕೆಯಾಗುತ್ತಿದೆ.

ಉದಾ : ಪಾರಂನಾಗ ಜಾಮ್ಣಣ ನಗ್ಗ ಬೆಳದಾವ.

* ಟೆಂಗಿನಕಾಯಿ/ಟೆಂಕಾಯಿ : ಬರಹದ ಕನ್ನಡದಲ್ಲಿ 'ತೆಂಗಿನಕಾಯಿ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಟೆಂಗಿನಕಾಯಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ತ' ಕಾರವು ಲೋಪವಾಗಿ 'ಟ'ಕಾರವು ಆದೇಶವಾಗಿ ಬಂದಿದೆ. ತೆಲುಗಿನಲ್ಲಿ ತೆಂಗಿನಕಾಯಿಯನ್ನು 'ಟೆಂಕಾಯಿ' ಎಂದು ಕರೆಯುತ್ತಾರೆ. ಇಲ್ಲಿ ತೆಲುಗಿನ 'ಟೆಂ' ಮತ್ತು ಕಾಯಿ ಮಧ್ಯೆದಲ್ಲಿ ಕನ್ನಡದ 'ಗಿನ' ಸೇರಿಕೊಂಡು ಟೆಂಗಿನಕಾಯಿ ಎಂದು ಉಚ್ಚಾರಣೆ ಗೊಳ್ಳುತ್ತಿದೆ. ಟೆಂಕಾಯಿ ಎನ್ನುವ ಪದವು ಆಧೋನಿ ವ್ಯವಹಾರಿಕ ಕನ್ನಡದಲ್ಲಿ ಉಚ್ಚಾರಣೆಯಲ್ಲಿದೆ. ತೆಲುಗರ ಪ್ರಭಾವ ಹೆಚ್ಚಾಗಿರುವ ವರಲ್ಲಿ ತೆಲುಗು ಮಾತೃ ಭಾಷಿಕರು ಕನ್ನಡ ಮಾತನಾಡುವ ಸಂದರ್ಭದಲ್ಲಿ ಮೇಲಿನ ಪದ ಉಚ್ಚಾರಣೆಯಲ್ಲಿರುವುದು ಕಂಡುಬರುತ್ತದೆ.

ಉದಾ : ೧. ಎಲ್ಲು ಟೆಂಗಿನ ಕಾಯಿ ಕೊಡು.

೨. ಒಂದು ಟೆಂಕಾಯಿ ಎಷ್ಟು?

* ತಂಗಡ ಗಿಡ : 'ಅಮರೆಗಿಡ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ತಂಗಡಗಿಡ' ಎಂದು ಬಳಕೆಗೊಳ್ಳುತ್ತಿದೆ. ತೆಲುಗಿನ ಪ್ರಭಾವ ಈ ಪದದ ಮೇಲಾಗಿದೆ. ಏಕೆಂದರೆ ತೆಲುಗಿನಲ್ಲಿ ಅಮರೇಗಿಡವನ್ನು ತಂಗಡಚೆಟ್ಟು ಎಂದು ಕರೆಯುತ್ತಾರೆ.

ಉದಾ : ಹಗರಿ ಗಡ್ಡೆಗೆ ತಂಗಡ ಗಿಡ ಜಗ್ಗಿ ಅಯ್‌ದಾವ.

* ತಡಿ : ಬರಹದ ಕನ್ನಡದಲ್ಲಿ 'ಹಾಸಿಗೆ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ತಡಿ' ಎಂದು ಬಳಕೆಯಾಗುತ್ತಿದೆ. ಈ ತಡಿ ಎನ್ನುವ ಪದವು ಸಂದರ್ಭಕ್ಕೆ ತಕ್ಕಂತೆ ಅರ್ಥಬೇಧವನ್ನು ಪಡೆದುಕೊಂಡಿದೆ. ಹಸಿಬಟ್ಟೆ ಎನ್ನುವುದಕ್ಕೆ 'ತಡಿಬಟ್ಟೆ' ಎಂದು ಬಳಸುವುದು ಆದೋನಿ ಕನ್ನಡದ ಮತ್ತೊಂದು ವೈಶಿಷ್ಟ್ಯ.

ಉದಾ : ಸ್ಯಾಪೆ ಮೇಲೆ ಮಲಗತಿದ್ದ ಈಗ ತಡಿ ಬೇಕಂತಾನ.

* ತೊಗೆ : ಬರಹದ ಕನ್ನಡದಲ್ಲಿ 'ಬೇಳೆ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ತೊಗೆ' ಎಂದು ಬಳಕೆಯಾಗುತ್ತಿದೆ. ಇದರ ಮೂಲ ಪದ 'ತೊವ್ವೆ'. ಇದು ಆದೋನಿ ಬ್ರಾಹ್ಮಣರ ಕನ್ನಡದಲ್ಲಿ ವಿಶೇಷವಾಗಿ ಬಳಕೆಯಾಗುತ್ತದೆ.

ಉದಾ : ತೊಗೆ ಬಾನ ಉಂಡೆ.

* ತೊಟ್ಟು : ಬರಹದ ಕನ್ನಡದ 'ಸ್ವಲ್ಪ' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ 'ತೊಟ್ಟು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಪದ "೧೨ ನೇ ಶತಮಾನದಲ್ಲಿ ಅಂಬಿಗರ ಚೌಡಯ್ಯನ ವಚನದಲ್ಲಿಯೂ ಬಳಕೆಯಾಗಿದೆ" ಇದನ್ನು ಗಮನಿಸಿದರೆ ಆದೋನಿ ವ್ಯವಹಾರಿಕ ಕನ್ನಡದ ಪ್ರಾಚೀನತೆಯು ತಿಳಿಯುತ್ತದೆ.

ಉದಾ : ೧. ನಾನ್ ನಿನ್ನ ಜತಿಗೆ ಬರ್ತೀನಿ ತೊಟ್ಟು ನಿಂತ್ಕಾ.

೨. ನಂಗೆ ತೊಟ್ಟು ನೀರು ಕೊಡು ಕುಡ್ಯಾಕ.

* ತೊಪ್ಪ : ಬರಹ ಕನ್ನಡ 'ಎಲೆ' ಎನ್ನುವ ಈ ಪದವು ಆದೋನಿ ಕನ್ನಡದಲಿ 'ತೊಪ್ಪ' ಎಂದು ಉಚ್ಚಾರಣೆಯಲ್ಲಿದೆ.

ಉದಾ : ೧. ಬೇವಿನ ತೊಪ್ಪ ತಿಂದರೆ ಒಳ್ಳೇದು.

೨. ರೊವಟು ಬೇವಿನ ತೊಪ್ಪ ಕಿತ್‌ಗೆಂಡು ಬಾ.

* ತೊರ್ಗ-ಕಗ್ಗ-ಕಡ್ನ : ಬರಹದ ಕನ್ನಡದಲ್ಲಿ 'ದಡ್ಡ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ತೊರ್ಗ-ಕಗ್ಗ-ಕಡ್ನ' ಎನ್ನುವ ಪದಗಳು ಉಚ್ಚಾರಣೆಯಲ್ಲಿವೆ. ಈ ಮೂರೂ ಪದಗಳು ಆದೋನಿ ಕನ್ನಡದಲ್ಲಿರುವುದು ವೈಶಿಷ್ಟ್ಯ. 'ದಡ್ನ' ಪದದಲ್ಲಿ 'ದ' ಕಾರ ಲೋಪಗೊಂಡು 'ಕ' ಕಾರ ಆದೇಶವಾಗಿ ಬಂದು 'ಕಡ್ನ' ಎಂದಾಗಿದೆ. 'ಕಡ್ನ' ಎನ್ನುವ ಪದದಲ್ಲಿ 'ಡ' ಕಾರ ಲೋಪವಾಗಿ ಸಜಾತೀಯ ಒತ್ತಕ್ಷರವಾಗಿ 'ಗ್ಗ' ಕಾರ ಆದೇಶವಾಗಿ ಕಗ್ಗ ಎಂದಾಗಿದೆ. ''ತೊರ್ಗ' ಎನ್ನುವ ಪದವೂ ವಿಶಿಷ್ಟ್ಯವಾಗಿ ಬಳಕೆಯಲ್ಲಿದೆ.

ಉದಾ : ೧. ಏ ತೊರ್ಗ ಎಲ್ಲಿವೋಗಿದ್ದೆ?

೨. ಏ ಕಡ್ನ ಇಲ್ಲಿ ಬಾ.

೩. ಇವ್ನು ಕಗ್ಗ ಸೂಳೇಮಗ ಇದ್ದಂಗ.

* ನಡಕಂತೀವಿ : ಬರಹದ ಕನ್ನಡದಲ್ಲಿ 'ನಡೆದುಕೊಳ್ಳುತ್ತೇವೆ' ಎನ್ನುವ ಪದಕ್ಕೆ ಬದಲಾಗಿ ಆದೋನಿ ಕನ್ನಡದಲ್ಲಿ 'ನಡಕಂತೀವಿ' ಎನ್ನುವ ಪದ ಉಚ್ಚಾರಣೆಯಲ್ಲಿದೆ. 'ದ' ಕಾರ ಲೋಪವಾಗಿ ಪದಾಂತ್ಯ ಪರಿಸರದ 'ಎ' ಕಾರ 'ಇ' ಕಾರವಾಗಿ ಮಾರ್ಪಟ್ಟಿದೆ.

ಉದಾ : ೧. ಮಲ್ಲಯ್ಯ ತಾತಗ ನಡಕಂತೀವಿ.

೨. ಶೇಕ್ಷಾವಲಿ ತಾತಗ ನಡಕಂತೀವಿ.

* ನಾದ್‌ಇಲ್ಲೋನು : ನಾದ್ ಇಲ್ಲೋನು ಎಂದರೆ ಜೀವನದ ವ್ಯವಸ್ಥೆಯಲ್ಲಿ ಕ್ರಮ ತಪ್ಪಿದವನು, ಶಿಸ್ತು ತಪ್ಪಿದವನು, ನಾಚಿಕೆ ಇಲ್ಲದವನು ಎನ್ನುವ

ಅರ್ಥದಲ್ಲಿ ನಾದ್ ಇಲ್ಲದೋನು, ಸ್ವಾದ ಇಲ್ಲದೋನು ಎನ್ನುವ ಪದಗಳು ಆದೋನಿ ಕನ್ನಡದಲ್ಲಿ ಉಚ್ಚಾರಣೆಯಲ್ಲಿವೆ.

ಉದಾ : ನಾದ್ ಇಲ್ಲದೋನ್‌ತಾಗ ಎದ್ಕ ಮಾತಾಡಕ ವೋಗಿದ್ದಿ.

* ನಾದ್ರು : 'ಹಜಾಮರು' ಎನ್ನುವ ಪದವು ಆದೋನಿ ಕನ್ನಡದಲ್ಲಿ ನಾದ್ರು ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ನಾದ್ರು ಎಂಬ ಮೂಲ ಪದ ನಾಯಿಂದ > ನಾಯಿದ > ನಾದ > ನಾದಿ > ನಾದ್ರು ಎಂದು ಬದಲಾವಣೆಗೊಂಡಿದೆ.

ಉದಾ : ಬೆಳಿಗ್ಗೆ ವೋಗಿ ನಾದ್ರುನ ಕರಕಂಬಾ.

* ನಿಂತಗಮ್‌ತಾನ : ಬರಹದ ಕನ್ನಡದಲ್ಲಿ 'ನಿಂತುಕೊಳ್ಳುತ್ತಾನೆ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ನಿಂತಗಮ್‌ತಾನ' ಎಂಬ ಪದವು ಉಚ್ಚಾರಣೆಗೊಳ್ಳುತ್ತಿದೆ. 'ಗಮ್' ಎನ್ನುವ ವಿಶಿಷ್ಟ ರೂಪ ಆದೋನಿ ಕನ್ನಡದಲ್ಲಿ ಬಳಕೆಯಲ್ಲಿದೆ. ಇದೇ ರೀತಿ ಕುಂತಗಮ್‌ತಾನ ಎನ್ನುವ ಪದವೂ ಬಳಕೆಯಲ್ಲಿದೆ.

ಉದಾ : ನನ್ನ ಮಗ ಈಗ ನಿಂತಗಮ್‌ತಾನ.

* ನಿರವು ಇಲ್ಲ : ಬರಹದ ಕನ್ನಡದಲ್ಲಿ 'ಅನಿವಾರ್ಯ' ಎನ್ನುವುದಕ್ಕೆ ನಿರವು ಇಲ್ಲ ಎಂದು ಆದೋನಿ ಕನ್ನಡದಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ಮದುವೆಗೆ ವೋಗಲೇಬೇಕು ನಂಗೆ ನಿರವು ಇಲ್ಲ.

* ಪಕ್ಕೇಲಿ : ಬರಹದ ಕನ್ನಡದಲ್ಲಿ 'ಪಕ್ಕದಲ್ಲಿ' ಎನ್ನುವ ಪದ ಆದೋನಿ ಕನ್ನಡದಲ್ಲಿ ಪಕ್ಕೇಲಿ ಎಂದು ಉಚ್ಚಾರಣೆಯಲ್ಲಿದೆ. ಪದಮಧ್ಯ ಪರಿಸರದ 'ಕ' ಕಾರ 'ಎ' ಕಾರವಾಗಿ ಮಾರ್ಪಟ್ಟು 'ದ' ಕಾರ ಲೋಪವಾಗಿದೆ.

ಉದಾ : ನಮ್ಮ ಮನೆ ಪಕ್ಕೇಲಿ ಈಸ್ಪುರನ ಗುಡಿ ಇದೆ.

* ಪಾಟಿಡಿ : ಬರಹದ ಕನ್ನಡದಲ್ಲಿ ಈ ಪದಕ್ಕೆ 'ಬೈತಲೆ' ಎಂದು ಕರೆಯುತ್ತಾರೆ. ಆದರೆ ಆದೋನಿ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆ ಓದುವ

ಮಕ್ಕಳಲ್ಲಿ, ತೆಲುಗು ಮಾತೃಭಾಷಿಕರ ಮಕ್ಕಳಲ್ಲಿ 'ಪಾಪಿಡಿ' ಎನ್ನುವ ಪದ ಬಳಕೆಯಲ್ಲಿದೆ. ತೆಲುಗಿನ ಪ್ರಭಾವದಿಂದ ಈ ಪದ ಕನ್ನಡದಲ್ಲಿ ಬಂದಿದೆ. ಏಕೆಂದರೆ ತೆಲುಗಿನಲ್ಲಿ 'ಪಾಪಿಡಿ' ಎಂದು ಬಳಕೆಯಲ್ಲಿದೆ.

ಉದಾ : ಪಾಪಿಡಿ ಸರೀಗೆ ತಕ್ಕಾ.

* ಪ್ಯಾಂಟ್ಗಿ : ಬರಹದ ಕನ್ನಡದಲ್ಲಿ 'ಮೆಟ್ಟಿಲು' ಎಂದು ಕರೆಯುವ ಈ ಪದವು ಆದೋನಿ ಕನ್ನಡದಲ್ಲಿ 'ಪ್ಯಾಂಟ್ಗಿ' ಎಂದು ಉಚ್ಚಾರಣೆಯಲ್ಲಿದೆ. ಬಾದಾಮಿ ಉಪಭಾಷೆಯಲ್ಲಿ 'ಪೌಂಟಣಗಿ' ಎಂದು ಬಳಕೆಯಲ್ಲಿದೆ. ಆದೋನಿ ಕನ್ನಡದಲ್ಲಿ 'ಣ' ಕಾರ ಲೋಪವಾಗಿ 'ಪ್ಯಾಂಟ್ಗಿ' ಎಂದು ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ಹೊಸ ಮನಿಗೆ ಏಸು ಪ್ಯಾಂಟ್ಗಿ ಅಯ್‌ದಾವ.

* ಪಿಳ್ಳೆ : ಬರಹದ ಕನ್ನಡದಲ್ಲಿ 'ಹುಡುಗಿ' ಎಂದು ಉಚ್ಚಾರಣೆಗೊಂಡರೆ ಆದೋನಿ ಕನ್ನಡದಲ್ಲಿ 'ಪಿಳ್ಳೆ' ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗಿನಲ್ಲಿ ಹುಡುಗಿಗೆ 'ಪಿಲ್ಲ' ಎಂದು ಬಳಕೆಯಲ್ಲಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ ಪಿಳ್ಳೆ ಎನ್ನುವ ಪದ ಉಚ್ಚಾರಣೆಗೊಳ್ಳುತ್ತಿರ ಬಹುದು.

ಉದಾ : ಪಿಳ್ಳೇನ ನೋಡಾಕ ಬರ್ತಾರಂತೆ.

* ಪೊಗ್ರು : ಬರಹದ ಕನ್ನಡದಲ್ಲಿ ಈ ಪದಕ್ಕೆ 'ಅಹಂಕಾರ' ಎಂದು ಅರ್ಥ. ಆದರೆ ಆದೋನಿ ಕನ್ನಡದಲ್ಲಿ 'ಪೊಗ್ರು' ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಕನ್ನಡದ ಅಹಂಕಾರಕ್ಕೆ 'ಪೊಗರು' ಎಂದು ಉಚ್ಚಾರಣೆಯಾಗುತ್ತಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ ಆದೋನಿ ಕನ್ನಡದಲ್ಲಿ 'ಪೊಗರು' ಎನ್ನುವ ಪದ ಉಚ್ಚಾರಣೆಗೊಳ್ಳು ತ್ತಿರಬಹುದು.

ಉದಾ : ಅವನಿಗೆ ಬಾರಿ ಪೊಗರೈತೆ ನನ್ನ ನೋಡಿ ಮೀಸೆ
ತಿರುವುತಾನ.

* ಬಾಡೆ : ಹೆಂಡತಿಯನ್ನು ಬೇರೆಯವರಿಗೆ ಕೊಟ್ಟು ಅದರಿಂದ ಬಂದ ಹಣದಿಂದ ಜೀವನ ನಡೆಸುವವನನ್ನು 'ಬಾಡೆ' ಎಂದು ಬೈಯುತ್ತಾರೆ. ಇದು ಆದೋನಿ ಬೈಗುಳದಲ್ಲಿ ವಿಶಿಷ್ಟ ಪದ. ಆದರೆ ಇತ್ತೀಚೆಗೆ ಎಲ್ಲರನ್ನು ಈ ರೀತಿ ಬೈಯ್ಯುವುದು ಸಾಮಾನ್ಯವಾಗಿದೆ. ಇದೊಂದು ಬೈಗುಳ ವಲಯದ ಸಾಮಾನ್ಯ ರೂಪ. ಈ ಪದ ಸ್ತ್ರೀಯರಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

ಉದಾ : ಎಲೋ ಬಾಡೆ ಎಲ್ಲಿಗೋತಿ.

* ಬಾನ : ಬರಹದ ಕನ್ನಡದಲ್ಲಿ 'ಬೋನ' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ 'ಬಾನ' ಎಂದು ಉಚ್ಚಾರಣೆಯಾಗುತ್ತಿದೆ. ಇಲ್ಲಿ ಪದಾದಿಯ 'ಓ'ಕಾರವು 'ಆ'ಕಾರವಾಗಿ ಬದಲಾವಣೆಗೊಂಡಿರುವುದು ಗಮನಿಸುವಂತಹ ವಿಚಾರ. ಹಳಗನ್ನಡದ 'ಬೋನ' ಎಂಬ ಪದ ಆದೋನಿ ಕನ್ನಡದಲ್ಲಿ ಉಳಿದುಕೊಂಡಿರುವುದು ವಿಶೇಷ.

ಉದಾ : ೧. ತೊಗೆ ಬಾನ ಉಂಡು ಬಂದೆ.

೨. ಮದುವ್ಯಾಗ ಬಾನ ಏಟು ಮಾಡಿದ್ರಿ.

* ಬಾಪ್ನಯ್ಯ : ಬರಹದ ಕನ್ನಡದಲ್ಲಿ 'ಬ್ರಾಹ್ಮಣ' ಎನ್ನುವ ಪದವನ್ನು ಆದೋನಿ ಕನ್ನಡದಲ್ಲಿ 'ಬಾಪ್ನಯ್ಯ' ಎಂದು ಬಳಕೆಯಲ್ಲಿದೆ.

ಉದಾ : ಬಾಪ್ನಯ್ಯ ಈಗ ದ್ಯಾವರಗುಡಿಗೆ ವೋದ.

* ಬಾಯಿ : ಬರಹದ ಕನ್ನಡದ ಈ ಪದಕ್ಕೆ 'ಬಾವಿ' ಎಂದು ಬಳಕೆಯಲ್ಲಿದ್ದರೆ, ಆದೋನಿ ಕನ್ನಡದಲ್ಲಿ ಈ ಪದವು 'ಬಾಯಿ' ಎಂದು ಬಳಕೆಗೊಳ್ಳುತ್ತಿದೆ. ಪದಾಂತ್ಯ ಪರಿಸರದ 'ಯ' ಕಾರ 'ವ' ಕಾರವಾಗಿ ಮಾರ್ಪಟ್ಟಿರುವುದು ಇಲ್ಲಿಯ ವಿಶೇಷ.

ಉದಾ : ಬಾಯಿಗೆ ವೋಗಿ ಎಲ್ಡು ಕೊಡಪಾನ ನೀರ್ ತಗಂಬಾ.

* ಬುದುರೆ : ಬರಹದ ಕನ್ನಡದಲ್ಲಿ 'ಕೆಸರು' ಎನ್ನುವ ಪದ ಆದೋನಿ ಕನ್ನಡದಲ್ಲಿ ಬುದುರೆ ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗು

ಭಾಷೆಯಲ್ಲಿ 'ಬರುದ' ಎಂದು ಉಚ್ಚಾರಣೆಯಲ್ಲಿದೆ. ಈ ಬರುದ ಪದವು ವರ್ಣ ಪಲ್ಲಟಗೊಂಡು ಆದೋನಿ ಕನ್ನಡದಲ್ಲಿ 'ಬುದುರೆ' ಎಂದು ಬಳಕೆಯಲ್ಲಿದೆ.

ಉದಾ: ಗೌರಿ ಅಬ್ಬಕ್ಕೆ ಬುದುರೆ ತಂದೆ ಕೊಂತೆಮ್ಮನ ಮಾಡ್ಬೇಕು.

* ಬೇಸ್ : ಬರಹದ ಕನ್ನಡದಲ್ಲಿ 'ಚೆನ್ನಾಗಿ' ಎನ್ನುವ ಪದ ಆದೋನಿ ಕನ್ನಡದಲ್ಲಿ ಬೇಸ್ ಎಂದು ಉಚ್ಚಾರಣೆಯಲ್ಲಿದೆ. ಈ ಬೇಸ್ ಪದವು ಉರ್ದುವಿನ 'ಬೇಷ್' ಎಂಬುದರ ರೂಪಾಂತರ ಎಂದು ಪ್ರೊ. ಜಿ.ಕೆ.ಭೀಮಸೇನ ರಾವ್ ಅವರು ಅಭಿಪ್ರಾಯ ಪಡುತ್ತಾರೆ.

ಉದಾ : ಪಿಳ್ಳೆ ಬಾರಿ ಬೇಸ್ ಅಯ್‌ದಾಳ.

* ಮಗ್ಗ/ಮಗಗ : ಬರಹದ ಕನ್ನಡದಲ್ಲಿ 'ಮಗನಿಗೆ' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ಮಗ್ಗ', 'ಮಗಗ' ಪದಗಳನ್ನು ಬಳಸುತ್ತಾರೆ. ಎರಡೂ ಪದಗಳಲ್ಲಿ ಗಮನಿಸಬೇಕಾದ ಅಂಶ 'ನ' ಕಾರ ಲೋಪವಾಗಿರುವುದು.

ಉದಾ : ನಿನ್ನ ಮಗ್ಗ ಯಾವಾಗ ಮದುವೆ ಮಾಡ್ಬೇಕು.

* ಮದ್ವಿಗಿತ್ತಿ : 'ಮದುಮಗಳು' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ ಮದ್ವಿಗಿತ್ತಿ ಎನ್ನುವ ಪದವು ಉಚ್ಚಾರಣೆಗೊಳ್ಳುತ್ತಿದೆ. 'ಗಿತ್ತಿ' ಎನ್ನುವ ಸ್ತ್ರೀ ಸೂಚಕ ಪದ ಸೇರಿಕೊಂಡು 'ಮದುವಣಗಿತ್ತಿ' ಪದದಿಂದ ಮದ್ವಿಗಿತ್ತಿ ಎನ್ನುವ ಪದ ಆದೋನಿ ಕನ್ನಡದಲ್ಲಿ ಉಚ್ಚಾರಣೆಯಲ್ಲಿದೆ.

ಉದಾ : ಮದ್ವಿಗಿತ್ತಿ ಮಾಡ್ತಾರ ಎಲ್ಲಾರು ಮನೆತಾಗ್ ಬರ್ರಿ.

* ಮದ್ವಿಂಗ : ಬರಹ ಕನ್ನಡದಲ್ಲಿ 'ಮದುವೆ ಗಂಡು' 'ಮದುವಣಿಗ' ಎನ್ನುವ ಪದಗಳಿಗೆ ಪರ್ಯಾಯವಾಗಿ ಆದೋನಿ ಕನ್ನಡದಲ್ಲಿ ಮದ್ವಿಂಗ ಎನ್ನುವ ಪದವು ಬಳಕೆಯಲ್ಲಿದೆ.

ಉದಾ : ಮದ್ವಿಂಗನ ಜಲ್ದಿ ಕರಕಂಡು ಬರ್ರಿ.

* ಮನಾರ : ಬರಹದ ಕನ್ನಡದಲ್ಲಿ ಈ ಪದ 'ತೃಪ್ತಿಯಾಗುವಷ್ಟು' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. ಮದುವೆ ಸಂದರ್ಭದಲ್ಲಿ ಅತಿಥಿಗಳಿಗೆ ಊಟ ನೀಡುವಾಗ 'ಮನಸಾರೆ' ತಿನ್ನು ಎನ್ನುವ ವಾಡಿಕೆ ಇದೆ. ಈ ಮನಸಾರೆ ಎನ್ನುವ ಪದದಲ್ಲಿ 'ಸ' ಕಾರ ಲೋಪಗೊಂಡು 'ನ' ಕಾರ ದೀರ್ಘವಾಗಿ ಉಚ್ಚಾರಣೆಯಲ್ಲಿ 'ಮನಾರ' ಆಗಿದೆ. 'ಮನಸ್ಸು' ಮತ್ತು 'ಮನ' ಎರಡೂ ರೂಪಗಳು ಕನ್ನಡ ಭಾಷೆಯಲ್ಲಿ ಒಂದೇ ಅರ್ಥದಲ್ಲಿ ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ.

ಉದಾ : ಮನಾರ್ ನೀನ್ ಏಟಿನ್ನ ತಿನು ಬ್ಯಾಡಂದ್ರೆ ಕೇಳ್.

* ಮಿಂಚೇಲಿ : ಬರಹದ ಕನ್ನಡದಲ್ಲಿ 'ಮುಂಜಾನೆ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಮಿಂಚೇಲಿ' ಎಂದು ಬಳಕೆಯಲ್ಲಿದೆ. ಪದಾದಿಯ 'ಉ' ಕಾರವು 'ಇ' ಕಾರವಾಗಿದೆ. ಮತ್ತು 'ನ' ಕಾರದ ಸ್ಥಾನದಲ್ಲಿ 'ಲ' ಕಾರ ಬಂದು ಸೇರಿ ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ೧. ಮಿಂಚೇಲಿ ಜಲ್ದಿ ಎದ್ದು ಬಾ.

೨. ಮಿಂಚೇಲಿ ಬುಡ್ಡೆ ಕಿತ್ತಾಕ ವೋಗಬೇಕು.

* ಯದ್ಕ : ಬರಹದ ಕನ್ನಡದಲ್ಲಿ 'ಏಕೆ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಯದ್ಕ' ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ 'ಏಕೆ' ಎನ್ನುವುದಕ್ಕೆ 'ಎಂದುಕು' ಎನ್ನುವ ಪದ ಬಳಕೆಯಲ್ಲಿದೆ. ಈ ಎಂದುಕು ಎನ್ನುವ ಪದ ಎದುಕ, ಎದಕ, ಎದ್ಕ, ಯದ್ಕ ಎಂದು ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ : ನಿನ್ನೆ ಕೆಲ್ಸಕ್ಕ ಯದ್ಕ ಬಂದಿಲ್ಲ.

* ಯಂಡೆ : ಬರಹದ ಕನ್ನಡದಲ್ಲಿ 'ಸಗಣಿ' ಎನ್ನುವ ಪದ ಆದೋನಿ ಕನ್ನಡದಲ್ಲಿ 'ಯಂಡೆ' ಎಂದು ಬಳಕೆಯಾಗುತ್ತಿದೆ.

ಉದಾ : ಮಿಂಚೇಲಿ ಎದ್ದು ಯಂಡೆಗಸ ಬಳಿಬೇಕು.

* ಯಣ್‌ಮಕ್ಳು : ಬರಹದ ಕನ್ನಡದಲ್ಲಿ 'ಹೆಣ್ಣುಮಕ್ಕಳು' ಎನ್ನುವ ಪದಕ್ಕೆ ಆದೋನಿ ಕನ್ನಡದಲ್ಲಿ 'ಯಣ್‌ಮಕ್ಳು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ಹ' ಕಾರ ಲೋಪವಾಗಿ ದ್ವಿತ್ವ 'ಣ' ಕಾರವೂ ಲೋಪವಾಗಿದೆ. 'ಯಣ್‌ಮಕ್ಳು' ಎಂದು ಉಚ್ಚಾರಣೆ ಮಾಡುವುದು ಆದೋನಿಯ ವೈಶಿಷ್ಟ್ಯ.

ಉದಾ : ಯಣ್‌ಮಕ್ಳು ಬರ‍್ತಾರೆ ದಾರಿ ಬಿಡು.

* ಯಮ್ಕೆ/ಎಲುಬು : ಬರಹದ ಕನ್ನಡದಲ್ಲಿ 'ಮೂಳೆ' ಎನ್ನುವ ಪದಕ್ಕೆ ಆದೋನಿ ಕನ್ನಡದಲ್ಲಿ 'ಯಮ್ಕೆ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಯಮ್ಕೆ ಎನ್ನುವುದು ತೆಲುಗಿನ ಪ್ರಭಾವದಿಂದ ಬಂದಿರಬಹುದು. ಏಕೆಂದರೆ ತೆಲುಗಿನಲ್ಲಿ ಮೂಳೆಗೆ ಎಮುಕ ಎಂದು ಕರೆಯುತ್ತಾರೆ. ಆದ್ದರಿಂದ ಆದೋನಿ ಕನ್ನಡದಲ್ಲಿ ಯಮ್ಕೆ ಎಂದು ಉಚ್ಚಾರಣೆಯಲ್ಲಿದೆ. ಇದರ ಜೊತೆಗೆ ಎಲುಬು, ಎಲ್ಬು ಎನ್ನುವುದೂ ಆದೋನಿ ಕನ್ನಡದಲ್ಲಿರುವುದು ವಿಶಿಷ್ಟ.

ಉದಾ : ಅವನ್ ರೋಡ್ ಮ್ಯಾಗ ಬಿದ್ದು ಯಮ್ಕೆ ಮುರದ್ಯೆತಂತೆ. ಅದಕೆ ಕಾಲಿಗೆ ಬ್ಯಾಂಡೇಜ್ ಕಟ್ಯಾರ.

* ಯಸೊಂದು : ಬರಹದ ಕನ್ನಡದಲ್ಲಿ 'ಎಷ್ಟೊಂದು' ಎನ್ನುವ ಪದಕ್ಕೆ ಆದೋನಿ ಕನ್ನಡದಲ್ಲಿ 'ಯಸೊಂದು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಬರಹದ ಕನ್ನಡ 'ಷ' ಕಾರವು ಲೋಪವಾಗಿ 'ಸ' ಕಾರ ಆದೇಶವಾಗಿದೆ ಮತ್ತು ದಿತ್ವ 'ಟ' ಕಾರ ಲೋಪವಾಗಿರುವುದನ್ನು ಗಮನಿಸಬಹುದು.

ಉದಾ : ಕೆಲ್ಸಕ ಯಸೊಂದು ಜನ ವೋಗಿದ್ದಿವಿ.

* ರೊಕ್ಕ : ಬರಹದ ಕನ್ನಡದಲ್ಲಿ 'ಹಣ' ಎನ್ನುವ ಪದ ಆದೋನಿ ಕನ್ನಡದಲ್ಲಿ ರೊಕ್ಕ ಎಂದು ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ : ಉದ್ರಿ ಕೊಡದಿಲ್ಲ ರೊಕ್ಕ ಕೊಟ್ಟು ಸಾಮಾನ ವಯ್ಯಿ.

* ರಂಪ : ಬರಹದ ಕನ್ನಡದಲ್ಲಿ 'ಗರಗಸ' ಎನ್ನುವ ಪದವು ಆದೋನಿ ಕನ್ನಡದಲ್ಲಿ ರಂಪ ಎಂದು ವಿಶಿಷ್ಟವಾಗಿ ಉಚ್ಚಾರಣೆಯಲ್ಲಿದೆ. ಚಿಕ್ಕಮಕ್ಕಳು ಹಟ ಮಾಡಿದರೆ ಕೂಡ ರಂಪ ಮಾಡುತ್ತಾನೆ ಎನ್ನುವುದು ಬಳಕೆಯಲ್ಲಿದೆ.

ಉದಾ : ೧. ಆ ಕೊಲ್ಡನ ರಂಪ ತಗಂಡ ಕೊಯ್ದರೆ ಜಲ್ದಿ ಆಗ್ತೈತೆ ಕೆಲಸ.

೨. ಆ ವುಡ್ಗ ಆಸರ ಆಗಿರಬೇಕು. ಬೆಳಿಗ್ಗೆಯಿಂದ ರಂಪ ಮಾಡ್ತಾನ.

* ರುಸಿ : ಬರಹದ ಕನ್ನಡದಲ್ಲಿ 'ರುಚಿ' ಎನ್ನುವ ಪದವು ಆದೋನಿ ಕನ್ನಡದಲ್ಲಿ ರುಸಿ ಎಂದು ಉಚ್ಚಾರಣೆಯಲ್ಲಿದೆ. 'ಚ' ಕಾರಕ್ಕೆ ಬದಲು 'ಸ' ಕಾರ ಆದೇಶವಾಗಿ ಬಂದಿದೆ.

ಉದಾ : ಏನ್ ಮದುವೆ ಬಿಡು ಅಸಲ್ ಊಟ ರುಸಿ ಇದ್ದಿಲ್ಲ.

* ರೊಗ್ತ : ಬರಹದ ಕನ್ನಡದಲ್ಲಿ 'ರಕ್ತ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ರೊಗ್ತ' ಎಂದು ಉಚ್ಚಾರಣೆಯಲ್ಲಿದೆ. ಇದು ಹೆಚ್ಚಾಗಿ ಅನಕ್ಷರಸ್ಥರಲ್ಲಿ ಹಿಂದುಳಿದ ವರ್ಗಗಳಲ್ಲಿ ಕಂಡು ಬರುತ್ತದೆ.

ಉದಾ : ಒಬ್ಬನ ಬಡಿದ್ರು ಇವತ್ ರಾಮೊರೊಗ್ತ ಆಗಿದ್ದ ವೋಗ್ ಅವ್ನ.

* ರೊವಟು : ಬರಹದ ಕನ್ನಡದಲ್ಲಿ ಈ ಪದಕ್ಕೆ 'ಸ್ವಲ್ಪ' ಎನ್ನುವ ಅರ್ಥ ಇದೆ. ಆದೋನಿ ಕನ್ನಡದಲ್ಲಿ 'ರೊವಟು' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಸ್ವಲ್ಪ' ಎನ್ನುವ ಪದಕ್ಕೆ ತೆಲುಗಿನಲ್ಲಿ 'ರೊವಂತ' ಎಂದು ಅರ್ಥವಿದೆ. ತೆಲುಗಿನ ಪ್ರಭಾವದಿಂದ 'ರೊವಟು' ಎನ್ನುವ ಪದ ಈ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ : ೧. ರೊವಟು ನೀರು ಕೊಡು.

೨. ರೊವಟು ಇಲ್ಲಿ ಬಾ.

* ವಂಟುಂಟ್ಲೆ : ಕತ್ತಲೆಯಾಗುವ ಮುನ್ನ ಬೆಳಕು ಇರುವಾಗಲೇ ಎನ್ನುವ ಅರ್ಥದಲ್ಲಿ ಈ ಪದವು ಬಳಕೆಯಾಗುತ್ತದೆ. 'ಹೊತ್ತು ಉಂಟಿರುವಾಗಲೇ' ಎನ್ನುವ ಪದವು 'ವತುಂಟ್ಲೆ'ಯಾಗಿ ವಟುಂಟ್ಲೆಯಾಗಿ 'ಹ' ಕಾರ ಲೋಪಗೊಂಡು 'ವ' ಕಾರ ಆದೇಶವಾಗಿ ಬಂದು 'ವಂಟುಂಟ್ಲೆ' ಎಂದು ಆದೋನಿ ಕನ್ನಡದಲ್ಲಿ ಬಳಕೆಗೊಳ್ಳುತ್ತಿದೆ.

ಉದಾ : ನಾಳೆ ಕೆಲ್ಸಕ ವಂಟುಂಟ್ಲೆ ಬಾ.

* ವಲಕ ವೋಗ್ಬೇಕು : ಬರಹದ ಕನ್ನಡದಲ್ಲಿ 'ಹೊಲಕ್ಕೆ ಹೋಗಬೇಕು' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ವಲಕ್ ವೊಗ್ಬೇಕು'' ಎಂದು ಉಚ್ಚಾರಣೆಗೊಳ್ಳುತ್ತಿದೆ. ಧ್ವನಿ ನಿಯಮಗಳಲ್ಲಿ ಹೇಳಿದ ಹಾಗೆ 'ಹ' ಕಾರಕ್ಕೆ ಬದಲಾಗಿ 'ವ' ಕಾರ ಉಚ್ಚಾರಣೆಯಲ್ಲಿರುವುದು ಈ ಕನ್ನಡದ ವೈಶಿಷ್ಟ್ಯ.

ಉದಾ : ಜಲ್ದಿ ಬುತ್ತಿ ಕಟ್ಟು, ನಾನ್ ವಲಕ ವೋಗ್ಬೇಕು.

* ವಲಲಿಂದ : ಬರಹದ ಕನ್ನಡದಲ್ಲಿ 'ಹೊಲದಿಂದ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ವಲಲಿಂದ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ಹ' ಕಾರದ ಸ್ಥಾನದಲ್ಲಿ 'ವ' ಕಾರ ಆದೇಶವಾಗಿ ಬಂದಿದೆ. ಮತ್ತು ಪ್ರಮಾಣ ಕನ್ನಡ ತೃತೀಯ ವಿಭಕ್ತಿ 'ದಿಂದ' ಆದೋನಿ ಕನ್ನಡದಲ್ಲಿ ವಿಶೇಷವಾಗಿ 'ಲಿಂದ' ಪ್ರತ್ಯಯ ಉಚ್ಚಾರಣೆಯಲ್ಲಿದೆ. ಇದೇ ರೀತಿ ಇನ್ನೂ ಕೆಲವು ಪದಗಳು ಬಳಕೆಗೊಳ್ಳುವುದನ್ನು ನಾವು ಕಾಣಬಹುದು. ಮನೆಲಿಂದ, ಊರಿಲಿಂದ. ಈ ರೀತಿಯಾಗಿ 'ಲಿಂದ' ರೂಪವು ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ : ವಲಲಿಂದ ಈಗ ಬಂದು ಕೈಕಾಲ್ಮುಕ ತೊಳ್ಕಂಡು ಇಲ್ಲಿಗೆ ಬಂದೆ.

* ವಲ್ಲಿ : ಬರಹದ ಕನ್ನಡದಲ್ಲಿ ಇಂಗ್ಲೀಷ್‌ನ 'ಟವಲ್' ಎನ್ನುವ ಸ್ವೀಕೃತ ಪದವು ಆದೋನಿ ಕನ್ನಡದಲ್ಲಿ 'ವಲ್ಲಿ', ಟುವಾಲು ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ : ತಲಿಗೆ ವಲ್ಲಿ ಕಟಿಗೊಂಡು ಜಲ್ದಿ ಮಣ್ಣು ವತ್ತಾಕು.

* ವಳ್ಳಿ ಬಾ : ಬರಹದ ಕನ್ನಡದಲ್ಲಿ 'ತಿರುಗಿ ಬಾ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ವಳ್ಳಿ ಬಾ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ : ಊರಿಗೆ ವೋಗಿ ಇವತ್ತೇ ವಳ್ಳಿ ಬಾ.

* ವಾಮೆ : ಬರಹದ ಕನ್ನಡದಲ್ಲಿ ಈ ಪದವನ್ನು 'ಬಣವೆ' ಎಂದು ಕರೆಯುತ್ತಾರೆ. ಆದರೆ ಆದೋನಿ ಕನ್ನಡದಲ್ಲಿ 'ವಾಮೆ' ಎಂದು ಬಳಕೆಯಲ್ಲಿದೆ. ತೆಲುಗಿನಲ್ಲಿ 'ವಾಮು' ಎಂದು ಬಳಕೆಗೊಳ್ಳುತ್ತಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ 'ವಾಮು' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ಎ' ಕಾರಂತವಾಗಿ 'ವಾಮೆ' ಎಂದು ಉಚ್ಚಾರಣೆಯಲ್ಲಿದೆ.

ಉದಾ : ಇವತ್ತು ವಾಮೆ ಆಕಾಕ ವೋಗ್ಬೇಕು.

* ವುಂಚೀಕಾಯಿ : ಬರಹದ ಕನ್ನಡದಲ್ಲಿ 'ಹುಣಸೆಕಾಯಿ' ಎನ್ನುವ ಪದವು ಆದೋನಿ ಕನ್ನಡದಲ್ಲಿ 'ವುಂಚೀಕಾಯಿ' ಎಂದು ಉಚ್ಚಾರಣೆಯಲ್ಲಿದೆ. ಇಲ್ಲಿ 'ಹ' ಕಾರ ಲೋಪವಾಗಿ ಎರಡನೇ ಸ್ಥಾನದಲ್ಲಿ ಪಂಚಮಾಕ್ಷರ ಲೋಪವಾಗಿ 'ಚ' ಕಾರ ಆದೇಶವಾಗಿದೆ.

ಉದಾ : ವುಂಚೀಕಾಯಿ ಅರ್‍ಯಾಕ ವೋಗ್‌ಬೇಕು.

* ಸೀಮೆಣ್ಣೆ : ಮನೆಯಲ್ಲಿ ಬೆಳಕಿಗಾಗಿ ಬಳಸುವ ವಸ್ತುವೇ 'ಚಿಮಣಿ'. ಇದು ತೆಳುವಾದ ತಗಡಿನಿಂದ ತಯಾರಾಗಿರುತ್ತದೆ. ಕೆಳಗಡೆ ವಿಸ್ತಾರವಾಗಿದ್ದು ಮೇಲ್ಭಾಗ ಚಿಕ್ಕದಾಗಿರುತ್ತದೆ. "ಇಂಗ್ಲೀಷ್‌ನ Chimneyಗೆ ಕುಲುಮೆ, ಹೊಗೆಗೊಳವೆ ಇತ್ಯಾದಿ ಅರ್ಥಗಳಿವೆ. ಇದರಿಂದ ಬಹುಶಃ 'ಚಿಮ್ನಿ', ಚಿಮಿಣಿ' ಎನ್ನುವ ಪದ ಬಂದಿರಬಹುದು. ಈ ಚಿಮಿಣಿಗೆ ಹಾಕುವ ಎಣ್ಣೆಯೇ 'ಚಿಮಿಣಾದೆಣ್ಣೆ' 'ಚ' ಕಾರದ ಬದಲು 'ಸ' ಕಾರ ಆದೇಶವಾಗಿ ಬಂದು 'ಸೀಮಣಾದೆಣ್ಣೆ' ಆಗಿರಬಹುದು. ಅಥವ ಬೇರೆ ಸೀಮೆಯಿಂದ ಬಂದು ಬಳಕೆಯಾಗುತ್ತಿರುವ ಎಣ್ಣೆಯೇ 'ಸೀಮೆಣ್ಣೆ'

ಆಗಿರಬಹುದು. ಉದಾ. ಸೀಮೆ ಬದನೆಕಾಯಿ ಎನ್ನುವ ಪದ ಬಳಕೆಯಲ್ಲಿದೆ. ನಮ್ಮ ಸೀಮೆಯಲ್ಲಿ ಬೆಳೆಯದ ವಸ್ತು ಬೇರೆ ಸೀಮೆಯಿಂದ ತರಿಸಿ ಉಪಯೋಗಿಸುತ್ತೇವೆ. ಆದ್ದರಿಂದ ಸೀಮೆ ಬದನೆಕಾಯಿ ಆಗಿದೆ". ಅದೇ ರೀತಿ ಸೀಮೆಣ್ಣೆ ಎನ್ನುವ ಪದವು ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ : ಮನ್ಯಾಗ ಸೀಮೆಣ್ಣೆ ಆಗ್ಯೋಗ್ಯೆತೆ.

(ವಾರಿ ಜಿ.ಎಂ. ೨೦೦೦, ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ)

* ಸುಕ್ಕಾಡಿ : ಬರಹದ ಕನ್ನಡದಲ್ಲಿ 'ಸೊಳ್ಳೆ' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ ಸುಕ್ಕಾಡಿ ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ : ಮಾಗಾಣ್ಯಾಗ ಜಗ್ಗಿ ಸುಕ್ಕಾಡಿ ಅಯ್‌ದಾವ.

* ಸುಂಕಿರು : ಬರಹದ ಕನ್ನಡದಲ್ಲಿ 'ಸುಮ್ಮನೆ ಇರು' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ 'ಸುಂಕಿರು' ಎಂದು ಬಳಕೆಯಾಗುತ್ತಿದೆ.

ಉದಾ : ಅಗಲೆಲ್ಲಾ ನನ್ನ ಕೆಲ್ಸಕ್ಕ ಅಡ್ಡ ಬರಬ್ಯಾಡ ಸುಂಕಿರು.

* ಸೆದಿಗೆ : ಬರಹದ ಕನ್ನಡದಲ್ಲಿ 'ಚಟ್ಟಾ' ಎನ್ನುವ ಈ ಪದವು ಆದೋನಿ ಕನ್ನಡದಲ್ಲಿ ಸೆದಿಗೆ ಎಂದು ವಿಶಿಷ್ಟವಾಗಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ : ಯಣನ ಬಾಳ ವತ್ತು ಇಟಕಬಾರ್ದು ಜಲ್ದಿ ಸೆದಿಗೆ ಕಟ್ಟಿ.

* ಸೆದ್ದೇವ್ ಕೆಲ್ಸ : ಬರಹದ ಕನ್ನಡದಲ್ಲಿ 'ವ್ಯವಸಾಯದ ಕೆಲಸ' 'ಕೃಷಿ ಕೆಲಸ' ಎಂದು ಬಳಕೆಯಲ್ಲಿರುವ ಈ ಪದವು ಆದೋನಿ ಕನ್ನಡದಲ್ಲಿ 'ಸೆದ್ದೇವ್ ಕೆಲ್ಸ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಪದವು ತೆಲುಗಿನ ಪ್ರಭಾವದಿಂದ ಬಂದಿದೆ. ಏಕೆಂದರೆ ತೆಲುಗಿನಲ್ಲಿ ಈ ಪದವನ್ನು 'ಸೇದ್ಯಂ' ಎಂದು ಬಳಕೆಯಲ್ಲಿದೆ. ಆದ್ದರಿಂದ 'ಸೇದ್ಯಂ' ಎನ್ನುವ ಪದ ಆದೋನಿ ಕನ್ನಡದಲ್ಲಿ 'ಸೆದ್ದೇವ್' ವ್ಯಂಜನಾಂತವಾಗಿ ಉಚ್ಚಾರಣೆಯಲ್ಲಿದೆ.

ಉದಾ : ವುಡ್ಗ ಸೆದ್ದೇವ್ ಕೆಲ್ಸ ಮಾಡ್ತಾನ, ಬೆಸ್ ಮಾಡಿಕ್ಯಂಡು ತಿಂತಾನ.

* ಸೆಟಗೊಂಡುವೋಗ : ಆದೋನಿ ಕನ್ನಡದ ಬೈಗುಳಲ್ಲಿ ಈ ಪದ ಬಳಕೆಯಲ್ಲಿದೆ. 'ಸೆಟದುಕೊಂಡು ಹೋಗು' ಎನ್ನುವುದು ಈ ಪದದ ಅರ್ಥ. ಸತ್ತಾಗ ದೇಹವು ಸೆಟೆದುಕೊಂಡು ಹೋಗುತ್ತದೆ. ಅದಕ್ಕೆ ಹೋಲಿಸಿ ಸಾಯಿ ಎನ್ನುವ ಬದಲು ಈ ಪದವನ್ನು ಬಳಸುತ್ತಿದ್ದಾರೆ.

ಉದಾ : ಇಂಗ್ ಮೋಸ ಮಾಡಿದರೆ ನೀನ್ ಸೆಟಗೊಂಡ ವೋಗತಿಯಲೇ.

* ಸೆನ್ಯಾಕ : ಬರಹ ಕನ್ನಡದಲ್ಲಿ 'ಸಮೀಪ' ಎನ್ನುವ ಈ ಪದ ಆದೋನಿ ಕನ್ನಡದಲ್ಲಿ ಸೆನ್ಯಾಕ ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಸೆನ್ಯಾಕ ಎನ್ನುವ ಪದವು 'ಸನಿಹ' ಎನ್ನುವ ಪದದಿಂದ ಬಂದಿರಬಹುದು. ಸನಿಹ, ಸನಿಹಕೆ, ಸನಿಯಕೆ, ಸೆನ್ಯಾಕ ಎಂದು ರೂಪಾಂತರ ಹೊಂದಿ ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ : ರೊವಟು ಸೆನ್ಯಾಕ ಬಾ ಏಳ್ತೀನಿ.

□□

ಅಧ್ಯಾಯ ೬

ಆದೋನಿ ಕನ್ನಡದ ನುಡಿಬೆರಕೆ ಪ್ರಕ್ರಿಯೆ

ಅಧ್ಯಾಯ ೬

ಆದೋನಿ ಕನ್ನಡದ ನುಡಿಬೆರಕೆ ಪ್ರಕ್ರಿಯೆ

ದ್ವಿಭಾಷಿಕ ಸನ್ನಿವೇಶಗಳಲ್ಲಿ ಭಾಷಿಕ ವ್ಯವಹಾರಗಳಲ್ಲಿ ಕಂಡುಬರುವ ಮುಖ್ಯ ಭಾಷಿಕ ಪ್ರಕ್ರಿಯೆಗಳಾಗಿ ನುಡಿಬೆರಕೆ ಮತ್ತು ನುಡಿಜಿಗಿತಗಳನ್ನು ಗುರುತಿಸುತ್ತಾರೆ. ಇಂಗ್ಲೀಷ್‌ನ Code mixingಗೆ ಸಂವಾದಿಯಾಗಿ ನುಡಿಬೆರಕೆ, ನುಡಿಮಿಶ್ರಣ, ಭಾಷಾಮಿಶ್ರಣ ಎಂದೂ Code switchingಗೆ ಸಂವಾದಿಯಾಗಿ ನುಡಿಜಿಗಿತ, ನುಡಿಪಲ್ಲಟ ಎಂಬ ಪದಗಳನ್ನು ಕನ್ನಡ ಸಂದರ್ಭದಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ಬರಹಗಳಲ್ಲಿ ಬಳಸಲಾಗುತ್ತಿದೆ. "ಒಂದು ಭಾಷೆಯ ವಾಕ್ಯವನ್ನು ಆಡುವಾಗ / ಬರೆಯುವಾಗ ಇನ್ನೊಂದು ಭಾಷೆಯ ಭಾಷಾಂಶಗಳನ್ನು ಬೆರೆಸುವುದು ನುಡಿಬೆರಕೆ. ಇಡೀ ವಾಕ್ಯದ ಹಿಂದಿನ ನಿಯಮ ಒಂದು ಭಾಷೆಯಾಗಿದ್ದು ವಾಕ್ಯಾಂಶಗಳು ಮಾತ್ರ ಕೆಲವು ಇನ್ನೊಂದು ಭಾಷೆಯಿಂದ ಬಂದು ಸೇರುತ್ತವೆ. ನುಡಿಜಿಗಿತದಲ್ಲಿ ಒಂದು ವಾಕ್ಯವನ್ನು ಒಂದು ಭಾಷೆಯ ನಿಯಮಾನುಸಾರ ರಚಿಸಿ ಮುಗಿಸಿ ಅನಂತರ ಹೊಸ ವಾಕ್ಯವನ್ನು ಇಡಿಯಾಗಿ ಇನ್ನೊಂದು ಭಾಷೆಯಲ್ಲಿ ರಚಿಸಿ ಬಳಸಲಾಗುತ್ತದೆ. ವಾಕ್ಯದ ಆಚೆಗಿನ ಹಂತದಲ್ಲಿ ಈ ಬೆರಕೆ ನಡೆಯುತ್ತದೆ. ದ್ವಿಭಾಷಿಕರಲ್ಲಿ ನಡೆಯುವ ನುಡಿಬೆರಕೆ ಪ್ರಮಾಣ, ಉದ್ದೇಶಗಳು ಭಿನ್ನವಾಗಿರುತ್ತದೆ. ನುಡಿಜಿಗಿತ ಮಾತ್ರ ಬಹುಮಟ್ಟಿಗೆ ದ್ವಿಭಾಷಿಕರಲ್ಲೇ ನಡೆಯುವಂತದ್ದು. ನುಡಿಬೆರಕೆ ದ್ವಿಭಾಷಿಕರಲ್ಲೇ ನಡೆಯುತ್ತದೆ ಎನ್ನುವಂತಿಲ್ಲ. ಎಷ್ಟೋ ವೇಳೆ ದ್ವಿಭಾಷಿಕ ಸನ್ನಿವೇಶಗಳಲ್ಲಿ ನಡೆಯುವ ಭಾಷಾಂಶಗಳನ್ನು ತಮ್ಮ ಭಾಷಿಕ ಸಂಕಥನಗಳಲ್ಲಿ ಸೇರಿಸಿಕೊಳ್ಳುತ್ತಾರೆ."[೧] ಈ ನುಡಿ ಮಿಶ್ರಣವೊಂದು ರೂಪುಗೊಳ್ಳುವುದು ದ್ವಿಭಾಷಿಕತೆಯಷ್ಟೇ ಹಳತಾದರೂ ಅದರ ಭಾಷಾ ವೈಜ್ಞಾನಿಕ ಹಾಗೂ ಸಾಮಾಜಿಕ ಭಾಷಾಶಾಸ್ತ್ರದ ನೆಲೆಗಳಲ್ಲಿ ಭಾಷಾಶಾಸ್ತ್ರಜ್ಞರು ದೃಷ್ಟಿ ಹಾಯಿಸುತ್ತಿರುವುದು ತೀರಾ ಈಚೆಗೆ.

ಕನ್ನಡಿಗರ ಮನೆಗಳಲ್ಲಿ ಕೆಲಸ ಮಾಡುವ ತೆಲುಗು ಭಾಷಿಕರು ಕನ್ನಡಿಗರೊಂದಿಗೆ ಸಂವಹಿಸುವ ಸಂದರ್ಭಗಳಲ್ಲಿ ವ್ಯಾಪಾರದ ಸಂದರ್ಭಗಳಲ್ಲಿಯೂ ಭಾಷಾ ಮಿಶ್ರಣದ ಸಂದರ್ಭಗಳು ಉಂಟಾಗುತ್ತವೆ.

ನುಡಿಜಿಗಿತ ಮತ್ತು ನುಡಿಬೆರಕೆ ಪ್ರಕ್ರಿಯೆಗಳು ಉದ್ದೇಶಗಳನ್ನು ಕುರಿತಂತೆ “ಒಂದು ಭಾಷೆಯಲ್ಲಿ ಕೊರತೆ ಇರುವ ಭಾಷಾಂಶಗಳನ್ನು ಇನ್ನೊಂದು ಭಾಷೆಯಿಂದ ಎರವಲು ಪಡೆದು ತುಂಬಿಕೊಳ್ಳುವುದೇ ಈ ಭಾಷಾ ಪ್ರಕ್ರಿಯೆಗಳ ಉದ್ದೇಶವೆಂದೂ ಸಾಮಾನ್ಯವಾಗಿ ತಿಳಿಯಲಾಗುತ್ತದೆ. ನುಡಿಬೆರಕೆಗೆ ಇಂಥ ಕಾರಣಗಳಿರುತ್ತವೆ. ಆದರೆ ಇವು ಕನಿಷ್ಠ ನೆಲೆಯ ಕಾರಣಗಳು ಮಾತ್ರ ಭಾಷಾಂಶಗಳ ಕೊರತೆ ಇಲ್ಲದಿರುವ ಸಂದರ್ಭಗಳಲ್ಲೂ ನುಡಿಬೆರಕೆ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತವೆ. ಭಾಷೆಯನ್ನು ಬಳಸುತ್ತಿರುವ ಸಂದರ್ಭ, ಭಾಗಿಗಳಾಗಿರುವ ಜನರು, ಚರ್ಚಿಸುತ್ತಿರುವ ವಿಷಯ, ಚರ್ಚೆಯ ಸಂಭಾಷಣೆಯ ಉದ್ದೇಶ ಇವೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ನುಡಿಬೆರಕೆಗೆ ಕಾರಣವಾಗುತ್ತವೆಂದು ಅಧ್ಯಯನಗಳು ತೋರಿಸಿಕೊಟ್ಟಿವೆ. ಗುಂಪುಗಳಲ್ಲಿ ಸಂಭಾಷಿಸುವಾಗ ಇತರರೊಡನೆ ತಮ್ಮನ್ನು ಗುರುತಿಸಿಕೊಳ್ಳಲು ಮತ್ತು ಇತರರಿಂದ ಬೇರೆ ಎಂದು ತೋರಿಸಿಕೊಳ್ಳಲು ಈ ಭಾಷಾ ಪ್ರಕ್ರಿಯೆಗಳು ನಡೆಯುತ್ತವೆ.”[೨]

“ಭಾಷಾಮಿಶ್ರಣ ನುರಿತ ದ್ವಿಭಾಷಿಗಳ ಸಹಜವಾದ ವರ್ತನೆಯೇ ಹೊರತು ಭಾಷೆಯ ಅಜ್ಞಾನದ ಪರಿಣಾಮವಲ್ಲ. ಇದು ಏಕಭಾಷಿಕರ ಭಾಷಾ ಜ್ಞಾನಕ್ಕೂ ಮಿಗಿಲಾದ ಸೂಕ್ಷ್ಮ, ಸೃಷ್ಟಿಶೀಲ ಸಂಕೀರ್ಣ ನಿಯಮಬದ್ಧ ವ್ಯಾಪಾರ”[೩] ಪ್ರವರ್ಧಮಾನ ಸಮಾಜಗಳಲ್ಲಿ ಒಂದು ಪ್ರಮುಖ ನಿಯೋಗವನ್ನು ಮಿಶ್ರಭಾಷೆಗಳು ಹೊಂದಿರುತ್ತವೆ. ಇಡೀ ಸಮಾಜ ಭಾಷಾ ಕಲಿಕೆಯ ಮೂಲಕ ಪಡೆಯುವ ಸಾಮಾಜೀಕರಣದ ಭಾಗವಾಗಿ ತನ್ನ ಭಾಷಾ ಸಾಮರ್ಥ್ಯದ ಅಂಶವನ್ನಾಗಿ ಸೇರಿಸಿಕೊಳ್ಳುತ್ತದೆ.

ನುಡಿಮಿಶ್ರಣ ರೂಪಗಳು

೧. ಗೊಣ್ ಮಕ್ಕನ ಸೈ ಅಂದರೆ ಗೊಣ್ ಮಕ್ಕನ ಬಿಡುವಚ್ಚು

ಯಣ್ ಮಕ್ಕನ ಸೈ ಅಂದರೆ ಯಣ್ ಮಕ್ಕನ ಬಿಡುವಚ್ಚು

೨. ದ್ಯಾವರ ಸ್ವಾಮಾನು ಅಯ್‌ತ್ಯಾ ಇಲ್ಲ ನೋಡಕಂತೀವಿ ತಿರಗ ಸಸ್ತ್ರ ಪವಾಡ ಮಾಡ್ತಾರೆ.

೩. ಈ ಸಂಸ್ಥಾದಾಗ ನಮ್ಮನ್ನ ಬೇಸ್ ನೋಡಕಂತಾರೆ.

೪. ಯಾರಾದರೂ ಸತ್ತಾಗ ಮೂರ್‌ದಿವ್ಸ ಕಾರೇವು ಮಾಡಾಕ ಕಾಕಿ ಇರಲೇಬೇಕು.

೫. ಬಸ್ ಬಡವತ್ತಾಯಿತು ಜಲ್ದಿ ಬಸ್ಸು ಯಕ್ಕು.

೬. ವಕ ರೂಪಾಯಿ ಬೀಡಿ ಕೊಡು.

೭. ಬರ್‌ತಾನೋ ಇಲ್ಲ ಗೊತ್‌ಲೇದು.

೮. ಕನ್ನಡದ ಕೆಲಸಗಳಿಗೆ ನಾವು ಪ್ರಧಾನತಾ ಕೊಡ್ತೀವಿ.

೯. ಅವರೂರಾಗ ಕಲ್ಲಗಡ್ಡಿ ಬಂದಿತ್ತು.

೧೦. ಯಂಡೆ ಸಾರಿಸಿ ಮುಗ್ಗು ಆಕಿ ಕೊಂತೆಮ್ಮ ಕುಂದ್ರಿಸಿದ್ದರು.

೧೧. ಕಟ್ಟಿಗೆಗಳು ನಮ್ಮು ಇದ್ದವು.

೧೨. ಸಿಲುಕ ಲೂಜ್ ಇರ್ರೈತಲ್ಲ ಬಾಕ್ಲ ತೆಗೆದು ಬಿಡ್ತಾನೆ.

೧೩. ಕಾಳುಗಳು ತಂದಕೋವಚ್ಚು

೧೪. ವಿಡಾಕುಲ ಕೊಡ್ತಾರಲ್ಲ ಅದು ಕೊಡ್ತೀನಿ.

೧೫. ದಿನಾ ಕೆಲ್ಸಕ ವೋಗಿ ಬರಾದು ಅಲವಾಟಾಗಿದೆ.

೧೬. ಅವನು ಬಾಳ ಚಿದುಗು ಗೂದೆ ಮಕದೋನು.

೧೭. ಮಲ್ಲಯ್ಯ ತೇರಿಗೆ ಪಲ್ಲಭೀಮು ಬೇಕು.

೧೮. ಅವರೆಲ್ಲಾ ಆಗು ಆಗು ಅಂದರೆ ಗುಡ ನಿಂದ್ರಲಿಲ್ಲ.

೧೯. ಅವರ್ ಮನ್ಯಾಗ ಚಿಕನ್ ಪುಲ್ಸು ಚೆನ್ನಾಗಿತ್ತು.

೨೦. ಆ ಊರ್‍ನಾಗ ಬಾರಿ ತಿಕ್ ಮಂದಿ ಅಯ್‌ದಾರ.

ಮಾದರಿ ೧ : "ಗೋಣ್ ಮಕ್ಕನ ಸೈ ಅಂದರೆ ಗೋಣ್ ಮಕ್ಕನ ಬಿಡುವಚ್ಚು ಯಣ್ ಮಕ್ಕನ ಸೈ ಅಂದರೆ ಯಣ್ ಮಕ್ಕನ ಬಿಡುವಚ್ಚು"[೪] ಆದೋನಿ ಪರಿಸರ ಮೀನಗೊಂದಿ ಗ್ರಾಮದಲ್ಲಿ ಗುಡ್ಡದ ಮಲ್ಲಯ್ಯನ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ಒಬ್ಬ ಹೆಣ್ಣು ಮಗಳನ್ನು ಸಂದರ್ಶಿಸಿದಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡು ಬಂದಿದೆ. 'ಬಿಡುವಚ್ಚು' ಎಂದರೆ ಬಿಡಬಹುದು ಎಂದು ಅರ್ಥ. ಬಿಡು ಎನ್ನುವ ಕನ್ನಡ ಪದಕ್ಕೆ 'ವಚ್ಚು' ಎನ್ನುವ ತೆಲುಗು ರೂಪ ಸೇರಿಕೊಂಡು ನುಡಿಮಿಶ್ರಣ ಪ್ರಕ್ರಿಯೆ ನಡೆದಿದೆ.

ಮಾದರಿ ೨ : "ದ್ಯಾವರ ಸ್ವಾಮಾನು ಅಯ್‌ತ್ಯಾ ಇಲ್ಲ ನೋಡಕಂತೀವಿ ತಿರಗ ಸಸ್ತ್ರ ಪವಾಡ ಮಾಡ್ತಾರ"[೫] ಮಡಿವಾಳ ಹನುಮಂತಪ್ಪನನ್ನು ಸಂದರ್ಶಿಸಿದಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು

ಕಂಡುಬಂದಿದೆ. 'ತಿರಗ' ಎಂದರೆ ನಂತರ ಎನ್ನುವ ಅರ್ಥ. ಕನ್ನಡ ವಾಕ್ಯದಲ್ಲಿ 'ತಿರಗ' ಎನ್ನುವ ತೆಲುಗು ಪದ ಸೇರಿಕೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೩ : "ಈ ಸಂಸ್ಥಾದಾಗ ನಮ್ಮನ್ನ ಬೇಸ್ ನೋಡಕಂತಾರ"[೬] ಆದೋನಿ ಕಲ್ಮಠದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಸಂದರ್ಶಿಸಿದಾಗ ಅಲ್ಲಿನ ವಿದ್ಯಾರ್ಥಿ ಮೇಲಿನ ವಾಕ್ಯವನ್ನು ಹೇಳಿದ. ಆದೋನಿ ಆಂಧ್ರದ ಆಡಳಿತಕ್ಕೆ ಒಳಪಟ್ಟಿದ್ದರೂ ನಮ್ಮ ಕಲ್ಮಠ ಕನ್ನಡದ ಬಗ್ಗೆ ಕಾಳಜಿ ವಹಿಸಿ, ಕನ್ನಡ ಪರ ವಿಚಾರ ಸಂಕಿರಣಗಳನ್ನು, ಪುರಾಣಗಳನ್ನು ಮತ್ತು ಕನ್ನಡಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಕನ್ನಡವನ್ನು ಉಳಿಸುತ್ತಾ, ಬೆಳೆಸುತ್ತಾ ಬಂದಿದೆ ಎಂದು ಹೇಳುವಾಗ ಮೇಲಿನ ವಾಕ್ಯ ಅವರಲ್ಲಿ ಬಳಕೆಯಲ್ಲಿರುವುದು ಗಮನಿಸಲಾಗಿದೆ. ಸಂಸ್ಥೆ ಎನ್ನುವ ಕನ್ನಡ ಪದದಲ್ಲಿ ಪದಾಂತ್ಯ ಪರಿಸರದ 'ಎ' ಕಾರವಿದ್ದರೆ ಆದೋನಿ ಕನ್ನಡದಲ್ಲಿ ಸಂಸ್ಥ ಎಂದು ಬಳಕೆಯಲ್ಲಿದೆ. ಪದಾಂತ್ಯ ಪರಿಸರದ 'ಎ' ಕಾರ 'ಅ' ಕಾರವಾಗಿ ಮಾರ್ಪಟ್ಟಿದೆ.

ಮಾದರಿ ೪ : "ಯಾರಾದರೂ ಸತ್ತಾಗ ಮೂರ್‌ದಿವ್ಸ ಕಾರೇವು ಮಾಡಾಕ ಕಾಕಿ ಇರಲೇಬೇಕು"[೭] ಸತ್ತ ಆಚರಣೆಗಳಳ ಬಗ್ಗೆ ಚರ್ಚಿಸುತ್ತಿರುವಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ಯಾರೇ ಸತ್ತರೂ ಮೂರನೇ ದಿವಸದ ಕಾರ್ಯ ಮಾಡುತ್ತಾರೆ. ಆ ಕಾರ್ಯ ಮಾಡುವಾಗ ಸತ್ತ ವ್ಯಕ್ತಿಯ ಇಷ್ಟವಾದ ತಿಂಡಿ ತಿನಿಸುಗಳನ್ನು ಅವರ ಸಮಾಧಿಯ ಮೇಲೆ ಇಡುತ್ತಾರೆ. ನಂತರ ದೂರ ಹೋಗಿ ಕೂಡುತ್ತಾರೆ. ಯಾವುದಾದರೂ ಕಾಗೆ ಬಂದು ಆ ತಿಂಡಿ ತಿನಿಸುಗಳನ್ನು ತಿಂದರೆ ಸತ್ತ ವ್ಯಕ್ತಿಗೆ ಮೋಕ್ಷ ಸಿಗುತ್ತದೆ ಎನ್ನುವ ನಂಬಿಕೆ ಈ ಭಾಗದ ಜನರಲ್ಲಿದೆ. ಈ ವಿಷಯದ ಕುರಿತು ಮಾಹಿತಿ ನೀಡುವಾಗ ಕನ್ನಡದ ಕಾಗೆ ಎನ್ನುವ ಪದಕ್ಕೆ ಬದಲಾಗಿ ತೆಲುಗಿನ ಕಾಕಿ ಎನ್ನುವ ರೂಪ ಬಳಕೆಯಲ್ಲಿರುವುದು ಕಂಡುಬಂದಿದೆ.

ಮಾದರಿ ೫ : ಬಸ್ ಬಿಡವತ್ತಾಯಿತು ಜಲ್ದಿ 'ಬಸ್ಸು ಯಕ್ಕು'. ಆದೋನಿ ಬಸ್ ನಿಲ್ದಾಣದಲ್ಲಿ ಮೇಲಿನ ವಾಕ್ಯ ಕಂಡುಬಂದಿದೆ. 'ಬಸ್ಸು ಯಕ್ಕು' ಎಂದರೆ 'ಬಸ್ಸು ಹತ್ತು' ಎಂದು ಅರ್ಥ. ಬಸ್ಸು ಎನ್ನುವ ಕನ್ನಡದ ಪದಕ್ಕೆ 'ಯಕ್ಕು' ಎನ್ನುವ ತೆಲುಗು ರೂಪ ಸೇರಿಕೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೬ : 'ವಕ ರೂಪಾಯಿ ಬೀಡಿ ಕೊಡು.'[೮] ಆದೋನಿ ಪರಿಸರದ ಬದನೆಹಾಳ್‌ನಲ್ಲಿ ಮೇಲಿನ ವಾಕ್ಯ ಬಳಕೆಯಲ್ಲಿರುವುದು ಕಂಡುಬಂದಿದೆ. 'ಒಂದು ರೂಪಾಯಿ ಬೀಡಿ ಕೊಡು' ಎನ್ನುವ ವಾಕ್ಯಕ್ಕೆ ಪರ್ಯಾಯವಾಗಿ ಮೇಲಿನ ವಾಕ್ಯ ಬಳಕೆಯಲ್ಲಿದೆ. 'ಒಂದು' ಎನ್ನುವ ಕನ್ನಡದ ಪದಕ್ಕೆ ಬದಲಾಗಿ ತೆಲುಗಿನ 'ಒಕ' ಎನ್ನುವ ಸಂಖ್ಯಾವಾಚಕ ಪದ 'ವಕ' ಎಂದು ಬಳಕೆಗೊಂಡು ನುಡಿಮಿಶ್ರಣದ ರೂಪ ನಡೆದಿದೆ.

ಮಾದರಿ ೭ : 'ಬರ್‌ತಾನೋ ಇಲ್ಲ ಗೊತ್‌ಲೇದು.'[೯] ಆದೋನಿ ಪರಿಸರದ 'ಸುಳುವಾಯಿ' ಗ್ರಾಮದಲ್ಲಿ ತಿಮ್ಮಪ್ಪ ಎನ್ನುವ ವ್ಯಕ್ತಿಯಲ್ಲಿ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ಗೊತ್‌ಲೇದು ಎನ್ನುವ ತೆಲುಗಿನ ಪದಕ್ಕೆ ಕನ್ನಡದ ಅರ್ಥ ಗೊತ್ತಿಲ್ಲ ಎಂದು. ಆದರೆ ಗೊತ್ತು ಎನ್ನುವ ಕನ್ನಡ ಪದಕ್ಕೆ 'ಲೇದು' ಎನ್ನುವ ತೆಲುಗಿನ ರೂಪ ಸೇರಿಕೊಂಡು ಗೊತ್‌ಲೇದು ಎಂದು ನುಡಿಬೆರಕೆ ಕ್ರಿಯೆ ನಡೆದಿದೆ.

ಮಾದರಿ ೮ : 'ಕನ್ನಡದ ಕೆಲಸಗಳಿಗೆ ನಾವು ಪ್ರಧಾನತ ಕೊಡ್ತೀವಿ.'[೧೦] ಆದೋನಿ ಕಲ್ಮಠದಲ್ಲಿರುವ ವಿದ್ಯಾರ್ಥಿಗಳನ್ನು ಸಂದರ್ಶಿಸಿದಾಗ ಇಲ್ಲಿನ ಕನ್ನಡಪರ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಪ್ರಶ್ನಿಸಿದಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ಪ್ರಧಾನತೆ ಎನ್ನುವ ಕನ್ನಡ ಪದಕ್ಕೆ ಪರ್ಯಾಯವಾಗಿ 'ಪ್ರಧಾನತ' ಎನ್ನುವ ತೆಲುಗು ಪದ ಬಳಕೆಯಲ್ಲಿದೆ. ಪದಾಂತ್ಯ ಪರಿಸರದ 'ಎ' ಕಾರ 'ಅ' ಕಾರವಾಗಿ ಬಳಕೆಯಲ್ಲಿದೆ.

ಮಾದರಿ ೯ : 'ಅವರೂರಾಗ ಕಲ್ಲಗಡ್ಡಿ ಬಂದಿತ್ತು.'[೧೧] ಎಲೆ ಮಲ್ಲೇಶ್ವರ ಶಾಲೆ, ಆದೋನಿಯ ವಿದ್ಯಾರ್ಥಿಗಳಿಂದ ಕಥೆಗಳನ್ನು ಸಂಗ್ರಹಿಸುವಾಗ ಮೇಲಿನ ನುಡಿಬೆರಕೆ ಪ್ರಕ್ರಿಯೆ ಕಂಡುಬಂದಿದೆ. 'ಕರಡಿ' ಎನ್ನುವ ಕನ್ನಡ ಪದಕ್ಕೆ ಬದಲಾಗಿ 'ಕಲ್ಲಗಡ್ಡಿ' ಎನ್ನುವ ತೆಲುಗು ಪದ ಬಳಕೆಯಲ್ಲಿದೆ.

ಮಾದರಿ ೧೦ : "ಯಂಡೆ ಸಾರಿಸಿ ಮುಗ್ಗು ಆಕಿ ಕೊಂತೆಮ್ಮ ಕುಂದ್ರಿಸಿದ್ದರು."[೧೨] ಎಲೆ ಮಲ್ಲೇಶ್ವರ ಶಾಲೆ ಆದೋನಿ ವಿದ್ಯಾರ್ಥಿಗಳನ್ನು ಸಂದರ್ಶಿಸಿ ಗೌರಿಹಬ್ಬದ ಪ್ರಯುಕ್ತ ಚರ್ಚಿಸುತ್ತಿರುವಾಗ ಮೇಲಿನ ವಾಕ್ಯ ಕಂಡುಬಂದಿದೆ. ಕನ್ನಡದ 'ರಂಗೋಲಿ' ಪದಕ್ಕೆ ಪರ್ಯಾಯವಾಗಿ ತೆಲುಗಿನ 'ಮುಗ್ಗು' ರೂಪ ಬಳಕೆಯಲ್ಲಿದ್ದು, ನುಡಿಬೆರಕೆ ಪ್ರಕ್ರಿಯೆ ಕಂಡುಬಂದಿದೆ.

ಮಾದರಿ ೧೧ : 'ಕಟ್ಟಿಗೆಗಳು ನಮ್ಮು ಇದ್ದವು'[೧೩] ಆದೋನಿ ಪರಿಸರದ 'ಉಪ್ಪರಳ್ಳಿ' ಏಕಂಬ್ರಿರೆಡ್ಡಿಯವರಲ್ಲಿ ಮೇಲಿನ ವಾಕ್ಯ ಕಂಡುಬಂದಿದೆ. 'ಹಸಿ' ಎನ್ನುವ ಕನ್ನಡದ ಪದಕ್ಕೆ ಪರ್ಯಾಯವಾಗಿ 'ನಮ್ಮು' ಎನ್ನುವ ತೆಲುಗಿನ ರೂಪ ಸೇರಿಕೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೧೨ : 'ಸಿಲುಕ ಲೂಜ್ ಇರ್ರೈತಲ್ಲ ಬಾಕ್ಲ ತೆಗೆದು ಬಿಡ್ತಾನ'[೧೪] ಆದೋನಿಯ ಎಲೆ ಮಲ್ಲೇಶಪ್ಪ ಶಾಲೆಯ ವಿದ್ಯಾರ್ಥಿಗಳನ್ನು ಸಂದರ್ಶಿಸಿ ಕಥೆಗಳನ್ನು ಸಂಗ್ರಹಿಸುವಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ಕನ್ನಡದ 'ಚಿಲಕ' ಪದಕ್ಕೆ ಬದಲಾಗಿ ತೆಲುಗಿನ 'ಸಿಲುಕ' ಪದ ಬಳಕೆಯಲ್ಲಿರುವುದು ವೈಶಿಷ್ಟ್ಯ.

ಮಾದರಿ ೧೩ : 'ಕಾಳುಗಳು ತಂದಕೋವಚ್ಚು'[೧೪] ರಾಜಶೇಖರ ಉಪ್ಪಾರರು ಅವರಲ್ಲಿ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿದೆ. ಕನ್ನಡದ 'ತಂದುಕೊಳ್ಳಬಹುದು' ಎನ್ನುವ ಪದಕ್ಕೆ ಬದಲಾಗಿ ತೆಲುಗಿನ ತಂದುಕೋವಚ್ಚು ಎನ್ನುವ ಪದ ಬಳಕೆಯಲ್ಲಿದೆ. 'ವಚ್ಚು' ಎನ್ನುವ ತೆಲುಗು ರೂಪ ಮೇಲಿನ ವಾಕ್ಯದಲ್ಲಿ ಬಳಕೆಕೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೧೪ : "ವಿಡಾಕುಲ ಕೊಡ್ತಾರಲ್ಲ ಅದು ಕೊಡ್ತೀನಿ."[೧೫] ಕನ್ನಡದ ವಿಚ್ಛೇದನ ಎನ್ನುವ ಪದಕ್ಕೆ ಬದಲಾಗಿ 'ವಿಡಾಕುಲ' ಎನ್ನುವ ತೆಲುಗು ರೂಪ ಸೇರಿಕೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೧೫ : 'ದಿನಾ ಕೆಲ್ಸಕ ವೋಗಿ ಬರಾದು ಅಲವಾಟಾಗಿದೆ'. ಆದೋನಿ ಪರಿಸರದಲ್ಲಿ ಸಂತೆಕೋಡ್ಲೂರುನಲ್ಲಿ ಮೇಲಿನ ಪದ ಬಳಕೆಯಾಗಿದೆ. ಕನ್ನಡದ ಅಭ್ಯಾಸವಾಗಿದೆ ಎನ್ನುವ ಪದಕ್ಕೆ ಪರ್ಯಾಯವಾಗಿ 'ಅಲವಾಟಾಗಿದೆ' ಎನ್ನುವ ತೆಲುಗು ಪದ ಬಳಕೆಯಲ್ಲಿರುವುದು ವೈಶಿಷ್ಟ್ಯವಾಗಿದೆ.

ಮಾದರಿ ೧೬ : 'ಅವನು ಬಾಳ ಚಿದುಗು ಗೂದೆ ಮಕದೋನು'[೧೭] ಆದೋನಿ ಪರಿಸರದ ಮೀನಿಗೊಂದಿಯ ಗುಡ್ಡದ ಮಲ್ಲಯ್ಯನ ಜಾತ್ರೆಯಲ್ಲಿ 'ಮಲ್ಲಮ್ಮ' ನೆರಣಿಕ, ಗೊರವರು ಅವರಲ್ಲಿ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ಕನ್ನಡದ 'ತುಂಟತನ' ಎನ್ನುವ ಪದಕ್ಕೆ ಪರ್ಯಾಯವಾಗಿ 'ಚಿದುಗು' ಎನ್ನುವ ತೆಲುಗು ರೂಪ ಬಳಕೆಯಲ್ಲಿದೆ.

ಮಾದರಿ ೧೭ : "ಮಲ್ಲಯ್ಯ ತೇರಿಗೆ ಪಲ್ಲ ಭೀಮು ಬೇಕು"[೧೮] ವಿಜಯಲಕ್ಷ್ಮಿ ಕುರುಬ ಅವರಲ್ಲಿ ಜಾತ್ರೆಯ ಬಗ್ಗೆ ಚರ್ಚಿಸುತ್ತಿರುವಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ನೂರು ಕೇಜಿ ಅಕ್ಕಿ, ಅಂದರೆ ಕ್ವಿಂಟಾಲ್ ಅಕ್ಕಿ ಬೇಕು ಎನ್ನುವುದಕ್ಕೆ 'ಪಲ್ಲಭೀಮು' ಎನ್ನುವ ತೆಲುಗು ಪದ ಬಳಕೆಗೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೧೮ : 'ಅವರೆಲ್ಲಾ ಆಗು ಆಗು ಅಂದರೆ ಗುಡ ನಿಂದ್ರಲಿಲ್ಲ'[೧೯] ಆದೋನಿ ಶ್ರೀ ಎಲೆಮಲ್ಲೇಶಪ್ಪ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಕಥೆಗಳನ್ನು ಸಂಗ್ರಹಿಸುವಾಗ ಮೇಲಿನ ವಾಕ್ಯ ಕಂಡುಬಂದಿದೆ. 'ನಿಲ್ಲು' ಎನ್ನುವ ಕನ್ನಡ ಪದಕ್ಕೆ ಪರ್ಯಾಯವಾಗಿ 'ಆಗು' ಎನ್ನುವ ತೆಲುಗು ರೂಪ ಬಳಕೆಯಲ್ಲಿರುವುದು ವೈಶಿಷ್ಟ್ಯ.

ಮಾದರಿ ೧೯ : 'ಅವರ್ ಮನ್ಯಾಗ ಚಿಕನ್ ಪುಲ್ಸು ಚೆನ್ನಾಗಿತ್ತು'[೨೦] ತಿಮ್ಮಪ್ಪ ಸುಳುವಾಯಿ ಅವರೊಂದಿಗೆ ಚರ್ಚಿಸುತ್ತಿರುವಾಗ ಮೇಲಿನ ವಾಕ್ಯ ಬಳಕೆಯಲ್ಲಿರುವುದು ಕಂಡುಬಂದಿದೆ. 'ಕೋಳಿಸಾರು' ಎನ್ನುವುದು ಚಿಕನ್ ಪುಲ್ಸು ಎಂದು ಈ ಭಾಗದಲ್ಲಿ ಬಳಕೆ ಮಾಡುತ್ತಿರುವುದು ವೈಶಿಷ್ಟ್ಯ. 'ಚಿಕನ್' ಎನ್ನುವ

ಪದ ಆಂಗ್ಲವಾದರೂ 'ಪುಲ್ಸು' ಎನ್ನುವ ಪದ ತೆಲುಗಿನದಾಗಿದೆ. ಕನ್ನಡ ವಾಕ್ಯದಲ್ಲಿ ತೆಲುಗಿನ 'ಪುಲ್ಸು' ರೂಪ ಸೇರಿಕೊಂಡು ನುಡಿಬೆರಕೆ ಪ್ರಕ್ರಿಯೆ ನಡೆದಿದೆ.

ಮಾದರಿ ೨೦ : 'ಆ ಊರ್ನಾಗ ಬಾರಿ ತಿಕ್ ಮಂದಿ ಅಯ್‌ದಾರ'. ಬದನೆಹಾಳ್ ವ್ಯಕ್ತಿ ಪಕ್ಕದ ಊರಿನ ವ್ಯಕ್ತಿಯನ್ನು ಕುರಿತು ಮಾತನಾಡುವಾಗ ಮೇಲಿನ ವಾಕ್ಯ ಉಚ್ಚಾರಣೆಯಲ್ಲಿರುವುದು ಕಂಡುಬಂದಿದೆ. ಕನ್ನಡದ 'ಹುಚ್ಚ' ಎನ್ನುವ ಪದಕ್ಕೆ ತೆಲುಗಿನ 'ತಿಕ್ಕ' ಎನ್ನುವ ಪದ ಸೇರಿಕೊಂಡು ಬಳಕೆಯಲ್ಲಿರುವುದು ಆದೋನಿ ಕನ್ನಡದ ವೈಶಿಷ್ಟ್ಯ.

ಕನ್ನಡ ಭಾಷೆಯಲ್ಲಿ ಬೇರೆ ಬೇರೆ ಭಾಷೆಗಳ ಪ್ರಭಾವದಿಂದ ಇತ್ತೀಚಿನ ದಿನಗಳಲ್ಲಿ ಹೊಸ ರಚನೆಗಳು ಉಚ್ಚಾರಣೆಯಲ್ಲಿವೆ. ಇಂತಹ ಪದಕೋಶದ ಘಟಕಗಳು ದೇಶ್ಯವೋ ಅನ್ಯದೇಶವೋ ಎಂಬುದು ಮುಖ್ಯವಾಗದೆ ಸಂವಹನಕ್ಕೆ ಅನುಕೂಲತೆಗೆ ಉಚ್ಚಾರಣೆಯಲ್ಲಿರುವುದು ಗಮನಿಸುವಂತಹ ಅಂಶ. ಇಂತಹ ಹೊಸ ಪ್ರಯೋಗ ಆದೋನಿ ವ್ಯವಹಾರಿಕ ಕನ್ನಡದ ಉಚ್ಚಾರಣೆಯಲ್ಲಿ ಕಂಡುಬರುತ್ತದೆ. ತೆಲುಗು ಮಾತೃಭಾಷೆಯವರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ಎರಡು ಹೊಸ ಮಾದರಿ ರೂಪಗಳು ಉಚ್ಚಾರಣೆಯಲ್ಲಿವೆ. ಒಂದು ಮೊದಲನೆಯ ಪದ ಕನ್ನಡವಾಗಿದ್ದು ಎರಡನೇ ಪದ ತೆಲುಗು ಪದವಾಗಿರುವುದು. ಉದಾ : ಬಸ್ಸು ಯಕ್ಕು, ಗೊತ್‌ಲೇದು, ವಲ್ಲಂಟಾಡು, ಪಕ್‌ಇಲ್ಲು, ಯತ್ತುಕೋಪೋ, ಬಾಳೆಪಂಡ್ಲು, ಕೊಬ್ಬರಿಚೆಟ್ಟು, ಜಾರಿಪಡ್ಡಾಡು, ಬಂಡಿಬಾಟ, ಅಭಿಪ್ರಾಯಮು, ಬುದ್ಧಿವಂತುಡು, ಉಗ್ಲಗಡ್ಡೆ, ಮಬ್ಬುಲಾಕಿ ಮುಂತಾದ ಕನ್ನಡ ತೆಲುಗು ನುಡಿಮಿಶ್ರಣ ರೂಪಗಳು ಉಚ್ಚಾರಣೆಯಲ್ಲಿವೆ. ಹಾಗೆಯೇ ಮೊದಲನೆ ಪದ ತೆಲುಗು ಆಗಿದ್ದು ಎರಡನೇ ಪದ ಕನ್ನಡ ಸೇರಿಕೊಂಡು ಬಳಕೆ ಮಾಡುವುದು ಎರಡನೇ ಮಾದರಿ.

ಉದಾ : ಒಕರೂಪಾಯಿ, ಡಬ್ಬು ಅಯ್‌ತ್ಯಾ, ದೊಂಗಕದ್ರೆ, ಟೆಂಕಾಯಿ ಮುಂತಾದ ಪದಗಳು.

ಮೇಲಿನ ಎರಡು ಮಾದರಿಗಳು ನಿರ್ದಿಷ್ಟ ವಲಯದಲ್ಲಿ ಉಚ್ಚಾರಣೆಯಲ್ಲಿವೆ. ಇಂತಹ ನುಡಿಮಿಶ್ರಣ ರಚನೆಗಳನ್ನು ಯಾವ ಭಾಷಾ ವ್ಯವಹಾರಕ್ಕೆ ಸೇರಿಸುವುದು ಎನ್ನುವುದು ಪ್ರಸ್ತುತ ಭಾಗದ ಚರ್ಚೆಯಾಗಿದೆ. ಇಲ್ಲಿ ಉಚ್ಚಾರಣೆಯಲ್ಲಿರುವ ಹೊಸ ರಚನೆಗಳು ಯಾವ ಭಾಷೆಗೂ ಅರ್ಥದ ದೃಷ್ಟಿಯಿಂದ ವ್ಯತ್ಯಾಸವಾಗದೆ ಆಡುಗನ ಉದ್ದೇಶಕ್ಕೆ ತಕ್ಕಂತೆ ಉಚ್ಚಾರಣೆಯಲ್ಲಿವೆ. ಇಂತಹ ಹಿನ್ನೆಲೆಯುಳ್ಳ ರಚನೆಗಳ ವಿವರಣೆಯನ್ನು ಮುಂದೆ ಚರ್ಚೆ ಮಾಡಲಾಗಿದೆ.

* ಅಕ್ಕಜೆಲ್ಲಳು : 'ಅಕ್ಕ' ಎನ್ನುವುದು ಕನ್ನಡ ಪದ. ಚೆಲ್ಲಳ್ಳು ಎನ್ನವುದು ತೆಲುಗಿನ ಪದ. ತೆಲುಗಿನ ಚೆಲ್ಲಳ್ಳು ಎನ್ನುವುದಕ್ಕೆ ಕನ್ನಡದಲ್ಲಿ ತಂಗಿಯರು ಎಂದು ಅರ್ಥ. ಇಲ್ಲಿ 'ಚ' ಕಾರ ಲೋಪಗೊಂಡು 'ಜ' ಕಾರ ಆದೇಶವಾಗಿ ಬಂದಿದೆ. ಅಕ್ಕ ಎನ್ನುವ ಕನ್ನಡ ಪದಕ್ಕೆ ಚೆಲ್ಲಳ್ಳು ಎನ್ನುವ ತೆಲುಗಿನ ಪದ ಸೇರಿಕೊಂಡು ಅಕ್ಕಜೆಲ್ಲಳ್ಳು ಎಂದು ಉಚ್ಚಾರಣೆಯಲ್ಲಿದೆ.

* ಅಡ್ಡರೋಟು : 'ಅಡ್ಡ' ಎನ್ನುವುದು ಕನ್ನಡ ಪದ. 'ರೋಡ್' ಇಂಗ್ಲೀಷ್‌ನಿಂದ ಬಂದ ಎರವಲು ಪದ. ಇದು ಕನ್ನಡದಲ್ಲಿ ರೋಡು ಎಂದು ಬಳಕೆಯಲ್ಲಿದೆ. 'ರೋಟು' ಎನ್ನುವುದು ವ್ಯವಹಾರಿಕ ತೆಲುಗಿನಲ್ಲಿ ಬಳಕೆಯಲ್ಲಿದೆ. 'ಅಡ್ಡರೋಟು' ಎಂದರೆ 'ಅಡ್ಡರಸ್ತೆ' ಎಂದು ಅರ್ಥ. ಅಡ್ಡ ಎನ್ನುವ ಕನ್ನಡ ಪದಕ್ಕೆ 'ರೋಟು' ಎನ್ನುವ ಪದ ಸೇರಿ ನುಡಿ ಬೆರಕೆ ಪ್ರಕ್ರಿಯೆ ಉಚ್ಚಾರಣೆಯಲ್ಲಿದೆ.

ಉದಾ : ಜಲ್ದಿ ಅಡ್ಡರೋಟುಗೆ ವೋಗ್ ಬಸ್ ಸಿಗತ್ತೈತೆ.

* ಅಭಿಪ್ರಾಯಮು : ಅಭಿಪ್ರಾಯ ಎನ್ನುವುದು ಕನ್ನಡ ಪದ. 'ಮು' ಎನ್ನುವುದು ತೆಲುಗಿನ ರೂಪ. 'ಅಭಿಪ್ರಾಯಮು' ಎಂದರೆ ಕನ್ನಡದಲ್ಲಿ ಅಭಿಪ್ರಾಯ ಎಂದು ಅರ್ಥ. 'ಅಭಿಪ್ರಾಯ' ಎನ್ನುವ ಕನ್ನಡ ಪದಕ್ಕೆ 'ಮು' ಎನ್ನುವ ತೆಲುಗು ರೂಪ ಸೇರಿಕೊಂಡು ಅಭಿಪ್ರಾಯಮು ಎಂದು ಉಚ್ಚಾರಣೆಯಲ್ಲಿದೆ.

ಉದಾ : ನಿನ್ ಅಭಿಪ್ರಾಯಮು ಯೇನ್ ಯೇಳು.

ಇದೇ ರೀತಿಯಾಗಿ ರೂಪಮು, ಆದಾರಮು, ಗಜಮು ಮುಂತಾದ ಪದಗಳು ನುಡಿಮಿಶ್ರಣ ಪ್ರಕ್ರಿಯೆಯಲ್ಲಿ ಕಂಡುಬರುತ್ತವೆ. ಆದಾರಮು ಎನ್ನುವ ಪದವು ಸಂದರ್ಭಕ್ಕೆ ತಕ್ಕಂತೆ ಮೂರು ಅರ್ಥಗಳನ್ನು ಪಡೆದಿದೆ.

ಉದಾ : ಆದಾರಮು ಕೂಡು (ಬಟ್ಟೆ ಹೊಲೆಯುವ ದಾರ)

ಆದಾರಮು ಅಚ್ಚಿಕ್ಕಾ (ದೇವರ ಭಂಡಾರ)

ಮನಿಗೆ ಅವನೇ ಆದಾರ (ಬೆನ್ನೆಲುಬು)

* ಕಸ್ಪಪಡಿತೆ : ಕಷ್ಟ ಎನ್ನುವುದು ಕನ್ನಡದ ಪದ. 'ಷ' ಕಾರದ ಸ್ಥಾನದಲ್ಲಿ 'ಸ' ಕಾರ ಆದೇಶವಾಗಿದೆ. 'ಪಡಿತೆ' ಎನ್ನುವುದು ತೆಲುಗಿನ ಪದ. 'ಪಡಿತೆ' ಎಂದರೆ ಕನ್ನಡದಲ್ಲಿ ಬಿದ್ದರೆ ಎಂದು ಅರ್ಥ. ಕಷ್ಟ ಎನ್ನುವ ಕನ್ನಡ ಪದಕ್ಕೆ 'ಪಡಿತೆ' ಎನ್ನುವ ತೆಲುಗಿನ ಪದ ಸೇರಿಕೊಂಡು ಕಷ್ಟಪಡಿತೆ ಎನ್ನುವ ಪದ ಬಳಕೆಯಲ್ಲಿದೆ.

ಉದಾ : ಕಸ್ಪಪಡಿತೆ ಲಾಭ ಇದೆ.

* ಕಾಯಿಗೂರ್‍ಲ್ಲು : 'ಕಾಯಿ' ಎನ್ನುವುದು ಕನ್ನಡದ ಪದ. 'ಗೂರ್‍ಲ್ಲು' ಎನ್ನುವುದು ತೆಲುಗಿನ ಪದ. 'ಗೂರ್‍ಲ್ಲು' ಎನ್ನುವುದಕ್ಕೆ ಕನ್ನಡದಲ್ಲಿ ಪಲ್ಯ ಎಂದು ಅರ್ಥ. 'ಕಾಯಿ' ಎನ್ನುವ ಕನ್ನಡ ಪದಕ್ಕೆ 'ಗೂರ್‍ಲ್ಲು' ಎನ್ನುವ ತೆಲುಗಿನ ಪದ ಸೇರಿಕೊಂಡು 'ಕಾಯಿಗೂರ್‍ಲ್ಲು' ಆಗಿ ಉಚ್ಚಾರಣೆಯಲ್ಲಿದೆ.

ಉದಾ : ಅಂಗ್ಡಿಗೆ ವೋಗಿ ಕಾಯಿಗೂರ್‍ಲ್ಲು ತರಬೇಕು.

* ಕೊತ್ತಮಿರಿ : 'ಕೊತ್ತ' ಎನ್ನುವುದು ಕನ್ನಡದ ರೂಪ. 'ಮಿರಿ' ಎನ್ನುವುದು ತೆಲುಗಿನ ರೂಪ. ಕೊತ್ತಮಿರಿ ಎನ್ನುವ ಪದವು ಕನ್ನಡದಲ್ಲಿ ಕೊತ್ತಂಬರಿ ಎಂದು ಬಳಕೆಯಲ್ಲಿದೆ. ಕೊತ್ತ ಎನ್ನುವ ಕನ್ನಡ ರೂಪಕ್ಕೆ 'ಮಿರಿ' ಎನ್ನುವ ತೆಲುಗು ರೂಪ ಸೇರಿಕೊಂಡು ಕೊತ್ತಮಿರಿ ಎಂದು ಉಚ್ಚಾರಣೆಯಲ್ಲಿದೆ.

ಉದಾ : ಒಂದು ಸೂಡು ಕೊತ್ತಮಿರಿ ಎಲ್ಡುರೂಪಾಯಿ.

* ಕೊಬ್ಬರಿಚೆಟ್ಟು : 'ಕೊಬ್ಬರಿ' ಎನ್ನುವುದು ಕನ್ನಡದ ಪದ. 'ಚೆಟ್ಟು' ಎನ್ನುವುದು ತೆಲುಗಿನ ಪದ. ಚೆಟ್ಟು ಎನ್ನುವುದಕ್ಕೆ ಕನ್ನಡದಲ್ಲಿ 'ಗಿಡ' ಎಂದು ಅರ್ಥ. ಕೊಬ್ಬರಿ ಎನ್ನುವ ಕನ್ನಡ ಪದಕ್ಕೆ ಚೆಟ್ಟು

ಎನ್ನುವ ತೆಲುಗಿನ ಪದ ಸೇರಿಕೊಂಡು 'ಕೊಬ್ಬರಿ ಚೆಟ್ಟು' ಆಗಿದೆ. ಕೊಬ್ಬರಿ ಚೆಟ್ಟು ಎಂದರೆ ತೆಂಗಿನ ಗಿಡ ಎಂದು ಅರ್ಥ.

ಉದಾ : ನಿಮ್ಮ ವಲದಾಗ ಕೊಬ್ಬರಿಚೆಟ್ಟು ಅಯ್‌ದಾವ?

* ಗೊತ್‌ಲೇದು : 'ಗೊತ್ತು' ಎನ್ನುವುದು ಕನ್ನಡದ ಪದ. ಲೇದು ಎನ್ನುವುದು ತೆಲುಗಿನ ಪದ. ಕನ್ನಡದ 'ಗೊತ್' ಎನ್ನುವುದಕ್ಕೆ ತೆಲುಗಿನ 'ಲೇದು' ಪದ ಸೇರಿಕೊಂಡು 'ಗೊತ್‌ಲೇದು' ಆಗಿ ಉಚ್ಚಾರಣೆಯಲ್ಲಿದೆ.

ಉದಾ : ಬರತಾನೋ ಇಲ್ಲೋ ಗೊತ್‌ಲೇದು.

* ಜಾರಿಪಡ್ಡಾಡು : 'ಜಾರಿ' ಎನ್ನುವುದು ಕನ್ನಡದ ಪದ. 'ಪಡ್ಡಾಡು' ಎನ್ನುವುದು ತೆಲುಗಿನ ಪದ. ಪಡ್ಡಾಡು ಎನ್ನುವುದಕ್ಕೆ ಕನ್ನಡದ ಅರ್ಥ 'ಬಿದ್ದಿದ್ದಾನೆ'. ಜಾರಿ ಎನ್ನುವ ಕನ್ನಡ ಪದಕ್ಕೆ 'ಪಡ್ಡಾಡು' ಎನ್ನುವ ತೆಲುಗಿನ ಪದ ಸೇರಿಕೊಂಡು ಜಾರಿ ಪಡ್ಡಾಡು ಎಂದು ಉಚ್ಚಾರಣೆಯಲ್ಲಿರುವುದು ಗಮನಾರ್ಹ ವಿಚಾರ.

ಉದಾ : ರವಿ ದಾರ್‍ಯಾಗ ಜಾರಿಪಡ್ಡಾಡು.

* ತಲ್‌ದೂಬು : 'ತಲೆ' ಎನ್ನುವುದು ಕನ್ನಡದ ಪದ. 'ದೂಬು' ಎನ್ನುವುದು ತೆಲುಗಿನ ಪದ. ತೆಲುಗಿನ 'ದೂಬು' ಎಂದರೆ 'ಬಾಚು' ಎಂದು ಅರ್ಥ. ತಲೆ ಎನ್ನುವ ಕನ್ನಡ ಪದಕ್ಕೆ 'ದೂಬು' ಎನ್ನುವ ತೆಲುಗಿನ ಪದ ಸೇರಿಕೊಂಡು 'ತಲದೂಬು' ಎಂದು ಉಚ್ಚಾರಣೆಯಲ್ಲಿದೆ.

ಉದಾ : ಜಲ್ದಿ ಅವನಿಗೆ ತಲದೂಬು ವರಾಗ ಕರಕಂಡು ವೋಗ್ತೀನಿ.

* ತಲ್‌ನೊಪ್ಪಿ : 'ತಲೆ' ಎನ್ನುವುದು ಕನ್ನಡದ ಪದ. 'ನೊಪ್ಪಿ' ಎನ್ನುವುದು ತೆಲುಗಿನ ಪದ. ತೆಲುಗಿನ 'ನೊಪ್ಪಿ' ಎಂದರೆ ನೋವು ಎಂದು

ಅರ್ಥ. 'ತಲೆ' ಎಂಬ ಕನ್ನಡ ಪದಕ್ಕೆ 'ನೊಪ್ಪಿ' ಎಂಬ ತೆಲುಗಿನ ಪದ ಸೇರಿಕೊಂಡು 'ತಲ್‌ನೊಪ್ಪಿ' ಆಗಿ ಉಚ್ಚಾರಣೆಯಲ್ಲಿದೆ.

ಉದಾ : ತಲ್‌ನೊಪ್ಪಿ ಗುಳಿಗೆ ಕೊಡು.

* ದಿಕ್ಕು ಲೇನಿವಾಡು : 'ದಿಕ್ಕು' ಎನ್ನುವುದು ಕನ್ನಡದ ಪದ. 'ಲೇನಿವಾಡು' ಎನ್ನುವುದು ತೆಲುಗಿನ ಪದ. ತೆಲುಗಿನಲ್ಲಿ ಲೇನಿವಾಡು ಎಂದರೆ 'ಇಲ್ಲದವನು' ಎಂದು ಅರ್ಥ. ದಿಕ್ಕು ಎನ್ನುವ ಕನ್ನಡ ಪದಕ್ಕೆ 'ಲೇನಿವಾಡು' ಎಂಬ ತೆಲುಗಿನ ಪದ ಸೇರಿಕೊಂಡು ದಿಕ್ಕುಲೇನಿವಾಡು ಎಂದು ಉಚ್ಚಾರಣೆಯಲ್ಲಿದೆ.

ಉದಾ : ಅವರಪ್ಪ ಸತ್ತಾಗಲಿಂದ ಅವನ್ ದಿಕ್ಕುಲೇನಿವಾಡು ಆಗ್ಯಾನ.

* ಪಕ್ಕ್ಇಲ್ಲು : 'ಪಕ್ಕ ಇಲ್ಲು' ಎಂದರೆ ಕನ್ನಡದಲ್ಲಿ 'ಪಕ್ಕದಮನೆ' ಎಂಬ ಅರ್ಥಗಳಿವೆ. ಇಲ್ಲು ಎನ್ನುವುದು ತೆಲುಗಿನ ಪದ. ಇದಕ್ಕೆ ಕನ್ನಡದ ಅರ್ಥ 'ಮನೆ' ಎಂದು 'ಪಕ್ಕದ' ಎಂಬ ಕನ್ನಡ ಪದಕ್ಕೆ 'ಇಲ್ಲು' ಎಂಬ ತೆಲುಗಿನ ಪದ ಸೇರಿಕೊಂಡು 'ಪಕ್ಕ್ಇಲ್ಲು' ಎಂದು ಉಚ್ಚಾರಣೆಯಲ್ಲಿದೆ.

ಉದಾ : ನಮ್ಮಪ್ಪ ಪಕ್ಕ್ಇಲ್ಲುಲೋ ಉನ್ನಾರು.

* ಪ್ರಾರಂಬಿಂಚು : ಪ್ರಾರಂಭ ಎನ್ನುವುದು ಕನ್ನಡ ಪದ. 'ಇಂಚು' ಎನ್ನುವುದು ತೆಲುಗಿನ ಪದ. ಪ್ರಾರಂಬಿಂಚು ಎನ್ನುವುದಕ್ಕೆ ಕನ್ನಡದಲ್ಲಿ 'ಪ್ರಾರಂಭಿಸು' ಎಂದು ಅರ್ಥ. 'ಪ್ರಾರಂಭ' ಎನ್ನುವ ಕನ್ನಡ ಪದಕ್ಕೆ 'ಇಂಚು' ಎನ್ನುವ ತೆಲುಗಿನ ಪದ ಸೇರಿಕೊಂಡು 'ಪ್ರಾರಂಬಿಂಚು' ಎಂದು ಉಚ್ಚಾರಣೆಯಲ್ಲಿದೆ. ಕನ್ನಡದ 'ಇಸು' ಪ್ರತ್ಯಯದ ಕೆಲಸವನ್ನು ತೆಲುಗಿನಲ್ಲಿ 'ಇಂಚು' ಮಾಡುತ್ತದೆ. ಕನ್ನಡ ಮತ್ತು ತೆಲುಗು ಎರಡು ದ್ರಾವಿಡ

ಭಾಷೆಗಳಾದ್ದರಿಂದ ಕನ್ನಡದ 'ಸ' ಕಾರ ತೆಲುಗಿನಲ್ಲಿ 'ಚ' ಕಾರವಾಗುತ್ತದೆ. 'ಇಂಚು' ಎಂದು ಉಚ್ಚಾರಣೆಯಲ್ಲಿರುವುದು ಗಮನಾರ್ಹ ವಿಚಾರ.

ಉದಾ : ನಿಮ್ ಕೆಲ್ಸ ಪ್ರಾರಂಭಿಂಚು, ಆಮ್ಯಾಲೆ ನಾವು ಬರ್ತೀವಿ.

* ಬಂಡಿಬಾಟ : ಬಂಡಿ ಎನ್ನುವುದು ಕನ್ನಡದ ಪದ. ಬಾಟ ಎನ್ನುವುದು ತೆಲುಗಿನ ಪದ. ಬಾಟ ಎಂದರೆ ಕನ್ನಡದ ಅರ್ಥ ದಾರಿ ಎಂದು 'ಬಂಡಿ' ಎನ್ನುವ ಕನ್ನಡ ಪದಕ್ಕೆ 'ಬಾಟ' ಎಂಬ ತೆಲುಗಿನ ಪದ ಸೇರಿಕೊಂಡು 'ಬಂಡಿಬಾಟ' ಎಂದು ಉಚ್ಚಾರಣೆಯಲ್ಲಿದೆ.

ಉದಾ : ಬಂಡಿಬಾಟ ಬೇಸ್ ಇದ್ದರೆ ಇಂಗೆ ವೋಗ್ ಬೋದು.

* ಬಸ್‌ಯಕ್ಕು : 'ಬಸ್' ಇಂಗ್ಲೀಷ್‌ನಿಂದ ಬಂದ ಎರವಲು ಪದ. ಇದು ಆದೋನಿ ಕನ್ನಡದಲ್ಲಿ ಹಾಗೆಯೇ ಬಳಕೆಯಲ್ಲಿದೆ. 'ಎಕ್ಕು' ಎನ್ನುವುದು ತೆಲುಗಿನ ಪದವಾಗಿದೆ. ಇದಕ್ಕೆ ಕನ್ನಡದ ಅರ್ಥ 'ಏರು' ಎಂದಿದೆ. ಶಿಷ್ಟ ಕನ್ನಡದಲ್ಲಿ 'ಬಸ್ಸು ಏರು' ಎನ್ನುವ ಅರ್ಥಕ್ಕೆ ಆದೋನಿ ಕನ್ನಡದಲ್ಲಿ ಬಸ್ಸುಯಕ್ಕು ಎಂದು ಉಚ್ಚಾರಣೆಯಲ್ಲಿದೆ.

ಉದಾ : ಬಸ್ಸು ಬಿಡೋ ವತ್ತಾಯಿತು. ಜಲ್ದಿ ಬಸ್‌ಯಕ್ಕು.

* ಬಾಳೆಪಂಡ್ಲು : 'ಬಾಳೆ' ಎನ್ನುವುದು ಕನ್ನಡ ಪದ. 'ಪಂಡ್ಲು' ಎನ್ನುವುದು ತೆಲುಗಿನ ಪದ. 'ಪಂಡ್ಲು' ಎನ್ನುವುದಕ್ಕೆ 'ಹಣ್ಣುಗಳು' ಎಂದು ಅರ್ಥ. 'ಬಾಳೆ' ಎನ್ನುವ ಕನ್ನಡ ಪದಕ್ಕೆ ಪಂಡ್ಲು ಎನ್ನುವ ತೆಲುಗಿನ ಪದ ಸೇರಿಕೊಂಡು 'ಬಾಳೆಪಂಡ್ಲು' ಎಂದು ಉಚ್ಚಾರಣೆಯಲ್ಲಿದೆ.

ಉದಾ : ಡಜನ್ ಬಾಳೆಪಂಡ್ಲು ಎಂತ.

* ಬುದ್ಧಿವಂತಡು : 'ಬುದ್ಧಿವಂತ' ಎನ್ನುವುದು ಕನ್ನಡದ ಪದ. 'ಡು' ಎನ್ನುವುದು ತೆಲುಗಿನ ರೂಪ. 'ಬುದ್ಧಿವಂತುಡು' ಎಂದರೆ 'ಬುದ್ಧಿವಂತ' ಎಂದು ಅರ್ಥ. ಕನ್ನಡದ 'ಬುದ್ಧಿವಂತ' ಪದಕ್ಕೆ ತೆಲುಗಿನ 'ಡು' ಪ್ರತ್ಯಯ ಸೇರಿಕೊಂಡು 'ಬುದ್ಧಿವಂತಡು' ಎಂದು ಉಚ್ಚಾರಣೆಯಲ್ಲಿದೆ.

  ಉದಾ : ವುಡುಗುಡು ಬಾರಿ ಬುದ್ಧಿವಂತಡು.

* ಮೊಬ್ಬುಲಾಕಿ : 'ಮಬ್ಬು' ಎನ್ನುವುದು ಕನ್ನಡದ ಪದ. ಆದೋನಿ ಕನ್ನಡದಲ್ಲಿ ಮೊಬ್ಬು ಎಂದು ಬಳಕೆಯಲ್ಲಿದೆ. 'ಲಾಕಿ' ಎನ್ನುವುದು ತೆಲುಗಿನ ಪದ. 'ಮೊಬ್ಬುಲಾಕಿ' ಎಂದರೆ ಕನ್ನಡದಲ್ಲಿ 'ಮಬ್ಬುನೊಳಗೆ' ಎಂದರ್ಥ. 'ಮಬ್ಬು' ಎನ್ನುವ ಕನ್ನಡ ಪದಕ್ಕೆ 'ಲಾಕಿ' ಎಂಬ ತೆಲುಗಿನ ಪದ ಸೇರಿಕೊಂಡು 'ಮೊಬ್ಬುಲಾಕಿ' ಎಂದು ಉಚ್ಚಾರಣೆಯಲ್ಲಿದೆ.

  ಉದಾ : ಮೊಬ್ಬಲಾಕಿ ವೋದರೆ ಬಯ ಆಗೆತ್ತೈತೆ.

* ಯತ್ತಕೋ ಪೋ : 'ಎತ್ತು' ಎನ್ನುವುದು ಕನ್ನಡ ಪದ. ಆದೋನಿ ಕನ್ನಡದಲ್ಲಿ 'ಎ' ಕಾರದ ಬದಲು 'ಯ' ಕಾರ ಆಗಮವಾಗಿ ಯತ್ತುಕೋ ಆಗಿದೆ. 'ಪೊ' ಎನ್ನುವುದು ತೆಲುಗಿನ ಪದ. 'ಪೋ' ಎನ್ನುವುದಕ್ಕೆ ಕನ್ನಡದಲ್ಲಿ ಹೋಗು ಎಂದು ಅರ್ಥ. ಯತ್‌ಕೋ ಎನ್ನುವ ಕನ್ನಡ ಪದಕ್ಕೆ 'ಪೋ' ಎನ್ನುವ ತೆಲುಗಿನ ಪದ ಸೇರಿಕೊಂಡು ಯತ್‌ಕೋ ಪೋ ಆಗಿ ಉಚ್ಚಾರಣೆಯಲ್ಲಿದೆ.

  ಉದಾ : ಆ ವುಡ್ಗನ್ನ ಯತ್‌ಕೋ ಪೊ.

* ವತ್ತಿಪಟ್ಟುಕೋ : 'ಒತ್ತಿ' ಎನ್ನುವುದು ಕನ್ನಡದ ಪದ. 'ಪಟ್ಟುಕೋ' ಎನ್ನುವುದು ತೆಲುಗಿನ ಪದ. ತೆಲುಗಿನಲ್ಲಿ 'ಪಟ್ಟುಕೋ' ಅಂದರೆ ಕನ್ನಡದಲ್ಲಿ ಹಿಡಿದುಕೋ ಎಂದು ಅರ್ಥ. ಕನ್ನಡದ ಒತ್ತಿ

ಎನ್ನುವ ಪದಕ್ಕೆ ತೆಲುಗಿನ ಪಟ್ಟುಕೋ ಪದಗಳು ಸೇರಿಕೊಂಡು ಒತ್ತಿ ಪಟ್ಟುಕೋ ಆಗಿದೆ. 'ಒ' ಕಾರ 'ವ' ಕಾರವಾಗಿ ಮಾರ್ಪಟ್ಟಿದೆ.

ಉದಾ : ಗಟ್ಟಿಯಾಗಿ ವತ್ತಿಪಟ್ಟುಕೋ' ಬಿಡಬ್ಯಾಡ.

* ವಲ್ಲಂಟಾಡು : 'ವಲ್ಲೆ' ಎನ್ನುವುದು ಕನ್ನಡದ ಪದ. 'ಅಂಟಾಡು' ಎನ್ನುವುದು ತೆಲುಗಿನ ಪದ. ತೆಲುಗಿನ 'ಅಂಟಾಡು' ಎನ್ನುವುದಕ್ಕೆ ಕನ್ನಡದಲ್ಲಿ ಅನ್ನುತ್ತಾನೆ ಎಂದು ಅರ್ಥವಿದೆ. ವಲ್ಲೆ ಎನ್ನುವ ಕನ್ನಡ ಪದಕ್ಕೆ 'ಅಂಟಾಡು' ಎನ್ನುವ ತೆಲುಗಿನ ಪದ ಸೇರಿಕೊಂಡು 'ವಲ್ಲಂಟಾಡು' ಆಗಿ ಉಚ್ಚಾರಣೆಯಲ್ಲಿದೆ.

ಉದಾ : ಸ್ಕಾಲೆಗೆ ವೊಗಕ ವಲ್ಲಂಟಾಡು.

ತೆಲುಗು ಮತ್ತು ಕನ್ನಡ ಮಾದರಿಗಳು

* ಉರ್ಲ್ಲಗಡ್ಡೆ : 'ಉರ್ಲ್ಲು' ಎನ್ನುವುದು ತೆಲುಗಿನ ಪದ. 'ಗಡ್ಡೆ' ಎನ್ನುವುದು ಕನ್ನಡ ಪದ. 'ಉರ್ಲ್ಲಗಡ್ಡೆ' ಎಂದರೆ ಆಲುಗಡ್ಡೆ ಎಂದು ಕನ್ನಡದಲ್ಲಿ ಅರ್ಥ. ತೆಲುಗಿನ 'ಉರ್ಲ್ಲು' ಎಂಬ ಪದಕ್ಕೆ ಕನ್ನಡದ 'ಗಡ್ಡೆ' ಸೇರಿ 'ಉರ್ಲ್ಲುಗಡ್ಡೆ' ಎಂದಾಗಿದೆ.

ಉದಾ : ವಂದು ಕೆ.ಜಿ. ಉರ್ಲ್ಲಗಡ್ಡೆ ಎಷ್ಟು?

* ಗಿತ್ತೆಮ್ಮೆ : 'ಗಿತ್ತ' ಎನ್ನುವುದು ತೆಲುಗಿನ ಪದ. ಎಮ್ಮೆ ಎನ್ನುವುದು ಕನ್ನಡದ ಪದ. ಗಿತ್ತೆಮ್ಮೆ ಎಂದರೆ ಕನ್ನಡದಲ್ಲಿ ಗಿಡ್ಡ ಎಮ್ಮೆ ಎಂದು ಅರ್ಥ. ಗಿತ್ತ ಎನ್ನುವ ತೆಲುಗಿನ ಪದಕ್ಕೆ ಎಮ್ಮೆ ಎನ್ನುವ ಕನ್ನಡ ಪದ ಸೇರಿ ನುಡಿಬೆರಕೆ ಪ್ರಕ್ರಿಯೆ ಉಚ್ಚಾರಣೆಯಲ್ಲಿದೆ.

ಉದಾ : ಗಿತ್ತೆಮ್ಮೆ ಕ್ವಾಣ ಈದೈತೆ

* ಟೆಂಕಾಯಿ : 'ಟೆಂ' ಎನ್ನುವುದು ತೆಲುಗಿನ ಪದ. 'ಕಾಯಿ' ಎನ್ನುವುದು ಕನ್ನಡದ ಪದ. 'ಟೆಂಕಾಯಿ' ಎಂದರೆ 'ತೆಂಗಿನಕಾಯಿ'

ಎಂದು ಕನ್ನಡದಲ್ಲಿ ಅರ್ಥ. ತೆಲುಗಿನ 'ಟೆಂ' ಗೆ 'ಕಾಯಿ' ಎನ್ನುವ ಪದ ಸೇರಿ ಟೆಂಕಾಯಿ ಎಂದಾಗಿದೆ.

ಉದಾ : ಅಯ್‌ಜ್ಜನ ಅಯ್‌ದು ಟೆಂಕಾಯಿ ತಂದಿದ್ದರು.

* ತಲಕಾಯಿ : ಕನ್ನಡದಲ್ಲಿ ತಲೆ ಎನ್ನುವುದಕ್ಕೆ ತೆಲುಗಿನಲ್ಲಿ ತಲಕಾಯಿ ಎಂದು ಬಳಕೆಯಲ್ಲಿದೆ. ತಲೆ ಎನ್ನುವುದಕ್ಕೆ ಕಾಯಿ ಎನ್ನುವ ವಿಶಿಷ್ಟ ಪದ ಸೇರಿ ಬಳಕೆಯಲ್ಲಿರುವುದು ಆದೋನಿ ಕನ್ನಡದ ವೈಶಿಷ್ಟ್ಯತೆ.

ಉದಾ : ಕಟ್ಟಿಗೆ ತಗಂಡ ವಡಿದೀನಿ ಅಂದರೆ ತಲಕಾಯಿ ವಡಿದು ವೋಗ್‌ತ್ಯತೆ ನೋಡು.

* ತೂಮ್‌ಕಾಲ್ವೆ : ತೂಮ್‌ಕಾಲ್ವೆ ಎಂದರೆ ಕನ್ನಡದಲ್ಲಿ 'ತೂಬು ಕಾಲುವೆ' ಎಂದು ಅರ್ಥ. ತೂಮ್ ಎನ್ನುವುದು ತೆಲುಗಿನ ಪದ. ಕಾಲುವೆ ಎನ್ನುವುದು ಕನ್ನಡದ ಪದ. ತೂಮ್ ಎನ್ನುವ ತೆಲುಗಿನ ಪದಕ್ಕೆ ಕಾಲುವೆ ಎನ್ನುವ ಕನ್ನಡ ಪದ ಸೇರಿ ತೂಮ್ ಕಾಲ್ವೆಯಾಗಿ ಉಚ್ಚಾರಣೆಯಲ್ಲಿದೆ.

ಉದಾ : ತೂಮ್ ಕಾಲ್ವೆಯಿಂಗ ವೂವಿನ ಗಿಡಕ್ಕೆ ನೀರ ಕಟ್ಟಬೇಕು.

* ದೊಂಗಕದ್ರೆ : ದೊಂಗ ಎನ್ನುವುದು ತೆಲುಗು ಪದ. ಕದ್ರೆ ಎನ್ನುವುದು ಕನ್ನಡದ ಪದ. ದೊಂಗ ಕದ್ರೆ ಎಂದರೆ ಕಳ್ಳ ಕದ್ರೆ ಎಂದು ಅರ್ಥ. 'ದೊಂಗ' ಎನ್ನುವ ತೆಲುಗಿನ ಪದಕ್ಕೆ 'ಕದ್ರೆ' ಎನ್ನುವ ಕನ್ನಡ ಪದ ಸೇರಿಕೊಂಡು ದೊಂಗ ಕದ್ರೆ ಎಂದಾಗಿದೆ.

ಉದಾ : ಸ್ವಾಮಾನು ಜ್ವಾಪಾನ ದೊಂಗ ಕದ್ರೆ ಕಸ್ತ.

* ದೋಸಕಾಯಿ : ದೋಸ ಎನ್ನುವುದು ತೆಲುಗಿನ ಪದ. ಕಾಯಿ ಎನ್ನುವುದು ಕನ್ನಡದ ಪದ. ದೋಸಕಾಯಿ ಎಂದರೆ ಸವತೆಕಾಯಿ ಎಂದು ಅರ್ಥ. ದೋಸ ಎನ್ನುವ ತೆಲುಗಿನ ಪದಕ್ಕೆ ಕಾಯಿ ಎನ್ನುವ ಪದ ಸೇರಿಕೊಂಡು ಉಚ್ಚಾರಣೆಯಲ್ಲಿದೆ.

ಉದಾ : ನಮ್ಮ ವಲದಾಗ ದೋಸಕಾಯಿ ಜಗ್ಗಿ ಅಯ್‌ದಾವ.

* ಪೊಟ್ಲಿಕಾಯಿ : 'ಪೊಟ್ಲಿ' ಎನ್ನುವುದು ತೆಲುಗಿನ ಪದ. 'ಕಾಯಿ' ಎನ್ನುವುದು ಕನ್ನಡದ ಪದ. ಪೊಟ್ಲಿಕಾಯಿ ಎಂದರೆ ಪಡವಲಕಾಯಿ ಎಂದು ಅರ್ಥ. ಪೊಟ್ಲಿ ಎನ್ನುವ ತೆಲುಗಿನ ಪದಕ್ಕೆ ಕಾಯಿ ಎನ್ನುವ ಪದ ಸೇರಿ ಪೊಟ್ಲಿಕಾಯಿ ಎಂದಾಗಿದೆ.

ಉದಾ : ಪೊಟ್ಲಿಕಾಯಿ ಬೆಸ್ಯೆದಾವ ಯೇನಪ?

* ಮರ್ಸದಿನ : 'ಮರ್ಸ' ಎನ್ನುವುದು ತೆಲುಗಿನ ಪದ. 'ದಿನ' ಎನ್ನುವುದು ಕನ್ನಡದ ಪದ. ಮರ್ಸದಿನ ಎಂದರೆ 'ಮರುದಿನ' ಎಂದು ಅರ್ಥ. ಈ ಪದವನ್ನು ತೆಲುಗಿನಲ್ಲಿ 'ಮರ್ಸಟರೋಜು' ಎಂದು ಬಳಕೆ ಮಾಡುತ್ತಾರೆ. 'ಮರ್ಸ' ಎನ್ನುವ ತೆಲುಗು ಪದಕ್ಕೆ 'ದಿನ' ಎನ್ನುವ ಕನ್ನಡ ಪದ ಸೇರಿಕೊಂಡು 'ಮರ್ಸದಿನ' ಪದ ಉಚ್ಚಾರಣೆಯಲ್ಲಿದೆ.

ಉದಾ : ಊರಿಗೆ ವೋದ ಮರ್ಸದಿನ ಬಂದಿಬಿಟ್ರು.

* ಮಿದ್ದೋರು : 'ಮಿದ್ದೆ' ಎನ್ನುವ ತೆಲುಗು ಪದಕ್ಕೆ ಅವರು ಎನ್ನುವ ಕನ್ನಡ ಪದ 'ಓರ್' ಆಗಿ ಮಾರ್ಪಟ್ಟು ತೆಲುಗು ಪದ ಜೊತೆಗೆ ಸೇರಿಕೊಂಡು ಬಳಕೆಯಲ್ಲಿದೆ. ಮಿದ್ದೋರು ಎಂದರೆ ಮಾಳಿಗೆಯವರು ಎಂದು ಅರ್ಥ. ಮಿದ್ದೆ ಎನ್ನುವ ತೆಲುಗು ಪದಕ್ಕೆ ಓರ್ ಎನ್ನುವ ಕನ್ನಡ ಪದ ಸೇರಿಕೊಂಡು ನುಡಿಮಿಶ್ರಣ ಪ್ರಕ್ರಿಯೆಯೆ ನಡೆದಿದೆ.

ಉದಾ : ಮಿದ್ದೋರು ಗುಂಪು ಇನ್ನಾ ಪೂಜೆಗೆ ಬಂದಿಲ್ಲ.

* ರಾಗಿಮರ : 'ರಾಗಿ' ಎನ್ನುವ ತೆಲುಗು ಪದಕ್ಕೆ 'ಮರ' ಎನ್ನುವ ಕನ್ನಡ ಪದ ಸೇರಿಕೊಂಡು 'ರಾಗಿಮರ' ಪದಬಳಕೆಯಲ್ಲಿದೆ. ರಾಗಿಮರ ಎಂದರೆ ಅರಳಿಮರ ಎಂದು ಅರ್ಥ. ತೆಲುಗು - ಕನ್ನಡದ ಎರಡು ಪದಗಳೂ ಸೇರಿ ರಾಗಿಮರ ಆಗಿ ಉಚ್ಚಾರಣೆ ಯಲ್ಲಿರುವುದು ಆದೋನಿ ಕನ್ನಡದ ವೈಶಿಷ್ಟ್ಯ.

ಉದಾ : ಅವರ ವಲದಾಗ ರಾಗಿಮರ ಅಯ್‌ತೆ.

ಅಡಿಟಿಪ್ಪಣಿ

೧. ದ್ವಿಭಾಷಿಕತೆ, ಕೆ.ವಿ. ನಾರಾಯಣ, ೧೯೯೮, ಕ.ವಿ.ವಿ

೨. ದ್ವಿಭಾಷಿಕತೆ, ಕೆ.ವಿ. ನಾರಾಯಣ, ೧೯೯೮, ಕ.ವಿ.ವಿ

೩. ಇಂದಿನ ಕನ್ನಡ ರಚನೆ ಮತ್ತು ಬಳಕೆ, ಶ್ರೀಧರ, ಕ.ವಿ.ವಿ.ಹಂಪಿ

೪. ಮಲ್ಲಮ್ಮ, ನೆರಣಿಕೆ ಗೊರವರು, ೪೫

೫. ಮಡಿವಾಳ ಹನುಮಂತಪ್ಪ, ಮಡಿವಾಳರು, ೪೦

೬. ಮೌನೇಶ, ಲಿಂಗಾಯತ, ಆದೋನಿ, ೨೪

೭. ವೀರನಗೌಡ, ಲಿಂಗಾಯತ, ಆದೋನಿ, ೨೩

೮. ರಾಜಶೇಖರ, ಲಿಂಗಾಯತ, ಬದನೆಹಾಳ್

೯. ತಿಮ್ಮಪ್ಪ, ನಾಯಕ, ಸುಳುವಾಯಿ, ೩೬

೧೦. ಕಲ್ಮಠದ ವಿದ್ಯಾರ್ಥಿ, ಲಿಂಗಾಯತ, ಆದೋನಿ, ೨೦

೧೧. ಪವನ್, ಕ್ಯಾಮುಟರು, ಆದೋನಿ, ೧೬

೧೨. ನೇತ್ರ, ಲಿಂಗಾಯತ, ಆದೋನಿ, ೧೬

೧೩. ಏಕಾಂಬ್ರರೆಡ್ಡಿ, ಲಿಂಗಾಯತ, ಉಪ್ಪರಾಳ್, ೩೪

೧೪. ಅನಿತ, ಲಿಂಗಾಯತ, ಆದೋನಿ, ೧೬

೧೫. ರಾಜಶೇಖರ, ಉಪ್ಪಾರರು, ಆದೋನಿ, ೨೦

೧೬. ದನಲಕ್ಷ್ಮಿ, ಕುರುಬ, ಆದೋನಿ, ೧೬

೧೭. ಮಲ್ಲಮ್ಮ, ನೆರಣಿಕಿ ಗೊರವರು, ೪೫

೧೮. ವಿಜಯಲಕ್ಷ್ಮಿ, ಕುರುಬ, ಆದೋನಿ, ೨೫

೧೯. ಈರಮಣಿ, ಮೋಚಿ, ಆದೋನಿ, ೧೬

೨೦. ತಿಮ್ಮಪ್ಪ, ನಾಯಕ, ಸುಳುವಾಯಿ, ೩೬

□□

ಅಧ್ಯಾಯ ೭

ಆದೋನಿ ತೆಲುಗು ಭಾಷಿಕರ ಮೇಲೆ ಕನ್ನಡದ ಪ್ರಭಾವ

ಅಧ್ಯಾಯ ೭

ಆದೋನಿ ತೆಲುಗು ಭಾಷಿಕರ ಮೇಲೆ ಕನ್ನಡದ ಪ್ರಭಾವ

ಆದೋನಿ ತೆಲುಗು ಭಾಷಿಕರ ಮೇಲೆ ಕನ್ನಡದ ಪ್ರಭಾವ ವಿಶಿಷ್ಟವಾಗಿದೆ. ಇದು ಆದೋನಿ ಕನ್ನಡದ ರಚನೆಯನ್ನು ತಿಳಿಯಲು ಬಹಳ ಉಪಯುಕ್ತ ಮಾದರಿಯಾಗಿದೆ. ಆದೋನಿ ಕನ್ನಡ ಎಂದರೆ ಆದೋನಿ ಪರಿಸರದಲ್ಲಿ ನೆಲೆಸಿರುವ ಕನ್ನಡಿಗರು ಮತ್ತು ತೆಲುಗರು ಆಡುವ ಕನ್ನಡದ ರಚನೆ. ಈ ಭಾಗದ ಕನ್ನಡದ ರಚನೆಯನ್ನು ಎರಡು ನೆಲೆಗಳಲ್ಲಿ ಅಧ್ಯಯನ ಮಾಡಬಹುದು. ಒಂದು ಆದೋನಿ ಕನ್ನಡಿಗರ ಮೇಲೆ ತೆಲುಗಿನ ಪ್ರಭಾವ. ಎರಡು ಆದೋನಿ ತೆಲುಗು ಮಾತಿನ ಮೇಲೆ ಕನ್ನಡದ ಪ್ರಭಾವ. ಈ ಎರಡೂ ನೆಲೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ವಿಶಿಷ್ಟವಾದ ಭಾಷಿಕ ಅಂಶಗಳು ಗೋಚರಿಸುತ್ತವೆ. ಅವುಗಳನ್ನು ವಿವಿಧ ಭಾಷಿಕ ಹಂತಗಳಲ್ಲಿ ಹಿಡಿದಿಡಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಬರಹದ ತೆಲುಗು ರೂಪಗಳನ್ನು ಆದೋನಿ ತೆಲುಗು ರೂಪಗಳೊಂದಿಗೆ ಹೋಲಿಸಿ ನೋಡಲಾಗಿದೆ. ಅದೇ ರೀತಿ ಆದೋನಿ ತೆಲುಗು ರೂಪಗಳೊಂದಿಗೆ ಬರಹದ ಕನ್ನಡದ ರಚನೆಗಳೊಂದಿಗೆ ಹೋಲಿಸಿ ನೋಡಲಾಗಿದೆ. ಈ ಕ್ರಮದಿಂದ ಆದೋನಿ ತೆಲುಗಿನ ಮೇಲೆ ಬರಹದ ತೆಲುಗಿನ ಪ್ರಭಾವ ಆಗಿದಿಯೋ ಅಥವಾ ಕನ್ನಡದ ಪ್ರಭಾವ ಆಗಿದೆಯೋ ಎಂಬುದನ್ನು ಗಮನಿಸಲಾಗಿದೆ. ಒಟ್ಟು ಪ್ರಸ್ತುತ ಅಧ್ಯಾಯದಲ್ಲಿ ಆದೋನಿ ಪರಿಸರ 'ಒಂದು ದ್ವಿಭಾಷಿಕ ಪರಿಸರ' ಹೇಗೆ ಎಂಬುದನ್ನು ನಿದರ್ಶನಗಳ ಸಹಿತ ವಿವರಿಸಲಾಗಿದೆ.

ಆದೋನಿ ತೆಲುಗರ ಉಚ್ಚಾರಣೆಯಲ್ಲಿ ಕನ್ನಡದ ಪ್ರಭಾವವನ್ನು ಬರಹ ತೆಲುಗಿನ ರೂಪಗಳ ಜೊತೆ ಹೋಲಿಸಿ ನೋಡುವುದರ ಮೂಲಕ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಇಲ್ಲಿ ಎರಡು ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಆದೋನಿ ತೆಲುಗು ಬರಹ ತೆಲುಗಿಗಿಂತ ಯಾವ ರೀತಿ ಭಿನ್ನವಾಗಿದೆ ಮತ್ತು ಆದೋನಿ ತೆಲುಗಿನ ರೂಪಗಳು ಕನ್ನಡಕ್ಕೆ ಸಾಮೀಪ್ಯವಿರುವುದು ತಿಳಿದುಬರುತ್ತದೆ.

ಸ್ವರಗಳು

* ಪದಾದಿಯಲ್ಲಿ ನಿಮ್ನ ಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಕಾರಕ್ಕೆ ನಿಮ್ನ ಕೇಂದ್ರ ಅಗೋಳ ದೀರ್ಘಸ್ವರ 'ಆ' ಕಾರ ಉಚ್ಚಾರಣೆಯಲ್ಲಿದೆ.

ಬರಹದ ತೆಲುಗು	ಆದೋನಿ ತೆಲುಗು	ಆದೋನಿ ಕನ್ನಡ	ಬರಹದ ಕನ್ನಡ
ಅತನು	ಆತಿನಿ	ಆತ	ಆತ

ಬರಹದ ತೆಲುಗಿನಲ್ಲಿ ಪದಾದಿಯಲ್ಲಿ ಹ್ರಸ್ವಸ್ವರ 'ಅ' ಕಾರ ಬಳಕೆಯಲ್ಲಿದ್ದರೆ ಆದೋನಿ ತೆಲುಗಿನಲ್ಲಿ ದೀರ್ಘಸ್ವರವಾದ 'ಆ' ಕಾರ ಬಳಕೆಯಲ್ಲಿದೆ. ಈ ವ್ಯತ್ಯಾಸಕ್ಕೆ ಬರಹದ ತೆಲುಗು ಕಾರಣವಾಗಿರದೆ ಕನ್ನಡದ ಪ್ರಭಾವದಿಂದ ಮೇಲಿನ ರೂಪ ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿದೆ. ಈ ಮಾದರಿ ಬಳಕೆ ಆದೋನಿ ಪರಿಸರದ ಎಲ್ಲಾ ಸಾಮಾಜಿಕ ವರ್ಗದವರಲ್ಲೂ ಬಳಕೆಯಲ್ಲಿದೆ.

* ಪದ ಮಧ್ಯ ಪರಿಸರದಲ್ಲಿ ನಿಮ್ನಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಕಾರಕ್ಕೆ ಉನ್ನತ ಮಧ್ಯಪಶ್ಚಗೋಳ ಹ್ರಸ್ವಸ್ವರ 'ಒ' ಕಾರ ಉಚ್ಚಾರಣೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ರವಂತ	ರೊವಂತ	ರೊವಟು	ಸ್ವಲ್ಪ
ರವನ್ನಿ	ರೊವನ್ನಿ	ರೊವಟು	ಕೆಲವು

ಮೇಲಿನ ನಿದರ್ಶನದಲ್ಲಿ ಬ.ತೆ. ಮತ್ತು ಬ.ಕ.ಕ್ಕಿಂತ ಆ.ತೆ. ಮತ್ತು ಆ.ಕ. ವಿಶಿಷ್ಟ ಧ್ವನಿಗಳನ್ನು ಉಚ್ಚಾರಣೆ ಮಾಡುತ್ತಿರುವುದು ತಿಳಿದುಬರುತ್ತದೆ. ಇಲ್ಲಿ ಉನ್ನತ ಮಧ್ಯ ಪಶ್ಚಗೋಳ ಹ್ರಸ್ವಸ್ವರ 'ಒ' ಕಾರ ಆದೋನಿ ಕನ್ನಡ ಮತ್ತು ಆದೋನಿ ತೆಲುಗಿನಲ್ಲಿ ಒಂದೇ ರೀತಿಯಲ್ಲಿದ್ದು; ಆ.ತೆ. ಆ.ಕ. ಒಂದೇ ರೀತಿಯಲ್ಲಿ ಬಳಕೆಯಲ್ಲಿವೆ. ಬ.ತೆ. ಅಕಾರಾಂತವಾಗಿರುವುದು ಆ.ತೆ.ನಲ್ಲಿ 'ಒ' ಕಾರಾಂತವಾಗಿದೆ. ಆ.ಕ.ವು 'ಒ' ಕಾರಾಂತವಾಗಿದೆ.

* ಪದಾದಿ ಪರಿಸರದ ಉನ್ನತ ಅಗ್ರ ಅಗೋಳ ಹ್ರಸ್ವಸ್ವರ 'ಇ' ಕಾರಕ್ಕೆ ಉನ್ನತ ಅಗ್ರ ಅಗೋಳ ದೀರ್ಘಸ್ವರ 'ಈ' ಕಾರ ಬಳಕೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ఇతను	ಈತಿನಿ	ಈತ	ಈತ

ಮೇಲಿನ ಪಟ್ಟಿಯಲ್ಲಿ ಬರಹ ತೆಲುಗಿನಲ್ಲಿ ಉನ್ನತ ಅಗ್ರ ಅಗೋಳ ಹ್ರಸ್ವಸ್ವರ 'ಇ' ಬಳಕೆಯಲ್ಲಿದ್ದರೆ, ಆದೋನಿ ಪರಿಸರದ ತೆಲುಗಿನಲ್ಲಿ ಕನ್ನಡ ಭಾಷೆಯ ಪ್ರಭಾವದಿಂದ ಉನ್ನತ ಅಗ್ರ ಅಗೋಳ ದೀರ್ಘ ಸ್ವರ 'ಈ' ಬಳಕೆಯಲ್ಲಿರುವುದು ವಿಶೇಷ.

* ಪದಾದಿ ಪರಿಸರದಲ್ಲಿ ಬರಹದ ತೆಲುಗಿನ ಉನ್ನತ ಅಗ್ರ ಅಗೋಳ ಹ್ರಸ್ವಸ್ವರ 'ಇ' ಕಾರಕ್ಕೆ ಉನ್ನತ ಪಶ್ಚಗೋಳ ಹ್ರಸ್ವ 'ಉ' ಸ್ವರ ಬಳಕೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ఇసుక	ಉಸುಗು	ಉಸುಕು/ಉಸುಗು	ಮರಳು
ವಿಪ್ಪು	ಉಪ್ಪು	ಉಚ್ಚು	ಬಿಚ್ಚು

ಬರಹದ ತೆಲುಗಿನ 'ಇ' ಕಾರವು ಆದೋನಿ ತೆಲುಗಿನಲ್ಲಿ 'ಉ' ಕಾರವಾಗಿ ಬಳಕೆಯಲ್ಲಿದೆ. ಉತ್ತರ ಕರ್ನಾಟಕದಲ್ಲಿ ಮರಳು ಪದಕ್ಕೆ ಸಮಾನಾರ್ಥವಾಗಿ 'ಉಸುಕು' ಪದವನ್ನು ಬಳಕೆ ಮಾಡಲಾಗುತ್ತದೆ. ಈ ಹಿನ್ನೆಲೆಯಿಂದ ಆದೋನಿ ಪರಿಸರದಲ್ಲಿ ಬಳಕೆಯಲ್ಲಿರುವ 'ಉಸುಕು' ಪದ ಬರಹ ತೆಲುಗಿನ ಪ್ರಭಾವದಿಂದ ಬಳಕೆಯಲ್ಲಿ ಇಲ್ಲ. ಕನ್ನಡದ ಆಡುಭಾಷೆಯ ರೂಪವೊಂದರ ಪ್ರಭಾವ ಎಂದು ಊಹಿಸಬಹುದು.

* ಬರಹದ ತೆಲುಗಿನ ಪದ ಮಧ್ಯ ಉನ್ನತ ಪಶ್ಚಗೋಳ ಹ್ರಸ್ವಸ್ವರ 'ಉ' ಕಾರಕ್ಕೆ ನಿಮ್ನಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಕಾರವಾಗಿ ಬಳಕೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ಮುಡತ	ಮಡತ	ಮಡತೆ	ಮಡಿಕೆ

ಬರಹದ ತೆಲುಗಿನಲ್ಲಿ ಪದಾದಿಯ 'ಉ' ಕಾರವು ಆದೋನಿ ತೆಲುಗಿನಲ್ಲಿ 'ಅ' ಕಾರವಾಗಿ, ಆದೋನಿ ಕನ್ನಡ ಮತ್ತು ಬರಹ ಕನ್ನಡದಲ್ಲಿ 'ಎ' ಕಾರಂತವಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆದೋನಿ ತೆಲುಗು ಮಾತನಾಡುವವರ ಮಾತಿನಲ್ಲಿ 'ಅ' ಕಾರಂತವಾಗಿರುವುದು ಬರಹದ ತೆಲುಗಿನ ಪ್ರಭಾವವಾದರೂ ಬರಹದ ತೆಲುಗಿನ ಪದಮಧ್ಯ ಪರಿಸರದಲ್ಲಿ 'ಉ' ಕಾರ 'ಅ' ಕಾರವಾಗಿರುವುದು ಕನ್ನಡದ ಪ್ರಭಾವದಿಂದ ಎಂಬುವುದು ಗಮನಾರ್ಹವಾದ ಸಂಗತಿ.

* ಪದಮಧ್ಯ ಪರಿಸರದಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವಸ್ವರ 'ಎ' ಕಾರಕ್ಕೆ ನಿಮ್ನಕೇಂದ್ರ ಅಗೋಳ ದೀರ್ಘಸ್ವರವಾದ 'ಆ' ಕಾರ ಬಳಕೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ನೇನು	ನಾನು	ನಾನು	ನಾನು

ಬರಹದ ತೆಲುಗಿನಲ್ಲಿ ಪದ ಮಧ್ಯ ಪರಿಸರದಲ್ಲಿ 'ಎ' ಕಾರ ಆದೋನಿ ತೆಲುಗಿನಲ್ಲಿ 'ಆ' ಕಾರವಾಗಿ ಆದೋನಿ ಕನ್ನಡ ಮತ್ತು ಬರಹದ ಕನ್ನಡದಲ್ಲಿ 'ಆ' ಕಾರವಾಗಿ ಬಳಕೆಯಲ್ಲಿರುವುದು ಸ್ಪಷ್ಟ. ಈ ವ್ಯತ್ಯಾಸಕ್ಕೆ ಕನ್ನಡ ಭಾಷೆಯ ಪ್ರಭಾವ ಎಂದು ಹೇಳಬಹುದು.

* ಉನ್ನತ ಮಧ್ಯ ಪಶ್ಚಗೋಳ ಹ್ರಸ್ವಸ್ವರ 'ಒ' ಕಾರಕ್ಕೆ ಬದಲಾಗಿ ನಿಮ್ನಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಕಾರ ಉಚ್ಚಾರಣೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಮೊನ್ನ	ಮನ್ನ	ಮನ್ನೆ	ಮೊನ್ನೆ

ಬರಹದ ತೆಲುಗು ಮತ್ತು ಬರಹದ ಕನ್ನಡದಲ್ಲಿ ಪದಮಧ್ಯದಲ್ಲಿ 'ಒ' ಕಾರವಿದ್ದರೆ ಆದೋನಿ ತೆಲುಗಿನಲ್ಲಿ 'ಅ' ಕಾರವಿದ್ದು, ಆದೋನಿ ಕನ್ನಡದಲ್ಲಿ 'ಎ' ಕಾರಂತವಾಗಿ ಬಳಕೆಯಲ್ಲಿದೆ. ಆಡುಮಾತಿನ ಕನ್ನಡದ ಪ್ರಭಾವ ಇದ್ದರೂ 'ಅ' ಕಾರಂತವಾಗಿರುವುದು ಬರಹದ ತೆಲುಗಿನ ಪ್ರಮಾಣ ತೆಲುಗಿನ ಪ್ರಭಾವದಿಂದ ಬಳಕೆಯಲ್ಲಿದೆ ಎಂದು ಹೇಳಬಹುದು.

* ಉನ್ನತ ಮಧ್ಯ ಪಶ್ಚಗೋಳ ಹ್ರಸ್ವಸ್ವರ 'ಒ' ಕಾರಕ್ಕೆ ಬದಲಾಗಿ ಉನ್ನತ ಮಧ್ಯ ಅಗ್ರಗೋಳ ಹ್ರಸ್ವಸ್ವರ 'ಎ' ಕಾರವಾಗಿ ಬಳಕೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ರೊಟ್ಟೆ	ರೆಟ್ಟೆ	ರೆಟ್ಟೆ	ರೊಟ್ಟೆ

ಬರಹದ ತೆಲುಗು ಮತ್ತು ಬರಹದ ಕನ್ನಡದ ಎರಡು ಮಾದರಿಗಳಲ್ಲೂ ಪದಮಧ್ಯ ಪರಿಸರದಲ್ಲಿ 'ಒ' ಕಾರವಾಗಿ ಬಳಕೆಯಲ್ಲಿದೆ. ಆದೋನಿ ತೆಲುಗು ಮತ್ತು ಆದೋನಿ ಕನ್ನಡದಲ್ಲಿ 'ಎ' ಕಾರವಾಗಿ ಬಳಕೆಯಲ್ಲಿದೆ. ಬ.ಕ. ಮತ್ತು ಬ.ತೆ.ಗಿಂತ ಭಿನ್ನವಾಗಿ ಬಳಕೆಯಾಗುತ್ತಿದ್ದು ತನ್ನದೇ ಆದ ಪ್ರಭೇದದ ಲಕ್ಷಣಗಳನ್ನು ಹೊಂದಿದೆ.

* 'ಅ', 'ಇ' ಮತ್ತು 'ಎ' ಕಾರಗಳಿಂದ ಆರಂಭವಾಗುವ ಪದಗಳಲ್ಲಿ ಪದಮಧ್ಯ ಪರಿಸರದಲ್ಲಿ 'ಒ' ಕಾರ ಬಳಕೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಅಂತ	ಅಂತೊಟ್ಟು	ಆಟೊಂದು	ಅಷ್ಟೊಂದು
ಇಂತ	ಇಂತೊಟ್ಟು	ಈಟೊಂದು	ಇಷ್ಟೊಂದು
ಎಂತ	ಎಂತೊಟ್ಟು	ಏಟೊಂದು	ಎಷ್ಟೊಂದು

ಬರಹದ ತೆಲುಗಿನಲ್ಲಿ ಅಂತ, ಇಂತ ಮತ್ತು ಎಂತ ರೂಪಗಳು ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿದ್ದು, ಕನ್ನಡದ ಪ್ರಭಾವದಿಂದ ಪದ ಮಧ್ಯ ಪರಿಸರದಲ್ಲಿ 'ಒ' ಕಾರ ಬಳಕೆಯಲ್ಲಿರುವುದು ವಿಶೇಷ.

* ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವಸ್ವರ 'ಎ' ಕಾರಕ್ಕೆ ಬದಲಾಗಿ ಪದ ಮಧ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಅಗೋಳ ಹ್ರಸ್ವ ಮತ್ತು ದೀರ್ಘ ಸ್ವರಗಳು ಅ/ಆ ಉಚ್ಚಾರಣೆಯಲ್ಲಿವೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಬತ್ತೆಂ	ಬತ್ತ / ಬತ್ತಾ	ಬತ್ತ	ಬತ್ತ
ಸಂಪೆಂಗ	ಸಂಪಂಗಿ	ಸಂಪಂಗಿ	ಸಂಪಂಗಿ

ಬರಹದ ತೆಲುಗಿನಲ್ಲಿ 'ಬತ್ತೆಂ' ಮತ್ತು 'ಸಂಪೆಂಗ' ಎರಡೂ ಪದಗಳಲ್ಲಿ 'ಎ' ಕಾರ ಬಳಕೆಯಲ್ಲಿದೆ. ಆದೋನಿ ತೆಲುಗಿನಲ್ಲಿ ಕನ್ನಡದ ಪ್ರಭಾವದಿಂದ ಪದಮಧ್ಯ ಪರಿಸರದಲ್ಲಿ 'ಅ' ಮತ್ತು 'ಆ' ಕಾರವಾಗಿ ಉಚ್ಚಾರಣೆಯಲ್ಲಿರುವುದು ವಿಶೇಷ.

* ಬರಹದ ಕನ್ನಡ ಪದಾಂತ್ಯ ಪರಿಸರದಲ್ಲಿ ಉನ್ನತ ಅಗ್ರಗೋಳ 'ಎ' ಹ್ರಸ್ವಸ್ವರ ಬಳಕೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಪೊಂದಿಕ	ಪೊಂದಿಕಿ	ಹೊಂದಿಕಿ	ಹೊಂದಿಕೆ
ಪೊಲಿಕ	ಪೊಲಿಕಿ	ಹೊಲಿಕಿ	ಹೋಲಿಕೆ

ಬರಹದ ತೆಲುಗಿನಲ್ಲಿ ಪದಾಂತ್ಯ ಪರಿಸರದಲ್ಲಿ 'ಅ' ಕಾರಂತವಾಗಿ ಬಳಕೆಯಲ್ಲಿದ್ದರೆ, ಬರಹದ ಕನ್ನಡದಲ್ಲಿ 'ಎ' ಕಾರಂತವಾಗಿ ಬಳಕೆಯಲ್ಲಿದೆ. 'ಇ' ಕಾರಂತ ಪದಗಳ ಬಳಕೆ ಉತ್ತರ ಕರ್ನಾಟಕದ ವೈಶಿಷ್ಟ್ಯ. ಈ ಹಿನ್ನೆಲೆಯಿಂದ ಆದೋನಿ ಕನ್ನಡದ ಪ್ರಭಾವದಿಂದ ಆದೋನಿ ತೆಲುಗಿನಲ್ಲಿ 'ಇ' ಕಾರಂತ ಪದಗಳು ಬಳಕೆಯಲ್ಲಿರುವುದು ವಿಶೇಷ.

ಬರಹದ ತೆಲುಗಿನ ನಿಮ್ನ ಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಕಾರಂತ ಪದ ಆದೋನಿ ತೆಲುಗಿನಲ್ಲಿ ಉನ್ನತ ಪಶ್ಚಗೋಳ ಹ್ರಸ್ವಸ್ವರ 'ಉ' ಕಾರಂತವಾಗಿ ಉಚ್ಚಾರಣೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಒಕ	ಒಗು	ಒಂದು / ವಂದು	ಒಂದು

ಬರಹದ ಕನ್ನಡದ ಪದಗಳಲ್ಲಿರುವ 'ಉ' ಕಾರವು ಪದಾಂತ್ಯ ಪರಿಸರದಲ್ಲಿ ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿರುವುದು ವೈಶಿಷ್ಟ್ಯ. ಈ ವೈಶಿಷ್ಟ್ಯ ಕನ್ನಡದ ಪ್ರಭಾವದಿಂದ ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ.

* ಪದಾಂತ್ಯ ಪರಿಸರದ ಬರಹದ ತೆಲುಗಿನಲ್ಲಿರುವ ಉನ್ನತ ಪಶ್ಚಗೋಳ ಹ್ರಸ್ವಸ್ವರ 'ಉ' ಕಾರವು ಆದೋನಿ ತೆಲುಗಿನಲ್ಲಿ ನಿಮ್ನಕೇಂದ್ರ ಹ್ರಸ್ವಸ್ವರ 'ಅ' ಕಾರವಾಗಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಮಾನು	ಮಾನ	ಮರ	ಮರ
ಬಾನ	ಬಾನ	ಬಾನ	ಬಾನು (ಮಣ್ಣಿನಿಂದ ಮಾಡಿದ ಗಡಿಗೆ, ಮಡಿಕೆ)

'ಮಾನು' ಎನ್ನುವ ಪದವು ಕನ್ನಡದ ಪ್ರಭಾವದಿಂದ ಆದೋನಿ ತೆಲುಗಿನಲ್ಲಿ 'ಮಾನ' ಎಂದು ಪದಾಂತ್ಯ ಪರಿಸರದಲ್ಲಿ 'ಅ' ಕಾರವಾಗಿ ಬಳಕೆಗೊಂಡಿದೆ. ಅದೇ ರೀತಿ 'ಬಾನ' ಎನ್ನುವ ಪದವು ತೆಲುಗಿನ ಪ್ರಭಾವದಿಂದ ಆದೋನಿ ಕನ್ನಡದಲ್ಲಿ ಬಳಕೆಯಲ್ಲಿದೆ. ಅಂದರೆ ಬರಹದ ತೆಲುಗಿನ ಪ್ರಭಾವ ಕನ್ನಡದ ಮೇಲೂ, ಕನ್ನಡದ ಪ್ರಭಾವ ತೆಲುಗಿನ ಮೇಲೂ ಆಗಿರುವುದು ಗಮನಿಸುವಂತಹ ಅಂಶ.

ವ್ಯಂಜನಗಳು

* ಪದಾದಿ ಪರಿಸರದಲ್ಲಿ ತೆಲುಗಿನ ತಾಲವ್ಯ ಸ್ಪರ್ಶ ಅಘೋಷ ಧ್ವನಿ 'ಚ' ಕಾರಕ್ಕೆ ಬದಲಾಗಿ ಕಂಠ್ಯ ಸ್ಪರ್ಶ ಅಘೋಷ ಧ್ವನಿಯಾದ 'ಕ' ಕಾರವು ಬಳಕೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಚಿರುನಾಲುಕ	ಕಿರ್ನಾಲಿಕಿ	ಕಿರ್ನಾಲಿಗೆ	ಕಿರುನಾಲಿಗೆ

ಆದೋನಿ ತೆಲುಗಿನಲ್ಲಿ 'ಚ' ಕಾರ ಲೋಪಗೊಂಡು ಕನ್ನಡದ ಪ್ರಭಾವದಿಂದ ಪದಾದಿಯಲ್ಲಿ 'ಕ' ಬಳಕೆಯಲ್ಲಿರುವುದು ಸ್ಪಷ್ಟವಾಗಿದೆ.

* ಮೂಲ ದ್ರಾವಿಡ ತಾಲವ್ಯ ಸ್ಪರ್ಶ ಅಘೋಷ ಧ್ವನಿ 'ಚ' ಕಾರವು ಪದಾದಿ ಪರಿಸರದಲ್ಲಿ ಲೋಪವಾಗಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಚಿಗುರು	ಸಿಗುರು	ಸಿಗುರು	ಚಿಗುರು
ಚಾಲಾ	ಸ್ಯಾನ	ಸ್ಯಾನ	ಬಹಳ

ಪದಾದಿಯ 'ಚ' ಕಾರವು ಸಕಾರವಾಗುವುದು ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳೊಂದು. ಬರಹದ ತೆಲುಗಿನಲ್ಲಿ 'ಚ' ಕಾರದಿಂದ ಉಚ್ಚಾರಣೆ ಮಾಡಿದರೆ, ಆದೋನಿ ತೆಲುಗಿನಲ್ಲಿ 'ಸ' ಕಾರದಿಂದ ಉಚ್ಚಾರಣೆಯಲ್ಲಿದೆ. ಇದಕ್ಕೆ ಕಾರಣ ಆದೋನಿ ಕನ್ನಡದಲ್ಲಿ 'ಸ' ಕಾರ ಉಚ್ಚಾರಣೆಯಲ್ಲಿದೆ. ಇದರ ಪ್ರಭಾವದಿಂದ ಆದೋನಿ ತೆಲುಗಿನಲ್ಲಿ ವ್ಯತ್ಯಾಸವಾಗಿದೆ ಎಂದು ಊಹಿಸಬಹುದು.

* ಪದಾದಿಯಲ್ಲಿ ತೆಲುಗಿನ 'ಗ' ಕಾರವು ಆದೋನಿ ತೆಲುಗಿನಲ್ಲಿ 'ಕ' ಕಾರವಾಗಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಗೊಡ್ಡಲಿ	ಕೊಡ್ಲಿ	ಕೊಡ್ಲಿ	ಕೊಡಲಿ
ಗಡಪು	ಕಲಪು	ಕಳೆ	ಕಳೆ

ಮೇಲಿನ ಧ್ವನಿಗಳ ಬಹುಳತೆ, ಸಾಮ್ಯತೆ ಮತ್ತು ಸಾಧ್ಯತೆ ಸೂತ್ರಗಳ ಸಹಾಯದಿಂದ ಕನ್ನಡ ಮೂಲ ದ್ರಾವಿಡ ಲಕ್ಷಣವನ್ನು ಉಳಿಸಿಕೊಂಡಿದೆ ಎಂದು ಹೇಳಬಹುದು.

* ಬರಹದ ತೆಲುಗಿನ 'ದ' ಕಾರವು ಆದೋನಿ ತೆಲುಗು ಮತ್ತು ಆದೋನಿ ಕನ್ನಡದಲ್ಲಿ 'ತ' ಕಾರ ಬಳಕೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ದಿಬ್ಬ	ತಿಪ್ಪ	ತಿಪ್ಪೆ	ತಿಪ್ಪೆ

* ಬರಹದ ತೆಲುಗಿನ 'ಪ' ಕಾರ ಲೋಪ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ಪುಲಿಕುಂಟಪ್ಪ	ಹುಲಿಕುಂಟಪ್ಪ/	ಹುಲಿಕುಂಟಪ್ಪ/	ಹುಲಿಕುಂಟಪ್ಪ
	ಉಲಿಕುಂಟಪ್ಪ	ಉಲಿಕುಂಟಪ್ಪ	

ಎಲ್ಲಾ ದ್ರಾವಿಡ ಭಾಷೆಗಳಲ್ಲೂ ಪದಾದಿ ಪರಿಸರದಲ್ಲಿ 'ಪ' ಕಾರ ಇದೆ. ಕನ್ನಡದ ಶಾಸನಗಳಲ್ಲಿ ಒಂಬತ್ತನೆಯ ಶತಮಾನದ ಕೊನೆಯವರೆಗೂ 'ಪ' ಕಾರ ಇತ್ತೆಂದು, ಹತ್ತನೆಯ ಶತಮಾನದಲ್ಲಿ 'ಹ' ಕಾರವಾಗಿ ಬದಲಾವಣೆ ಹೊಂದಿದೆ ಎನ್ನುವುದು ಭಾಷೆಯಲ್ಲಿ ಗಮನಿಸುವಂತಹ ಅಂಶ.

* ಬರಹದ ತೆಲುಗಿನ 'ಪ' ಕಾರಕ್ಕೆ ಪರ್ಯಾಯವಾಗಿ ಬೇರೆ ಅಕ್ಷರಗಳು ಬಳಕೆಯಲ್ಲಿರುವುದು.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ಪುಕ್ಕಲಿಂಚು	ಮುಕ್ಕಲಿಂಚು	ಮುಕ್ಕಲಿಸು	ಮುಕ್ಕಳಿಸು
ಪುನಾದಿ	ಬುನಾದಿ	ಬುನಾದಿ	ಬುನಾದಿ

ಬರಹದ ತೆಲುಗಿನಲ್ಲಿ ಪುನಾದಿ ಎನ್ನುವ ರೂಪವಿದೆ. ಆದರೆ ಈ ಪ್ರಾಂತ್ಯದಲ್ಲಿ ಅಂದರೆ ಆದೋನಿ ತೆಲುಗು ಮತ್ತು ಕನ್ನಡದಲ್ಲಿ ಬುನಾದಿ ಎನ್ನುವ ರೂಪವಿದೆ. ಆದರೆ ಆದೋನಿ ತೆಲುಗಿನಲ್ಲಿ ಪುನಾದಿ ಎನ್ನುವ ಪದ ಬಳಕೆಯಿಲ್ಲ. ಇದರಿಂದ ಆದೋನಿ ತೆಲುಗಿನ ಪದಗಳ ಮೇಲೆ ಕನ್ನಡದ ಪ್ರಭಾವವನ್ನು ತಿಳಿಯಬಹುದು.

* ಪದಮಧ್ಯ ಪರಿಸರದ ಬರಹದ ತೆಲುಗಿನ 'ದ' ಕಾರ ಆದೋನಿ ತೆಲುಗಿನಲ್ಲಿ ಮತ್ತು ಆದೋನಿ ಕನ್ನಡದಲ್ಲಿ 'ಜ' ಕಾರವಾಗಿ ಉಚ್ಚಾರಣೆಯಲ್ಲಿದೆ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ಸಂದಕಾಡ	ಸಂಜೆಕಾಡ	ಸಂಜೆ	ಸಂಜೆ

ಬರಹದ ತೆಲುಗಿನ ಎರಡನೇ ಅಕ್ಷರ 'ದ' ಕಾರವು ಲೋಪವಾಗಿ, ಕನ್ನಡ ಪದದ 'ಜ' ಕಾರ ಆದೋನಿ ತೆಲುಗಿನಲ್ಲಿ ಬಳಕೆಗೊಂಡಿರುವುದು ಕನ್ನಡದ ಪ್ರಭಾವವನ್ನು ಸೂಚಿಸುತ್ತದೆ.

* ಪದಮಧ್ಯ ಪರಿಸರದಲ್ಲಿ ಬರಹದ ತೆಲುಗಿನ 'ತ' ಕಾರವು 'ದ' ಕಾರವಾಗಿ ಬಳಕೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಬತಕು	ಬದುಕು	ಬದುಕು	ಬದುಕು

* ಬರಹದ ತೆಲುಗಿನ ಪದ ಮಧ್ಯ ಪರಿಸರದ 'ದ' ಕಾರ ಆದೋನಿ ತೆಲುಗು. ಆದೋನಿ ಕನ್ನಡದಲ್ಲಿ 'ಯ' ಕಾರವಾಗಿ ಉಚ್ಚಾರಣೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಆದಿವಾರಂ	ಆಯಿತ್ವಾರಮು	ಆಯಿತ್ವಾರ	ಆದಿವಾರ

* ಬರಹದ ತೆಲುಗಿನ 'ಪ' ಕಾರ ಆದೋನಿ ತೆಲುಗು. ಆದೋನಿ ಕನ್ನಡ ಮತ್ತು ಬರಹದ ಕನ್ನಡದಲ್ಲಿ 'ವ' ಕಾರವಾಗಿ ಉಚ್ಚಾರಣೆಯಲ್ಲಿರುವುದು ವಿಶೇಷ.

ಬ.ತೆ.	ಆ.ತೆ.	ಆ.ಕ.	ಬ.ಕ.
ಅಪ್ಪುಡು	ಅವುಡು	ಆವಾಗ	ಆವಾಗ
ಇಪ್ಪುಡು	ಇವುಡು	ಇವಾಗ	ಈವಾಗ
ಎಪ್ಪುಡು	ಯವುಡು	ಯವಾಗ	ಯಾವಾಗ

* ಬರಹದ ತೆಲುಗಿನಲ್ಲಿ ಪದಾಂತ್ಯ ಪರಿಸರದ 'ಲ' ಕಾರ ಆದೋನಿ ತೆಲುಗು ಮತ್ತು ಆದೋನಿ ಕನ್ನಡದಲ್ಲಿ 'ನ' ಕಾರವಾಗಿ ಬಳಕೆಯಲ್ಲಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಚಾಲ	ಚಾನ	ಶ್ಯಾನ / ಸ್ಯಾನ	ಬಹಳ

* ಬರಹದ ತೆಲುಗಿನಲ್ಲಿ ಪದಮಧ್ಯ ಪರಿಸರದ 'ಲ' ಕಾರ ಆದೋನಿ ತೆಲುಗು, ಆದೋನಿ ಕನ್ನಡ ಮತ್ತು ಬರಹದ ಕನ್ನಡದಲ್ಲಿ 'ಳ' ಕಾರವಾಗಿರುವುದು ವಿಶೇಷವಾಗಿದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ಅಂಗಿಲಿ	ಅಂಗಿಲ	ಅಂಗಿಳಿ	ಅಂಗಳ
ರೋಲು	ರೋಲು/ರೊಳ್ಳು	ಒಳ್ಳು	ಒರಳು

ಮೇಲಿನ ಈ ಎಲ್ಲಾ ನಿದರ್ಶನಗಳನ್ನು ಗಮನಿಸಿದಾಗ ಬರಹದ ತೆಲುಗು ಆದೋನಿ ತೆಲುಗಿನ ಮೇಲೆ ಪ್ರಭಾವ ಬೀರಿದೆ ಎನ್ನುವುದಕ್ಕಿಂತ ಬರಹದ ಕನ್ನಡದ ಪ್ರಭಾವ ಆದೋನಿ ತೆಲುಗಿನ ಮೇಲೆ ಆಗಿದೆ ಎಂಬುದು ತಿಳಿದುಬರುತ್ತದೆ. ಅಂದರೆ ಆದೋನಿ ಕನ್ನಡದ ಮೇಲೆ ತೆಲುಗಿನ ಪ್ರಭಾವ ಇರುವ ಹಾಗೆ ಆದೋನಿ ತೆಲುಗಿನ ಮೇಲೆ ಬರಹದ ಕನ್ನಡದ ಪ್ರಭಾವ ಆಗಿದೆ ಎನ್ನುವುದು ಅಷ್ಟೇ ಸತ್ಯಸಂಗತಿ.

ತದ್ಧಿತಾಂತಗಳು

"ನಾಮಪದಗಳಿಗೆ ಎರಡು ತರಹದ ಪ್ರತ್ಯಯಗಳು ಸೇರುತ್ತವೆ. ೧. ನಾಮವಿಭಕ್ತಿ ಪ್ರತ್ಯಯಗಳು ೨. ತದ್ಧಿತ ಪ್ರತ್ಯಯಗಳು. ನಾಮವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದಗಳಾಗುವವು. ತದ್ಧಿತ ಪ್ರತ್ಯಯಗಳು ಸೇರಿದವುಗಳಿಗೆ ತದ್ಧಿತ ಪದಗಳು ಅಥವಾ 'ತದ್ಧಿತಾಂತ'ಗಳು ಎಂದು ಹೆಸರು".[೭] ತದ್ಧಿತ ಅಂದರೆ ತತ್+ಹಿತ. ವ್ಯಕ್ತಿಗೆ ಅಥವಾ ವಸ್ತುವಿಗೆ ಹಿತವಾದುದು ಎಂದರ್ಥ. ಮಾಲೆಗಳನ್ನು ಮಾಡುವುದು ಮಾಲೆಗಾರನಿಗೆ ಪ್ರಿಯ. ಹಣದೊಡನೆ ವ್ಯವಹರಿಸುವುದು ಹಣವಂತನಿಗೆ ಪ್ರಿಯವಾದುದು ಇತ್ಯಾದಿ. ಮಾಲೆ ಎಂಬ ನಾಮಪ್ರಕೃತಿಗೆ - 'ಗಾರ' ಎಂಬ ತದ್ಧಿತಾಂತವು ಸೇರಿ 'ಮಾಲೆಗಾರ' ಎಂಬ ಶಬ್ದರೂಪಗೊಳ್ಳುತ್ತದೆ. ಅದೇ ರೀತಿ ಕನ್ನಡ ಎಂಬ ನಾಮಪ್ರಕೃತಿಗೆ 'ಇಗ' ಎಂಬ ತದ್ಧಿತಾಂತವು ಸೇರಿ ಕನ್ನಡಿಗ ಎನ್ನುವ ಶಬ್ದ ರೂಪಗೊಳ್ಳುತ್ತದೆ. ಇಂತ ತದ್ಧಿತಾಂತಗಳು ಆದೋನಿ ತೆಲುಗಿನ ಮೇಲೆ ಪ್ರಭಾವ ಬೀರಿರುವುದನ್ನು ಕೆಳಗಿನ ಉದಾಹರಣೆಗಳಲ್ಲಿ ಗಮನಿಸಲಾಗಿದೆ.

- ತನ

ಬ.ತೆ.	ಆ.ತೆ.	ಆ.ಕ.	ಬ.ಕ.
ಸಂಸ್ಕಾರಹೀನ	ಕಡ್ಡತನಂ	ಕಡ್ಡತನ / ಕಗ್ಗತನ	ಕಡ್ಡತನ
ಅತಿತೆಲಿವಿ	ಜಾಣತನಂ	ಜಾಣತನ / ಸ್ಯಾಣೇತನ	ಜಾಣತನ

ಪೆಂಡ್ಲಿಸಂಬಂಧಂ	ಬೀಗತನಂ	ಬೀಗತನ	ಬೀಗತನ
ಚಿನ್ನತನಂ	ಸನ್ನತನಂ	ಸಣ್ಣತನ	ಸಣ್ಣತನ

ಮೇಲಿನ ನಿದರ್ಶನಗಳನ್ನು ಗಮನಿಸಿದಾಗ ಆದೋನಿ ತೆಲುಗಿನ ಮೇಲೆ ಕನ್ನಡ ಪ್ರಭಾವವಾಗಿರುವುದು ಕಂಡುಬರುತ್ತದೆ. ಕನ್ನಡದ 'ತನ' ಎನ್ನುವ ತದ್ಧಿಂತಾಂತಕ್ಕೆ 'ಅಂ' ಎನ್ನುವ ಪ್ರತ್ಯಯ ಸೇರಿಸಿಕೊಂಡು ಬಳಕೆ ಮಾಡುತ್ತಿರುವುದು ಕಂಡುಬಂದಿದೆ.

- ಕೋರ

ಬ.ತೆ.	ಆ.ತೆ.	ಆ.ಕ.	ಬ.ಕ.
ತಿಂಡಿಪೋತು	ತಿಂಡಿಕೋರ	ತಿಂಡಿಕೋರ	ತಿಂಡಿಕೋರ

"ಕೋರ / ಖೋರ ಯುಕ್ತ ಪ್ರತ್ಯಯ ಪರ್ಸೋ ಅರೇಬಿಕ್ ಮೂಲದ್ದು. ಆದರೆ ಇದು ಹೊಸ ರಚನೆಗಳಲ್ಲಿ ಬೇರೆ ಬೇರೆ ಪದಗಳಿಗೆಲ್ಲ ಸೇರಿಸಿ ಬಳಕೆ ಮಾಡಲಾಗುತ್ತದೆ. ಮೂಲತಃ ಇದು ಹೀನಾರ್ಥವನ್ನು ಸೂಚಿಸಲು ಈ ಪ್ರತ್ಯಯವನ್ನು ಬಳಕೆ ಮಾಡಲಾಗುತ್ತದೆ. ಉದಾ. ಲಾಬಿಕೋರ, ಲಾಟರಿಕೋರ, ಕದನಕೋರ ಇತ್ಯಾದಿ".[೨] ಈ ತದ್ಧಿಂತವು ಆದೋನಿ ತೆಲುಗಿನಲ್ಲಿ ಬಳಕೆಯಾಗುತ್ತಿದ್ದು ಕನ್ನಡದ ಪ್ರಭಾವವನ್ನು ಸೂಚಿಸುತ್ತಿದೆ.

- ವಂತ

ಬ.ತೆ.	ಆ.ತೆ.	ಆ.ಕ.	ಬ.ಕ.
ಬಲವಂತಡು	ಬಲವಂತ	ಬಲವಂತ	ಬಲವಂತ

"ವಂತ' ಯುಕ್ತ ಪದಗಳು ಉಳ್ಳವನು ಎಂಬ ಅರ್ಥವನ್ನು ನೀಡುತ್ತವೆ. ಈ ಪ್ರತ್ಯಯ ಕನ್ನಡದ ಹೊಸ ರಚನೆಗಳ ನಿರ್ಮಾಣದಲ್ಲಿ ಸಹಕಾರಿಯಾಗಿದೆ. ಉದಾಹರಣೆ ಅಕ್ಷರವಂತ, ಮಾನವಂತ, ವೀರ್ಯವಂತ ಇತ್ಯಾದಿ".[೩] ಆದ್ದರಿಂದ 'ವಂತ' ಎನ್ನುವ ಪ್ರತ್ಯಯವು ಆದೋನಿ ತೆಲುಗಿನಲ್ಲಿ ಬಳಕೆಯಾಗುತ್ತಿರುವುದು ಕನ್ನಡದ ಪ್ರಭಾವದಿಂದ ಎಂದು ತಿಳಿದುಬರುತ್ತದೆ.

- ಗಿತ್ತಿ

ಬ.ತೆ.	ಆ.ತೆ.	ಆ.ಕ.	ಬ.ಕ.
ಕುರುವಸ್ತ್ರೀ	ಕುರವಗಿತ್ತಿ	ಕುರುಬಗಿತ್ತಿ	ಕುರುಬಗಿತ್ತಿ
ಮಂತ್ರಸಾನಿ	ಸೂಲಗಿತ್ತಿ	ಸೂಲಗಿತ್ತಿ	ಸೂಲಗಿತ್ತಿ

'ಗಿತ್ತಿ' ಎನ್ನುವ ಕನ್ನಡದ ಪ್ರತ್ಯಯವು ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿರುವುದು ಕನ್ನಡದ ಪ್ರಭಾವದಿಂದ ಎಂದು ತಿಳಿದುಬರುತ್ತದೆ.

ಬ.ತೆ.	ಆ.ತೆ.	ಆ.ಕ.	ಬ.ಕ.
ವಿಯ್ಯಂಕುರಾಲು	ಬೀಗುಲು / ಬೀಗುರಾಲು	ಬೀಗತಿ	ಬೀಗತಿ

ಮೇಲಿನ ನಿದರ್ಶನದಲ್ಲಿ ಕನ್ನಡದ ಪದ 'ಬೀಗ' ರೂಪಕ್ಕೆ ತೆಲುಗಿನ ಅಲು / ಆಲು ರಚನೆಗಳು ಸೇರಿಕೊಂಡು ರಚನೆ ಆಗಿರುವುದು ವಿಶೇಷ.

ಸರ್ವಪದಗಳು

ಭಾಷೆಯಲ್ಲಿ ಮೊಟ್ಟಮೊದಲು ಕಾಣಿಸಿಕೊಳ್ಳುವ ಶಬ್ದಗಳು ಸರ್ವಪದಗಳು. ಅದು, ಇದು, ಅವನು, ಇವನು ಮುಂತಾದ ಸರ್ವಪದಗಳು ಪ್ರಾಚೀನವಾದವು. ಆದ್ದರಿಂದ ಪ್ರಾಚೀನ ವೈಯಾಕಾರಣಿಗಳು ದರ್ಶಕ, ಸರ್ವಪದಗಳನ್ನು ಪ್ರಥಮ ಪುರುಷ ಎಂದು ಕರೆದರು. ಇಡೀ ತರ್ಕವನ್ನು ಇಂಗ್ಲೀಷ್‌ಗೆ ಅನ್ವಯಿಸಿದರೆ ನಾನು, ನಾವು ಎಂಬುದು ಪ್ರಥಮ ಪುರುಷ ಆಗುತ್ತದೆ. ಆದ್ದರಿಂದ ಕೆಲವು ವಿದ್ವಾಂಸರು ಭಾಷೆಯಲ್ಲಿ ಉತ್ತಮ ಪುರುಷ ಸರ್ವಪದಗಳು ಮೊದಲು ಕಾಣಿಸಿಕೊಂಡವು ಎನ್ನುತ್ತಾರೆ. ಏನೇ ಇರಲಿ ಸರ್ವಪಧಗಳು ಭಾಷೆಯಲ್ಲಿ ಪ್ರಮುಖವಾದವು. ಒಂದು ಭಾಷೆಯ ಮೇಲೆ ಬೇರೆ ಭಾಷೆಗಳ ಪ್ರಭಾವ ಎಷ್ಟೇ ಇದ್ದರೂ ಆ ಭಾಷೆಯಲ್ಲಿ ಸರ್ವಪದಗಳು ಮಾತ್ರ ಬದಲಾಗದೆ ಹಾಗೆ ಉಳಿಯುತ್ತವೆ. ಸರ್ವಪದಗಳ ಸಹಾಯದಿಂದ ಒಂದು ಭಾಷೆಯ ಚರಿತ್ರೆಯನ್ನು ತಿಳಿಯಲು ಸಾಧ್ಯ. ಇಲ್ಲಿಯೂ ಸಹ ಕನ್ನಡ ಆದೋನಿ ತೆಲುಗಿನ ಮೇಲೆ ಪ್ರಭಾವ ಬೀರಿರುವುದನ್ನು ಗಮನಿಸಬಹುದು.

ಸರ್ವಪದಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

೧. ಪುರುಷವಾಚಕ ಸರ್ವಪದಗಳು (Personal Pronouns)

೨. ಆತ್ಮಾರ್ಥಕ ಸರ್ವಪದಗಳು (Reflextive Pronouns)

೩. ನಿರ್ದೇಶಕ ಸರ್ವಪದಗಳು (Pemonstrative Pronouns)

೪. ಪ್ರಶ್ನಾರ್ಥಕ ಸರ್ವಪದಗಳು (Interrogative Pronouns)

ಉತ್ತಮ, ಮಧ್ಯಮ, ಪುರುಷವಾಚಕ ಆತ್ಮಾರ್ಥಕ ಸರ್ವಪದಗಳಲ್ಲಿ ಲಿಂಗಬೇಧವಿರುವುದಿಲ್ಲ. ನಿರ್ದೇಶಕ, ಪ್ರಶ್ನಾರ್ಥಕ ಸರ್ವಪದಗಳಲ್ಲಿ ಲಿಂಗಬೇಧವಿರುತ್ತದೆ.

ಅ. ಉತ್ತಮ ಪುರುಷ ಏಕವಚನ :

ಬ.ತೆ.	ಆ.ತೆ.	ಆ.ಕ.	ಬ.ಕ.
ನೇನು	ನಾನು	ನಾನು	ನಾನು

ಆ. ಉತ್ತಮ ಪುರುಷ ಬಹುವಚನ :

ಬ.ತೆ.	ಆ.ತೆ.	ಆ.ಕ.	ಬ.ಕ.
ಮೇಮು	ಮಾಮು	ನಾವು	ನಾವು

ಬರಹದ ಕನ್ನಡದ ಉತ್ತಮ ಪುರುಷ ಏಕವಚನ ರೂಪ ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿದೆ. ಮತ್ತು ಉತ್ತಮ ಪುರುಷ ಬಹುವಚನ ರೂಪದ ಪದಮಧ್ಯ ಪರಿಸರದ 'ಎ' ಕಾರವು ಕನ್ನಡದ ಪ್ರಭಾವದಿಂದ 'ಆ' ಕಾರವಾಗಿದೆ. ಆದ್ದರಿಂದ ಮೇಲಿನ ರೂಪಗಳ ಮೇಲೆ ಕನ್ನಡ ಪ್ರಭಾವವಿರುವುದು ಸ್ಪಷ್ಟವಾಗಿದೆ.

ಮನ ಇಂಟಿಕಿ ಪೊತಾನು (ಬ.ತೆ.)

ಮಾ ಇಂಟಿಕಿ ಪೊತಾನು (ಆ.ತೆ.)

ನಮ್ಮ ಮನೆಗೆ ಪೊಗ್ತೀನಿ (ಆ.ಕ.)

ನಮ್ಮ ಮನೆಗೆ ಹೋಗುತ್ತೇನೆ (ಬ.ಕ.)

ಮೇಲಿನ ವಾಕ್ಯಗಳಲ್ಲಿ ಸರ್ವಪದಗಳ ಪಕ್ಕದಲ್ಲಿ ಬಂದಿರುವ ಪದಗಳು ಭಿನ್ನವಾಗಿವೆ. 'ಮನೆಗೆ' ಪದದ ಬದಲಾಗಿ ಮನಿಗೆ ಎಂದು ಆ.ಕ.ದಲ್ಲಿ ಬಳಕೆಯಲ್ಲಿದೆ. ಇಲ್ಲಿ ಪದಮಧ್ಯದ 'ಎ' ಕಾರವು 'ಇ' ಕಾರವಾಗಿ

ಮಾರ್ಪಟ್ಟಿದೆ. ಅದೇ ರೀತಿ ಕನ್ನಡ ಬರಹದ ವಾಕ್ಯದ ಕೊನೆಯ ಪದ ಹೋಗುತ್ತೇನೆ. ಪದಕ್ಕೆ ಬದಲಾಗಿ 'ವೊಗ್ತೀನಿ' ಪದ ಬಳಕೆಯಲ್ಲಿದೆ. ಇಲ್ಲಿ 'ಹ' ಕಾರದ ಸ್ಥಾನದಲ್ಲಿ 'ವ' ಕಾರವು ಬಳಕೆಯಲ್ಲಿದೆ ಪದಾಂತ್ಯದ 'ಎ' ಕಾರದ ಸ್ಥಾನದಲ್ಲಿ 'ಇ' ಕಾರವು ಬಳಕೆಯಲ್ಲಿದೆ. ಬರಹದ ತೆಲುಗು ಮತ್ತು ಆದೋನಿ ತೆಲುಗಿನಲ್ಲಿ 'ಇಂಟಿಕಿ' ಪದ ಬಳಕೆಯಲ್ಲಿದ್ದರೆ, ಆದೋನಿ ಕನ್ನಡದಲ್ಲಿ 'ಮನಿಗೆ' ಬಳಕೆಯಲ್ಲಿದೆ. ಪದಮಧ್ಯ ಪರಿಸರ 'ಇ' ಕಾರವು ತೆಲುಗಿನ ಪ್ರಭಾವವನ್ನು ಸೂಚಿಸುತ್ತದೆ.

ಮೇಮೇ ಮನಗಾಳನುಕೊನಿ ವಚ್ಚಾಂ (ಬ.ತೆ.)

ಮಾಮೇ ಮನಗಾಳನುಕೊನಿ ವಸ್ತಿಮಿ (ಆ.ತೆ.)

ನಾವೇ ಮನಿಗ್ಯಾರ್ರು ಅಂದಕೊಂಡು ಬಂದಿವಿ (ಆ.ಕ.)

ನಾವೇ ಪರಾಕ್ರಮಿಗಳು ಎಂದುಕೊಂಡು ಬಂದೆವು (ಬ.ಕ.)

ಮೇಲಿನ ವಾಕ್ಯಗಳಲ್ಲಿ ಮೇಮೇ ಎನ್ನುವ ಸರ್ವಪದವು ಪದಾದಿಯಲ್ಲಿ 'ಎ' ಕಾರ ಬಳಕೆಯಲ್ಲಿದೆ. ಆದರೆ ಆದೋನಿ ತೆಲುಗಿನಲ್ಲಿ ಪದಾದಿಯಲ್ಲಿ ಸರ್ವಪದದ ಪ್ರಭಾವದಿಂದ 'ಆ' ಕಾರ ಬಳಕೆಯಲ್ಲಿದೆ. ಬರಹದ ಕನ್ನಡದ 'ಪರಾಕ್ರಮಿಗಳು' ಎನ್ನುವುದಕ್ಕೆ ಆದೋನಿ ಕನ್ನಡದಲ್ಲಿ 'ಮನಿಗ್ಯಾರ್ರು' ಎಂದು ಬಳಕೆಯಲ್ಲಿರುವುದು ವಿಶೇಷವಾಗಿದೆ.

ಇ. ಪ್ರಥಮ ಪುರುಷ ಏಕವಚನ :

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ವಾಡು	ವಾಡು	ಅವ್‌ನು	ಅವನು

ಈ. ಪ್ರಥಮ ಪುರುಷ ಬಹುವಚನ :

ವಾಳ್ಳು	ವಾರು	ಅವ್‌ರು	ಅವರು

ಮೇಲಿನ ನಿದರ್ಶನಗಳನ್ನು ಗಮನಿಸಿದಾಗ ಪ್ರಥಮ ಪುರುಷ 'ವಾಡು' ಎನ್ನುವ ಶಬ್ದದಲ್ಲಿ ಕನ್ನಡ ಪ್ರಭಾವ ಇಲ್ಲ. ಆದರೆ ಬಹುವಚನ 'ವಾರು' ಪದಕ್ಕೆ ಕನ್ನಡದ 'ಅವರು' ಪದದ ಪ್ರಭಾವ ಆಗಿದೆ ಎಂದು ಊಹಿಸಬಹುದು.

೨. ನಿರ್ದೇಶಕ ಸರ್ವಪದಗಳು

ಪ್ರಕೃತಿಗೆ ಲಿಂಗವಚನ ಪ್ರತ್ಯಯಗಳು ಸೇರುವುದರಿಂದ ನಿರ್ದೇಶಕ ಸರ್ವಪದಗಳು ರಚನೆ ಆಗುತ್ತವೆ. ಇವುಗಳಲ್ಲಿ ಎರಡು ವಿಧ.

ಅ. ದೂರವನ್ನು ನಿರ್ದೇಶಿಸುವ ಸರ್ವಪದಗಳು

ಆ. ಸಮೀಪವನ್ನು ನಿರ್ದೇಶಿಸುವ ಸರ್ವಪದಗಳು

ಅ. ದೂರವನ್ನು ನಿರ್ದೇಶಿಸುವ ಸರ್ವಪದಗಳು :

ಬ.ತೆ.	ಆ.ತೆ.	ಆ.ಕ.	ಬ.ಕ.
ವಾಡು	ಆತಿನಿ	ಆತ	ಅವನು / ಆತ
ವಾಳ್ಳು	ವಾರು	ಅವ್‌ರು	ಅವರು
ಅಕ್ಕಡ	ಆಡ	ಅಲ್ಲಿ	ಅಲ್ಲಿ
ಅಪ್ಪುಡು	ಅವುಡು	ಆವಾಗ	ಆವಾಗ

ಆ. ಸಮೀಪವನ್ನು ನಿರ್ದೇಶಿಸುವ ಸರ್ವಪದಗಳು :

ಬ.ತೆ.	ಆ.ತೆ.	ಆ.ಕ.	ಬ.ಕ.
ವೀಡು/ಇತನು	ಈತಿನಿ/ಈಯಪ್ಪ	ಈತ/ಈಯಪ್ಪ	ಇವನು

ಬರಹ ಕನ್ನಡದ 'ಇವನು' ಪದಕ್ಕೆ ಸಂವಾದಿಯಾಗಿ ಆದೋನಿ ಕನ್ನಡದಲ್ಲಿ ಈತ / ಈಯಪ್ಪ ಎಂದು ಬಳಕೆಯಾಗುತ್ತಿದೆ. ಅದೇ ರೀತಿ ಬ.ತೆ.ನ ವೀಡು / ಇತಡು ಎನ್ನುವ ಪದಗಳು ಈತಿನಿ / ಈಯಪ್ಪ ಎಂದು ಬಳಕೆಯಲ್ಲಿವೆ. ಆ.ಕ. ಮತ್ತು ಆ.ತೆ.ನಲ್ಲಿ ಈಯಪ್ಪ ಎನ್ನುವ ಒಂದೇ ಪದ ಬಳಕೆಯಲ್ಲಿರುವುದು ಇಲ್ಲಿ ವೈಶಿಷ್ಟ್ಯವಾಗಿದೆ.

ಇ.

ಬ.ತೆ.	ಆ.ತೆ.	ಆ.ಕ.	ಬ.ಕ.
ವೀಳ್ಳು	ವೀರು	ಇವ್‌ರು	ಇವರು
ಈಮೆ	ಈಯಮ್ಮ	ಈಯಮ್ಮ/ಈಕೆ	ಇವಳು
ಆಮೆ	ಆಯಮ್ಮ	ಆಯಮ್ಮ/ಆಕೆ	ಅವಳು

ಬ.ತೆ.ನಲ್ಲಿ 'ವೀಳ್ಳು' ಎನ್ನುವ ಪದ ಆದೋನಿ ತೆಲುಗಿನಲ್ಲಿ 'ವೀರು' ಎಂದು ಬಳಕೆಯಲ್ಲಿದೆ. ಪದಾಂತ್ಯ ಪರಿಸರದ 'ರ' ಕಾರವು ಕನ್ನಡದ ಪ್ರಭಾವದಿಂದ ಬಳಕೆಯಲ್ಲಿದೆ ಎಂದು ಹೇಳಬಹುದು.

೨. ಪ್ರಶ್ನಾರ್ಥಕ ಸರ್ವನಾಮಪದಗಳು

ಬ.ತೆ.	ಆ.ತೆ.	ಆ.ಕ.	ಬ.ಕ.
ಎವಡು	ಯವಡು	ಯಾವೋನು	ಯಾವನು
ಎವರು	ಯವರು	ಯಾರು	ಯಾರು
ಎವತೆ	ಯವ್‌ತಿ	ಯಾವೋಳು	ಯಾವಳು
ಏದಿ	ಯಾದಿ	ಯಾದು	ಯಾವುದು
ಏವಿ	ಯಾವು	ಯಾವು	ಯಾವು

ಮೇಲಿನ ಎಲ್ಲಾ ಪದಗಳಲ್ಲಿ ಬರಹ ತೆಲುಗಿನಲ್ಲಿ ಪದಾದಿಯಲ್ಲಿ 'ಎ' ಮತ್ತು 'ಏ' ಕಾರಗಳು ಬಳಕೆಯಲ್ಲಿದ್ದರೆ, ಆದೋನಿ ತೆಲುಗಿನಲ್ಲಿ 'ಯ' ಕಾರ ಬಳಕೆಯಲ್ಲಿದೆ. ಇದರಿಂದ ಕನ್ನಡ ಭಾಷೆಯ ಪ್ರಭಾವ ಆಗಿದೆ ಎಂದು ತಿಳಿಯುತ್ತದೆ. ಎರಡು ಮತ್ತು ಮೂರನೇ ಅಕ್ಷರಗಳು ಬರಹದ ತೆಲುಗಿನಲ್ಲಿ ಇದ್ದಾಗೆ ಕಾಣಿಸುತ್ತದೆ. ಈ ಹಿನ್ನೆಲೆಯಿಂದ ಆದೋನಿ ತೆಲುಗು ಆದೋನಿ ಕನ್ನಡಕ್ಕಿಂತ ಭಿನ್ನವಾಗಿ ಬಳಕೆಯಲ್ಲಿದೆ ಎಂದೆನಿಸುತ್ತದೆ.

ಸಂಖ್ಯಾವಾಚಕ

ಸಂಖ್ಯಾವಾಚಕಗಳನ್ನು ಗಮನಿಸಿದರೆ ಈ ಪ್ರಾಂತದವರು ಅಂದರೆ ಆದೋನಿ ಪರಿಸರದವರು ತೆಲುಗು ಮತ್ತು ಕನ್ನಡ ಎರಡನ್ನೂ ಬೆರೆಸಿ ಬಳಕೆ ಮಾಡಲಾಗುತ್ತದೆ. (ಉದಾ. ಸಾವಿರ ಎನ್ನುವ ಪದವನ್ನು ಕನ್ನಡದ ಸಾವಿರ ಎಂದೂ ತೆಲುಗಿನ 'ವೆಯ್ಯಿ' ಎಂದೂ ಎರಡೂ ರೂಪಗಳನ್ನು ಬಳಕೆ ಮಾಡುತ್ತಾರೆ.)

ಪ್ರಾಥಮಿಕ ಸಂಖ್ಯಾವಾಚಕಗಳು

ಅ. ಏಕವಚನ :	ಬ.ತೆ.	ಆ.ತೆ.	ಆ.ಕ.	ಬ.ಕ.
	ಒಕಡು	ಒಗುಡು/ಒಕಡು	ಒಬ್ಬೋನು	ಒಬ್ಬನು

ಮೇಲಿನ ನಿದರ್ಶನದಲ್ಲಿ ಆದೋನಿ ತೆಲುಗು ಬರಹದ ತೆಲುಗಿನ ರೂಪವನ್ನೇ ಉಳಿಸಿಕೊಂಡಿದೆ.

ಆ. ಬಹುವಚನ :	**ಬ.ತೆ.**	**ಆ.ತೆ.**	**ಆ.ಕ.**	**ಬ.ಕ.**
	ಒಕರು	ಒಗುರು/ಒಕ್ರು	ಒಬ್ರು	ಒಬ್ಬರು

ಇಲ್ಲಿ 'ಒಕರು' ರೂಪದ ಹ್ರಸ್ವೀಕರಣ 'ಒಕ್ರು' ಎಂದು ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿರುವುದು ವಿಶೇಷ. ಇದು ಬರಹದ ತೆಲುಗಿನ ಪ್ರಭಾವ ಎಂದು ಹೇಳಬಹುದು.

ಇ. ಸ್ತ್ರೀವಾಚಕಗಳು :	**ಬ.ತೆ.**	**ಆ.ತೆ.**	**ಆ.ಕ.**	**ಬ.ಕ.**
	ಒಕತೆ	ಒಗಿತಿ/ಒಕ್ಕತಿ	ಒಬ್ಬೋಳು	ಒಬ್ಬಳು

ಇಲ್ಲಿಯೂ ಸಹ ಬರಹದ ತೆಲುಗಿನಲ್ಲಿ 'ಎ' ಕಾರಂತ ಪದ ಆದೋನಿ ತೆಲುಗಿನಲ್ಲಿ 'ಇ' ಕಾರಂತವಾಗಿದೆ. ಇದು ಕನ್ನಡದ ಪ್ರಾದೇಶಿಕ ಉಪಭಾಷೆಯ ಪ್ರಭಾವದಿಂದ ಈ ಮಾದರಿ ಬದಲಾವಣೆ ಆಗಿದೆ ಎಂದು ಹೇಳಬಹುದು.

ಈ. ನಪುಂಸಕ ಸಂಖ್ಯಾವಾಚಕಗಳು :	**ಬ.ತೆ.**	**ಆ.ತೆ.**	**ಆ.ಕ.**	**ಬ.ಕ.**
	ಒಕಟಿ	ಒಗಟಿ	ಒಂದು/ವಂದು	ಒಂದು

ಬರಹದ ತೆಲುಗಿನಲ್ಲಿ 'ಒಕಟಿ' ಆದೋನಿ ತೆಲುಗಿನಲ್ಲಿ 'ಒಗಟಿ' ಎಂದಾಗುತ್ತದೆ. ಅಂದರೆ 'ಕ' ಕಾರಕ್ಕೆ ಬದಲು 'ಗ' ಕಾರ ಬಳಕೆಯಲ್ಲಿರುವುದು ವಿಶೇಷವಾಗಿದೆ.

ಬ.ತೆ.	**ಆ.ತೆ.**	**ಆ.ಕ.**	**ಬ.ಕ.**
ರೆಂಡು	ರೊಂಡು/ರೆಂಡು	ಎಲ್ಡು	ಎರಡು
ಮೂಡು	ಮೂಡು	ಮೂರು	ಮೂರು
ನಾಲುಗು	ನಾಲ್ಗು	ನಾಲ್ಕು	ನಾಲ್ಕು
ಐದು	ಅಯ್‌ದು	ಅಯ್‌ದು	ಐದು
ಆರು	ಆರು	ಆರು	ಆರು
ಏಡು	ಯೇಡು	ಯೇಳು	ಏಳು

ಎನಿಮಿದಿ	ಯನ್ಮಿದಿ	ಯಂಟು	ಎಂಟು
ತೊಮ್ಮಿದಿ	ತೊಮ್ಮಿದಿ	ಒಂಬತ್ತು/ವಂಬತ್ತು	ಒಂಬತ್ತು
ಪದಿ	ಪದಿ	ಅತ್ತು	ಹತ್ತು
ವಂದ	ನೂರು	ನೂರು	ನೂರು
ವೆಯಿ	ಸಾವಿರ/ವೆಯ್ಯಿ	ಸಾವಿರ	ಸಾವಿರ

ಆದೋನಿ ತೆಲುಗಿನಲ್ಲಿ 'ನೂರು' ಮತ್ತು 'ಸಾವಿರ' ಎನ್ನುವ ಪದಗಳು ಬಳಕೆಯಲ್ಲಿವೆ. 'ವೆಯ್ಯಿ' 'ಸಾವಿರ' ಎರಡೂ ರೂಪಗಳು ಈ ಭಾಗದಲ್ಲಿ ಬಳಕೆಯಲ್ಲಿವೆ. ಈ ಹಿನ್ನೆಲೆಯಿಂದ ನೂರು ಮತ್ತು ಸಾವಿರ ಎನ್ನುವ ಪದಗಳು ಕನ್ನಡ ಪ್ರಭಾವದಿಂದ ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿರುವುದು ವಿಶೇಷ.

ಉ. ಸಂಯುಕ್ತ ಸಂಖ್ಯಾವಾಚಿಗಳು

ಬ.ತೆ.	ಆ.ತೆ.	ಆ.ಕ.	ಬ.ಕ.
ಇರಭೈ	ಇರವೈ	ಇಪ್ಪತ್ತು	ಇಪ್ಪತ್ತು
ಮುಪ್ಪೈ	ಮುಪ್ಪೈ	ಮೂವತ್ತು	ಮೂವತ್ತು
ನಲಭೈ	ನಲವೈ	ನಲವತ್ತು	ನಲವತ್ತು
ಯಾಭೈ	ಯಾವೈ	ಅಯ್‌ವತ್ತು	ಐವತ್ತು
ಅರಭೈ	ಅರವೈ	ಅರವತ್ತು	ಅರವತ್ತು
ಡೆಬ್ಬಯ್	ಡೆಬ್ಬಯ್	ಎಪ್ಪತ್ತು	ಎಪ್ಪತ್ತು
ಎನಭಯ್	ಎನವೈ	ಎಂಬತ್ತು	ಎಂಬತ್ತು

ಬರಹದ ತೆಲುಗಿನಲ್ಲಿ ಇರಭೈ, ನಲಭೈ ಎನ್ನುವ ರೂಪಗಳು ಬಳಕೆಯಲ್ಲಿದ್ದರೂ ಈ ಪ್ರಾಂತದಲ್ಲಿ ಅಂದರೆ ಆದೋನಿ ತೆಲುಗಿನಲ್ಲಿ ನಲವೈ, ಯಾವೈ ಮುಂತಾದವುಗಳಲ್ಲಿ 'ವ' ಕಾರದಿಂದ ಕೂಡಿದ ರೂಪಗಳು ಮಾತ್ರವೇ ಇರುವುದರಿಂದ ಕನ್ನಡದ (ನಲವತ್ತು, ಐವತ್ತು) ಪ್ರಭಾವವನ್ನು ಸೂಚಿಸುತ್ತದೆ.

ಆದೋನಿ ತೆಲುಗು ಮೂಲ ದ್ರಾವಿಡದ 'ಎ' ಕಾರವನ್ನು ಉಳಿಸಿಕೊಂಡಿದೆ. ಅಂದರೆ ಬರಹದ ತೆಲುಗಿನ ಪ್ರಭಾವ ಆದೋನಿ ತೆಲುಗಿನ ಮೇಲೆ ಆಗಿದೆ ಎಂದಾಯ್ತು.

ಬ.ತೆ.	ಆ.ತೆ.	ಆ.ಕ.	ಬ.ಕ.
ರೆಂಡುವಂದಲು	ಇನ್ನೂರು	ಇನ್ನೂರು	ಎರಡುನೂರು
ಮೂಡುವಂದಲು	ಮುನ್ನೂರು	ಮುನ್ನೂರು	ಮೂರುನೂರು
ನಾಲುಗುವಂದಲು	ನಾನ್ನೂರು	ನಾನ್ನೂರು	ನಾಲ್ಕುನೂರು
ಐದುವಂದಲು	ಅಯ್‌ನೂರು	ಅಯ್‌ನೂರು	ಐದುನೂರು
ಏಡುವಂದಲು	ಯೇಳ್ನೂರು	ಯೇಳ್ನೂರು	ಏಳುನೂರು
ಎನಿಮಿದಿವಂದಲು	ಎನಿಮಿದಿನೂರು	ಎಂಟುನೂರು	ಎಂಟುನೂರು

ಮೇಲಿನ ಎಲ್ಲಾ ವಿವರಣೆಯಲ್ಲೂ 'ಇನ್ನೂರು' ಎನ್ನುವ ಸಂಖ್ಯಾವಾಚಕದಿಂದಿಡಿದು ಎನಿಮಿದಿನೂರು ವರೆಗೆ ಇರುವ ಸಂಖ್ಯಾವಾಚಕಗಳಲ್ಲಿ ಕನ್ನಡದ ಪ್ರಭಾವವಾಗಿದೆ ಎಂಬುದಕ್ಕೆ ಆದೋನಿ ತೆಲುಗಿನ ರಚನೆಯಿಂದ ನಿರ್ಧರಿಸಬಹುದಾಗಿದೆ. ಅವೇ ಸಂಖ್ಯಾವಾಚಕ ಬರಹ ತೆಲುಗಿನಲ್ಲಿ ರೆಂಡುವಂದಲು, ಮೂಡುವಂದಲು ಮೊದಲಾದ ರೀತಿಯಲ್ಲಿ ಬಳಕೆಯಲ್ಲಿವೆ ಅಂದರೆ ಆದೋನಿ ತೆಲುಗು ಬರಹದ ತೆಲುಗುಗಿಂತ ತೀರ ಭಿನ್ನವಾಗಿದೆ ಎಂದು ಹೇಳಬಹುದು.

ಬ.ತೆ.	ಆ.ತೆ.	ಆ.ಕ.	ಬ.ಕ.
ರೆಂಡುವೇಲು	ರೆಂಡು ಸಾವಿರ್ಲು	ಎಲ್ಡು ಸಾವಿರ	ಎರಡು ಸಾವಿರ
ಮೂಡುವೇಲು	ಮೂಡು ಸಾವಿರ್ಲು	ಮೂರು ಸಾವಿರ	ಮೂರು ಸಾವಿರ

'ರೆಂಡು ವೇಲು' ಎನ್ನುವುದು ಬರಹ ತೆಲುಗು ಪದವಾಗಿದೆ. ಆದರೆ ಆದೋನಿ ತೆಲುಗಿನಲ್ಲಿ 'ರೆಂಡ್ ಸಾವ್‌ರ' ಎನ್ನುವ ಪದವು ಬಳಕೆಯಲ್ಲಿದೆ. ರೆಂಡು ಎನ್ನುವ ತೆಲುಗಿನ ಪದಕ್ಕೆ ಸಾವಿರ ಎನ್ನುವ ಕನ್ನಡ ಪದ ಸೇರಿ ಕನ್ನಡ ಪ್ರಭಾವದಿಂದ ಆದೋನಿ ತೆಲುಗು ವಿಶಿಷ್ಟವಾಗಿ ಬಳಕೆಯಲ್ಲಿರುವುದು ವಿಶೇಷವಾಗಿದೆ.

ಊ. ಸಂಖ್ಯಾವಾಚಕ ವಿಶೇಷಣಗಳು

ನಾಮಪದಕ್ಕೆ ಪೂರ್ವದಲ್ಲಿ ಸಂಖ್ಯಾವಾಚಕಗಳನ್ನು ಬಳಕೆ ಮಾಡಿದಾಗ ಅವು ವಿಶೇಷಣಗಳಾಗಿ ಕಾರ್ಯ ನಿರ್ವಹಿಸುತ್ತವೆ. 'ಒಕ' ಎನ್ನುವ ಶಬ್ದ 'ಒಗು' ಎಂದು ಈ ಭಾಗದಲ್ಲಿ ಬಳಕೆಯಲ್ಲಿದೆ. 'ಒಕ' ಎನ್ನುವ ಪದದ ಬದಲು 'ಒಗು' ಬರುವುದು ಕನ್ನಡದ ಉಚ್ಚಾರಣೆಯ ಪ್ರಭಾವ. ಕೆಳಗಿನ ಉದಾಹರಣೆಗಳಲ್ಲಿ ಕನ್ನಡದ ಪ್ರಭಾವವನ್ನು ನೋಡಬಹುದು.

ಬ.ತೆ.	ಆ.ತೆ.	ಆ.ಕ.	ಬ.ಕ.
ಒಕದಿನಂ	ಒಗುದಿನಂ	ಒಂದು ದಿನ / ವಂದು ದಿನ	ಒಂದು ದಿನ
ಒಕಮಾನು	ಒಗುಮಾನ	ಒಂದು ಮರ / ವಂದು ಮರ	ಒಂದು ಮರ
ಮೂಡೊಂದಲಮಂದಿ	ಮುನ್ನೂರುಜನಂ	ಮುನ್ನೂರುಜನ	ಮುನ್ನೂರು ಜನ
ನಾಲುಗುರೋಜಲು	ನಾಲ್ಗು ದಿನಾಲು	ನಾಲ್ಕುದಿನ	ನಾಲ್ಕು ದಿನ
ಐದು ರೋಜಲು	ಐದು ದಿನಾಲು	ಅಯ್‌ದಿನ	ಐದು ದಿನ
ಆರು ವಂದಲು	ಆರುನೂರು	ಆರುನೂರು	ಆರುನೂರು
ವೆಯ್ಯಿ ಮಂದಿ	ಸಾವಿರಜನಂ	ಸಾವಿರ ಜನ	ಸಾವಿರ ಜನ
ಕೋಟ್ಲಕೊದ್ದಿ	ಕೋಟಾನುಕೋಟಿ	ಕೋಟಾನುಕೋಟಿ	ಕೋಟಾನುಕೋಟಿ

ಮೇಲೆ ನೀಡಿದ ಪ್ರತಿಯೊಂದು ನಾಮಪದಗಳ ಹಿಂದಿನ ಸಂಖ್ಯಾ ವಿಶೇಷಣಗಳಲ್ಲಿ ಕನ್ನಡ ಪ್ರಭಾವ ಬೀರಿದೆ. ಮೂಡೊಂದಲ ಮಂದಿ ಎನ್ನುವ ಬರಹ ತೆಲುಗಿನ ಪದಕ್ಕೆ ಬದಲಾಗಿ ಆದೋನಿ ತೆಲುಗಿನಲ್ಲಿ ಮುನ್ನೂರು ಮಂದಿ, 'ಐದು ರೋಜಲು' ಎನ್ನುವ ಪದಕ್ಕೆ ಪರ್ಯಾಯವಾಗಿ ಐದು ದಿನ, 'ಆರುವಂದಲ' ಪದಕ್ಕೆ ಬದಲಾಗಿ 'ಆರುನೂರು' ಹೀಗೆ ಕನ್ನಡದ ಪ್ರಭಾವ ಬೀರಿರುವುದು ಗಮನಿಸುವಂತಹ ಅಂಶವಾಗಿದೆ.

ವಿಶೇಷಣಗಳು

ಆದೋನಿ ಪರಿಸರದಲ್ಲಿ ಬಳಕೆಯಲ್ಲಿರುವ ವಿಶೇಷಣಗಳ ಕಾರ್ಯ ಸ್ವರೂಪದ ಆಧಾರದ ಮೇಲೆ ಇವುಗಳನ್ನು ಎಂಟು ವಿಧವಾಗಿ ವಿಭಜಿಸಬಹುದು. ಅವು ಇಂತಿವೆ.

೧. ಗುಣವಾಚಕ ವಿಶೇಷಣಗಳು (Qualitative Adjectives)

೨. ನಿರ್ದೇಶಾತ್ಮಕ ವಿಶೇಷಣಗಳು (Demonstrative Adjectives)

೩. ಪ್ರಶ್ನಾರ್ಥಕ ವಿಶೇಷಣಗಳು (Intergative adjectives)

೪. ಪರಿಮಾಣಾತ್ಮಕ ವಿಶೇಷಣಗಳು (Quantitative adjectives)

೫. ಪ್ರಕಾರಾರ್ಥಕ ವಿಶೇಷಣಗಳು (Manner adjectives)

೬. ಪರಿಗಣನಾರ್ಥಕ ವಿಶೇಷಣಗಳು (Adjectives of Totality)

೭. ಅನಿಶ್ಚಿತ ವಿಶೇಷಣಗಳು (Indefinite adjectives)

೮. ಸಂಖ್ಯಾವಾಚಕ ವಿಶೇಷಣಗಳು (Numeral adjectives)

೧. **ಗುಣವಾಚಕ ವಿಶೇಷಣಗಳು** : ಸ್ಥಾನ, ಆಕಾರ, ವರ್ಣ, ದೇಶ, ಗುಣಗಳ ಬೇಧಗಳೊಂದಿಗೆ ವಿವಿಧ ಪ್ರಕಾರವಾಗಿ ಬಳಕೆಯಲ್ಲಿದೆ.

	ಬ.ತೆ.	ಆ.ತೆ.	ಆ.ಕ.	ಬ.ಕ.
ಕಾಲ :	ಕೊತ್ತಮಾಟ	ವಸಮಾಟ್ಲು	ವಸಮಾತು	ಹೊಸಮಾತು
ಸ್ಥಾನ :	ಎತ್ತು	ಎತ್ತರ್ರು	ಎತ್ತರ/ಎತ್ರ	ಎತ್ತರ
	ಲೋಪಲ	ಲೋಗಾನ	ವಳಗೆ	ಒಳಗೆ
ಆಕಾರ :	ಚೇತಿಗುಡ್ಡ	ಚೌಕುಗುಡ್ಡಂ	ಚೌಕಬಟ್ಟೆ	ಚೌಕುಬಟ್ಟೆ
	ವಂಕರಕಟ್ಟೆ	ಸೊಟ್ಟಕಟ್ಟಿ	ಸೊಟ್ಟಕಟ್ಟಿಗೆ	ಸೊಟ್ಟಕಟ್ಟಿಗೆ
ವರ್ಣ :	ನಲ್ಲನಿ	ಕಪ್ಪುಲಿಂಗಪ್ಪ	ಕಪ್ಪು	ಕಪ್ಪು
ದೇಶ :	ಪೇದತನಂ	ಬಡತನಂ	ಬಡತನ	ಬಡತನ

ಪ್ರಮಾಣ ತೆಲುಗಿನ 'ಎತ್ತು' ಆದೋನಿ ತೆಲುಗಿನಲ್ಲಿ 'ಎತ್ತರ್ರು' ಆಗಿ ಬಳಕೆಯಲ್ಲಿದೆ. 'ರ' ಕಾರ ಕನ್ನಡದ ಪ್ರಭಾವದಿಂದ ಉಚ್ಚಾರಣೆಗೊಳ್ಳುತ್ತಿದೆ. ಅದೇ ರೀತಿ 'ವಂಕರಕಟ್ಟೆ' ಎನ್ನುವ ಪದ ಆದೋನಿ ತೆಲುಗಿನಲ್ಲಿ ಬಳಕೆಯಾಗದೆ 'ಸೊಟ್ಟಕಟ್ಟಿ' ಎಂದು ಬಳಕೆಯಾಗುತ್ತಿದೆ ಮತ್ತು 'ಪೇದತನಂ' ಎನ್ನುವ ಬರಹದ ತೆಲುಗಿನ ಪದವು ಆದೋನಿ ತೆಲುಗಿನಲ್ಲಿ 'ಬಡತನಂ' ಎಂದು ಇಲ್ಲಿಯೂ ಕನ್ನಡದ ಪ್ರಭಾವವಾಗಿರುವುದು ಸ್ಪಷ್ಟವಾಗಿದೆ.

೨. **ನಿರ್ದೇಶಾತ್ಮಕ ವಿಶೇಷಣಗಳು** : ದೂರ ಮತ್ತು ಸಮೀಪ ನಿರ್ದೇಶಾತ್ಮಕಗಳಲ್ಲಿ ಕನ್ನಡ ಪ್ರಭಾವ ಬೀರಿರುವ ಅಂಶಗಳನ್ನು ಗಮನಿಸಬಹುದು.

ದೂರವನ್ನು ನಿರ್ದೇಶಿಸುವ ವಿಶೇಷಣಗಳು :

ಬ.ತೆ.	ಆ.ತೆ.	ಆ.ಕ.	ಬ.ಕ.
ಆಮೆ	ಆಯಮ್ಮ	ಆಯಮ್ಮ	ಅವಳು
ಆಯನ	ಆಯಪ್ಪ	ಆಯಪ್ಪ	ಅವನು

ಸಮೀಪವನ್ನು ನಿರ್ದೇಶಿಸುವ ವಿಶೇಷಣಗಳು :

ಈಮೆ	ಈಯಮ್ಮ	ಈಯಮ್ಮ	ಇವಳು
ಇತನು	ಈಯಪ್ಪ	ಈಯಪ್ಪ	ಇವನು

ಬ.ತೆ. ಮತ್ತು ಬ.ಕ.ಕ್ಕಿಂತ ಆ.ತೆ. ಮತ್ತು ಆ.ಕ.ದಲ್ಲಿ ವಿಶೇಷಣಗಳು ವಿಶಿಷ್ಟವಾಗಿ ಬಳಕೆಯಲ್ಲಿವೆ. ಈ ಭಾಗದ ಭಾಷೆಯ ಮೇಲೆ ಬ.ಕ.ವಾಗಲೀ ಅಥವಾ ಬ.ತೆಲುಗಿನ ಪ್ರಭಾವವಾಗಲೀ ಪ್ರಭಾವ ಬೀರಿಲ್ಲ.

೩. ಪ್ರಶ್ನಾರ್ಥಕ ವಿಶೇಷಣಗಳು :

ಬ.ತೆ.	ಆ.ತೆ.	ಆ.ಕ.	ಬ.ಕ.
ಏದಿ	ಯಾವದಿ	ಯಾದು	ಯಾವುದು
ಏದಿಕ್ಕು	ಯಾದಿಕ್ಕು	ಯಾದಿಕ್ಕು	ಯಾವ ದಿಕ್ಕು
ಎವಡು	ಯವಡು	ಯಾವೋನು	ಯಾವನು

ಮೇಲೆ ಬಳಕೆಯಾಗಿರುವ ಎಲ್ಲಾ ಪ್ರಶ್ನಾರ್ಥಕ ವಿಶೇಷಣಗಳಲ್ಲಿ ಕನ್ನಡದ ಪ್ರಭಾವ ಬೀರಿರುವುದನ್ನು ಕಾಣಬಹುದು. ಬರಹದ ತೆಲುಗಿನಲ್ಲಿ ಪದಾದಿಯ 'ಎ' ಕಾರ ಲೋಪಗೊಂಡಿದೆ. ಆದೋನಿ ತೆಲುಗಿನಲ್ಲಿ ಪದಾದಿಯಲ್ಲಿ 'ಯ' ಕಾರ ಬಳಕೆಯಾಗಿ ಕನ್ನಡದ ಪ್ರಭಾವವನ್ನು ಉಳಿಸಿಕೊಂಡಿದೆ.

೪. ಪರಿಣಾಮಾತ್ಮಕ ವಿಶೇಷಣಗಳು :

ಬ.ತೆ.	ಆ.ತೆ.	ಆ.ಕ.	ಬ.ಕ.
ಅಂತ	ಅಂತೊಟ್ಟು	ಆಟು	ಅಷ್ಟು
ಇಂತ	ಇಂತೊಟ್ಟು	ಈಟು	ಇಷ್ಟು
ಎಂತ	ಎಂತೊಟ್ಟು	ಏಟು	ಎಷ್ಟು

ಬರಹದ ತೆಲುಗಿನಲ್ಲಿ ಅಂತ, ಇಂತ ಮತ್ತು ಎಂತ ಎನ್ನುವ ಮೂರು ಪದಗಳ ಪದಾಂತ್ಯ ಪರಿಸರದಲ್ಲಿ 'ಅ' ಕಾರ ಬಳಕೆಯಲ್ಲಿದೆ. ಆದರೆ ಆದೋನಿ ತೆಲುಗಿನಲ್ಲಿ 'ಅಂತೊಟ್ಟು' 'ಇಂತೊಟ್ಟು' 'ಎಂತೊಟ್ಟು' ಎಂದು ಬಳಕೆಯಲ್ಲಿದೆ. ಇಲ್ಲಿ ಕನ್ನಡ ಪದದ ಪದಾಂತ್ಯ ಪರಿಸರದ 'ಉ' ಕಾರ ಪ್ರಭಾವ ಆಗಿರುವುದನ್ನು ನೋಡಬಹುದು.

'ಟ' ಕಾರ ಬಳಕೆಯಾಗದೇ ಇರುವ ರೂಪಗಳು :

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ನಿಟಲೋ	ನಿಲ್ಲೋ	ನಿರಲ್ಲಿ	ನೀರಲ್ಲಿ
ಪಗಟನಿದ್ರ	ಪಗಲುನಿದ್ರ	ಅಗಲುನಿದ್ರೆ	ಹಗಲು ನಿದ್ದೆ
ಮೊದಟಿಲ್ಲು	ಮೊದಲಿಲ್ಲು	ಮೊದಲ್‌ಮನೆ	ಮೊದಲ ಮನೆ
ಮೊದಟ್ಲೋ	ಮೊದಲ್ಲೋನ	ಮೊದಲಲ್ಲಿ	ಮೊದಲಲಿ

ಬರಹದ ತೆಲುಗಿನಲ್ಲಿ ನಿಟಿಲೋ, ಪಗಟಿ ನಿದ್ರ, ಮೊದಟಿಲ್ಲು, ಮೊದಟ್ಲೋ ಎನ್ನುವ ಪದಗಳಲ್ಲಿ 'ಟ' ಕಾರ ಬಳಕೆಯಾಗಿದ್ದು, ಆದೋನಿ ತೆಲುಗಿನಲ್ಲಿ 'ಟ' ಕಾರ ಲೋಪಗೊಂಡು ಕನ್ನಡಕ್ಕೆ ಸಮೀಪವಾಗಿ ಬಳಕೆಯಲ್ಲಿರುವುದು ವಿಶೇಷ.

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ಗೋಟಿಲೋ	ಉಗುರುತೋ	ಉಗರಲ್ಲಿ	ಉಗುರಲ್ಲಿ

ಬರಹದ ತೆಲುಗಿನಲ್ಲಿರುವ 'ಟ' ಕಾರ ಲೋಪಗೊಂಡಿರುವುದಲ್ಲದೆ, 'ಉಗುರು' ಎನ್ನುವ ಕನ್ನಡ ಪದವನ್ನು ನೇರವಾಗಿ ಸ್ವೀಕರಿಸಿ ಬಳಕೆ ಮಾಡುತ್ತಿರುವುದನ್ನು ನೋಡಿದರೆ ಆದೋನಿ ತೆಲುಗಿನ ಮೇಲೆ ಕನ್ನಡ ಪ್ರಭಾವದ ಮಹತ್ವ ತಿಳಿಯುತ್ತದೆ.

೫. ಪ್ರಕಾರಾರ್ಥಕ ವಿಶೇಷಣಗಳು :

<u>ಬ.ತೆ.</u>	<u>ಆ.ತೆ.</u>	<u>ಆ.ಕ.</u>	<u>ಬ.ಕ.</u>
ಅಲಾಂಟಿವಾಡು	ಅಟ್ಲಾವಾಡು	ಅಂತೋರು	ಅಂತವರು
ಇಲಾಂಟಿವಾಡು	ಇಟ್ಲಾವಾಡು	ಇಂತೋರು	ಇಂತವರು

ಎಲಾಂಟಿವಾಡು	ಎಟ್ಲಾವಾಡು	ಎಂತೋರು	ಎಂತವರು
ಅಲಾಂಟಿದಿ	ಅಟ್ಲಾದಿ	ಅಂತಾದು	ಅಂತಹದು
ಇಲಾಂಟಿದಿ	ಇಟ್ಲಾದಿ	ಇಂತಾದು	ಇಂತಹದು
ಎಲಾಂಟಿದಿ	ಎಟ್ಲಾದಿ	ಎಂತಾದು	ಎಂತಹದು

ಆದೋನಿ ತೆಲುಗು ಭಿನ್ನವಾಗಿದೆ. 'ಟ' ಕಾರ ಲೋಪ ಮಾಡುವ ಸಂದರ್ಭಗಳೂ ಉಂಟು. 'ಟ' ಕಾರ ಬಳಕೆಯಾಗದ ಸಂದರ್ಭಗಳ ಬಗ್ಗೆ ಮೇಲಿನ ನಿಯಮದಲ್ಲಿ ಹೇಳಲಾಗಿದೆ. ಈ ನಿಯಮ ಅವುಗಳಿಗೆ ಅಪವಾದವಾಗಿದೆ.

'ತ' ಕಾರ ಲೋಪ ಮಾಡುವ ಸಂದರ್ಭಗಳು :

ಬ.ತೆ.	ಆ.ತೆ.	ಆ.ಕ.	ಬ.ಕ.
ಚೇತಿಕಿ	ಚೆಯ್ಯಿಕಿ	ಕೈಯಿಗೆ	ಕೈಯಿಗೆ
ಚೇತಿಲೋ	ಚೆಯ್ಯಿಲೋ	ಕೈಯಲ್ಲಿ	ಕೈಯಲ್ಲಿ

ಬರಹದ ತೆಲುಗಿನಲ್ಲಿ ಬಳಕೆಯಾಗಿರುವ ಪದಮಧ್ಯ ಪರಿಸರದ 'ತ' ಕಾರ ಆದೋನಿ ತೆಲುಗಿನಲ್ಲಿ ಲೋಪಗೊಂಡಿದೆ ಮತ್ತು ಕನ್ನಡದಲ್ಲಿ ಬಳಕೆಯಾಗಿರುವ ಪದ ಮಧ್ಯ ಪರಿಸರದ 'ಯ' ಕಾರ ಆದೋನಿ ತೆಲುಗಿನಲ್ಲಿ ಆಗಮವಾಗಿದೆ. ಇದು ಕನ್ನಡದ ಪ್ರಭಾವವನ್ನು ತಿಳಿಸುತ್ತದೆ.

ಈ ರೀತಿಯಾಗಿ ಬರಹದ ತೆಲುಗಿನ ಪ್ರಭಾವ ಆದೋನಿ ತೆಲುಗಿನ ಮೇಲೆ ಆಗಿರುವ ಹಾಗೆ ಬರಹದ ಕನ್ನಡದ ಪ್ರಭಾವ ಆದೋನಿ ತೆಲುಗಿನ ಮೇಲೆ ಆಗಿರುವುದು ಇಲ್ಲಿ ಬಳಕೆಯಾಗಿರುವ ಪದಗಳ ಉಲ್ಲೇಖಗಳಿಂದ ತಿಳಿದುಬರುತ್ತದೆ. ಅಂದರೆ ಆದೋನಿ ಪರಿಸರದಲ್ಲಿರುವ ಕನ್ನಡ ಮತ್ತು ತೆಲುಗು ಮನೆಮಾತುಳ್ಳ ಜನರು ಎರಡೂ ಭಾಷೆಗಳನ್ನು ಕಲಿತು ವ್ಯವಹರಿಸಬೇಕಾಗಿದೆ. ಅದು ಅನಿವಾರ್ಯವೂ ಕೂಡ. ಇದರಿಂದ 'ಆದೋನಿ ಪರಿಸರದ ಕನ್ನಡ' ಭಾಷಾಶಾಸ್ತ್ರಜ್ಞರನ್ನು ಸೆಳೆದ ಭಾಷೆಯ ಕ್ಷೇತ್ರವಾಗಿದೆ.

ಮುಖ್ಯವಾಗಿ ಆದೋನಿ ತೆಲುಗರ ಮಾತಿನಲ್ಲಿ ಕನ್ನಡದ ಉಚ್ಚಾರಣೆ ವಿಶಿಷ್ಟವಾಗಿದೆ. ಅದೇ ರೀತಿ ಆದೋನಿ ಕನ್ನಡಿಗರ ಮಾತಿನಲ್ಲಿ ತೆಲುಗಿನ ಉಚ್ಚಾರಣೆ ವಿಶಿಷ್ಟವಾಗಿದೆ. ಈ ಎರಡು ಭಾಷೆಯ ಚಹರೆಯನ್ನು ಗಮನಿಸಿದರೆ ಇದೊಂದು 'ದ್ವಿಭಾಷಿಕ ಪ್ರದೇಶ'ವೆಂದು ಹೇಳಬಹುದು.

□□

ಅಧ್ಯಾಯ ೮

ದ್ವಿಭಾಷಿಕತೆ : ಶೈಕ್ಷಣಿಕ ನೆಲೆ

ಅಧ್ಯಾಯ ೮

ದ್ವಿಭಾಷಿಕತೆ : ಶೈಕ್ಷಣಿಕ ನೆಲೆ

"ಒಂದು ಭಾಷೆಯನ್ನು ಆಡುವ ಜನರು ಒಂದಕ್ಕಿಂತ ಹೆಚ್ಚು ಸಮುದಾಯಗಳಲ್ಲಿ ಅಥವಾ ಒಂದೇ ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುತ್ತಿರುವುದೂ ಕಂಡು ಬರುತ್ತದೆ. ರಾಜಕೀಯ ಕಾರಣಗಳಿಂದ ನಡೆಯುವ ಆಡಳಿತ ವಲಯದ ವಿಸ್ತರಣೆಗಳು, ಸಮುದಾಯಗಳ ಜನರು ಬೇರೆ ಬೇರೆ ಭೂ ಪ್ರದೇಶಗಳಿಗೆ ಹೋಗಿ ನೆಲೆಸುವುದು, ವಲಸೆಗಳು ಇತ್ಯಾದಿಗಳಿಂದಾಗಿ ಭಾಷಾ ಸಮುದಾಯಗಳು ಬೆರೆಯುವುದು ಅನಿವಾರ್ಯವಾಗುತ್ತದೆ. ಇಂಥ ಪರಿಸ್ಥಿತಿ ಬಹು ಹಿಂದಿನಿಂದಲೂ ಉಂಟಾಗಿರುವುದಕ್ಕೆ ಪುರಾವೆಗಳಿವೆ. ಅದೇನೇ ಇರಲಿ ಒಂದು ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುವ ಸಂದರ್ಭವಿದ್ದಾಗ ಅದನ್ನೊಂದು ಬಹುಭಾಷಿಕ ಸನ್ನಿವೇಶ ಎನ್ನುತ್ತೇವೆ. ಭಾಷೆಗಳ ಸಂಖ್ಯೆ ಎರಡಾದರೆ ಅದೊಂದು ದ್ವಿಭಾಷಿಕ ಸನ್ನಿವೇಶ. ಇಂಥ ಸನ್ನಿವೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತು ಬಳಸಬೇಕಾದ ಅವಕಾಶ ಒತ್ತಾಯಗಳು ಉಂಟಾಗುತ್ತವೆ. ಜನರು ಹೀಗೆ ಎರಡು ಭಾಷೆಗಳನ್ನು ಕಲಿತು ಬಳಸತೊಡಗಿದಾಗ ಆ ಪರಿಸರದಲ್ಲಿ ದ್ವಿಭಾಷಿಕತೆ ಇದೆ ಎನ್ನುತ್ತೇವೆ. ಇದು ಸಮುದಾಯಿಕ ದ್ವಿಭಾಷಿಕತೆ. ಬಳ್ಳಾರಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಗಡಿಭಾಗದ ತಾಲೂಕುಗಳಲ್ಲಿ ಕನ್ನಡ-ತೆಲುಗು ಎರಡೂ ಭಾಷೆಗಳನ್ನು ಕಲಿತು ಬಳಸುವ ಜನರು ಹರಡಿ ಕೊಂಡಿರುತ್ತಾರೆ. ಹಾಗಾಗಿ ಅಂತಹ ಪ್ರದೇಶಗಳು ದ್ವಿಭಾಷಿಕ ಪ್ರದೇಶಗಳು."[೧] ಆಂಧ್ರಕ್ಕೆ ಹೊಂದಿಕೊಂಡಿರುವಂತ ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ ಕನ್ನಡ-ತೆಲುಗು ಭಾಷೆಯಲ್ಲಿ ಅನೇಕ ದ್ವಿಭಾಷಿಕರು ಕಂಡುಬರುತ್ತಾರೆ. ಅದೇ ರೀತಿ ಕರ್ನಾಟಕಕ್ಕೆ ಹೊಂದಿ ಕೊಂಡಿರುವ ಭಾಷಾ ಪುನರ್ ವಿಂಗಡನೆ ಮಾಡುವುದಕ್ಕಿಂತ ಮುಂಚೆ ಬಳ್ಳಾರಿ ಜಿಲ್ಲೆಯ ಭಾಗವಾಗಿರುವ ಆದೋನಿ, ಆಲೂರು, ರಾಯದುರ್ಗ, ಮಡಕರಶಿರ ತಾಲೂಕುಗಳು

ದ್ವಿಭಾಷಿಕ ಪ್ರದೇಶಗಳಾಗಿವೆ. ಇಂತಹ ದ್ವಿಭಾಷಿಕ ಪ್ರದೇಶಗಳಲ್ಲಿ ಒಂದಾದ ಆದೋನಿ ಪರಿಸರದಲ್ಲಿ ಕಲಿಕೆಯ ಹಾಗೂ ಕಲಿಯುವ ಸಂದರ್ಭದಲ್ಲಿ ಪ್ರಾಥಮಿಕ ಹಂತದ ಮಕ್ಕಳು ಕನ್ನಡ ಬರವಣಿಗೆ ಹಾಗೂ ಉಚ್ಚಾರಣೆ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ಕುರಿತು ಹಾಲಮ್ಮ-ಗಂಗಮ್ಮ ಪ್ರಾಥಮಿಕ ಶಾಲೆಯಿಂದ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿ ಎರಡು ಹಂತಗಳಲ್ಲಿ ವಿಶ್ಲೇಷಿಸಲಾಗಿದೆ.

೧. ಓದುವ ಕ್ರಮ

೨. ಬರೆಯುವ ಕ್ರಮ

ತೆಲುಗು ಮಾತೃಭಾಷೆ ಮಕ್ಕಳನ್ನು ಅನುಲಕ್ಷಿಸಿ

೧. ಆದೋನಿ ಪರಿಸರದ ತೆಲುಗು ಮನೆ ಮಾತುಳ್ಳ ಮಕ್ಕಳು ಓದುವಾಗ ಮೂರು ನೆಲೆಗಳಲ್ಲಿ ವ್ಯತ್ಯಾಸಗಳನ್ನು ಮಾಡುತ್ತಾರೆ. ಅವು ಮುಖ್ಯವಾಗಿ ಇಂತಿವೆ. ಸ್ವರಗಳು, ವ್ಯಂಜನಗಳು ಮತ್ತು ಅರ್ಧಸ್ವರಗಳು. ಈ ಮೂರು ನೆಲೆಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ ರಚನೆಯಲ್ಲಿ ನಿದರ್ಶನ ಸಹಿತ ಚರ್ಚಿಸಲಾಗಿದೆ.

ಅ. ಎರಡಕ್ಷರ ರಚನೆಯನ್ನು ಓದುವ ಕ್ರಮದಲ್ಲಿ ಮಾಡುವ ವ್ಯತ್ಯಾಸಗಳು

ಬರಹದ ಕನ್ನಡ	ತೆಲುಗು ಮಾತೃಭಾಷಿಕ ಕನ್ನಡ
ಅಣ್ಣ	ಅನ್ನ
ಆಣೆ	ಆನೆ
ಎಲೆ	ಯಲೆ
ಏಕೆ	ಯಾಕೆ
ಕಣ್ಣು	ಕನ್ನು
ಮಣ್ಣು	ಮನ್ನು
ರಾತ್ರಿ	ರಾತಿರಿ
ವಿಷ	ವಿಸ
ಹಾಲು	ಆಲು

ಮೇಲಿನ ಎರಡಕ್ಷರ ರಚನೆಯಲ್ಲಿ ಕನ್ನಡ ಪದಗಳಾದ ಅಣ್ಣ, ಆಣೆ, ಕಣ್ಣು, ಮಣ್ಣು ಎನ್ನುವ ಪದಗಳನ್ನು ಅನ್ನ, ಆನೆ, ಕನ್ನು, ಮನ್ನು ಎಂದು ಓದುವುದರೊಂದಿಗೆ 'ಣ' ಕಾರವನ್ನು ಲೋಪಗೊಳಿಸುತ್ತಿದ್ದಾರೆ. 'ಎ' ಕಾರಕ್ಕೆ ಬದಲಾಗಿ 'ಯ' ಕಾರ ಬಳಸುವುದು ಮತ್ತು 'ಷ' ಕಾರಕ್ಕೆ ಬದಲಾಗಿ 'ಸ' ಕಾರ 'ಹ' ಕಾರಕ್ಕೆ ಬದಲಾಗಿ 'ಅ' ಆದೋನಿ ಭಾಗದ ತೆಲುಗು ಮಾತೃಭಾಷಿಕರ ವಿದ್ಯಾರ್ಥಿಗಳಲ್ಲಿ ಕಂಡುಬಂದಿದೆ.

ಆ. ಮೂರಕ್ಷರ ರಚನೆಯನ್ನು ಓದುವ ಕ್ರಮದಲ್ಲಿ ಮಾಡುವ ವ್ಯತ್ಯಾಸಗಳು

<u>ಬರಹದ ಕನ್ನಡ</u>	<u>ತೆ.ಮಾ.ಕ.</u>
ಅಂಗಡಿ	ಅಂಗ್ಡಿ
ಅಳಿಯ	ಅಲಿಯ
ಉಗುರು	ಉಗ್ರು
ಏತಕ್ಕೆ	ಯದಕ
ಚಪ್ಪಾಳೆ	ಚಪ್ಪಾಲೆ
ಪಾತಾಳ	ಪಾತಾಲ
ಸಕ್ಕರೆ	ಸಕ್ಕರೆ
ಹಿಂಗಾರು	ಇಂಗಾರು
ಹೆಂಡತಿ	ಯಂಡ್ತಿ, ಯಣ್ತಿ

ಮೇಲಿನ ನಿದರ್ಶನದಲ್ಲಿ 'ಅಂಗಡಿ' ಪದದ ಪದಮಧ್ಯ ಪರಿಸರ 'ಅ' ಕಾರ ಲೋಪವಾಗಿದೆ. ಅಳಿಯ, ಪಾತಾಳ, ಪದದ 'ಳ' ಕಾರವು ಲೋಪಗೊಂಡು 'ಲ' ಕಾರವು ಬಳಕೆಯಲ್ಲಿದೆ. ಉಗುರು ಎನ್ನುವ ಪದದ ಪದಮದ್ಯ ಪರಿಸರದ 'ಉ' ಕಾರವು ಲೋಪಗೊಂಡಿದೆ. ಏತಕ್ಕೆ ಎನ್ನುವ ಪದದ ಪದಾದಿಯ 'ಎ' ಕಾರವು 'ಯ' ಕಾರವಾಗಿ ಮಾರ್ಪಟ್ಟಿದೆ. ಅದೇ ರೀತಿ ಹಿಂಗಾರು, ಹೆಂಡತಿ ಎನ್ನುವ ಪದಗಳಲ್ಲಿ ಪದಾದಿಯ 'ಹ' ಕಾರ ಲೋಪಗೊಂಡು 'ಇ' ಕಾರ ಮತ್ತು 'ಯ' ಕಾರಗಳು ಬಳಕೆಯಲ್ಲಿರುವುದು ಕಂಡುಬರುತ್ತದೆ.

ಇ. ನಾಲ್ಕಕ್ಷರ ರಚನೆಯನ್ನು ಓದುವ ಕ್ರಮದಲ್ಲಿ ಮಾಡುವ ವ್ಯತ್ಯಾಸಗಳು

<u>ಬರಹದ ಕನ್ನಡ</u>	<u>ತೆ.ಮಾ.ಕ</u>
ಕಡ್ಲೆಕಾಯಿ	ಕಡ್ಲೆಕಾಯಿ
ಚಳಿಗಾಲ	ಚಲಿಗಾಲ
ಪುಣ್ಯವಂತ	ಪುನ್ಯವಂತ
ಶುಕ್ರವಾರ	ಸುಕ್ರವಾರ

ಮೇಲಿನ ನಿದರ್ಶನದಲ್ಲಿ ಕಡ್ಲೆಕಾಯಿ, ಚಳಿಗಾಲ ಎನ್ನುವ ಪದಗಳಲ್ಲಿ 'ಳ' ಕಾರ ಲೋಪಗೊಂಡು 'ಲ' ಕಾರ ಆದೇಶವಾಗಿ ಬಂದಿದೆ. ಪುಣ್ಯವಂತ ಎನ್ನುವ ಪದದಲ್ಲಿ 'ಣ' ಕಾರ ಲೋಪಗೊಂಡು 'ನ' ಕಾರ ಆದೇಶವಾಗಿದೆ. ಕೊನೆಯಲ್ಲಿ ಶುಕ್ರವಾರ ಎನ್ನುವ ಪದದಲ್ಲಿ 'ಶ' ಕಾರ ಲೋಪಗೊಂಡು 'ಸ' ಕಾರ ಆದೇಶವಾಗಿದೆ.

ಈ. ಅರ್ಧ ಸ್ವರಗಳನ್ನು ಓದುವ ಕ್ರಮದಲ್ಲಿ ಮಾಡುವ ವ್ಯತ್ಯಾಸಗಳು

<u>ಬರಹದ ಕನ್ನಡ</u>	<u>ತೆ.ಮಾ.ಕ.</u>
ಬೇಸಿಗೆ	ಬ್ಯಾಸಿಗೆ / ಬೇಸಿಗೆ
ಮೇಲೆ	ಮ್ಯಾಲೆ / ಮೇಲೆ
ಪೇಟೆ	ಪ್ಯಾಟೆ / ಪೇಟೆ
ಬೇಡ	ಬ್ಯಾಡ / ಬೇಡ

ಮೇಲಿನ ನಿದರ್ಶನದಲ್ಲಿ ಬೇಸಿಗೆ, ಮೇಲೆ, ಪೇಟೆ, ಬೇಡ ಎನ್ನುವ ಪದಗಳು ಕ್ರಮವಾಗಿ ಬ್ಯಾಸಿಗೆ, ಮ್ಯಾಲೆ, ಪ್ಯಾಟೆ, ಬ್ಯಾಡ ಎಂದು ಉಚ್ಚಾರಣೆಗೊಳ್ಳುತ್ತಿವೆ. 'ಏ' ಕಾರ 'ಯ' ಕಾರವಾಗಿ ಮಾರ್ಪಟ್ಟಿರುವುದು ಇಲ್ಲಿ ಸ್ಪಷ್ಟವಾಗಿದೆ.

೨. ಆದೋನಿ ಕನ್ನಡದ ಪ್ರಾಥಮಿಕ ಶಾಲೆಯಲ್ಲಿ ತೆಲುಗು ಮಾತೃಭಾಷೆಯ ಮಕ್ಕಳು ಕನ್ನಡವ ಕಲಿಯುವ ಸಂದರ್ಭದಲ್ಲಿ ಬರವಣಿಗೆಯಲ್ಲಿ ಕೆಳಗಿನ ದೋಷಗಳನ್ನು ಮಾಡುತ್ತಾರೆ. ಸ್ವರಗಳ, ವ್ಯಂಜನಗಳಲ್ಲಿ ಮಾಡುವ ತಪ್ಪುಗಳನ್ನು ಕ್ರಮವಾಗಿ ಎರಡಕ್ಷರ, ಮೂರಕ್ಷರ, ನಾಲ್ಕಕ್ಷರಗಳಲ್ಲಿ ನಿದರ್ಶನ ಸಹಿತ ಚರ್ಚಿಸಲಾಗಿದೆ.

ಅ. ಎರಡಕ್ಷರ ರಚನೆಯಲ್ಲಿ ಮಾಡುವ ದೋಷಗಳು

ಬರಹದ ಕನ್ನಡ	ತೆ.ಮಾ.ಕ
ಅಣ್ಣ	ಅನ್ನ
ಆಣೆ	ಆನೆ
ಕಣ್ಣು	ಕನ್ನು
ತಾಳ	ತಾಲ
ಮಣ್ಣು	ಮನ್ನು
ಮಳೆ	ಮಲೆ
ವಿಷ	ವಿಸ

ಮೇಲಿನ ಉದಾಹರಣೆಗಳಲ್ಲಿ ಅಣ್ಣ-ಅನ್ನ, ಆಣೆ-ಆನೆ, ಕಣ್ಣು-ಕನ್ನು ಈ ರೀತಿಯಾಗಿ ಕನ್ನಡದ 'ಣ' ಕಾರದ ಸ್ಥಾನದಲ್ಲಿ 'ನ' ಕಾರ ಬಳಕೆಗೊಂಡಿರುವುದು ವೈಶಿಷ್ಟ್ಯ. ಅದೇ ರೀತಿ ತಾಳ-ತಾಲ ಪದದಲ್ಲಿ 'ಳ' ಕಾರಕ್ಕೆ ಬದಲು 'ಲ' ಕಾರವು ಬಳಕೆಯಲ್ಲಿದೆ. ಈ ಮೇಲಿನ ದೋಷಗಳು ಓದುವ ಮತ್ತು ಬರೆಯುವ ಕ್ರಮದಲ್ಲಿ ಕಂಡುಬಂದಿವೆ.

ಆ. ಮೂರಕ್ಷರ ರಚನೆ ಸಂದರ್ಭದಲ್ಲಿ ಮಾಡುವ ದೋಷಗಳು

ಬರಹದ ಕನ್ನಡ	ತೆ.ಮಾ.ಕ
ಅಳಿಯ	ಅಲಿಯ
ಚಪ್ಪಾಳೆ	ಚಪ್ಪಲೆ
ಪಾತಾಳ	ಪಾತಾಲ
ಸಕ್ಕರೆ	ಸಕರೆ
ಹತ್ತಿರ	ಅತಿರ

ಇ. ನಾಲ್ಕಕ್ಷರ ರಚನೆಯ ಸಂದರ್ಭದಲ್ಲಿ ಮಾಡುವ ದೋಷಗಳು

<u>ಬರಹದ ಕನ್ನಡ</u>	<u>ತೆ.ಮಾ.ಕ</u>
ಎತ್ತುಗಳು	ಎತ್ತುಗಲು
ಶುಕ್ರವಾರ	ಶಕವಾರ
ಪುಣ್ಯವಂತ	ಪುನ್ಯವಂತ

ಈ. ಓದುವ ಮತ್ತು ಬರೆಯುವ ಎರಡೂ ಕ್ರಮದಲ್ಲಿ ಕಂಡು ಬರುವ ವ್ಯತ್ಯಾಸಗಳು

<u>ಬರಹದ ಕನ್ನಡ</u>	<u>ತೆ.ಮಾ.ಕ.</u>
ಅಣ್ಣ	ಅನ್ನ
ಕಣ್ಣು	ಕನ್ನು
ಮಣ್ಣು	ಮನ್ನು
ಅಳಿಯ	ಅಲಿಯ
ಎತ್ತುಗಳು	ಎತ್ತುಗಲು
ಚಪ್ಪಾಳೆ	ಚಪ್ಪಾಲೆ

ಮೇಲಿನ ಎಲ್ಲಾ ನಿದರ್ಶನಗಳನ್ನು ಗಮನಿಸಿದಾಗ ಆದೋನಿ ಪರಿಸರದ ಪ್ರಾಥಮಿಕ ಶಿಕ್ಷಣದ ಮಕ್ಕಳು ಓದುವ ಮತ್ತು ಬರೆಯುವ ಸಂದರ್ಭದಲ್ಲಿ ಮಾಡತಕ್ಕಂತಹ ದೋಷಗಳು, ಒಂದನೇಯದಾಗಿ ದ್ವಿತ್ವಾಕ್ಷರಗಳ ಲೋಪ ಮಾಡುವುದು. ಎರಡನೇಯದಾಗಿ ಷ, ಶ ಕಾರಗಳ ಬದಲಾಗಿ 'ಸ' ಕಾರವನ್ನು ಬಳಕೆ ಮಾಡುವುದು. ಮೂರನೇಯದಾಗಿ 'ಣ' ಕಾರಕ್ಕೆ ಬದಲಾಗಿ 'ನ' ಕಾರ ಬಳಕೆ ಮಾಡುವಂತಹದು ಈ ಭಾಗದ ಮುಖ್ಯವಾದ ದೋಷಗಳಾಗಿವೆ.

ಕನ್ನಡ ಮಾತೃಭಾಷೆ ಮಕ್ಕಳನ್ನು ಅನುಲಕ್ಷಿಸಿ

ಶ್ರೀ ಎಲೆಮಲ್ಲೇಶಪ್ಪ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕನ್ನಡ ಮಾಧ್ಯಮದ ಮಕ್ಕಳಲ್ಲಿ ಕನ್ನಡ ಬಳಕೆಯಾಗುತ್ತಿದ್ದರೂ ವಾಕ್ಯಗಳ ಹಂತದಲ್ಲಿ ಮತ್ತು ಗಾದೆ ಒಗಟುಗಳಲ್ಲಿ ಕೆಲವು ವಿಶಿಷ್ಟ ಪದಗಳು ಬಳಕೆಯಾಗುತ್ತಿವೆ. ಜೊತೆಗೆ ಕೆಲವು ತೆಲುಗು ಪದಗಳು ಬಳಕೆಯಲ್ಲಿವೆ.

೧. "ಎಣ್ತಿ ಬೆಯ್ಯುತ್ತಿರುತ್ತಾಳೆ. ಅದಕೆ ವೋಗಿ ಗಡಿಗ್ಯಾಗ ಇಕ್ಕಿರತಾನ"[೨] (ಆ.ಕ.)

ಹೆಂಡತಿ ಬಯ್ಯುತ್ತಿರುತ್ತಾಳೆ. ಅದಕ್ಕೆ ಹೋಗಿ ಗಡಿಗೆಯಲ್ಲಿ ಇಟ್ಟಿರುತ್ತಾನೆ. (ಬ.ಕ.)

ಹೆಂಡತಿ ಎನ್ನುವ ಪದಕ್ಕೆ ಪರ್ಯಾಯವಾಗಿ ಎಣ್ತಿ ಎನ್ನುವ ಪದ ಬಳಕೆಯಲ್ಲಿದೆ. ಅವರ್ಗೀಯ ವ್ಯಂಜನ 'ಹ' ಕಾರ ಲೋಪಗೊಂಡು ಸ್ವರ 'ಎ' ಕಾರ ಬಳಕೆಯಲ್ಲಿದೆ. ಬೆಯ್ಯುತ್ತಿರುತ್ತಾಳೆ ಎನ್ನುವ ಪದದಲ್ಲಿ ಪದಾಂತ್ಯದ 'ಅ' ಕಾರ ಲೋಪಗೊಂಡು 'ಎ' ಕಾರ ಆಗಮವಾಗಿದೆ. ಗಡಿಗೆಯಲ್ಲಿ ಎನ್ನುವ ಪದದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ 'ಆ್ಯಗ' ಎನ್ನುವ ಪ್ರತ್ಯಯ ಬಳಕೆಯಲ್ಲಿದೆ. ಅದೇ ರೀತಿ ಇಟ್ಟಿರುತ್ತಾನೆ ಎನ್ನುವ ಪದದ ಸ್ಥಾನದಲ್ಲಿ ಇಕ್ಕಿರತಾನ ಎಂದು ಬಳಕೆಗೊಂಡು 'ಟ' ಕಾರದ ಸ್ಥಾನದಲ್ಲಿ 'ಕ' ಕಾರ ಆಗಮವಾಗಿದೆ. ಮತ್ತು ಪದಾಂತ್ಯ ಪರಿಸರದಲ್ಲಿ 'ಎ' ಕಾರ 'ಅ' ಕಾರವಾಗಿ ಮಾರ್ಪಟ್ಟಿದೆ.

೨. ವಟ್ಟೆ ಅಸಕಂಡು ವೋಗಿರತಾಳ[೩] (ಆ.ಕ.)

ಹೊಟ್ಟೆ ಹಸಿದುಕೊಂಡು ಹೋಗಿರುತ್ತಾಳೆ. (ಬ.ಕ.)

ಹೊಟ್ಟೆ ಮತ್ತು ಹೋಗಿರುತ್ತಾಳೆ ಎನ್ನುವ ಪದಗಳ ಆದಿಯಲ್ಲಿ ಅವರ್ಗೀಯ ವ್ಯಂಜನದ ಬದಲು 'ಅ' ಸ್ವರ ಬಳಕೆಯಲ್ಲಿದೆ ಮತ್ತು ಹಸಿದುಕೊಂಡು ಎನ್ನುವ ಪದಮಧ್ಯ ಪರಿಸರದ 'ದ' ಕಾಗ ಲೋಪವಾಗಿದೆ.

೩. ಆ ವುಡ್ಗ ಆಕಿತಾಗ ವೋಗ್‌ತಾನ[೪] (ಆ.ಕ.)

ಆ ಹುಡುಗ ಆಕೆಯ ಹತ್ತಿರ ಹೋಗುತ್ತಾನೆ. (ಬ.ಕ.)

ಆಕೆಯ ಹತ್ತಿರ ಪದಕ್ಕೆ ಪರ್ಯಾಯವಾಗಿ ಆಕಿತಾಗ ತಾಗ ಎನ್ನುವ ವಿಶಿಷ್ಟ ಪ್ರತ್ಯಯ ಬಳಕೆಯಲ್ಲಿರುವುದು ಇಲ್ಲಿಯ ವಿಶೇಷ.

೪. ನೀನು ಸುಕ ಮಾಡಿಕ್ಯಂಡು ಇರು[೫] (ಆ.ಕ.)

'ನೀನು ಸುಖವಾಗಿರು' (ಬ.ಕ.)

'ಸುಖವಾಗಿರು' ಎನ್ನುವ ಪದ ಆದೋನಿ ವಿದ್ಯಾರ್ಥಿಗಳಲ್ಲಿ ಸುಖಮಾಡಿಕೊಂಡು ಇರು ಎಂದು ಬಳಕೆ ಮಾಡುವುದನ್ನು ನೋಡಿದರೆ ಇವರಲ್ಲಿರುವ ವ್ಯಾಕರಣ ದೋಷ ನಮಗೆ ತಿಳಿಯುತ್ತದೆ.

೫. ನನಗೆ ಜೀವ ಬೇಸಿಲ್ಲ[೬] (ಆ.ಕ.)

'ನನಗೆ ಆರೋಗ್ಯ ಚೆನ್ನಾಗಿಲ್ಲ' (ಬ.ಕ.)

ಆರೋಗ್ಯ ಎನ್ನುವ ಪದಕ್ಕೆ 'ಜೀವ' ಎನ್ನುವ ಪದ ಬಳಕೆ ಮಾಡುತ್ತಿರುವುದು ಗಮನಿಸುವಂತಹ ಅಂಶ.

೬. ನೀರ್ ತಗಂಡು ಬಾ' (ಆ.ಕ.)

ನೀರು ತೆಗೆದುಕೊಂಡು ಬಾ (ಬ.ಕ.)

'ತೆಗೆದುಕೊಂಡು' ಎನ್ನುವ ಪದದ ಬದಲಿಗೆ 'ತಗಂಡು' ಎನ್ನುವ ಪದ ಬಳಕೆಯಲ್ಲಿದೆ. ಪದಮಧ್ಯ ಪರಿಸರದಲ್ಲಿ 'ದ' ಮತ್ತು 'ಕ' ಕಾರಗಳು ಲೋಪಗೊಂಡಿವೆ.

೭. ಒಂದ್ಸತೆ ಕೆಲ್ಸಕ ವೋಗ ವತ್ತಿನ್ಯಾಗ ಕುಂಬಳಕಾಯಿ ಸಿಗತ್ತೈತಿ' (ಆ.ಕ.)

ಒಂದು ಸಲ ಕೆಲಸಕ್ಕೆ ಹೋಗ ಹೊತ್ತಿನಲ್ಲಿ ಕುಂಬಳಕಾಯಿ ಸಿಗುತ್ತದೆ. (ಬ.ಕ.)

ಮೇಲಿನ ವಾಕ್ಯದಲ್ಲಿ 'ಒಂದು ಸಲ' ಎನ್ನುವ ಪದಕ್ಕೆ 'ಒಂದ್ಸತಿ' ಎನ್ನುವ ಪದ ಬಳಕೆಯಾಗುತ್ತಿದೆ. 'ಸಲ' ಲೋಪವಾಗಿ 'ಸತಿ' ಎನ್ನುವ ಪ್ರತ್ಯಯ ಆಗಮವಾಗಿದೆ. 'ಸಿಗುತ್ತದೆ' ಎನ್ನುವ ಪದಕ್ಕೆ ಪರ್ಯಾಯವಾಗಿ ಸಿಗತ್ತೈತಿ ಎಂದು ಬಳಕೆಗೊಂಡು ಪದಮಧ್ಯ ಪರಿಸರದಲ್ಲಿ 'ಐ' ಕಾರ ಆಗಮವಾಗಿದೆ.

ಪ್ರೌಢಶಾಲೆಗಳ ವಿದ್ಯಾರ್ಥಿಗಳ ಗಾದೆಗಳ ಉಚ್ಚಾರಣೆಯಲ್ಲಿ ಕನ್ನಡ ವಿಶಿಷ್ಟ ಪದಗಳು ಬಳಕೆಯಾಗುತ್ತಿವೆ. ಅಂತಹ ಗಾದೆಗಳನ್ನು ಕೆಳಗಿನಂತೆ ಕಾಣಬಹುದು.

* ಗುಡ್ಡದ ಮ್ಯಾಲೆ ರುಬ್ಬಗುಂಡು ವಳ್ಳೈತೆ' - ತುರುಬು

ಮೇಲಿನ ವಾಕ್ಯದ ಅರ್ಥ ಗುಡ್ಡದ ಮೇಲೆ ರುಬ್ಬುವ ಗುಂಡು ಹೊರಳಿದೆ. ಇಲ್ಲಿ ಮೇಲೆ ಎನ್ನುವ ಪದಕ್ಕೆ ಬದಲಾಗಿ ಮ್ಯಾಲೆ ಎನ್ನುವ ಪದ ಮತ್ತು ಹೊರಳಿದೆ ಎನ್ನುವ ಪದಕ್ಕೆ ಬದಲಾಗ ವೆಳ್ಳೈತೆ ಪದಗಳು ಬಳಕೆಯಾಗುತ್ತಿವೆ. ಮೇಲೆ ಎನ್ನುವ ಪದಾದಿಯ 'ಎ' ಕಾರಕ್ಕೆ 'ಯ' ಕಾರ ಮತ್ತು ಹೊರಳಿದೆ ಎನ್ನುವ ಪದಾದಿಯ 'ಹ' ಕಾರಕ್ಕೆ 'ವ' ಕಾರ ಆಗಮವಾಗಿದೆ. 'ರ' ಕಾರ ಲೋಪವಾಗಿದೆ.

* ದೊಡ್ಡದು ಗಂಗಾಳ'°

ಅದರೊಳಾಗ ಮಂಡಾಳ

ಅದರಾಗ ರೂಪಾಯಿ ಬಿಲ್ಲೆ - ಆಕಾಶ, ನಕ್ಷತ್ರ, ಚಂದಮಾಮ

ಮೇಲಿನ ಗಾದೆಯಲ್ಲಿ ಗಂಗಾಳ, ಮತ್ತು ಮಂಡಾಳ ಅಂತ್ಯಪ್ರಾಸದಿಂದ ಕೂಡಿದ ಪದಗಳಾಗಿವೆ. ಊಟ ಮಾಡುವ ತಟ್ಟೆಗೆ ಗಂಗಾಳ ಎಂದು ಮಂಡಕ್ಕಿಯನ್ನು ಮಂಡಾಳ ಎಂದು ಕರೆಯುವುದು ಆದೋನಿ ಪರಿಸರದಲ್ಲಿ ಕಂಡುಬಂದಿದೆ.

* ಸುತ್ತಮುತ್ತ ಬೆಳ್ಳಾನ ಗೋಡೆ[೧೧]

ಅದರಾಗ ನೀರು

ನೀರಿನ್ಯಾಗ ಬಂಗಾರ - ಕೋಳಿಗುಡ್ಡೆ (ತತ್ತಿ)

ಬಿಳಿಯ ಗೋಡೆಯ ಬದಲಾಗಿ ಬೆಳ್ಳಾನಗೋಡೆ. ಅದರಲ್ಲಿ ಎನ್ನುವ ಅದರಾಗ ಮತ್ತು ನೀರಿನಲ್ಲಿ ಎನ್ನುವ ಬದಲು ನಿರಿನ್ಯಾಗ ಎನ್ನುವ ವಿಶಿಷ್ಟ ಪದಗಳು ಮೇಲಿನ ಗಾದೆಯಲ್ಲಿ ಕಂಡುಬರುತ್ತವೆ. ಕೋಳಿ ತತ್ತಿಯನ್ನು ಕೋಳಿಗುಡ್ಡೆ ಎಂದು ಬಳಕೆ ಮಾಡುತ್ತಾರೆ. ತೆಲುಗಿನಲ್ಲಿ ಕೋಡಿಗುಡ್ಡ ಎಂದು ಬಳಕೆಯಲ್ಲಿರುವುದರಿಂದ ಕನ್ನಡದಲ್ಲಿ ನುಡಿಬೆರಕೆ ಕ್ರಿಯೆ ನಡೆದು ಕೋಳಿಗುಡ್ಡೆ ಎಂದು ಬಳಕೆಯಾಗುತ್ತದೆ.

* ಊರೆಲ್ಲ ತಿರಗತಾವ

ಮೂಲೆಲಿ ಕುಂತಕಂತಾವ[೧೨] - ಚಪ್ಪಲಿ

ಊರೆಲ್ಲ 'ತಿರುಗಾಡುತ್ತವೆ' ಎನ್ನುವ ಪದಕ್ಕೆ 'ತಿರಗತಾವ' ಎಂದು ಕೂಡುತ್ತವೆ ಎನ್ನುವ ಪದಕ್ಕೆ ಕುಂತಕಂತವಾ ಎಂದು ಬಳಕೆಯಲ್ಲಿದೆ. ಎರಡು ಪದಗಳಲ್ಲಿ 'ಡ' ಕಾರ ಲೋಪಗೊಂಡು ಪದಾಂತ್ಯದ 'ಎ' ಕಾರ 'ಅ' ಕಾರವಾಗಿ ಮಾರ್ಪಟ್ಟಿದೆ.

* ಕತ್ತಲು ಮನ್ಯಾಗ ಕರ್‍ರೆಮ್ಮ ಕುಂತಾಳ[೧೩] - ಹಂಚು

ಕತ್ತಲು ಮನೆಯಲ್ಲಿ ಕರಿಯಮ್ಮ ಕುಂತಿದ್ದಾಳೆ ಎನ್ನುವ ಅರ್ಥದಲ್ಲಿ ಮೇಲಿನ ವಾಕ್ಯ ಬಳಕೆಯಾಗಿದೆ. ಮನೆಯಲ್ಲಿ ಎನ್ನುವ ಪದಕ್ಕೆ ಸಪ್ತಮಿ ವಿಭಕ್ತಿ ಪ್ರತ್ಯಯ ಬಳಕೆಯಲ್ಲಿದ್ದರೆ ಮಾನ್ಯಾಗ ಎನ್ನುವ ಪದಕ್ಕೆ ಷಷ್ಠಿ ವಿಭಕ್ತಿ ಪ್ರತ್ಯಯ ಬಳಕೆಗೊಂಡು ವಿಶಿಷ್ಟ್ಯವೆನಿಸಿದೆ. ಅದೇ ರೀತಿ ಕುಂತಿದ್ದಾಳೆ ಎನ್ನುವ ಪದಕ್ಕೆ ಬದಲಾಗಿ ಕುಂತಾಳ ಪದಮಧ್ಯದ 'ದ' ಕಾರ ಲೋಪವಾಗಿ ಪದಾಂತ್ಯ ಪರಿಸರ 'ಎ' ಕಾರ 'ಅ' ಕಾರವಾಗಿ ಬಳಕೆಯಲ್ಲಿದೆ.

* ಬಾಲದಿಂದ ಕುಡಿತೈತೆ

ಬಾಯಿಂದ ಬೆಳಗತ್ತೈತೆ[೧೪] - ದ್ವೀಪ

ಕುಡಿಯುತ್ತದೆ ಮತ್ತು ಬೆಳಗುತ್ತದೆ ಪದಗಳ ಮಧ್ಯ ಪರಿಸರದಲ್ಲಿ 'ಐ' ಕಾರ ಬಳಕೆಯಾಗುತ್ತಿರುವುದು ಇಲ್ಲಿನ ವೈಶಿಷ್ಟ್ಯ.

* ಸಣ್ಣ ಗುಡಿಗೆ ಬೊಗ್ಗಿ ಬೊಗ್ಗಿ ಸನ ಮಾಡತಾರ[೧೫]

ಚಿಕ್ಕ ಗುಡಿಗೆ ಬಾಗಿ ಬಾಗಿ ನಮಸ್ಕಾರ ಮಾಡುತ್ತಾರೆ ಎನ್ನುವುದು ಮೇಲಿನ ವಾಕ್ಯದ ಅರ್ಥ. 'ಬಾಗಿ' ಪದಕ್ಕೆ 'ಬೊಗ್ಗಿ' ಎನ್ನುವ ವಿಶಿಷ್ಟ ಪದ ಬಳಕೆಯಲ್ಲಿದೆ. 'ಆ' ಕಾರಕ್ಕೆ 'ಓ' ಕಾರ ಆಗಮವಾಗಿದೆ.

* ಕಾಡಲ್ಲದ ಕಾಡು ಸುಡುಗಾಡು

ನಾಲ್ಕು ಮಂದಿ ಕ್ಲೀನರ್

ಒಬ್ಬನೇ ಡ್ರೈವರ್ - ಹೆಣ

ಸುಡು+ಕಾಡು ಸುಡುಗಾಡು. ಈ ಪದದಲ್ಲಿ ಸಂಧಿ ಕ್ರಿಯೆ ನಡೆದಿದೆ. 'ಕ' ಕಾರಕ್ಕೆ 'ಗ' ಕಾರ ಆದೇಶವಾಗಿ ಬಂದು ಆದೇಶ ಸಂಧಿಯಾಗಿದೆ. ಆಂಗ್ಲ ಪದಗಳಾದ ಕ್ಲೀನರ್, ಡ್ರೈವರ್ ಪದಗಳು ಬಳಸಿರುವುದು ಗಮನಾರ್ಹ.

* ಅಮ್ಮನ ಸೀರೆ ಮಡಸಂಗಿಲ್ಲ

ಅಪ್ಪನ ರೊಕ್ಕ ಎಣಸಂಗಿಲ್ಲ - ಆಕಾಶ, ನಕ್ಷತ್ರ

ಮಡಚುವ ಆಗಿಲ್ಲ ಮತ್ತು ಎಣಿಸುವ ಆಗಿಲ್ಲ ಪದಗಳಲ್ಲಿ ಸಂಧಿಕ್ರಿಯೆ ನಡೆದಿದೆ. ಹಣ ಎನ್ನುವ ಪದ ದುಡ್ಡು. ರೊಕ್ಕ ಎನ್ನುವ ಪದಗಳ ಮುಖಾಂತರ ಬಳಕೆಯಲ್ಲಿದೆ.

* ಒಂದು ಪೆಟ್ಟ್ಯಾಗ ಎಲ್ಡು ಬೀಜ - ಬುಡ್ಡೆ (ಶೇಂಗಾ)

* ಎಲ್ಡು ಮನೆ ಒಂದು ಕಂಬ - ಮೂಗು

* ಎಲ್ಡು ಬಾಗಿಲಿಗೆ ಸಣ್ಣ ಬೀಗ - ಮೂಗುತಿ

ಎರಡು ಎನ್ನುವ ಸಂಖ್ಯಾವಾಚಕ ಎಲ್ಡು ಎಂದು ಬಳಕೆಯಲ್ಲಿದೆ. 'ರ' ಕಾರ ಲೋಪಗೊಂಡು 'ಲ' ಕಾರ ಆದೇಶವಾಗಿದೆ.

* ನೀಲಿ ಬಾಯಾಗ ಬೆಳ್ಳಿ ಬಟ್ಲು ತೆಲ್ಯೆತೆ - ಚಂದ್ರ

ನೀಲಿ ಬಾವಿಯಲ್ಲಿ ಬೆಳ್ಳಿ ಬಟ್ಟಲು ತೇಲಿದೆ ಎನ್ನುವ ಅರ್ಥದಲ್ಲಿ ಮೇಲಿನ ಗಾದೆ ಬಳಕೆಯಲ್ಲಿದೆ. 'ಬಾವಿ' ಎನ್ನುವ ಪದಕ್ಕೆ 'ಬಾಯಿ' ಎಂದು ಬಳಕೆಯಾಗುತ್ತಿದೆ. 'ವ' ಕಾರಕ್ಕೆ 'ಯ' ಕಾರ ಆದೇಶವಾಗಿ ಬಂದಿದೆ. ತೇಲಿದೆ ಎನ್ನುವ ಪದದ ಬದಲು ತೆಲ್ಯೆತೆ ಎನ್ನುವ ವಿಶಿಷ್ಟ ಪದ ಬಳಕೆಯಾಗುತ್ತಿದೆ. ಪದಾಂತ್ಯದ 'ದ' ಕಾರಕ್ಕೆ ಪ್ರತಿಯಾಗಿ 'ತ' ಕಾರ ಬಳಕೆಯಲ್ಲಿರುವುದು ವೈಶಿಷ್ಟ್ಯ.

* ಹಸಿರು ಗಿಡದ ಮ್ಯಾಲೆ ಮೊಸರು ಚೆಲ್ಲೈತೆ[೨೦] - ಮಲ್ಲಿಗೆ ಹೂವು

ಚೆಲ್ಲಿದೆ ಎನ್ನುವ ಪದಕ್ಕೆ ಬದಲಾಗಿ ಚಲ್ಲೈತೆ ಎನ್ನುವ ಪದ ಬಳಕೆಯಲ್ಲಿದೆ. ಪದಾಂತ್ಯದ 'ದ' ಕಾರಕ್ಕೆ 'ತ' ಕಾರ ಆದೇಶವಾಗಿ ಬಂದಿದೆ.

* ಬಡಬಡ ಬರ‍್ತಾನ

ಬಟ್ಟೆಲ್ಲಾ ಬಿಚ್ಚಿ

ಬಾಯಾಗ ಎಗರತಾನ[೨೧] - ಬಾಳೆಹಣ್ಣು

ಬೇಗ ಬೇಗ ಎನ್ನುವ ಪದವು ಬಡಬಡ ಎಂದು. ಬಾವಿಯಲ್ಲಿ ಎನ್ನುವ ಪದವು 'ಬಾಯಾಗ' ಎಂದು, ಜಿಗಿಯುತ್ತಾನೆ ಎನ್ನುವ ಪದವು 'ಎಗರತಾನ' ಎಂದು ಬಳಕೆಯಾಗುತ್ತಿರುವುದು ಆದೋನಿ ಕನ್ನಡದ ವೈಶಿಷ್ಟ್ಯವಾಗಿದೆ.

* ಅಡಿವ್ಯಾಗ ಹುಟ್ಟೈತೆ

ಅಡಿವ್ಯಾಗ ಬೆಳದೈತೆ

ನಮ್ಮ ಮನ್ಯಾಗ ತೈತಕಲಾಡತ್ತದೆ.[೨೨] - ಬೆಳೆ ಮಸಿಯುವುದು (ಪಪುಗಿತ್ತಿ)

* 'ಕುಣಿಯುತ್ತದೆ' ಎನ್ನುವ ಕನ್ನಡ ಪದಕ್ಕೆ ಪರ್ಯಾಯವಾಗಿ ತೆಲುಗಿನ ಪದ 'ತೈತಕಲಾಡತೈತೆ' ಎನ್ನುವ ಪದವನ್ನು ವಾಕ್ಯದಲ್ಲಿ ಬೆರೆಸಿಕೊಂಡು ನುಡಿ ಪ್ರಕ್ರಿಯೆ ಕ್ರಿಯೆ ನಡೆದಿರುವುದನ್ನು ಗಮನಿಸಬಹುದು.

* ಗೂಡಲ್ಲಿ ಕುಂತು ಊರೆಲ್ಲ ನೋಡತೈತೆ - ಕಣ್ಣು

* ಅಂಗಿಮ್ಯಾಲೆ ಅಂಗಿ

ಏಳು ಪದರದ ಅಂಗಿ - ಉಳ್ಳಾಗಡ್ಡೆ (ಈರುಳ್ಳಿ)

* ಬಿಳಿ ವಲದಾಗ ಕರೇ ಬೀಜ - ಪುಸ್ತಕ

* ಬೆಳ್ಳಿ ಚಡಿ ನೆಲಕ್ಕೆ ಬಡಿ - ಸಿಂಬಳ

ಬರವಣಿಗೆ ಮತ್ತು ಉಚ್ಚಾರಣೆ ಸಂದರ್ಭದಲ್ಲಿ ಆದೋನಿ ಭಾಗದ ವಿದ್ಯಾರ್ಥಿಗಳಲ್ಲಿ ಮೇಲಿನಂತೆ ತಪ್ಪು ಬರವಣಿಗೆ ಮತ್ತು ವಿಶಿಷ್ಟವಾದ ಉಚ್ಚಾರಣೆಯು ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ.

ಆದೋನಿ ಕನ್ನಡಿಗರ ಶೈಕ್ಷಣಿಕ ಸಮಸ್ಯೆಗಳು

ಆದೋನಿ ಕನ್ನಡಗರಿಗೆ ಉನ್ನತ ಶಿಕ್ಷಣ ನಿಲುಕದ ನಕ್ಷತ್ರ. ಆಧುನಿಕ ಕರ್ನಾಟಕ ಆರು ದಶಕಗಳು ದಾಟಿರದ ರಾಜಕೀಯ ಘಟಕ, ಭಾಷಾವಾರು ಪ್ರಾಂತ ವಿಂಗಡನೆಯಾಗುವುದಕ್ಕಿಂತ ಪೂರ್ವದಲ್ಲಿ ಆದೋನಿ, ಆಲೂರು ತಾಲೂಕುಗಳು ಬಳ್ಳಾರಿ ಜಿಲ್ಲೆಗೆ ಸೇರಿದ್ದವು. "೧೯೪೫ ರಲ್ಲಿ ಬಳ್ಳಾರಿ ಜಿಲ್ಲೆ ಪ್ರಥಮ ಸಾಹಿತ್ಯ ಸಮ್ಮೇಳನ ವಾಡ್ಲ ಹೈಸ್ಕೂಲಿನಲ್ಲಿ ನಡೆದಿತ್ತು. ಎರಡನೇಯ ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನ ೧೯೪೬ ಆಗಸ್ಟ್ ೧೦-೧೧ ರಂದು ಆದವಾನಿ ಶ್ರೀ ಎಲೆ ಮಲ್ಲೇಶಪ್ಪ ಗಿರಣಿ ಆವರಣದಲ್ಲಿ ನಡೆದಿತ್ತು. ಶ್ರೀಮಾನ್ ಸದಾಶಿವಯ್ಯನವರು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು."[೨೩] ಇಂತಹ ಚಾರಿತ್ರಿಕ ಇತಿಹಾಸವುಳ್ಳ 'ಆದೋನಿ' ಇಂದು ಆಂಧ್ರ ಆಡಳಿತಕ್ಕೆ ಒಳಪಟ್ಟಿದೆ. ಆದರೂ ಈ ಪ್ರದೇಶದಲ್ಲಿ ಕನ್ನಡ ಮಾಧ್ಯಮ ಶಾಲೆಗಳಿವೆ. ಆದರೆ ಕನ್ನಡದಲ್ಲಿ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ.

ಇಂದು ಎಲ್ಲರಿಗೂ ಶಿಕ್ಷಣ ಎನ್ನುವುದು ಎಲ್ಲಾ ರಾಜ್ಯ ಸರಕಾರಗಳ ಮುಖ್ಯ ಗುರಿ. ಈ ಗುರಿ ಸಾಧನೆಯ ಅಂಗವಾಗಿ ಎಲ್ಲಾ ಮಾಧ್ಯಮದ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ಪೂರೈಸಿ ಗುಣಮಟ್ಟ ಶಿಕ್ಷಣ ನೀಡುವುದು ಸರಕಾರಗಳ ಕರ್ತವ್ಯ. ಆದರೆ ಆಂಧ್ರ ಸರಕಾರ ತೆಲುಗು ಹಾಗೂ ಉರ್ದು ಮಾಧ್ಯಮದ ಮಕ್ಕಳಿಗೆ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಗಣಿತವಿಜ್ಞಾನ, ಸಮಾಜ ಮುಂತಾದ ಪಠ್ಯಪುಸ್ತಕಗಳನ್ನು ಆಯಾ ಮಾತೃಭಾಷೆಯಲ್ಲಿ ಮುದ್ರಿಸಿ ಪೂರೈಸುತ್ತಿದೆ. ಆದರೆ ಕನ್ನಡ ಮಾಧ್ಯಮದ ಮಕ್ಕಳಿಗೆ ಈ ಸೌಲಭ್ಯದಿಂದ ವಂಚಿತಗೊಳಿಸಿದೆ. ಉದಾ. ಒಂದು ಹಾಗೂ ಎರಡನೇ ತರಗತಿ ತೆಲುಗು ಹಾಗೂ ಉರ್ದು ಮಾಧ್ಯಮದ ವಿದ್ಯಾರ್ಥಿಗಳಿಗೆ ಗಣಿತ ಪುಸ್ತಕಗಳನ್ನು ಪೂರೈಸುತ್ತಿದೆ. ಆದರೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಒಂದು ಹಾಗೂ ಎರಡನೇ ತರಗತಿಗಳಿಗೆ ಇಲ್ಲಿಯವರೆಗೂ ಗಣಿತ ಪಠ್ಯಪುಸ್ತಕವನ್ನು ಪೂರೈಸಿಲ್ಲ. ಕನ್ನಡ ಮಾಧ್ಯಮದ ಮಕ್ಕಳನ್ನು ಆಂಧ್ರ ಸರಕಾರ ನಿರ್ಲಕ್ಷಿಸುತ್ತಿದೆ ಎನ್ನುವುದಕ್ಕೆ ಇದೊಂದು ಸ್ಪಷ್ಟ ಸಾಕ್ಷಿ.

ಆಂಧ್ರ ಸರಕಾರ ಪ್ರಾಥಮಿಕ ಹಂತದಲ್ಲಿ ಮಕ್ಕಳ ಭಾಷಾಭಿವೃದ್ಧಿ ಕಾರ್ಯಕ್ರಮ ಜಾರಿಗೊಳಿಸಿರುವುದು ಹೆಮ್ಮೆಯ ಸಂಗತಿ. ಪ್ರಾಥಮಿಕ ಹಂತದಲ್ಲಿ ಒಂದು ಮತ್ತು ಎರಡನೇ ತರಗತಿಗಳೇ ಪ್ರಮುಖ. ಮಕ್ಕಳಲ್ಲಿ ಭಾಷಾಭಿವೃದ್ಧಿಯಾಗಲು ಈ ಮಕ್ಕಳಿಗೆ ವೈಜ್ಞಾನಿಕ ಪಠ್ಯಪುಸ್ತಕಗಳ ಆಧಾರದಿಂದ ಅಕ್ಷರಗಳನ್ನು ಪರಿಚಯಿಸಬೇಕು. ಆದರೆ ಸರಕಾರ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ಪೂರೈಸುತ್ತಿಲ್ಲವಾದ್ದರಿಂದ ಇಂದು ಅನೇಕ ಕನ್ನಡ ಶಾಲೆಗಳಲ್ಲಿ ಕನ್ನಡ ಭಾಷಾ ಪಠ್ಯಪುಸ್ತಕಗಳಿಲ್ಲದ್ದರಿಂದ ಮಕ್ಕಳ ಭಾಷಾಭಿವೃದ್ಧಿಗೆ ತೊಡಕಾಗಿದೆ. ಅಷ್ಟೇ

ಅಲ್ಲದೆ ಒಂದರಿಂದ ಹತ್ತನೇ ತರಗತಿ ಕನ್ನಡ ಭಾಷಾ ಪಠ್ಯಪುಸ್ತಕ ಸಿಲಬಸ್ಸನ್ನು ಇಲ್ಲಿಯೂ ಅಳವಡಿಸಿರುವುದರಿಂದ ಆಂಧ್ರ ಸರಕಾರ ಈ ಪಠ್ಯವನ್ನು ಪೂರೈಸುತ್ತಿಲ್ಲ.

ಆದ್ದರಿಂದ ಮಕ್ಕಳು ಅವರೇ ಸ್ವತಃ ದುಬಾರಿ ಬೆಲೆಯಲ್ಲಿ ಕೊಂಡು ಓದಬೇಕಾಗಿದೆ. ಇದು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಕಷ್ಟವಾಗಿದ್ದರಿಂದ ಹಲವಾರು ಪುಸ್ತಕಗಳನ್ನು ಕೊಳ್ಳಲು ಆಗದೇ ಇರುವುದರಿಂದ ಕನ್ನಡ ಭಾಷೆಯಲ್ಲಿ ಹಿಂದುಳಿಯಲು ಕಾರಣವಾಗಿದೆ. ಈ ವಿಷಯವನ್ನು ಕುರಿತು ಕರ್ನಾಟಕ ಸರಕಾರಕ್ಕೆ ಗಡಿಭಾಗದ ಕನ್ನಡಿಗರು ಮನವಿ ಸಲ್ಲಿಸಿದರೂ ಏನೂ ಪ್ರಯೋಜನವಾಗುತ್ತಿಲ್ಲ. ಅತ್ತ ಆಂಧ್ರ ಸರಕಾರದವರು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಈ ಭಾಗದ ಕನ್ನಡ ಮಾಧ್ಯಮದ ಮಕ್ಕಳ ಬಗ್ಗೆ ಎರಡೂ ಸರಕಾರಗಳು ನಿರ್ಲಕ್ಷ್ಯ ವಹಿಸಿರುವುದು ಸ್ಪಷ್ಟ ನಿದರ್ಶನ.

ಹೇಗೋ ಕಷ್ಟಪಟ್ಟು ಒಂದರಿಂದ ಹತ್ತನೇ ತರಗತಿ ಓದಿ ಪಾಸಾದರೆ ಮತ್ತೊಂದು ಸಮಸ್ಯೆ. ಮುಂದಿನ ವ್ಯಾಸಂಗಕ್ಕಾಗಿ ಅನಿವಾರ್ಯವಾಗಿ ಕರ್ನಾಟಕಕ್ಕೆ ಹೋಗಬೇಕು. ಇದು ವೆಚ್ಚದಿಂದ ಕೂಡಿದ್ದು. ಆದ್ದರಿಂದ ಉಳ್ಳವರು ಮಾತ್ರ ವಿದ್ಯಾಭ್ಯಾಸ ಮುಂದುವರೆಸುತ್ತಾರೆ ವಿನಃ ಬಡವರ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಾರೆ. ಇದು ಕೂಡ ಆಂಧ್ರ ಸರಕಾರದವರು ಕನ್ನಡ ಮಾಧ್ಯಮದವರಿಗೆ ತೋರುತ್ತಿರುವ ನಿರ್ಲಕ್ಷ್ಯಕ್ಕೆ ಸಾಕ್ಷಿ. ಆದರೂ ಕರ್ನಾಟಕಕ್ಕೆ ಬಂದು ಖರ್ಚು ವೆಚ್ಚಗಳನ್ನು ಭರಿಸಿ ಪಿಯುಸಿ, ಹಾಗೂ ಪದವಿ ಕೋರ್ಸುಗಳನ್ನು ಮುಗಿಸಿದ ನಂತರ D.Ed ಹಾಗೂ B.Ed ಕೋರ್ಸುಗಳು ಮಾಡಬೇಕೆಂಬ ಬಯಕೆ ಇದ್ದರೂ ಇದಕ್ಕೆ ಕರ್ನಾಟಕ ಸರ್ಕಾರ ಇಟ್ಟ ನಿರ್ಬಂಧ ಅಡ್ಡಿಯಾಗಿದೆ. ಅದೇನೆಂದರೆ D.Ed ಹಾಗೂ B.Ed ಕೋರ್ಸುಗಳಲ್ಲಿ ಸರಕಾರಿ ಕೋಟಾದಲ್ಲಿ ಸೀಟು ಪಡೆಯಲು ಕನಿಷ್ಟ ಏಳು ವರ್ಷಗಳು ಕರ್ನಾಟಕದಲ್ಲಿ ಓದಿರಬೇಕೆಂಬ ನಿಯಮ. ಇದರಿಂದ ಇಲ್ಲಿನ ಮಕ್ಕಳು D.Ed ಕೋರ್ಸಿನಿಂದ ವಂಚಿತರಾಗುತ್ತಿದ್ದಾರೆ. ಒಂದು ವೇಳೆ ಓದಬೇಕೆಂದರೂ ಮ್ಯಾನೇಜ್‌ಮೆಂಟ್ ಸೀಟು ಪಡೆದು ಓದಬೇಕು. ಇದು ಸಾವಿರಗಟ್ಟಲೆ ಖರ್ಚಿನ ಕೋರ್ಸು ಆಗಿದ್ದರಿಂದ ಶ್ರೀಮಂತರ ಮಕ್ಕಳು ಮಾತ್ರ ಅಧ್ಯಯನವನ್ನು ಮುಂದುವರೆಸುತ್ತಾರೆ. ಈ ಸಮಸ್ಯೆಯಿಂದ ಈ ಭಾಗದ ಕನ್ನಡ ಮಾಧ್ಯಮದ ಶಾಲೆಗಳು ಶಿಕ್ಷಕರ ಕೊರತೆಯನ್ನು ಎದುರಿಸುತ್ತಿವೆ.

ಆಂಧ್ರದಲ್ಲಿ D.Ed ಹಾಗೂ B.Ed ಕೋರ್ಸುಗಳು ಕನ್ನಡ ಮಾಧ್ಯಮದಲ್ಲಿ ಇಲ್ಲದೆ ಇರುವುದು ಇನ್ನೊಂದು ಸಮಸ್ಯೆ. ಆಂಧ್ರ ಸರಕಾರವು ಅಲ್ಪಸಂಖ್ಯಾತರ ಭಾಷೆಗಳಾದ ತಮಿಳು, ಉರ್ದು ಮಾಧ್ಯಮದಲ್ಲಿ ಆಯಾ ರಾಜ್ಯಗಳಲ್ಲಿ ಹೊಂದಿಕೊಡಿರುವ ಜಿಲ್ಲೆಗಳಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ D.Ed ಕೋರ್ಸುಗಳನ್ನು ಇಟ್ಟು ಶಿಕ್ಷಕರಿಗೆ ತರಬೇತಿಯನ್ನು ಕೊಟ್ಟರೆ, ಕನ್ನಡ ಮಾಧ್ಯಮದ ಮಕ್ಕಳಿಗೆ ಅವಕಾಶವಿಲ್ಲ. ಕರ್ನಾಟಕಕ್ಕೆ ಹೊಂದಿಕೊಂಡಿರುವ ಯಾವ ಜಿಲ್ಲೆಗಳಲ್ಲೂ D.Ed ಕೋರ್ಸ್ ಇಲ್ಲ. ಇನ್ನೊಂದು ಆಶ್ಚರ್ಯ

ವೆಂದರೆ ತಮಿಳುನಾಡಿನಿಂದ ಬಹುದೂರವಿರುವ ಕರ್ನೂಲು ಡೈಯಟ್‌ನಲ್ಲಿ ತಮಿಳು ಮಾಧ್ಯಮದ D.Ed ಕೋರ್ಸು ಇದೆ. ಆದರೆ ಅದೇ ಜಿಲ್ಲೆಯಲ್ಲಿ ಸುಮಾರು ೩೦ ಕನ್ನಡ ಪ್ರಾಥಮಿಕ ಶಾಲೆಗಳು, ೧೫ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ೮ ಪ್ರೌಢಶಾಲೆಗಳಿದ್ದರೂ ಡಯಟ್‌ನಲ್ಲಿ ಕನ್ನಡ D.Ed ಕೋರ್ಸ್ ಇಲ್ಲದಿರುವುದು ಆಂಧ್ರ ಸರಕಾರದವರು ಕನ್ನಡಿಗರಿಗೆ ಮಾಡುತ್ತಿರುವ ಅನ್ಯಾಯಕ್ಕೆ ನಿದರ್ಶನ.

ಇದರಿಂದಾಗಿ ಕನ್ನಡ ಶಾಲೆಗಳು ಶಿಕ್ಷಕರ ಕೊರತೆಯನ್ನು ಅನುಭವಿಸುತ್ತಿವೆ. ಕರ್ನಾಟಕ ಸರಕಾರ D.Ed ಹಾಗೂ B.Ed ಕೋರ್ಸಿನಲ್ಲಿ ಗಡಿನಾಡ ಕನ್ನಡಿಗರಿಗೆ ಹಾಗೂ ಹೊರನಾಡ ಕನ್ನಡಿಗರಿಗೆ ತಲಾ ಐದರಂತೆ ಒಟ್ಟು ಹತ್ತು ಸೀಟುಗಳನ್ನು ಮೀಸಲಿರಿಸಿದೆ. ಆದರೆ ಆಂಧ್ರದ ಗಡಿಭಾಗದಲ್ಲಿ ಕನ್ನಡ ಮಾಧ್ಯಮ ಓದುತ್ತಿರುವ ಮಕ್ಕಳು ಗಡಿನಾಡಿನವರೂ ಅಲ್ಲದ ಅತಂತ್ರ ಸ್ಥಿತಿಯಲ್ಲಿರುವಂತಾಗಿದೆ. ಕರ್ನಾಟಕ ಸರ್ಕಾರ ಗಡಿನಾಡು ಅಂದರೆ ವಿವಾದಗ್ರಸ್ಥ ಕನ್ನಡ ಮಾತನಾಡುವ ಪ್ರದೇಶಗಳಾದ ಕೇರಳದ ಕಾಸರಗೋಡು, ಮಹಾರಾಷ್ಟ್ರದ ಅಕ್ಕಲಕೋಟೆ, ಸೊಲ್ಲಾಪುರ ತಾಲೂಕುಗಳು ಮಾತ್ರ ಗಡಿನಾಡ ತಾಲೂಕುಗಳು ಎಂದು B.Ed ಹಾಗೂ D.Ed ನಿಯಮಾವಳಿಯಲ್ಲಿ ಸ್ಪಷ್ಟಪಡಿಸಿರುವುದರಿಂದ ಆಂಧ್ರದ ಯಾವ ತಾಲೂಕುಗಳನ್ನು ಸೇರಿಸದೇ ಇರುವುದು ಆದೋನಿ, ಆಲೂರುನವರು ಗಡಿನಾಡಿನವರಲ್ಲವೇ ಎನ್ನುವುದು ಸಮಸ್ಯೆಯಾಗಿದೆ.

ಆದರೆ ಇತಿಹಾಸದಿಂದ ತಿಳಿದು ಬರುವುದೇನೆಂದರೆ ಆದೋನಿ, ಆಲೂರು, ಮಡಕಶಿರ ಮತ್ತು ರಾಯದುರ್ಗ ತಾಲೂಕುಗಳು ವಿವಾದಗ್ರಸ್ಥವಾಗಿದ್ದು, ಅವು ಕೂಡ ಕನ್ನಡ ಮಾತನಾಡುವ ಪ್ರದೇಶಗಳಾಗಿದ್ದರಿಂದ ಮೇಲ್ಕಾಣಿಸಿದ ನಾಲ್ಕು ತಾಲೂಕುಗಳನ್ನು ಗಡಿನಾಡಿಗೆ ಸೇರಿಸದೇ ಇರುವುದು ಕರ್ನಾಟಕ ಸರ್ಕಾರ ಆಂಧ್ರ ಭಾಗದ ಕನ್ನಡವನ್ನು ನಿರ್ಲಕ್ಷಿಸುತ್ತಿದೆ ಎಂದು ಆದೋನಿ ಭಾಗದ ಕನ್ನಡಿಗರೂ ಈಗಲೂ ನೋವಿನಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಅಡಿಟಿಪ್ಪಣಿ

೧. ದ್ವಿಭಾಷಿಕತೆ, ಡಾ.ಕೆ.ವಿ ನಾರಾಯಣ ಕ.ವಿ.ವಿ. ಹಂಪಿ, ಪು. ೧

೨. ಈರಮಣಿ, ಆದೋನಿ, ಮೋಚಿ

೩. ಹುಲಿಗೆಮ್ಮ, ಆದೋನಿ, ಜೋಗಿ

೪. ನೇತ್ರವತಿ, ಆದೋನಿ, ಲಿಂಗಾಯತ

೫. ಕೌಸಲ್ಯ, ಆದೋನಿ, ಲಿಂಗಾಯತ

೬. ಈರಮಣಿ, ಆದೋನಿ, ಮೋಚಿ

೭. ಮಲ್ಲಿಕಾರ್ಜುನ, ಆದೋನಿ, ಕುರಬ

೮. ಈರಮಣಿ, ಆದೋನಿ, ಮೋಚಿ

೯. ವಿಜಯಲಕ್ಷ್ಮಿ, ಆದೋನಿ, ಲಿಂಗಾಯತ

೧೦. ಮಲ್ಲನಗೌಡ, ನೆರಣಿಕೆ ಲಿಂಗಾಯತ

೧೧. ಪಲ್ಲವಿ, ಆದೋನಿ, ಲಿಂಗಾಯತ

೧೨. ಪಿ.ರಾಜೇಶ್, ಆದೋನಿ, ಕ್ಯಾಮುಟರು

೧೩. ನೇತ್ರ, ಆದೋನಿ, ಲಿಂಗಾಯತ

೧೪. ಪವನ್, ಆದೋನಿ, ಕ್ಯಾಮುಟರು

೧೫. ರಾಧಿಕ, ಆದೋನಿ, ಲಿಂಗಾಯತ

೧೬. ವೀಣಾ, ಆದೋನಿ, ಜಂಗಮರು

೧೭. ಅನಿತ, ಆದೋನಿ, ಲಿಂಗಾಯತ

೧೮. ಈರಮಣಿ, ಆದೋನಿ, ಮೋಚಿ

೧೯. ನೇತ್ರ, ಆದೋನಿ, ಲಿಂಗಾಯತ

೨೦. ನೇತ್ರ, ಆದೋನಿ, ಲಿಂಗಾಯತ

೨೧. ಈರಮಣಿ, ಆದೋನಿ ಮೋಚಿ

೨೨. ನೇತ್ರ, ಆದೋನಿ, ಲಿಂಗಾಯತ

೨೩. ಗುರುಮೂರ್ತಿ ಪೆಂಡಕೂರು (ಸಂ.) ಸೂರ್ಯಕಾಂತಿ, ಪು.೫

□□

ಅಧ್ಯಾಯ ೯

ವ್ಯಕ್ತಿನಾಮಗಳು

ಅಧ್ಯಾಯ ೯

ವ್ಯಕ್ತಿನಾಮಗಳು

"ಭಾಷೆಯ ಪದಕೋಶದಲ್ಲಿ ನಾಮಪದಗಳ ವಲಯವೊಂದಿರುತ್ತದೆ. ಈ ವಲಯದಲ್ಲಿ ವ್ಯಕ್ತಿನಾಮಗಳು ಸಿಂಹಪಾಲನ್ನು ಪಡೆಯುತ್ತವೆ. ನಾಮಪದಗಳ ವಲಯ ವಿಸ್ತೃತವಾದುದು. ಅಂದರೆ ಸದಾ ಬೆಳೆಯುವಂಥದ್ದು. ಈ ಮಾತು ವ್ಯಕ್ತಿನಾಮಗಳಿಗೂ ಅನ್ವಯವಾಗುತ್ತದೆ. ನಾಮಪದಗಳು ಹೆಸರಿಸುತ್ತವೆ ಮತ್ತು ವರ್ಣಿಸುತ್ತವೆ. ಆದರೆ ವ್ಯಕ್ತಿನಾಮಗಳು ಬಹುಮಟ್ಟಿಗೆ ಹೆಸರಿಸುತ್ತವೆ. ವರ್ಣಿಸುವ ಕೆಲಸ ಅಲ್ಪ ಮತ್ತು ಪರೋಕ್ಷ. ಮುಕ್ಕಣ್ಣನಿಗೆ ಮೂರು ಕಣ್ಣಿರಬೇಕಿಲ್ಲ. ಅಂದರೆ ಆ ಹೆಸರು ವರ್ಣಿಸುತ್ತಿಲ್ಲ. ಈ ವ್ಯಕ್ತಿನಾಮಗಳು ಸಂಖ್ಯೆಯಲ್ಲಿ ವೃದ್ಧಿಯಾಗಿರುವಂತೆ ಬೇರೊಂದು ಕಡೆ ಸ್ಥಗಿತ ವಲಯಕ್ಕೆ ಸೇರಿರುತ್ತವೆ. ಎರೆಯಂಗ ಎಂಬ ಹೆಸರಿನ ವ್ಯಕ್ತಿ ಈಗ ಇರುವ ಸಂಭವ ಕಡಿಮೆ. ಅದೊಂದು ವ್ಯಕ್ತಿನಾಮವಾಗಿದ್ದರೂ ಈಗ ಅದು ಸ್ಥಗಿತ. ಕನ್ನಡದ ಸಾವಿರಾರು ಹೆಸರುಗಳು ಹೀಗೆ ಸ್ಥಗಿತಗೊಂಡಿವೆ. ಆಕಸ್ಮಾತಾಗಿ ಕೆಲವು ವರ್ಷಗಳ ಅನಂತರ ಮತ್ತೆ ಚಲಾವಣೆಗೆ ಬರಲೂಬಹುದು. ವ್ಯಕ್ತಿನಾಮಗಳ ಅಧ್ಯಯನ ಸಂಸ್ಕೃತಿಯ ತಿಳಿಯಲು ಅವಶ್ಯ."[೧] ಈ ಹೆಸರುಗಳ ಸ್ವರೂಪವನ್ನು ಮತ್ತು ಬಳಕೆಯ ಬಗೆಗಳನ್ನು ಅಭ್ಯಾಸ ಮಾಡಿದರೆ ಸಂಸ್ಕೃತಿಯ ಕೆಲವು ನೆಲೆಗಳ ಅರಿವು ಹೆಚ್ಚಾಗುತ್ತದೆ.

"ಯಾವುದೇ ಹೆಸರುಗಳಾದರೂ ಆಕಾಶದಿಂದ ಉದುರಿ ಬಿದ್ದವಲ್ಲ. ಮನುಷ್ಯರ ಹೆಸರಾಗಲಿ, ಸ್ಥಳಗಳ ಹೆಸರಾಗಲಿ ಸಾವಿರಾರು ವರ್ಷಗಳ ವಿವಿಧ ಸಾಮಾಜಿಕ ಸ್ಥಿತಿಗನುಗುಣವಾಗಿ ಅವಸರಕ್ಕೆ ಅನುಗುಣವಾಗಿ ಏರ್ಪಟ್ಟಿರುವಂತವು. ಒಂದು ಭಾಷೆ ಮಾತನಾಡುವ ಪ್ರಾಂತದಲ್ಲಿ ಭೌಗೋಳಿಕ ಪರಿಸ್ಥಿತಿಗಳನ್ನು ಪ್ರಜೆಗಳ ಮಾನಸಿಕ ಪ್ರವೃತ್ತಿ, ಭಾಷೆಯ ವ್ಯವಸ್ಥೆಯನ್ನು ನಾಗರಿಕತೆಯನ್ನು, ರಾಜಕೀಯ ಚರಿತ್ರೆಯನ್ನು ಸಂಸ್ಕೃತಿಯನ್ನು ಹೆಸರುಗಳು ಪ್ರತಿಬಿಂಬಿಸುತ್ತವೆ."[೨]

ನಿರ್ದಿಷ್ಟ-ವಾರ್ಗಿಕ

ನಿರ್ದಿಷ್ಟ ಹಾಗೂ ವಾರ್ಗಿಕ ಸಂಕೀರ್ಣ ರೂಪವೇ ವ್ಯಕ್ತಿನಾಮ. ಆದರೂ ನಿರ್ದಿಷ್ಟ ಘಟಕವು ವ್ಯಕ್ತಿನಾಮದ ಪ್ರಧಾನ ಅಂಗ. ಅದೇ ವ್ಯಕ್ತಿಯ ನಿಜನಾಮ ಆಗಿರುತ್ತದೆ. ಜೊತೆಗೆ ಪೂರ್ಣ ಹೆಸರೂ ಆಗಿರುತ್ತದೆ. ಇದು ಮನೆತನದ ಧರ್ಮ. ಹೆಸರಿಟ್ಟವರ ಆಶಯ. ಅವರ ಸಂಸ್ಕೃತಿಯ ಬಿಂಬವನ್ನು ಗುರುತಿಸುತ್ತದೆ. ನಿರ್ದಿಷ್ಟ ಘಟಕದಿಂದ ವ್ಯಕ್ತಿಯನ್ನು ಇತರರಿಂದ ಪ್ರತ್ಯೇಕಿಸಿ ಗುರುತಿಸಲಾಗುತ್ತದೆ.

ಭಾಷೆಯ ಒಂದು ಘಟಕವೇ ವ್ಯಕ್ತಿನಾಮ ಆಗುವುದುಂಟು. ಉದಾಹರಣೆಗೆ ಮದನ್, ಕಿರಣ್, ಚರಣ್, ಮಹೇಶ್, ದಿನೇಶ್, ಪ್ರಕಾಶ್, ಲಕ್ಷ್ಮಿ, ಕಾವೇರಿ, ಕವಿತ, ಕಮಲ, ಗೀತ ಮೊದಲಾದ ವ್ಯಕ್ತಿನಾಮದ ಈ ಘಟಕಗಳಿಗೆ ನಾಮಶಾಸ್ತ್ರದ ಪರಿಭಾಷೆಯಲ್ಲಿ 'ನಿರ್ದಿಷ್ಟ'ವೆಂದು ಕರೆಯಲಾಗುತ್ತದೆ. ನಿರ್ದಿಷ್ಟಗಳೇ ವ್ಯಕ್ತಿನಾಮದ ಕೇಂದ್ರಭಾಗ ಎನಿಸುವುದರಿಂದ ಅವು ತುಂಬಾ ಮಹತ್ವವನ್ನು ಪಡೆದುಕೊಳ್ಳುತ್ತವೆ. ವ್ಯಕ್ತಿನಾಮ ನಿರ್ದಿಷ್ಟಗಳಿಗೆ ವೃತ್ತಿ, ಜಾತಿ, ಹುದ್ದೆ, ಗೌರವ ಸೂಚಕ ಮೊದಲಾದ ಪದಗಳು ಸೇರುತ್ತವೆ. ಈ ವರ್ಗವಾಚಿ ಪದಗಳನ್ನು 'ವಾರ್ಗಿಕ'ಗಳೆಂದು ಕರೆಯಲಾಗುತ್ತದೆ. ನಿರ್ದಿಷ್ಟದಂತೆ ವಾರ್ಗಿಕಗಳಿಗೂ ತನ್ನದೆ ಆದ ಮಹತ್ವವಿದೆ. ವಾರ್ಗಿಕಗಳು ನಿರ್ದಿಷ್ಟದ ಜೊತೆ ಬಳಕೆಯಾಗುವಾಗ ಕೆಲವು ಸಂದರ್ಭದಲ್ಲಿ ನಿರ್ದಿಷ್ಟದ ಪೂರ್ವ ಪದಗಳಾಗಿಯೂ ಕೆಲವು ಸಂದರ್ಭದಲ್ಲಿ ನಿರ್ದಿಷ್ಟದ ಉತ್ತರ ಪದಗಳಾಗಿಯೂ ಬಳಕೆಯಾಗುತ್ತದೆ. ಅಂಥ ಸಂದರ್ಭದಲ್ಲಿ ವ್ಯಕ್ತಿನಾಮ ಸ್ವರೂಪದಲ್ಲಿ ವ್ಯತ್ಯಾಸಗಳಾಗುವುದುಂಟು. ನಿದರ್ಶನಕ್ಕೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ಅಗಸರ + ನಾಗಣ್ಣ = ಅಗಸರ ನಾಗಣ್ಣ

ನಾಯಕರ + ಹುಲುಗಪ್ಪ = ನಾಯಕರ ಹುಲುಗಪ್ಪ

ತಳವಾರ + ಮುಕ್ಕಣ್ಣ = ತಳವಾರ ಮುಕ್ಕಣ್ಣ

ಮೇಲಿನ ಪಟ್ಟಿಯ ಹೆಸರುಗಳಲ್ಲಿ ಜಾತಿ, ವೃತ್ತಿ, ಹುದ್ದೆ ಸೂಚಕ ಪದಗಳು ವ್ಯಕ್ತಿನಾಮದ ಪೂರ್ವದಲ್ಲಿ ಬಂದಿವೆ. ಸಮೂಹದಿಂದ ವ್ಯಕ್ತಿಯನ್ನು ಗುರುತಿಸುವಾಗ ಮೇಲಿನ ಈ ಪೂರ್ವಪದಗಳು ಪ್ರಧಾನ ಪಾತ್ರವಹಿಸುತ್ತಿದ್ದು ಮತ್ತು ವ್ಯಕ್ತಿಯ ಒಂದು ವರ್ಗವನ್ನು ಸೂಚಿಸುವುದರಿಂದ ಇವುಗಳನ್ನು ವಾರ್ಗಿಕಗಳೆಂದು ಪರಿಗಣಿಸಲಾಗಿದೆ. ಅಲ್ಲದೆ ನಿರ್ದಿಷ್ಟದ ಜೊತೆಗೆ ಗೌರವಸೂಚಿ (ಬಂಧುಸೂಚಕ) ಅಣ್ಣ, ಅಪ್ಪ ಬಳಕೆಯಾಗಿದ್ದರೂ

ಅವು ಕ್ರಿಯಾತ್ಮಕತೆಯನ್ನು ಕಳೆದುಕೊಂಡು ನಿರ್ದಿಷ್ಟ ಭಾಗವಾಗಿ ಸೇರಿಹೋಗಿವೆ. ಈ ಹಿನ್ನೆಲೆಯಲ್ಲಿ ಇವುಗಳನ್ನು 'ವಾರ್ಗಿಕ'ಗಳೆಂದು ಪರಿಗಣಿಸಲಾಗುವುದಿಲ್ಲ.

೧. ಕೆಲವು ವ್ಯಕ್ತಿನಾಮಗಳು ಆಯಾ ವ್ಯಕ್ತಿಗಳ ನಾಮನಿರ್ದೇಶನ ಮಾಡುವುದರ ಜೊತೆಗೆ ವಾರ್ಗಿಕಗಳು ಬದಲಾದಂತೆ ಜಾತಿಸೂಚಿ ನಾಮಗಳಾಗಿ ಬದಲಾವಣೆ ಆಗಿರುವುದನ್ನು ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದು.

ಉದಾ. ರಂಗ+ಅಣ್ಣ = ರಂಗಣ್ಣ (ರಂಗನ್ನ)

ರಂಗ+ರಾವ್ = ರಂಗರಾವ್

ರಂಗ+ಶಾಸ್ತ್ರಿ = ರಂಗಶಾಸ್ತ್ರಿ

ರಂಗ+ಅಪ್ಪ = ರಂಗಪ್ಪ

ರಂಗ+ಗೌಡ = ರಂಗೇಗೌಡ

ರಂಗ+ದೇವರು = ರಂಗೇದೇವರು

ರಂಗ+ಶೆಟ್ಟಿ = ರಂಗಶೆಟ್ಟಿ

ರಂಗ+ನಾಯಕ = ರಂಗನಾಯಕ

ರಂಗ+ಸ್ವಾಮಿ = ರಂಗಸ್ವಾಮಿ

ರಂಗ+ರಾಜ = ರಂಗರಾಜ

ರಂಗ+ಅಯ್ಯ = ರಂಗಯ್ಯ

ಮೇಲಿನ ಹೆಸರುಗಳು 'ರಂಗ' ಹೆಸರಿನ ಮೂಲ ಪಡೆದಿವೆ. ಇವು ವಾರ್ಗಿಕಗಳ ಸಹಾಯದಿಂದ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ, ಉಪ್ಪಾರ, ಬೇಡ, ಹೊಲೆಯ ಮತ್ತು ಮಾದಿಗ ಜನರ ಜಾತಿಸೂಚಿ ನಾಮಗಳಾಗಿವೆ. ಇಂದು ಇದು ಸುಳ್ಳಾಗಿದೆ. ವ್ಯಕ್ತಿ ಆಧುನಿಕರಣಕ್ಕೆ ಒಳಗಾದಂತೆ ನಾಮಗಳಲ್ಲಿ ವಿಶೇಷವಾದ ಬದಲಾವಣೆ ಕಂಡುಬರುತ್ತದೆ. ವಿಶೇಷವಾಗಿ ವಾರ್ಗಿಕಗಳ ಸಹಾಯದಿಂದ ಸ್ತ್ರೀಯರ ಹೆಸರಲ್ಲಿ ಜಾತಿಸೂಚಿ ನಾಮಗಳನ್ನು ನಿರ್ವಹಿಸುವುದು ಕಷ್ಟ.

೨. ಒಂದೇ ಮೂಲದ ಹೆಸರು ವಾರ್ಗಿಕಗಳ ಸಹಾಯದಿಂದ ಒಂದೇ ಜಾತಿಸೂಚಿ ನಾಮದಲ್ಲಿ ವಯಸ್ಸು, ಲಿಂಗಗಳ ಭಿನ್ನತೆ ಸೂಚಿಸುತ್ತದೆ.

ಉದಾ : ಮಲ್ಲ+ಅಣ್ಣ+ಗೌಡ = ಮಲ್ಲಣ್ಣಗೌಡ

ಮಲ್ಲ+ಅಮ್ಮ = ಮಲ್ಲಮ್ಮ

ಮುಂತಾದ ಸ್ತ್ರೀ ಮತ್ತು ಪುರುಷರ ವ್ಯಕ್ತಿನಾಮದ ವಿಸ್ತೃತ ರೂಪ ಇಲ್ಲವೆ ಸಂಕುಚಿತ ರೂಪಗಳು ವಯಸ್ಸು, ಲಿಂಗಗಳನ್ನು ಸೂಚಿಸುತ್ತವೆ.

ಒಂದೇ ಕುಟುಂಬದಲ್ಲಿ ಒಂದೇ ಹೆಸರನ್ನು ಮತ್ತೆ ಮತ್ತೆ ಇಡಲಾಗುತ್ತಿತ್ತು. ಕೆಲವು ಮನೆಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ಅದೇ ಹೆಸರಿನ ಜನರಿರುತ್ತಿದ್ದರು. ಆಗ ಅವರನ್ನು ಗುರುತಿಸಲು ಹೆಸರಿನ ಪದಾದಿಯಲ್ಲಿ ವಾರ್ಗಿಕಗಳು ಬರುವುದರಿಂದ ಬಂಧುತ್ವ ವಯಸ್ಸನ್ನು ಸೂಚಿಸುತ್ತದೆ.

ದೊಡ್ಡ+ಲಿಂಗಪ್ಪ = ದೊಡ್ಡ ಲಿಂಗಪ್ಪ

ಸಣ್ಣ+ಲಿಂಗಪ್ಪ = ಸಣ್ಣ ಲಿಂಗಪ್ಪ

ದೊಡ್ಡ+ಬಸಪ್ಪ = ದೊಡ್ಡ ಬಸಪ್ಪ

ಸಣ್ಣ+ಬಸಪ್ಪ = ಸಣ್ಣ ಬಸಪ್ಪ

ದೊಡ್ಡ+ನಿಂಗಣ್ಣ = ದೊಡ್ಡ ನಿಂಗಣ್ಣ

ಸಣ್ಣ+ನಿಂಗಣ್ಣ = ದೊಡ್ಡ ನಿಂಗಣ್ಣ

ಗುರು+ಬಸಪ್ಪ = ಗುರುಬಸಪ್ಪ

ಎರ್ರಿ+ಬಸಪ್ಪ = ಎರ್ರಿಬಸಪ್ಪ

ವ್ಯಕ್ತಿನಾಮಗಳ ಸ್ವರೂಪವನ್ನು ಅನುಲಕ್ಷಿಸಿ ಅವುಗಳನ್ನು ಈ ರೀತಿಯಾಗಿ ವಿಭಾಗಿಸಬಹುದು.

೧. ಸ್ಥಳವಾಚಿ

೨. ವೃತ್ತಿವಾಚಿ

೩. ಜಾತಿವಾಚಿ

೪. ವ್ಯಕ್ತಿವಾಚಿ

೫. ವಸ್ತುವಾಚಿ

೬. ಸಂಕೀರ್ಣ

ಎಂದು ಆರು ರೀತಿಯಾಗಿ ವರ್ಗೀಕರಿಸಬಹುದು.

೧. ಸ್ಥಳವಾಚಿ

ಪೂರ್ವಜರಲ್ಲಿ ಗ್ರಾಮನಾಮಗಳನ್ನು ವ್ಯಕ್ತಿನಾಮಗಳಿಗೆ ಸೇರಿಸಿ ಬಳಸುವ ವಾಡಿಕೆ ಇತ್ತು. ಮಂಡಿಗೆಯ ಮಾದಿರಾಜ, ಹಾವಿನಾಳ್ ಕಲ್ಲಯ್ಯ, ಇಂತಹ ಪ್ರಾಚೀನ ನಾಮಗಳಲ್ಲಿ ಗ್ರಾಮಗಳ ಸೂಚನೆ ಇರುವುದರಿಂದ ಈ ಪದ್ಧತಿ ತಕ್ಕಮಟ್ಟಿಗೆ ಹಳೆಯದೆಂದೇ ಹೇಳಬೇಕು. ಈ ಕುಲನಾಮಗಳಲ್ಲಿ ವ್ಯಕ್ತಿಗಳು ವಾಸಿಸುವ / ವಾಸಿಸುತ್ತಿದ್ದ ಪ್ರದೇಶದ ಸೂಚನೆ ಇರುತ್ತದೆ. ಆದೋನಿ ಪರಿಸರದಲ್ಲಿ ಇಂತಹ ಸ್ಥಳವಾಚಿ ನಾಮಗಳು ಬಳಕೆಯಲ್ಲಿವೆ.

ಬಳ್ಳಾರಿ+ತಿಪ್ಪನ್ನ = ಬಳ್ಳಾರಿ ತಿಪ್ಪನ್ನ

ಬೆಣಕಲ್+ನಾಗಪ್ಪ = ಬೆಣಕಲ್ ನಾಗಪ್ಪ

ಸಿರಿವಾರ+ಮಲ್ಲಿ = ಸಿರಿವಾರ ಮಲ್ಲಿ

ಕಗ್ಗಲ್+ಗೋವಿಂದ = ಕಗ್ಗಲ್ ಗೋವಿಂದ

ಸುಳುವಾಯಿ+ತಿಮ್ಮಪ್ಪ = ಸುಳುವಾಯಿ ತಿಮ್ಮಪ್ಪ

ನರಸಾಪುರ+ಗೋವಿಂದ = ನರಸಾಪುರ ಗೋವಿಂದ

ಆದೋನಿ+ಹನುಮಂತಪ್ಪ = ಆದೋನಿ ಹನುಮಂತಪ್ಪ

ಮಾಡಿಂಟಿ+ಗೋವಿಂದ = ಮಾಡಿಂಟಿ ಗೋವಿಂದ (ಕ-ಮಾಡಿ (ಮಹಡಿ) ತೆ-ಮೇಡ)

ಗುಡ್ಡದ+ಮಲ್ಲಯ್ಯ = ಗುಡ್ಡದ ಮಲ್ಲಯ್ಯ (ಕ-ಗುಡ್ಡ ತೆ-ಕೊಂಡ)

೨. ವೃತ್ತಿವಾಚಿ

ತಾವು ಕೈಗೊಳ್ಳುವ ವೃತ್ತಿಗಳಿಂದ ಗುರುತಿಸಿಕೊಳ್ಳುವುದು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವ್ಯಾಪಕವಾಗಿ ಬೆಳೆದು ಬಂದಿತು. (ವಿಶೇಷವಾಗಿ ವಚನಕಾರರಲ್ಲಿ ಮಾದರ ಚೆನ್ನಯ್ಯ, ಆಯ್ದಕ್ಕಿ ಲಕ್ಕಮ್ಮ, ಚೇಡರ ದಾಸಿಮಯ್ಯ ಮುಂತಾದವು ಶಾಸನಗಳಲ್ಲಿಯೂ ಉಲ್ಲೇಖಗಳಿವೆ.)

ವ್ಯಕ್ತಿನಾಮಗಳ ಉತ್ತರ ಪದದಲ್ಲಿ ಕೆಲವು ವೃತ್ತಿಗಳನ್ನು ಸೂಚಿಸುವ ಪದಗಳಿವೆ. ಕನ್ನಡ ಸಂಸ್ಕೃತಿಯ ಆರಂಭದಲ್ಲಿ ಈ ಬಗೆಯ ವೃತ್ತಿವಾಚಿಯಿಂದ ಗುರುತಿಸಿಕೊಂಡ ವ್ಯಕ್ತಿಗಳಿದ್ದರು. ಇಂದು ಅವುಗಳಲ್ಲಿ ಕೆಲವೇ ವಾರ್ಗಿಕಗಳು ಮುಂದುವರೆಯುತ್ತವೆ. ಅಲ್ಲದೆ ಈ ಹಿಂದೆ ಬಳಕೆಯಾಗುತ್ತಿದ್ದ ವಾರ್ಗಿಕಕ್ಕೂ ಇಂದಿನ ಹೆಸರಿನೊಂದಿಗೆ ಬಳಕೆಯಾಗುವ ವಾರ್ಗಿಕಕ್ಕೂ ನೇರ ಸಂಬಂಧ ಇಲ್ಲದಿರಬಹುದು. ಆದರೆ ಅಂದು ಅವು ಪರಸ್ಪರ ವೃತ್ತಿ ಮತ್ತು ವ್ಯಕ್ತಿಗೆ ಅವಿನಾಭಾವ ಸಂಬಂಧವನ್ನು ಬೆಸೆದಿದೆ ಎನ್ನಬಹುದು. ಮುಖ್ಯವಾಗಿ ಈ ವೃತ್ತಿವಾಚಿ ವಾರ್ಗಿಕಗಳು ಪುರುಷ ಪ್ರಧಾನವಾಗಿದ್ದವು. ಹೆಚ್ಚಾಗಿ ಪುರುಷ ವ್ಯಕ್ತಿನಾಮಗಳಿಗೆ ಹೊಂದಿಕೊಂಡೇ ಬಂದಿರುವುದು ತಿಳಿಯುತ್ತದೆ. ಸಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರು ಹೆಚ್ಚಾಗಿ ಮನೆಯ ಹೊರಾವರಣಕ್ಕಿಂತ ಮನೆಯ ಒಳಾವರಣ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಮನೆಯ ಹೊರಗಿನ ಕಾರ್ಯಗಳನ್ನು ಪುರುಷನೇ ನಿರ್ವಹಿಸುತ್ತಿದ್ದನು. ಈ ಹಿನ್ನೆಲೆಯಲ್ಲಿ ಹೆಚ್ಚಾಗಿ ಸ್ತ್ರೀ ವ್ಯಕ್ತಿನಾಮಗಳಲ್ಲಿ ವೃತ್ತಿವಾಚಿ ವಾರ್ಗಿಕಗಳು ಬಳಕೆಯಾಗುವುದಿಲ್ಲ.

ವಡ್ಡೆ+ಎರ್ರಿಸ್ವಾಮಿ = ವಡ್ಡರ ಎರ್ರಿಸ್ವಾಮಿ

ಅಗಸರ+ನಾಗಣ್ಣ = ಅಗಸರ ನಾಗಣ್ಣ (ಕ-ಅಗಸ ತೆ-ಸಾಕಲ)

ಬಡಿಗೆ+ರಾಮಾಂಜನಿ = ಬಡಿಗೆ ರಾಮಾಂಜನಿ (ಬಡಿಗೆ ಕೆಲಸ)

ಮಂಗಳ+ಹನುಮೇಶಿ = ಮಂಗಳ ಹನುಮೇಶಿ (ಹಜಾಮ)

೩. ವ್ಯಕ್ತಿವಾಚಿಗಳು

ಕೆಲವು ಮನೆತನಗಳಲ್ಲಿ ಆಗಿ ಹೋದ ಪ್ರಸಿದ್ಧ ಪುರುಷರ ಅಥವಾ ರಾಜಕೀಯ ವ್ಯಕ್ತಿಗಳ, ಚಲನಚಿತ್ರ ನಟರ, ಕ್ರಿಡಾಪಟುಗಳ ಹೆಸರುಗಳು ಚಾಲ್ತಿಯಲ್ಲಿವೆ.

೧. ರಾಜಶೇಖರರೆಡ್ಡಿ   ೫. ಚಿರಂಜೀವಿ

೨. ಬಾಲಕೃಷ್ಣ   ೬. ನಾಗಾರ್ಜುನ

೩. ನಾಗೇಶ್ವರರಾವ್   ೭. ಶ್ರೀಕಾಂತ

೪. ಹರಿಕೃಷ್ಣ   ೮. ಸಚಿನ್

ಮುಂತಾದ ಹೆಸರುಗಳು ಆದೋನಿ ಪರಿಸರದಲ್ಲಿ ಕಾಣಬಹುದಾಗಿದೆ.

೪. ವಸ್ತುವಾಚಿ

ಕೆಲವು ವಸ್ತುಗಳ ಸಂಬಂಧ ಮತ್ತು ಬಳಕೆಗಳಿಂದಾಗಿಯೂ ಅವು ವ್ಯಕ್ತಿ ಮನೆತನದ ಹೆಸರುಗಳಂತೆ ಅಂಟಿಕೊಂಡಿರುತ್ತವೆ. ಒಂದು ಮನೆತನಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ಯಾವುದು ಪ್ರಧಾನವಾಗಿ ಜನರ ಗಮನ ಸೆಳೆಯುವುದೋ ಅದು ಅವರ ಮನೆತನದ ಹೆಸರಾಗುತ್ತದೆ.

ಈಲಕತಿ+ರಾಮಕ್ಕ = ಈಲಕತ್ತಿ ರಾಮಕ್ಕ (ಕನ್ನಡ-ಈಳಿಗೆ ತೆಲುಗು-ಕತ್ತಿಪೀಟ)

ನೊಣಪೇಟ+ರಂಗಪ್ಪ = ನೊಣಪೇಟೆ ರಂಗಪ್ಪ (ಕ-ನವಣೆ ತೆ-ಕೊರ್ರಲು)

ಜ್ವಾಳ+ರಾಮಪ್ಪ = ಜ್ವಾಳ ರಾಮಪ್ಪ (ಕ-ಜ್ವಾಳ ತೆ-ಜೊನ್ನಲು)

ಕಲ್ಲು+ಅಪ್ಪ = ಕಲ್ಲಪ್ಪ (ಕ-ಕಲ್ಲು ತೆ-ರಾಯ)

೫. ಶಿಲಾಸೂಚಕ

ಶಿಲಾಸೂಚಕವು ಕಲ್ಲನ್ನು ಸೂಚಿಸುವಂತಹ ಸ್ಥಳನಾಮಗಳೊಂದಿಗೆ ವ್ಯಕ್ತಿನಾಮಗಳು ಬಳಕೆಯಲ್ಲಿವೆ.

ದೊಣೆಕಲ್+ವೀರಯ್ಯ = ದೊಣೇಕಲ್ ವೀರಯ್ಯ

ಕಲ್ಲೂರು+ರಾಧಕೃಷ್ಣ = ಕಲ್ಲೂರು ರಾಧಕೃಷ್ಣ

ನಿಂಬಗಲ್ಲು+ತಿಮ್ಮಪ್ಪ = ನಿಂಬಗಲ್ಲು ತಿಮ್ಮಪ್ಪ

೬. ವರ್ಣ ಸೂಚಕಗಳು

ವರ್ಣ ಸೂಚಕಗಳು ಬಣ್ಣವನ್ನು ಸೂಚಿಸುವಂತಹ ವ್ಯಕ್ತಿನಾಮಗಳು.

ಕರಿ+ಅಪ್ಪ = ಕರ‍್ರೆಪ್ಪ (ಕ-ಕರಿ ತೆ-ನಲುಪು)

ಕರಿ+ಬಸಪ್ಪ = ಕರಿಬಸಪ್ಪ

ಕರಿ+ಅನ್ನ = ಕರ‍್ರೆನ್ನ (ಕ-ಕರಿ ತೆ-ಅನ್ನ)

ಪರಿಮಾಣ ಸೂಚಕಗಳು : ವ್ಯಕ್ತಿನಾಮ ಪ್ರಮಾಣವನ್ನು ಸೂಚಿಸುತ್ತವೆ. ಆದರೆ ಆ ಪ್ರಮಾಣಕ್ಕೆ ತಕ್ಕಂತೆ ವ್ಯಕ್ತಿಗಳು ಇರುತ್ತಾರೆಂಬ ನಿಯಮವಿಲ್ಲ.

ಚಿಕ್ಕ+ಈರಪ್ಪ = ಚಿಕ್ಕೀರಪ್ಪ (ಕ-ಚಿಕ್ಕ ತೆ-ಚಿನ್ನ)

ದೊಡ್ಡ+ಈರಪ್ಪ = ದೊಡ್ಡೀರಪ್ಪ (ಕ-ದೊಡ್ಡ ತೆ-ಪೆದ್ದ)

ಸಂಖ್ಯಾಸೂಚಕಗಳು :

ಎರಡಕರೆ+ದಾಸರಯ್ಯ = ಎರಡಕರೆದಾಸರಯ್ಯ (ಕ-ಎರಡು ತೆ-ರೆಂಡು)

ಐದುಕಲ್ಲು+ಸದಾಶಿವಯ್ಯ = ಐದುಕಲ್ಲು ಸದಾಶಿವಯ್ಯ (ಕ-ಐದುರಲ್ಲು ತೆ-ಐದುರಾಳ್ಳು)

ಶರೀರ ಅವಯವ ಸೂಚಕಗಳು :

ಸೊಂಚುಸೆಯ್ಯಿ+ಎರನ್ನ = ಸೊಂಚುಸೆಯ್ಯಿ ಎರನ್ನ (ಕ-ಸೊಂಚು ತೆ-ವಂಗಿನ)

ಸೊಟ್ಟಕಾಲು+ಸಿದ್ದಣ್ಣ = ಸೊಟ್ಟಕಾಲು ಸಿದ್ದಣ್ಣ (ಕ-ಸೊಟ್ಟ ತೆ-ವಂಕರ)

ಗುಡ್ಡಿ+ನಿಂಗನ್ನ = ಗುಡ್ಡಿನಿಂಗನ್ನ (ಕ-ಕುಲ್ಡ ತೆ-ಗುಡ್ಡಿ).

ಮತಸೂಚಕಗಳು

ಬಸವಮತ ಪ್ರಭಾವ : ಬಸವ ಮತ ಒಂದಾನೊಂದು ಕಾಲದಲ್ಲಿ ಕರ್ನಾಟಕದಲ್ಲಿ ಎಲ್ಲಾ ಪಸರಿಸಿತ್ತು. ಆ ಕಾಲದಲ್ಲಿ ಜಗಜ್ಯೋತಿ ಬಸವೇಶ್ವರರ ಪ್ರಭಾವ ಈ ಪ್ರಾಂತದ ಮೇಲೆ ಹೆಚ್ಚಾಗಿದೆ. ಅದರ ಪರಿಣಾಮ ಈಗಲೂ ತಮ್ಮ ಮಕ್ಕಳಿಗೆ ನಾಮಕರಣ ಮಾಡುತ್ತಿದ್ದಾರೆ. ತಾತ, ಮುತ್ತಾತನ ಹೆಸರುಗಳು ಮೊಮ್ಮಕ್ಕಳಿಗೆ ನಾಮಕರಣ ಮಾಡುವ ಆಚಾರವಿರುವುದರಿಂದ ಇಂದಿಗೂ ಕೂಡ ಆ ಮತ ಪ್ರಭಾವದೊಂದಿಗೆ ಇರುವ ಹೆಸರುಗಳು ಕಂಡುಬರುತ್ತವೆ.

ಬಸಣ್ಣ, ಬಸಪ್ಪ, ಬಸವರಾಜು, ಬಸವನಗೌಡ, ಬಸವೇಶ್ವರ ಮುಂತಾದವು.

ಶೈವಮತ ಪ್ರಭಾವ : ದೇಶದಲ್ಲಿ ಶಿವನಿಗೆ ಸಂಬಂಧಿಸಿದ ಹೆಸರುಗಳಲ್ಲಿ ಈ ಮತ ಪ್ರಭಾವ ಇದೆ ಎಂದು ಹೇಳಲಾಗುವುದಿಲ್ಲ. ಆದರೂ ಆ ಪ್ರಭಾವದೊಂದಿಗೆ ನಾಮಕರಣ ಮಾಡಿದ ಹೆಸರುಗಳು ಇಲ್ಲಿ ಹೆಚ್ಚಾಗಿಯೇ ಬಳಕೆಯಲ್ಲಿವೆ.

ನಂಜುಂಡ, ನಂಜುಂಡಪ್ಪ, ಪರಮೇಶ್ವರಪ್ಪ, ಮಲ್ಲಯ್ಯ, ಮಲ್ಲಪ್ಪ, ಮಲ್ಲೇಶಿ, ರುದ್ರಪ್ಪ, ವಿರುಪಾಕ್ಷಿ, ವಿರುಪಾಕ್ಷಪ್ಪ, ವಿರುಪಾಕ್ಷಯ್ಯ, ಶಂಕರಪ್ಪ, ಶಿವಪ್ಪ.

ದೇವತೆ ಸೂಚಕಗಳು : ಅಕ್ಕಮ್ಮ, ಹುಲಿಗೆಮ್ಮ, ಸುಂಕಲಮ್ಮ, ಸಂಕಮ್ಮ, ಮಾರೆಮ್ಮ, ಮಾರೆಕ್ಕ ಮುಂತಾದವುಗಳು ಪ್ರಾದೇಶಿಕ ದೇವತೆಗಳಾದ ಉರುಕುಂದಪ್ಪ, ಉಚ್ಚಾಲಪ್ಪ, ಕೊಲ್ಲಪ್ಪ, ಕೊಲ್ಲಮ್ಮ, ಮೈಲಾರಪ್ಪ, ಮೈಲಾರಮ್ಮ ಮುಂತಾದ ದೇವತೆಗಳು ವ್ಯಕ್ತಿನಾಮಗಳು ಇಲ್ಲಿ ಬಳಕೆಯಾಗುತ್ತಿವೆ.

ಕನ್ನಡ ಸಂಬಂಧವಾಚಕಗಳೊಂದಿಗೆ ಬಳಕೆಯಲ್ಲಿರುವ ವ್ಯಕ್ತಿನಾಮಗಳು

ಅಕ್ಕ, ಅಮ್ಮ, ಅಪ್ಪ, ಅಯ್ಯ : ಈ ಸಂಬಂಧ ಸೂಚಕ ಪದಗಳ ನಾಮಗಳನ್ನು ಕನ್ನಡ ಮಾತೃಭಾಷೆಯಾಗಿರುವವರು. ಕನ್ನಡ ಮಾತೃಭಾಷೆಯಾಗಿಲ್ಲದವರು ಸಹ ಈ ಪ್ರಾಂತದಲ್ಲಿ ಬಳಕೆ ಮಾಡುತ್ತಿದ್ದಾರೆ.

೧. ಯವ್ವನವನ್ನು ಸೂಚಿಸುವಂತಹ ನಾಮಗಳು : ಅಕ್ಕ, ಅಣ್ಣ / ಅನ್ನ

ಅಂಬಕ್ಕ, ಕಾಡಕ್ಕ, ತಿಪ್ಪಕ್ಕ, ರಾಮಕ್ಕ

ಗಂಗಣ್ಣ / ಗಂಗನ್ನ, ದೆವಣ್ಣ / ದೇವನ್ನ, ಪೊತಣ್ಣ / ಪೋತನ್ನ

೨. ಯವ್ವನವನ್ನು ದಾಟಿದ ಬಗ್ಗೆ ಸೂಚಿಸುವ ವ್ಯಕ್ತಿನಾಮಗಳು : ಅಪ್ಪ / ಅಯ್ಯ, ಅಮ್ಮ, ರಾಮಪ್ಪ, ಗುಡ್ಡಪ್ಪ, ತಿಪ್ಪಯ್ಯ, ಕಾಡಮ್ಮ, ತಿಪ್ಪಮ್ಮ, ತಾಯಮ್ಮ ಮುಂತಾದವು.

- **ಅಪ್ಪ** : ಈ ರೂಪವನ್ನು ತೆಲುಗಿನ ಅಯ್ಯ ಪದಕ್ಕೆ ಸಮಾನಾರ್ಥದಲ್ಲಿ ಬಳಕೆಯಲ್ಲಿದೆ. ಈ ಭಾಗದಲ್ಲಿ 'ಅಪ್ಪ'ವನ್ನು ಸೇರಿಸಿ ನಾಮಕರಣ ಮಾಡುವುದು ಬಹಳ ಹೆಚ್ಚಾಗಿ ಕಂಡುಬರುತ್ತದೆ.

ದೊಣಪ್ಪ, ರಾಮಪ್ಪ, ಹನುಮಂತಪ್ಪ, ನಾಗಪ್ಪ, ಗಾದಿಲಿಂಗಪ್ಪ, ಮಲ್ಲಪ್ಪ.

- **ಗುಡ್ಡ** : (ಕ-ಗುಡ್ಡ = ತೆ-ಕೊಂಡ)

ಗುಡ್ಡದೊಂದಿಗೆ ಕೂಡಿದ ಕೆಲವು ಹೆಸರುಗಳಿವೆ.

ಗುಡ್ಡಪ್ಪ, ಗುಡ್ಡಮ್ಮ ಮುಂತಾದವು.

- **ಗುರು** : ಜಗಜ್ಯೋತಿ ಬಸವೇಶ್ವರರ ಕಾಲದಿಂದ ಗುರುಬೋಧವನ್ನು ತೆಗೆದುಕೊಳ್ಳುವುದು ಇವತ್ತಿನವರೆಗೂ ಇದೆ. ಈ ಪ್ರಭಾವದಿಂದ ಗುರಪ್ಪ, ಗುರಮ್ಮ, ಗುರುಸ್ವಾಮಿ, ಗುರುಮೂರ್ತಿ, ಗುರುಬಸಪ್ಪ, ಗುರುಬಸವರಾಜು ಮುಂತಾದ ಹೆಸರುಗಳಿವೆ. ಒಟ್ಟಾರೆಯಾಗಿ ರಾಷ್ಟ್ರದೆಲ್ಲೆಡೆ ಇದ್ದರೂ ಈ ಪ್ರಾಂತದಲ್ಲೂ ಸಹ ಹೆಚ್ಚಾಗಿ ಬಳಕೆಯಲ್ಲಿವೆ. ಇತ್ತೀಚೆಗೆ ಮಂತ್ರಾಲಯ ರಾಘವೇಂದ್ರಸ್ವಾಮಿ ದರ್ಶನ ಪಡೆದುಕೊಂಡು ಕೆಲವು ಜನ ಮೇಲಿನ ಹೆಸರುಗಳನ್ನು ಇಟ್ಟುಕೊಳ್ಳುವುದು ಕಂಡುಬಂದಿದೆ.

- **ಗೌಡು** : ಕೆಲವು ಜಾತಿಯವರು (ಕುರುವ, ಜಂಗಮ, ಲಿಂಗಾಯಿತರು) ಗೌಡವನ್ನು ಸೇರಿಸಿ ನಾಮಕರಣ ಮಾಡುವುದಿದೆ. ಪ್ರಸ್ತುತ ಕನ್ನಡ ಮಾತೃಭಾಷೆಯಲ್ಲದವರು ಸಹ ಈ ಹೆಸರುಗಳನ್ನು ಇಟ್ಟುಕೊಳ್ಳುವುದಿದೆ.

ನಾಗರಾಜುಗೌಡು, ಪಂಪನಗೌಡ, ಬಸವನಗೌಡ, ರಾಮಲಿಂಗನಗೌಡು, ಲಿಂಗನಗೌಡು ಮುಂತಾದವು.

- **ಸಾಕು** : (ಕ-ಸಾಕು ತೆ-ಚಾಲು) ಪೂರ್ವದಲ್ಲಿ ಸಂತಾನ ನಿರೋಧಕ ಶಸ್ತ್ರಚಿಕಿತ್ಸೆ ಇದ್ದಿಲ್ಲ ಎನ್ನುವ ಸಂಗತಿ ಎಲ್ಲರಿಗೆ ತಿಳಿದಿರುವಂತಹ ಸಂಗತಿ. ಸಂತಾನ ಹೆಚ್ಚಾಗಿದ್ದವರು ತಮಗೆ ಸಂತಾನ ಸಾಕು ಚಾಲು ಅಂದುಕೊಳ್ಳುವವರು ತಮ್ಮ ಕೊನೆಯ ಮಗುವಿಗೆ ಸಾಕಮ್ಮ/ಸಾಕಪ್ಪ (ಚಾಲಮ್ಮ-ಚಾಲಪ್ಪ) ಎಂದು ಹೆಸರುಗಳನ್ನು ಇಟ್ಟುಕೊಂಡರೆ ಸಂತಾನವಾಗುವುದಿಲ್ಲ ಎನ್ನುವುದು ಒಂದು ನಂಬಿಕೆ ಇತ್ತು. ನಂತರ ಈ ಆಚಾರಣೆ, ಇದ್ದರೂ ಇಲ್ಲದೇ ಇದ್ದರೂ ಅಜ್ಜ, ಅಜ್ಜಿಯರ ಹೆಸರು ಇಡುವ ಪದ್ಧತಿ ಇರುವುದರಿಂದ ಈ ಹೆಸರು ಇಂದಿಗೂ ಉಳಿದುಕೊಂಡಿದೆ.

ಅಡ್ಡಹೆಸರು : ಅಡ್ಡ ಹೆಸರುಗಳು ವ್ಯಕ್ತಿನಾಮಾಧ್ಯಯನದ ಬಹು ಸ್ವಾರಸ್ಯಕರವಾದ ಭಾಗವಾಗಿದೆ. ಅಡ್ಡ ಹೆಸರೆಂದರೇನು? ಯಾವ ಕಾರಣದಿಂದ ಅಡ್ಡ ಹೆಸರು ಕರೆಯಲ್ಪಡುತ್ತದೆ? ಅದರ ಸ್ವರೂಪ, ಬಳಕೆಯ ಆವರಣ ಮೊದಲಾದ ಸಂಗತಿಗಳ ಬಗೆಗೆ ನಮ್ಮಲ್ಲಿ ಚರ್ಚೆಗಳಿವೆ. ಅಡ್ಡ ಹೆಸರಿನ ಬಗೆಗೆ ಭೌಗೋಳಿಕವಾಗಿ ಭಿನ್ನ ಪರಿಕಲ್ಪನೆಗಳಿವೆ. ಈ ವೈವಿಧ್ಯಮಯ ಭಾವನೆಗಳು ಅಡ್ಡಹೆಸರನ್ನು ಸಂಕೀರ್ಣಗೊಳಿಸಿವೆ.

ನಿರ್ದೇಶನ ನಾಮದ ನಂತರ ವ್ಯಕ್ತಿಗೆ ಯಾವುದೇ ಘಟ್ಟದಲ್ಲಿ ಬಂದು ಸೇರುವ ಹೆಸರೇ ಅಡ್ಡ ಹೆಸರು. ವ್ಯಕ್ತಿಗೆ ಮಧ್ಯಂತರದಲ್ಲಿ ಅಥವಾ ಅರ್ಧದಲ್ಲಿ ಬಂದು ಅಂಟುವ ಕಾರಣದಿಂದಾಗಿ ಈ ಹೆಸರನ್ನು 'ಅರ್ಧ ಹೆಸರು' ಎಂದು ಅನ್ವರ್ಥಕವಾಗಿ ಕರೆಯಲಾಗಿದ್ದು, ಅರ್ಧ ಹೆಸರು ಎಂಬುದೇ ಅಡ್ಡ ಹೆಸರು ಎಂದಾಗಿರಬಹುದು. 'ಅರ್ಧ' ತತ್ಸಮ ಪದದ ತದ್ಭವ ರೂಪ 'ಅಡ್ಡ'. ಕನ್ನಡದಲ್ಲಿ ಅಡ್ಡ ಎಂಬ ಪದಕ್ಕೆ ನಾನಾರ್ಥಗಳಿವೆಯಾದರೂ 'ಮಧ್ಯ' ಎಂಬ ಅರ್ಥವೂ ಇದೆ. ಅಡ್ಡ ಮಾತನಾಡಬೇಡ ಅಡ್ಡ ಬಾಯಿ ಹಾಕಬೇಡ ಎಂದರೆ ಮಾತಿನ ಮಧ್ಯ ಮಾತನಾಡಬೇಡ ಎಂದರ್ಥ. ಈ ಹಿನ್ನೆಲೆಯಲ್ಲಿ 'ಅಡ್ಡಹೆಸರು' ವ್ಯಕ್ತಿಗೆ ಮಧ್ಯದಲ್ಲಿ ಸೇರುವ ಹೆಸರು ಎಂದು ಹೇಳಬಹುದು. "ಅಡ್ಡಹೆಸರು ಎಂಬ ಪದ ನೇರವಲ್ಲದ ಹೆಸರು ಎಂಬ ಅರ್ಥದಲ್ಲಿ ಬಂದಿರಬಹುದು. ಇಲ್ಲವೆ ಅರ್ಧಹೆಸರು ಅಡ್ಡ ಹೆಸರಾಗಿರಬಹುದು."[೬]

'ಅಡ್ಡಹೆಸರು' ಬಗೆಗಿನ ಪರಿಕಲ್ಪನೆ ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಬೇರೆ ಬೇರೆಯಾಗಿದೆ. ಉತ್ತರ ಕರ್ನಾಟಕದಲ್ಲಿ ಅಡ್ಡಹೆಸರು ಎಂಬುದನ್ನು ಇಂಗ್ಲೀಷ್‌ನ 'Sur Name' ಎಂಬ ಅರ್ಥದಲ್ಲಿಯೂ ದಕ್ಷಿಣ ಕರ್ನಾಟಕದಲ್ಲಿ ಅಡ್ಡಹೆಸರು ಎಂಬುದನ್ನು ಇಂಗ್ಲೀಷ್‌ನ 'Nick name' ಎಂಬ ಅರ್ಥದಲ್ಲಿಯೂ ಸಂವಾದಿಯಾಗಿ ಬಳಸಲಾಗುತ್ತದೆ. 'Surname' ಮತ್ತು 'Nickname' ಎಂಬ ಪದಗಳು ಒಂದಕ್ಕೊಂದು ಪರ್ಯಾಯ ಸೂಚಕಗಳಾಗಿ ಬಳಸಲ್ಪಡುತ್ತವೆ. ಇಲ್ಲಿ ಅಡ್ಡಹೆಸರುಗಳು ವ್ಯಕ್ತಿಯ ಯಾವುದಾದರೊಂದು ವೈಶಿಷ್ಟ್ಯವನ್ನು ಅನುಲಕ್ಷಿಸಿ ಹುಟ್ಟಿಕೊಳ್ಳುತ್ತವೆ. ವ್ಯಕ್ತಿಯ ಆಕಾರದ ಯಾವುದೋ ದೋಷ ಅಥವಾ ವೈಶಿಷ್ಟ್ಯವನ್ನು ಒಮ್ಮೆ ಯಾರೋ ನಾಲ್ಕಾರು ಜನರ ಮುಂದೆ ಕುಚೋದ್ಯಕ್ಕಾಗಿ ಕರೆದುದು ಅಡ್ಡಹೆಸರಾಗಿ

ವ್ಯಕ್ತಿಗೆ ಅಂಟಿಬಿಡುತ್ತದೆ. ಸಾಮಾನ್ಯವಾಗಿ ಅಡ್ಡಹೆಸರುಗಳು ವ್ಯಕ್ತಿಯ ಶಾರೀರಿಕ ಲಕ್ಷಣ, ಎತ್ತರ, ಬಣ್ಣ, ಗುಣ, ರೂಪ, ನೋಟ, ನಡಿಗೆ, ಮಾತು, ಧ್ವನಿ ಹಾಗೂ ಕುಡಿಯುವುದು. ಸೇದುವುದು, ತಿನ್ನುವುದು ಜೂಜು, ಜಂಬ, ಚಾಡಿ ಇವೇ ಮೊದಲಾದ ವರ್ತನೆಗಳು ಜನರಿಗೆ ಎದ್ದುಕಾಣುವ ಗುಣಗಳು. ಅವುಗಳನ್ನೇ ದೊಡ್ಡದು ಮಾಡಿ ಅಡ್ಡಹೆಸರು ಇಡುತ್ತಾರೆ. ಹೀಗೆ ಇಟ್ಟ ಅಡ್ಡಹೆಸರು ಜನರಲ್ಲಿ ಬಳಕೆಗೆ ಬಂದು ವ್ಯಕ್ತಿಯ ಅನಧಿಕೃತ ನಾಮವಾಗಿ ಬಳಕೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ 'ಅಡ್ಡಹೆಸರು' ಅಧಿಕೃತ ನಾಮದ ಭಾಗವಾಗಿಯೂ ಪರಿಣಮಿಸುತ್ತದೆ. ಒಮ್ಮೆ ವ್ಯಕ್ತಿಗೆ ಅಡ್ಡಹೆಸರು ಅಂಟಿದರೆ ಅದರಿಂದ ಬಿಡುಗಡೆಯೇ ಇಲ್ಲ. ವ್ಯಕ್ತಿ ಎದುರಿಗೆ ಇರುವಾಗ ಅಡ್ಡಹೆಸರಿನಿಂದ ಕರೆದರೆ ಸುಮ್ಮನಿರುವುದಿಲ್ಲ ಪ್ರತಿಭಟಿಸಬಹುದು. ಆ ಕಾರಣಕ್ಕಾಗಿ ಅಡ್ಡಹೆಸರು ವ್ಯಕ್ತಿಯ ಗೈರುಹಾಜರಿಯಲ್ಲಿ ಬಳಸಲ್ಪಡುತ್ತದೆ. ಉದಾಹರಣೆಗೆ ತುಂಬಾ ಕಡಿಮೆ ಮಾತಾಡುವ ವ್ಯಕ್ತಿಯನ್ನು 'ಮೂಕ' ಎಂದು ಅಡ್ಡಹೆಸರಿನಿಂದ ಸಂಬೋಧಿಸುವುದುಂಟು. ವ್ಯಕ್ತಿ ಹಾಜರಿ ಇರುವಾಗ ಮೂಕ ಎಂದು ಕರೆದರೆ ವಿರೋಧಿಸಬಹುದು ಎಂದು ಹೆದರಿ ಆ ಕ್ಷಣ ಜನ ಸುಮ್ಮನೆ ಇರಬಹುದು. ಆದರೆ ಗೈರುಹಾಜರಿಯಲ್ಲಿ ಆ ವ್ಯಕ್ತಿಯನ್ನು ಮೂಕ ಎಂದೇ ಸಂಬೋಧಿಸಬಹುದು. ಕೆಲವು ಸಂದರ್ಭಗಳಲ್ಲಿ ವ್ಯಕ್ತಿಯ ಎದುರಿಗೆ ಇರುವಾಗ ಅಡ್ಡಹೆಸರಿನಿಂದ ಸಂಬೋಧಿಸುತ್ತಾರೆ. ಆದರೂ ಅಡ್ಡಹೆಸರಿನ ಸಂಬೋಧನೆಗೆ ತುಂಬಾ ಮಿತಿಗಳಿವೆ. ಈ ಲಕ್ಷಣಗಳು ಆದೋನಿ ಪರಿಸರದಲ್ಲಿ ಕಾಣಬರುತ್ತಿರುವಂತೆ. ಕರ್ನಾಟಕದ ಇತರ ಪರಿಸರಗಳಲ್ಲೂ ಗೋಚರಿಸಬಹುದು.

ಆದೋನಿ ಪರಿಸರದಲ್ಲಿ ಅಡ್ಡಹೆಸರುಗಳು ಸಾಮಾನ್ಯವಾಗಿ ಶಾರೀರಿಕ ಅಂಗ ವೈಶಿಷ್ಟ್ಯಗಳನ್ನು ಅನುಲಕ್ಷಿಸಿ ಹುಟ್ಟಿಕೊಂಡ ಅನ್ವರ್ಥನಾಮಗಳಾಗಿರುತ್ತವೆ. ಅಧ್ಯಯನದ ಅನುಕೂಲಕ್ಕಾಗಿ ಅಡ್ಡ ಹೆಸರುಗಳನ್ನು ಈ ರೀತಿ ವರ್ಗೀಕರಿಸಿಕೊಳ್ಳಬಹುದು.

೧. ಶರೀರವಾಚಿ ಅಡ್ಡಹೆಸರು

೨. ಪ್ರಾಣಿವಾಚಿ ಅಡ್ಡಹೆಸರು

೩. ವಸ್ತುವಾಚಿ ಅಡ್ಡಹೆಸರು

೪. ಗುಣವಾಚಿ ಅಡ್ಡಹೆಸರು

೫. ವ್ಯಕ್ತಿವಾಚಿ ಅಡ್ಡಹೆಸರು

೬. ಇತರೆ ಅಡ್ಡಹೆಸರು

೧. ಶರೀರವಾಚಿ ಅಡ್ಡಹೆಸರು

ಶಾರೀರಿಕ ಲಕ್ಷಣಗಳನ್ನು ನೇರವಾಗಿ ಸೂಚಿಸುವಂತ ಹೆಸರುಗಳು ಶರೀರವಾಚಿ ಅಡ್ಡಹೆಸರುಗಳಾಗಿವೆ.

ಅಡ್ಡಹೆಸರು	ವಿವರಣೆ
ಕುಂಟ / ಟಿ	ಕಾಲು ಊನವಾದವನು / ಳು
ಕಿವುಡ / ಡಿ	ಕಿವಿ ಮಂದವಾಗಿರುವವನು / ಳು
ಮೂಕ / ಕಿ	ಕಡಿಮೆ ಮಾತನಾಡುವವನು / ಳು
ರೊಡ್ಡ / ಡ್ಡಿ	ಎಡಗೈ ಮುಂದು ಬಳಸುವವನು / ಳು
ಕುಲ್ಡ / ಲ್ಡಿ	ಕಣ್ಣಿನ ದೋಷವುಳ್ಳವನು / ಳು
ಕಣ್ಣುಬಡಕ / ಕಿ	ಸದಾ ಕಣ್ಣು ರೆಪ್ಪೆ ಬಡಿಯುವವನು / ಳು
ಗಿಡ್ಡ / ಡ್ಡಿ	ಕುಳ್ಳಗೆ ಇರುವವನು / ಳು
ಲಂಬು	ತೆಳ್ಳಗೆ ಉದ್ದವಾಗಿರುವವನು / ಳು
ಮೂಗ / ಗಿ	ಮೂಗಿನ ಹೊರಳು ಅಗಲವಾಗಿರುವವನು / ಳು
ಗುಕ್ಕ / ಗುಕ್ಕಿ	ಉಗ್ಗು ತೊದಲು ಮಾತನಾಡುವವನು / ಳು
ಬೋಡ / ಡಿ	ತಲೆಯಲ್ಲಿ ಕೂದಲು ಇಲ್ಲದಿರುವವನು / ಳು
ಎಳವ / ವಿ	ತೆಳ್ಳನೆ ಕಾಲು ಇರುವವನು / ಳು
ಸೊಟ್ಟ / ಟ್ಟಿ	ಡೊಂಕು ನಡೆಯುವವನು / ಳು
ಸ್ವಾಟ್ಕರುಕ / ಕಿ	ತುಟಿ ಹರಿದಿರುವವನು / ಳು.

೨. ಪ್ರಾಣಿವಾಚಿ ಅಡ್ಡಹೆಸರುಗಳು

ವ್ಯಕ್ತಿಯ ವಿಶೇಷ ಗುಣಗಳನ್ನು ಅಥವಾ ದೋಷಗಳನ್ನು ಪ್ರಾಣಿಗಳ ಸಹಜ ಲಕ್ಷಣಗಳೊಂದಿಗೆ ಆರೋಪ ಮಾಡಿ ಇಟ್ಟ ಅನ್ವರ್ಥಕ ನಾಮಗಳೇ ಪ್ರಾಣಿವಾಚಿ ಅಡ್ಡಹೆಸರುಗಳು.

ಅಡ್ಡಹೆಸರು	ವಿವರಣೆ
ಒಂಟೆ	ಉದ್ದವಾಗಿರುವವನು / ಳು
ಜಿರಾಫೆ	ಎತ್ತರವಾಗಿದ್ದು, ಕತ್ತು ಉದ್ದವಾಗಿರುವವನು / ಳು

ಆನೆ (ಆನೆಮರಿ)	ಕಪ್ಪೆ ವಟಗುಟುವಂತೆ ಸದಾ ವಟವಟ ಎಂದು ಮಾತನಾಡುವವನು/ಳು
ಕೋಳಿ	ತೆಳ್ಳಗೆ ಇರುವವನು / ಳು
ನಾಟಿಕೋಳಿ	ತೆಳ್ಳಗೆ ಇದ್ದರೂ ಚೆನ್ನಾಗಿ ಕೆಲಸ ಮಾಡುವವನು / ಳು
ಕರಡಿ	ಮೈತುಂಬಾ ಕೂದಲು ಇರುವವನು / ಳು
ನಾಯಿ	ಬಾಯಿಗೆ ಬದ್ದಂಗೆ ಮಾತನಾಡುವವನು / ಳು
ಕೋಣ/ಎಮ್ಮೆ	ದಪ್ಪಗಿರುವವನು / ಳು
ಗೂಬೆ	ದೊಡ್ಡ ಕಣ್ಣು ಇರುವವನು / ಳು
ಗೋರಿಲ್ಲಾ	ಆದಿಮಾನವ ಮುಖ ಚಹರೆವುಳ್ಳವನು / ಳು
ಮುಂಗಸಿ	ಗುಮ್ಮನಂತೆ ಮುಖ ಲಕ್ಷಣ ಇರುವವನು / ಳು
ಗುಂಗಾಡಿ	ಕಣ್ಣಲ್ಲಿ ಹನಿ ನೀರಿಲ್ಲದೆ ಯಾವಾಗಲೂ ಅಳುವ ಸ್ವಭಾವವುಳ್ಳವನು/ಳು
ಮೊಸಳೆ	ತುಟಿ ಮುಚ್ಚಲಾರದಷ್ಟು ದೊಡ್ಡ ಹಲ್ಲು ಇರುವವನು/ಳು
ಗಂಗೆತ್ತು	ಯಾವಾಗಲೂ ಮನೆ ಮನೆ ಸುತ್ತುವವನು / ಳು.

ಮೇಲೆ ಸೂಚಿಸಿರುವ ಪ್ರಾಣಿವಾಚಿ ಅಡ್ಡಹೆಸರುಗಳು ಯಾವುದೇ ಒಂದು ನಿರ್ದಿಷ್ಟ ಕಾರಣದಿಂದ ಬರದೆ ಬೇರೆ ಬೇರೆ ಕಾರಣಗಳಿಂದಲೂ ಬರುವ ಸಾಧ್ಯತೆಗಳಿವೆ. ಕಾರ್ಯಕ್ಷೇತ್ರದಲ್ಲಿ ವಕ್ತೃಗಳು ನೀಡಿದ ಕಾರಣಗಳನ್ನು ಮಾತ್ರ ಇಲ್ಲಿ ಯಥಾವತ್ತಾಗಿ ದಾಖಲಿಸಲಾಗಿದೆ. ಪ್ರಾಣಿವಾಚಿ ಅಡ್ಡಹೆಸರುಗಳು ಇತರ ಬೇರೆ ಕಾರಣಗಳಿಂದಲೂ ವ್ಯಕ್ತಿಗೆ ಅಂಟಬಹುದು. ಉದಾಹರಣೆಗೆ 'ಮಲ್ಲಯ್ಯ' ಎಂಬ ಹೆಸರಿನ ವ್ಯಕ್ತಿ ಮೇಕೆ ಕಾಯಲು ಅಡವಿಗೆ ಹೋದ ಸಂದರ್ಭದಲ್ಲಿ ಕರಡಿ ಕಚ್ಚಿತ್ತು. ಆ ಕಾರಣದಿಂದ ಆ ವ್ಯಕ್ತಿಗೆ 'ಕಲ್ಡಿ (< ಕರಡಿ) ಎಂಬ ಅಡ್ಡಹೆಸರು ಬಂದಿದೆ. ಭೈರಪ್ಪ ಎನ್ನುವ ವ್ಯಕ್ತಿಗೆ ನಾಯಿ ಕಚ್ಚಿರುವುದರಿಂದ 'ನಾಯಿ' ಎಂಬ ಅಡ್ಡಹೆಸರಿನಿಂದ ಸಂಬೋಧಿಸುತ್ತಾರೆ. ವಿಶೇಷ ಘಟನಾವಳಿಗಳು ವ್ಯಕ್ತಿಯ ಅಧಿಕೃತ ನಾಮನಿರ್ದೇಶನಕ್ಕೆ ಕಾರಣವಾಗುವಂತೆ ಅಡ್ಡಹೆಸರಿನ ಬಳಕೆಗೂ ಪ್ರೇರಣೆಯಾಗಿವೆ.

ವಸ್ತುವಾಚಿ ಅಡ್ಡಹೆಸರುಗಳು

ವ್ಯಕ್ತಿಗಳನ್ನು ವಸ್ತುಗಳೊಂದಿಗೆ ಆರೋಪ ಮಾಡಿ ಇಟ್ಟ ಹೆಸರುಗಳು ವ್ಯಕ್ತಿವಾಚಿ ಅಡ್ಡಹೆಸರುಗಳಾಗಿವೆ.

ಅಡ್ಡಹೆಸರು	ವಿವರಣೆ
ಡೊಳ್ಳು	ದೊಡ್ಡ ಹೊಟ್ಟೆ ಇರುವವನು / ಳು
ಡ್ರೊಮ್ಮು/ಡ್ರಮ್ಮು	ದಪ್ಪಗೆ ಇರುವವನು / ಳು
ಸೊಡಾಗ್ಲಾಸ್	ಕಣ್ಣಿಗೆ ಚಸ್ಮ ಹಾಕಿರುವವನು / ಳು
ಕಡ್ಡಿಪುಡಿ/ಕಟ್ಲೆಪುಡಿ	ಸದಾ ಬಾಯಲ್ಲಿ ತಾಂಬೂಲ ತಿನ್ನುವವನು / ಳು
ದೊಣ್ಣೆ ಮೆಣಸಿನಕಾಯಿ	ಮೂಗು ದಪ್ಪನಾಗಿರುವವನು / ಳು
ಪಾಕೆಟ್	ಹೆಚ್ಚು ಸಾರಾಯಿ ಕುಡಿಯುವವನು / ಳು
ಕೊಲ್ಡು (< ಕೊರಡು)	ಮಂದವಾಗಿರುವವನು / ಳು

ವಸ್ತುವಾಚಿ ಅಡ್ಡಹೆಸರುಗಳು ಬೇರೆ ಕಾರಣಗಳಿಂದಲೂ ಅಂಟುತ್ತವೆ.

ಉದಾ. ಡೊಳ್ಳು ಚೆನ್ನಾಗಿ ಬಾರಿಸುವವನನ್ನು ಡೊಳ್ಳು ಎಂದು ಕರೆಯುತ್ತಾರೆ. ಡ್ರಮ್ಮು ಮಾರುವವರನ್ನು ಡ್ರಮ್ಮು ಎಂದು ಕರೆಯುತ್ತಾರೆ. ಈ ರೀತಿ ಬೇರೆ ಬೇರೆ ಕಾರಣಗಳಿಂದ ಅಡ್ಡಹೆಸರು ಚಾಲ್ತಿಯಲ್ಲಿವೆ.

ಗುಣವಾಚಿ ಅಡ್ಡಹೆಸರುಗಳು

ವ್ಯಕ್ತಿಯ ಗುಣ ಸ್ವಭಾವಗಳ ಪ್ರೇರಣೆಯಿಂದ ಇಟ್ಟ ಅಡ್ಡಹೆಸರುಗಳನ್ನು ಗುಣವಾಚಿ ಅಡ್ಡಹೆಸರುಗಳೆಂದು ಕರೆಯಬಹುದು.

ಅಡ್ಡಹೆಸರು	ವಿವರಣೆ
ಉಂಬ/ಬಿ	ಹೆಚ್ಚು ಊಟ ಮಾಡುವವನು / ಳು
ಗುಮ್ಮ/ಗುಮ್ಮಗುಸ್ಸ	ಯಾವಾಗಲೂ ಮಾತಾಡದೇ ಇರುವವನು / ಳು.
ಮೊಂಡ/ಡಿ	ಹಠ ಮಾಡುವವನು / ಳು
ಸ್ಟಂಟ್	ಒಂದು ಬಗೆಯ ಅಹಂಕಾರದಿಂದ ಬೀಗುವವನು / ಳು

ವ್ಯಕ್ತಿವಾಚಿ ಅಡ್ಡಹೆಸರುಗಳು

ಇತಿಹಾಸದಲ್ಲಿ ಆಗಿಹೋದ ವ್ಯಕ್ತಿಗಳ ಗುಣಸ್ವಭಾವಗಳು ಇತರ ವ್ಯಕ್ತಿಗಳಲ್ಲಿ ಕಾಣಿಸಿಕೊಂಡರೆ ಜನ ಆ ವ್ಯಕ್ತಿಗಳ ಹೆಸರನ್ನು ಅಡ್ಡಹೆಸರುಗಳಾಗಿ ಇಡುವುದುಂಟು.

<u>ಅಡ್ಡಹೆಸರು</u>	<u>ವಿವರಣೆ</u>
ಕುಂಬಕರ್ಣ	ಹೆಚ್ಚು ಊಟ ಮಾಡುವವನು, ಹೆಚ್ಚು ನಿದ್ರೆ ಮಾಡುವವನು.
ನಾರದ	ಒಬ್ಬರ ವಿಷಯ ಮತ್ತೊಬ್ಬರಿಗೆ ಹೇಳುವವನು.
ಶಕುನಿ	ಇಬ್ಬರ ಮಧ್ಯೆ ಜಗಳ ಇಡುವವನು.
ಕರಿಬಂಟ	ಕಪ್ಪಗೆ ಇರುವವನು.
ಕೃಷ್ಣ	ಒಬ್ಬರಿಗಿಂತ ಹೆಚ್ಚು ಜನರ ಪ್ರೇಯಸಿಯರನ್ನು ಹೊಂದಿದವನು.
ದ್ರೌಪದಿ	ಒಬ್ಬರಿಗಿಂತ ಹೆಚ್ಚು ಜನ ಪ್ರಿಯಕರರನ್ನು ಹೊಂದಿರುವವಳು.

ಈ ಅಡ್ಡಹೆಸರುಗಳು ವ್ಯಕ್ತಿತ್ವದ ಮೇಲೆ ನೇರ ಪರಿಣಾಮ ಬೀರುವುದರಿಂದ ಅಂದರೆ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವುದರಿಂದ ಈ ಹೆಸರುಗಳು ವ್ಯಕ್ತಿಯ ಹಾಜರಿಯಲ್ಲಿ ಬಳಸುವುದಿಲ್ಲ. ಕೆಲವೇ ಕೆಲವು ಜನರ ಮಧ್ಯ ತುಂಬಾ ಗೋಪ್ಯವಾಗಿ ಹೆಸರುಗಳು ಬಳಕೆಯಾಗುತ್ತಿರುತ್ತವೆ. ಬಹುತೇಕ ಇಂಥ ಅಡ್ಡಹೆಸರುಗಳು ವ್ಯಕ್ತಿಗೆ ಇರುವುದು ಗೊತ್ತಿಲ್ಲದೆ ಇರಲೂಬಹುದು.

ಇತರೆ ಅಡ್ಡಹೆಸರುಗಳು

ವ್ಯಕ್ತಿ ಜೀವನದಲ್ಲಿ ಆಕಸ್ಮಿಕ ಘಟನೆಯೂ ಅಡ್ಡಹೆಸರಿಗೆ ಪ್ರೇರಣೆಯಾಗಬಹುದು.

ಉದಾ : ಅಂಜಿನಿ ಎನ್ನುವ ವ್ಯಕ್ತಿ ಬೇಳೆ ಕದ್ದು ಸಿಕ್ಕಿದ್ದರಿಂದ ಆತನನ್ನು ದಾಲ್ ಎಂದು ಕರೆಯುತ್ತಾರೆ. ಕುರುಬ ಜನಾಂಗದಲ್ಲಿ ಯಾವುದೇ ವಿಷಯದಲ್ಲಿ ಮುಂದಾಳತ್ವ ವಹಿಸುವ ಬಸವರಾಜ ಎನ್ನುವಂತ ವ್ಯಕ್ತಿಯನ್ನು 'ಸಿದ್ದರಾಮಯ್ಯ' ಎಂದು ಕರೆಯುತ್ತಾರೆ. ಈ ರೀತಿ ಹಲವಾರು ಕಾರಣಗಳಿಂದ ಅಡ್ಡಹೆಸರುಗಳು ಬಳಕೆಯಲ್ಲಿವೆ.

ಅಡ್ಡಹೆಸರಿನ ಬಳಕೆಗೆ ಜಾತಿ, ವರ್ಗ, ವಯಸ್ಸು, ಲಿಂಗ, ಶಿಕ್ಷಣ, ಸಾಮಾಜಿಕ ಸ್ಥಾನಮಾನ, ನಡೆನುಡಿ ಇವೇ ಮೊದಲಾದ ಜೈವಿಕ ಅಂಶಗಳು ತುಂಬಾ ಪ್ರಮುಖವಾಗುತ್ತವೆ. ನಗರ ಪರಿಸರಕ್ಕಿಂತ ಗ್ರಾಮೀಣ ಪರಿಸರದಲ್ಲಿ ಅಡ್ಡಹೆಸರಿನ ಬಳಕೆ ಅಧಿಕವಾಗಿಯಿತ್ತದೆ. ಎಷ್ಟೋ ಜನರ ಅಧಿಕೃತ ನಾಮಗಳು ಮರೆಯಾಗಿ ಅಡ್ಡಹೆಸರುಗಳೇ ನಿಜನಾಮಗಳಾಗಿ ಪ್ರಚಾರ ಪಡೆದಿರುತ್ತವೆ. ಇದು ಗ್ರಾಮೀಣ ಜನರ ನಡುವಿನ ಸಲಿಗೆ ಮತ್ತು ಆತ್ಮೀಯತೆಯ ದ್ಯೋತಕವಾಗಿದೆ. ಪುರುಷರಿಗಿಂತ ಸ್ತ್ರೀಯರಲ್ಲಿ ಅಡ್ಡಹೆಸರಿನ ಬಳಕೆ ಕಡಿಮೆ ಎಂದು ತೋರುತ್ತದೆ. ಮಕ್ಕಳಲ್ಲಿ ಅಡ್ಡಹೆಸರಿನ ಪ್ರಯೋಗ ಅಧಿಕವಾಗಿದ್ದು, ಮಧ್ಯಮ ವಯಸ್ಕರಲ್ಲಿ ಸಾಧರಣವಾಗಿಯೂ, ವೃದ್ಧರಲ್ಲಿ ಅದರ ಬಳಕೆ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಕಡಿಮೆ ಮಟ್ಟದಲ್ಲಿರುತ್ತದೆ. ಪುರುಷ-ಪುರುಷ ಮಧ್ಯೆ, ಸ್ತ್ರೀ-ಸ್ತ್ರೀಯರ ಅಡ್ಡಹೆಸರಿನ ಬಳಕೆ ಜಾಸ್ತಿ. ನೇರ ಸಂಬೋಧನೆಯಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಅಡ್ಡಹೆಸರನ್ನು ಕರೆಯುವುದು ಬಹಳ ಕಡಿಮೆ. ಹಿರಿಯ ವಯಸ್ಸಿನವರು ಕಿರಿಯ ವಯಸ್ಸಿನವರನ್ನು ಕೆಲವೊಮ್ಮೆ ಕರೆಯಲೂಬಹುದು. ಸಾರ್ವಜನಿಕವಾಗಿ ಹಿರಿಯರು ಕಿರಿಯರನ್ನು ಅಡ್ಡಹೆಸರನ್ನು ಕರೆಯಬಹುದಾದರೂ, ಕಿರಿಯರು ಹಿರಿಯರನ್ನು ಕರೆಯುವುದಿಲ್ಲ. ಇಲ್ಲಿ ವ್ಯಕ್ತಿಗೆ ಅಪಮಾನ ಅಸಮಾಧಾನ ಆಗುವುದಿಲ್ಲವೆಂದಲ್ಲ, ಆಗುತ್ತದೆ ಆದರೂ ಕೆಲವು ಅನಿವಾರ್ಯ ಕಾರಣಗಳಿಂದ ಸುಮ್ಮನಿರುತ್ತಾನೆ. ಹಿರಿಯರ ಗೈರುಹಾಜರಿಯಲ್ಲಿ ಕಿರಿಯರು ಸಮಾನ ವಯಸ್ಕರ ಮುಂದೆ ಅಡ್ಡಹೆಸರಿನಿಂದ ಕರೆಯಬಹುದಷ್ಟೇ ಸಮಾನ ವಯಸ್ಕರ ನಡುವೆ ಅಡ್ಡಹೆಸರಿನ ಬಳಕೆ ಅಧಿಕವಾಗಿದ್ದು ಹಾಜರಿ ಮತ್ತು ಗೈರುಹಾಜರಿಯಲ್ಲಿ ಸಮಾನವಾಗಿ ಬಳಕೆ ಆಗಬಹುದು. ಪರಸ್ಪರರು ಸಮಾನ ವಯಸ್ಕರು ಮತ್ತು ಸಮಾನ ಮನಸ್ಕರಾಗಿರುವುದರಿಂದ ಇವರ ಮಧ್ಯೆ ಪ್ರತಿಭಟನೆಗಳು ಕಡಿಮೆಯೆಂದೇ ಹೇಳಬಹುದು. ಸ್ನೇಹಿತರ ನಡುವೆ ಹೆಚ್ಚು ಆತ್ಮೀಯತೆ ಮತ್ತು ಸಲಿಗೆ ಇದ್ದಾಗ, ಪ್ರೀತಿಯಿಂದ ಅಡ್ಡಹೆಸರನ್ನು ಕರೆಯುವುದುಂಟು. ಆಗ ಅಡ್ಡಹೆಸರು ಮುದ್ದು ಹೆಸರಾಗಿ ಬಳಕೆಯಾಗುತ್ತದೆ ಎಂಬುದು ಕುತೂಹಲಕರವಾದ ಸಂಗತಿಯಾಗಿದೆ.

"ಮೇಲ್ಜಾತಿಯವರು-ಮೇಲ್ವರ್ಗದವರು ಕೆಳಜಾತಿ-ಕೆಳವರ್ಗದವರನ್ನು ಬಹಿರಂಗವಾಗಿ ಅಡ್ಡಹೆಸರಿನಿಂದ ಕರೆಯಬಹುದಾದರೂ ಕೆಳಜಾತಿ-ಕೆಳವರ್ಗದವರು, ಮೇಲ್ಜಾತಿ-ಮೇಲ್ವರ್ಗದವರನ್ನು ಆ ರೀತಿ ಉಲ್ಲೇಖಿಸಬಹುದು. ವ್ಯಕ್ತಿಯ ಗೈರುಹಾಜರಿಯಲ್ಲಿ ಅಡ್ಡಹೆಸರು ಅಧಿಕೃತ ನಾಮದಂತೆ ವ್ಯಕ್ತಿಯನ್ನು ಸಮೂಹದಿಂದ ಪ್ರತ್ಯೇಕ ಮಾಡಿ ಗುರುತಿಸುವ ಉದ್ದೇಶವನ್ನು ಹೊಂದಿದೆಯಾದರೂ ಅಡ್ಡಹೆಸರಿನ ಬಗೆಗೆ ಜನರ ಅಥವಾ ವ್ಯಕ್ತಿಯ ಮನೋಭಾವನೆ ಋಣಾತ್ಮಕವಾಗಿರುವುದರಿಂದ ಅದರ ಬಳಕೆಗೆ ತುಂಬಾ ಮಿತಿಗಳು ಇವೆ."[೪]

ಅಡ್ಡಹೆಸರುಗಳು ಗ್ರಾಮಸಮಾಜಗಳಲ್ಲಿ ಬಹುವಾಗಿ ಸಿಗುತ್ತಿದ್ದು, ಅವು ಆ ಜನರ ಕಲ್ಪನಾ ಸಾಮರ್ಥ್ಯಕ್ಕೂ, ಹಾಸ್ಯಶೀಲಕ್ಕೂ ಸಾಕ್ಷಿಯಾಗಿವೆ. ವ್ಯಂಗ್ಯ, ಕಟಕಿ, ವಿನೋದಗಳಿಂದ ಕೂಡಿರುವ ಅಡ್ಡಹೆಸರುಗಳು ಮೊದಮೊದಲು ಆ ಹೆಸರುಗಳ ಬಗೆಗೆ ಸಂಬಂಧಪಟ್ಟವರಿಂದ ಪ್ರತಿಕ್ರಿಯೆ ವ್ಯಕ್ತವಾಗಬಹುದಾದರೂ ಅನಿವಾರ್ಯವಿಲ್ಲದೆಯೆ ಸುಮ್ಮನಾಗುತ್ತಾರೆ. ಅಪರೂಪವಾಗಿಯೂ ಆದರೂ ಕೆಲವು ಅಡ್ಡ ಹೆಸರುಗಳು ನಿಜ ನಾಮಗಳಾಗುವ ಸಾಧ್ಯತೆಯುಂಟು. ಹೀಗಾಗಿ ಕುಂಟಪ್ಪನ ಮೊಮ್ಮಗ ಕುಂಟಯ್ಯನಾಗುವಂತೆ, ಬಿಳಿಗೌಡನ ಮಗ ಕಪ್ಪಗಿದ್ದರೂ ಬಿಳಿಯಪ್ಪನಾಗಬಹುದು. ಅಂಕಿತ ನಾಮಗಳಂತೆ ಅಡ್ಡಹೆಸರುಗಳು ಒಂದು ಜನಾಂಗದ ಬೌದ್ಧಿಕ ಸಾಮರ್ಥ್ಯಕ್ಕೆ ಹೃದಯವಂತಿಕೆಗೆ ಮತ್ತು ಅದರ ಆಶೆ ಆದರ್ಶಗಳಿಗೆ ಅವು ಕನ್ನಡಿಯಾಗುತ್ತವೆ.

ಆದೋನಿ ಒಂದು ದ್ವಿಭಾಷಿಕ ಪ್ರದೇಶವಾದ್ದರಿಂದ ಇಲ್ಲಿ ತೆಲುಗು ಪ್ರಭಾವಿತ ಮತ್ತು ಕನ್ನಡದ ವ್ಯಕ್ತಿನಾಮಗಳು ವಿಶಿಷ್ಟವಾಗಿ ಬಳಕೆಯಲ್ಲಿರುವುದು ಕಂಡುಬಂದಿದ್ದರಿಂದ ಆದೋನಿ ಕನ್ನಡವನ್ನು ಒಂದು ಪ್ರಬೇಧವೆಂದು ಮೇಲಿನ ನಿದರ್ಶನಗಳಿಂದ ಖಚಿತಪಡಿಸಿಕೊಳ್ಳಬಹುದಾಗಿದೆ.

ಅಡಿಟಿಪ್ಪಣಿ

೧. ಕೆ.ವಿ.ನಾರಾಯಣ, ವ್ಯಕ್ತಿನಾಮಗಳು, ಸ್ವರೂಪ ಮತ್ತು ವಿಶ್ಲೇಷಣೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಕಡಪ ಊರ್ಲು ಪೇರ್ಲು, ೧೯೭೬, ಭೂಮಿಕ, ಪು.೧೬

೩. ಡಾ.ಎಂ.ಎಂ. ಕಲಬುರ್ಗಿ, ನಾಮವಿಜ್ಞಾನ, ಬೆಂಗಳೂರು ವಿಶ್ವವಿದ್ಯಾಲಯ

೪. ಸಣ್ಣ ಪಾಪಯ್ಯ, ಚಿತ್ರದುರ್ಗ ಪರಿಸರ ವ್ಯಕ್ತಿನಾಮಗಳು, (ಅಪ್ರಕಟಿತ) ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

□□

ಅಧ್ಯಾಯ ೧೦

ಸ್ಥಳನಾಮಗಳು

ಅಧ್ಯಾಯ ೧೦

ಸ್ಥಳನಾಮಗಳು

ಸ್ಥಳನಾಮ ಶಾಸ್ತ್ರಕ್ಕೆ ಆಂಗ್ಲಭಾಷೆಯಲ್ಲಿ ಟೊಪೊನಮಿ ಎಂಬ ಅಭಿದಾನವಿದೆ. ಇದು ಗ್ರೀಕ್ ಮೂಲದಲ್ಲಿ ಟೊಪೋಸ್+ನೊಮಸ್ ಎಂಬ ಎರಡು ಪದಗಳಿಂದ ಮೂಡಿ ಬಂದುದಾಗಿದೆ. ಟೋಪಸ್ ಎಂದರೆ ಸ್ಥಳ ಎಂಬ ಅರ್ಥವನ್ನು, ನೊಮಸ್ ಎಂದರೆ ಕುರಿತಾದ ಅಧ್ಯಯನ ಎಂಬರ್ಥವನ್ನು ನೀಡುತ್ತದೆ. ದೇಶ, ಗ್ರಾಮ ಎಂಬ ಪದಗಳಿಗೆ ಪರಂಪರಾಗತವಾದ ಸೀಮಿತ ಅರ್ಥವಿದೆ. ಅವುಗಳು ಸಾಮುದಾಯಿಕ ಮಾನವ ನೆಲೆಗಳ ಅರ್ಥವನ್ನು ತುಂಬಿಸಿಕೊಳ್ಳುವುದಿಲ್ಲ. ಆದ್ದರಿಂದ ನವೀನವಾಗಿ ಚಲಾವಣೆಗೆ ಬಂದಿರುವ 'ಸ್ಥಳನಾಮ'ವೆಂಬ ಪದ ತುಂಬಾ ಸೂಕ್ತ ಮತ್ತು ಸಮರ್ಪಕ ಎಂದು ಭಾವಿಸಬಹುದಾಗಿದೆ. ಸ್ಥಳನಾಮ ಅಧ್ಯಯನವೆಂದರೆ ಒಂದರ್ಥದಲ್ಲಿ ಭಾಷೆಯ ಅಧ್ಯಯನವೇ ಆಗಿದೆ. ಭಾಷಾ ವಿಜ್ಞಾನದ ದೃಷ್ಟಿಯಿಂದ ಸ್ಥಳನಾಮಗಳ ಸಂಶೋಧನೆಗೆ ಎತ್ತರವಾದ ಸ್ಥಾನವಿದೆ. ಸ್ಥಳನಾಮಗಳು ಮಾನವ ಕಲ್ಪನಾಶಕ್ತಿಗೆ ಅವಕಾಶವನ್ನು ಒದಗಿಸಿ ತಮ್ಮ ಸುತ್ತ ಕಟ್ಟುಕಥೆಗಳ ಹುತ್ತ ಬೆಳೆಯುವಂತೆ ಮಾಡಿವೆ. ಅವುಗಳ ಅಧ್ಯಯನವೆಂದರೆ ಮಾನವ ಜೀವಿಯ ಸರ್ವಾಂಗೀಣ ಹಾಗೂ ಸಮಸ್ತ ಅಧ್ಯಯನವೆಂದು ಅರ್ಥೈಸಲಾಗುತ್ತದೆ.[೧]

ಪ್ರಾಚೀನ ಮಾನವನು ತನ್ನ ಉದರ ಪೋಷಣೆಗಾಗಿ ವನ್ಯ ಪ್ರಾಣಿಗಳಂತೆ ಪ್ರಕೃತಿಯನ್ನವಲಂಬಿಸಿ ಒಂದೇ ಕಡೆ ನೆಲೆ ನಿಲ್ಲದೆ ಬದುಕನ್ನು ಅರಸಿಕೊಂಡು ಒಂದೆಡೆಯಿಂದ ಇನ್ನೊಂದೆಡೆಗೆ ಗುಳೆ ಹೊರಡುವ ಅಲೆಮಾರಿಯಾಗಿ ಎಷ್ಟೋ ಶತಮಾನಗಳವರೆಗೆ ಕಾಲವನ್ನು ಸವೆಸಿ ಕಾಲಕ್ರಮದಲ್ಲಿ ತನ್ನ ಜೀವನಕ್ಕೆ ಹೊಂದಿಕೆಯಾಗುವಂತಹ ಪರಿಸರವೊಂದರಲ್ಲಿ ನೆಲೆನಿಂತನು. ಅವನು ಹೀಗೆ ನೆಲೆನಿಂತ ಸ್ಥಳಗಳೇ ಹಟ್ಟಿಗಳಾದವು. ಸ್ಥಳನಾಮಗಳಲ್ಲಿ ಹಟ್ಟಿಗಳೇ ಆರಂಭ ಕಾಲದ ವಸತಿಗಳು ಮತ್ತು ಪ್ರಾಚೀನತಮ ಘಟಕ ಎಂದು ತಿಳಿಯಲಾಗಿದೆ.

ನಿರ್ದಿಷ್ಟ ಹೆಸರುಗಳುಳ್ಳ ಪದಗಳೇ ಸ್ಥಳನಾಮಗಳು. ಭೌಗೋಳಿಕ ವೈಲಕ್ಷಣಗಳನ್ನು ಸೂಚಿಸುವಂತಹ ಎಂಬ ಸಾಮಾನ್ಯಾರ್ಥದಲ್ಲಿ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಸೂಚಿಸುವಂತಹ ಎಂಬ ವಿಶೇಷಾರ್ಥದಲ್ಲಿ ಸ್ಥಳನಾಮಗಳನ್ನು ಅರ್ಥೈಸಬಹುದು. ಸ್ಥಳಗಳ ವಿಸ್ತೀರ್ಣತೆ ಮತ್ತು ಅಲ್ಲಿ ನೆಲೆನಿಂತ ಜನಸಂಖ್ಯೆ ಮೊದಲಾದವುಗಳ ಆಧಾರದಿಂದ ಅವುಗಳನ್ನು ಹಳ್ಳಿ, ಊರು, ಗ್ರಾಮ, ವಾಡ, ನಗರ, ಪುರ, ಪಟ್ಟಣ, ಸಂತೆ ಮೊದಲಾಗಿ ಕರೆಯಲಾಗಿದೆ.

ಸ್ಥಳನಾಮಗಳು ಸಾಮಾನ್ಯವಾಗಿ ಸಂಯುಕ್ತ ಪದಗಳಾಗಿರುತ್ತವೆ. ಎರಡು ಪದಗಳಿಂದ ಕೂಡಿದ ಸ್ಥಳನಾಮಗಳು ಅಧಿಕವಾಗಿರುತ್ತವೆ. ಪೂರ್ವ ಪದಕ್ಕೆ ವಿಶಿಷ್ಟ ಅರ್ಥವಿರುತ್ತದೆ. ಉತ್ತರ· ಪದಕ್ಕೆ ಸಾಮಾನ್ಯ ಅರ್ಥವಿರುತ್ತದೆ. ಆದ್ದರಿಂದ ಅದನ್ನು ವಿಶಿಷ್ಟ ಅಥವ ನಿರ್ದಿಷ್ಟ ಎಂಬ ಶಬ್ದದಿಂದ ಕರೆಯಲಾಗುತ್ತದೆ. ಸಾಮಾನ್ಯ ಪದವನ್ನು ವಾರ್ಗಿಕ ಎಂದು ಕರೆಯಲಾಗುತ್ತದೆ.

ಸ್ಥಳನಾಮದ ಘಟಕಗಳ ಅರ್ಥವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಆದೋನಿ ತಾಲೂಕಿನ ಸ್ಥಳನಾಮಗಳನ್ನು ಕೆಳಗಿನಂತೆ ವರ್ಗೀಕರಿಸಿ ವಿಶ್ಲೇಷಿಸಲಾಗಿದೆ.

೧. ಜಲವಾಚಿ ಸ್ಥಳನಾಮಗಳು

೨. ಶಿಲಾವಾಚಿ ಸ್ಥಳನಾಮಗಳು

೩. ಪರ್ವತ, ದಿನ್ನೆ, ಗುಡ್ಡ, ಬಯಲು ಸೂಚಿಸುವ ಸ್ಥಳನಾಮಗಳು

೪. ಹೂ, ಸಸ್ಯ, ಗಿಡ, ಮರ, ಬಳ್ಳಿ ಮುಂತಾದವನ್ನು ಸೂಚಿಸುವ 'ಸ್ಥಳನಾಮಗಳು

೫. ಕ್ಷೇತ್ರವಾಚಕ ಸ್ಥಳನಾಮಗಳು

೬. ವರ್ಣಸೂಚಕ ಸ್ಥಳನಾಮಗಳು

೭. ವ್ಯಕ್ತಿವಾಚಿ ಸ್ಥಳನಾಮಗಳು

೮. ಪ್ರಾಣಿಪಕ್ಷಿವಾಚಿ ಸ್ಥಳನಾಮಗಳು

೯. ದೈವವಾಚಿ ಸ್ಥಳನಾಮಗಳು

೧೦. ವೃತ್ತಿ ಮತ್ತು ಜಾತಿವಾಚಿ ಸ್ಥಳನಾಮಗಳು

೧೧. ಸಂಕೀರ್ಣ ಸ್ಥಳನಾಮಗಳು

೧. ಜಲವಾಚಿ ಸ್ಥಳನಾಮಗಳು : ಮಾನವನ ಸಂಸ್ಕೃತಿಯ ವಿಕಾಸದ ಹಂತದಲ್ಲಿ ಜಲಕ್ಕೆ ವಿಶೇಷವಾದ ಸ್ಥಾನವಿದೆ. ಅಲೆಮಾರಿಯಾಗಿದ್ದ ಆದಿಮಾನವರು ಒಂದೆಡೆ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು 'ಜಲ'

ಅನಿವಾರ್ಯವಾಗಿ ಬೇಕಾಗಿತ್ತು. ಈ ಕಾರಣಗಳಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಸೃಷ್ಟಿಸಿಕೊಂಡರು. ಸಹಜವಾಗಿ ಹರಿಯುವ ನೀರಿಗೆ, ಕೆರೆ, ಕೊಳಗಳಂತಹ ಕೃತಕ ಜಲ ಸಂಗ್ರಾಹಕಗಳನ್ನು ನಿರ್ಮಿಸಿಕೊಂಡರು. ಹೀಗೆ ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಜಲವನ್ನವಲಂಬಿಸಿದ ಗ್ರಾಮನಾಮಗಳ ರೂಢಿ ಆರಂಭವಾಗಿರಬೇಕು. ಅಂತಹ ಸ್ಥಳನಾಮಗಳು ಆದೋನಿ ತಾಲೂಕಿನಲ್ಲಿ ಇರುವುದು ಗಮನಿಸುವಂತಹ ಅಂಶ.

ಕಲ್ಲುಕುಂಟೆ	ಪದಲಕುಂಟೆ
ಕಲ್ಲು ಬಾವಿ	ಪುಟ್ಟಕುಂಟ
ಗೋನಬಾವಿ	ಬಂಟಕುಂಟ
ಚಿಂತಕುಂಟೆ	ಮೈಕದೋಣೆ
ನದಿಚ್ಯಾಗಿ	ಸೂಳೆಕೆರೆ

ಕುಂಟೆ, ಕೆರೆ, ಬಾವಿ, ಡೊಣೆ ಎಂಬ ಜಲವಾಚಿ ವಾರ್ಗಿಕಗಳು ಈ ಭಾಗದಲ್ಲಿ ಬಳಕೆಯಾಗಿವೆ. ಕುಂಟ, ದೋಣ ಎಂಬ ಎರಡು ತೆಲುಗು ಭಾಷೆಯ ಜಲವಾಚಿ ವಾರ್ಗಿಕಗಳು ಕಂಡುಬರುತ್ತವೆ.

೨. ಶಿಲಾವಾಚಿ ಸ್ಥಳನಾಮಗಳು : ಸ್ಥಳನಾಮ ನಿರ್ದೇಶನದಲ್ಲಿ ಹೆಚ್ಚಾಗಿ ಪ್ರಕೃತಿಯನ್ನೇ ಅವಲಂಬಿಸಿದ ಪ್ರಾಚೀನರು ಕಲ್ಲನ್ನು ಗಮನದಲ್ಲಿಟ್ಟುಕೊಂಡಿದ್ದಾರೆ ಎನ್ನುವ ಸಂಗತಿ ಸ್ಥಳನಾಮಗಳ ಅವಲೋಕನದಿಂದ ತಿಳಿಯುತ್ತದೆ.

ಅರೇಕಲ್ಲು	ಕಳವಲಗುಂಡು	ಗಣೇಕಲ್	ನೆಟ್ಟೇಕಲ್ಲು
ಅರ್ತಿ ಬಂಡೆ	ಕಲ್ಲುಬಾವಿ	ಗೌಡಗಲ್ಲು	ಪಾಂಡವಗಲ್ಲು
ಈರನಗಲ್ಲು	ಕಗ್ಗಲ್ಲು	ಚಿರ್ತನಕಲ್ಲು	ಪೀಸಲಬಂಡ
ಕಲ್ಲುಕುಂಟಿ	ಕುಪ್ಪಗಲ್ಲು	ನವಿಲುಕಲ್ಲು	ಬಲ್ಲೇಕಲ್ಲು
			ವಂದಗಲ್ಲು
			ಪೆಂಡೆಕಲ್ಲು

ಅರೆ (ಕಲ್ಲು), ಕಲ್ಲು, ಗುಂಡು, ಬಂಡೆ ಎಂಬ ನಾಲ್ಕು ಶಿಲಾವಾಚಿ ಪದಗಳು ಆದೋನಿ ಸ್ಥಳನಾಮಗಳಲ್ಲಿ ಸಿಂಹಪಾಲನ್ನು ಪಡೆದಿವೆ. ವ್ಯಕ್ತಿ, ಪ್ರಾಣಿ, ಪಕ್ಷಿ, ಪುರಾಣ ಪುರುಷ, ಕೊಳ ಮುಂತಾದವು ಈ ಶಿಲಾವಾಚಿ ಪದಕ್ಕೆ ತಳಕು ಹಾಕಿಕೊಳ್ಳುವ ಮೂಲಕ ಇಲ್ಲಿನ ಸ್ಥಳನಾಮಗಳು ನಿರ್ದೇಶನಗೊಂಡಿವೆ. ಆದೋನಿ ತಾಲೂಕಿನಲ್ಲಿ ಅತಿಹೆಚ್ಚು ಶಿಲಾವಾಚಿ ಸ್ಥಳನಾಮಗಳಿವೆ. ಈ ಭಾಗದಲ್ಲಿ ಬೆಟ್ಟ, ಗುಡ್ಡ, ಕಲ್ಲು, ಬಂಡೆಗಳು ಹೆಚ್ಚಾಗಿರುವುದರಿಂದ ಈ ನಾಮಗಳು ಬಳಕೆಯಲ್ಲಿರಬಹುದು ಎಂಬುದು ಮೇಲ್ನೋಟಕ್ಕೆ ತಿಳಿಯುತ್ತದೆ. ಈ ಶಿಲಾವಾಚಿ ಪದಗಳು ಹೆಚ್ಚಾಗಿ ಉತ್ತರ ಪದದಲ್ಲಿ ಕಂಡುಬಂದಿವೆ. ಪೂರ್ವ ಪದದಲ್ಲಿ ಅಲ್ಲೊಂದು ಇಲ್ಲೊಂದರಂತೆ ಕಂಡುಬರುತ್ತವೆ.

೩. ಪರ್ವತ / ದಿನ್ನೆ / ಗುಡ್ಡ / ಬಯಲು / ಕೋಟೆ ಸೂಚಿಸುವ ಸ್ಥಳನಾಮಗಳು

ಅಗಸಲದಿನ್ನೆ	ದಿಬ್ಬನದೊಡ್ಡಿ	ಮುಚ್ಚಗಿರಿ
ಉರುಕುಂದೆ	ದೇವರಬೆಟ್ಟ	ವೀರಲದಿನ್ನೆ
ಕೊಂಡಾಪುರ	ದೊಂಬಲದಿನ್ನೆ	ಸಲಕಲಕೊಂಡ
ಕೊಂಡಾಪುರ ಎಸ್.	ಪರ್ವತಾಪುರ	
ದಯ್ಯಾಲಗುಡ್ಡ	ಪೀಕಲಬೆಟ್ಟ	
ದಿಬ್ಬನಕಲ್ಲು	ಮಂಡಗಿರಿ	

ದಿನ್ನೆ, ಕುಂದ, ಕೊಂಡ, ದಿಬ್ಬ, ಬೆಟ್ಟ, ದಿನ್ನೆ ಎಂಬಂತಹ ವಾರ್ಗಿಕ ಆಧಾರದ ಮೇಲೆ ಮೇಲಿನ ಸ್ಥಳನಾಮಗಳನ್ನು ವರ್ಗೀಕರಿಸಲಾಗಿದೆ. 'ಕೊಂಡ' ಎನ್ನುವಂತ ತೆಲುಗು ಭಾಷೆಯ ವಾರ್ಗಿಕ ಕಂಡುಬಂದಿದೆ. ನಿರ್ದಿಷ್ಟಗಳು ಜಾತಿ, ವ್ಯಕ್ತಿ, ದೈವ, ಪರಿಸರ ಮುಂತಾದವುಗಳನ್ನು ಸೂಚಿಸುವ ಪದಗಳಾಗಿವೆ.

೪. ಸಸ್ಯ, ಮರ, ಗಿಡ ಸೂಚಿಸುವಂತಹ ಸ್ಥಳನಾಮಗಳು

ಗೋನಬಾವಿ

ಜಾಲಿಬೆಂಚಿ

ಬದನೆಹಾಳ್

ಹೂವನೂರು

ಗೋನ, ಜಾಲಿ, ಒದನೆ, ಹೂವ ನಿರ್ದಿಷ್ಟ ಪದಗಳು ಸಸ್ಯ, ಮರ, ಗಿಡ, ಹೂವುಗಳನ್ನು ಸೂಚಿಸುತ್ತವೆ.

೫. ಕ್ಷೇತ್ರ ವಾಚಕಗಳು

ಕಡೇ ತೋಟ

ನೆಲಕೋಸಗಿ

ಪಲ್ಲಿಪಾಡು

ತೋಟ, ನೆಲ, ಪಲ್ಲಿ ರೂಪಗಳು ಆಯಾ ಸ್ಥಳೀಯ ಪ್ರದೇಶದ ಕ್ಷತ್ರವನ್ನು ಸೂಚಿಸುತ್ತವೆ.

೬. ವರ್ಣ ಸೂಚಕಗಳು

ಎರಿಗೇರಿ

ಬೆಳಗಲ್ಲು

ಎರಿ ಎಂದರೆ 'ಕೆಂಪು' ಎನ್ನುವ ಅರ್ಥ. ಎರಿ ಎನ್ನುವ ತೆಲುಗು ವರ್ಣಸೂಚಕ ಬಳಕೆಯಾಗಿರುವುದನ್ನು ಗಮನಿಸಬಹುದು. ಅದೇ ರೀತಿ 'ಬೆಳ್' ಎಂದು ಬಿಳಿ ವರ್ಣವನ್ನು ಸೂಚಿಸುವ ಪದ ಬಳಕೆಯಲ್ಲಿರುವುದು ಗಮನಿಸಬಹುದು. ಈ ರೀತಿಯಾಗಿ ಆದೋನಿ ತಾಲೂಕಿನಲ್ಲಿ ವರ್ಣಸೂಚಕ ಸ್ಥಳನಾಮಗಳು ಬಳಕೆಯಲ್ಲಿವೆ.

೭. ವ್ಯಕ್ತಿವಾಚಿ ಸ್ಥಳನಾಮಗಳು

ಅಗಸನೂರು	ಬಂಟಕುಂಟೆ	ವಿರುಪಾಪುರ
ಕುಂಟಿನಹಾಳ್	ಬೊಮ್ಮಪಲ್ಲೆ	ಸಾಂತನೂರು
ಕಾಮವರಂ	ಮಲ್ಲನಹಟ್ಟಿ	ಸುಲ್ತಾನಪುರ
ಕಾಮನದೊಡ್ಡಿ	ಮೈಲಿಂಗನೂರು	ಸೂಳೆಕೆರೆ
ದೊಡ್ಡನಕೇರಿ	ರಂಗಾಪುರ	
ನಾರಾಯಣಪುರ	ರಾಮಾಪುರ	

ಮೇಲಿನ ಸ್ಥಳನಾಮಗಳನ್ನು ಗಮನಿಸಿದರೆ ಅತಿಹೆಚ್ಚು ಪುರುಷ ಪ್ರಧಾನ ಸ್ಥಳನಾಮಗಳಿವೆ. ಇದಕ್ಕೆ ನಮ್ಮ ಪ್ರಾಚೀನ ಪರಂಪರೆಯಿಂದಲೂ ಬಂದಂತಹ ಪುರುಷ ಪ್ರಧಾನ ಸಮಾಜವೇ ಕಾರಣವೆನ್ನಬಹುದು.

'ಸೂಳೆ'ಗೆ ಸಂಬಂಧಿಸಿದ ಸ್ಥಳನಾಮಗಳು ಆಧುನಿಕ ಯುಗದಲ್ಲಿ ಕಂಡುಬರುವುದೇ ಇಲ್ಲ. ಸೂಳೆ ಮತ್ತು ಸೂಳೆಗಾರಿಕೆ ಒಂದು ಕಾಲದಲ್ಲಿ ಸಮಾಜ ಮಾನ್ಯವಾಗಿದ್ದರಿಂದ ಆ ಬಗೆಯ ಸ್ಥಳನಾಮಗಳು ಉದಯವಾಗಿರಬಹುದು.

೮. ಪ್ರಾಣಿ,ಪಕ್ಷಿ ಸೂಚಿಸುವ ಸ್ಥಳನಾಮಗಳು

ಸ್ಥಳನಾಮ ನಿರ್ದೇಶನದಲ್ಲಿ ಪ್ರಾಣಿ ಪಕ್ಷಿಗಳು ಕೂಡ ತಮ್ಮ ಸ್ಥಾನವನ್ನು ಪಡೆದುಕೊಂಡಿವೆ. ಮಾನವನ ಜೀವನದೊಂದಿಗೆ ಬದುಕುವ ಪ್ರಾಣಿಪಕ್ಷಿಗಳ ಹೆಸರನ್ನು ತಮ್ಮ ವಾಸದ ನೆಲೆಗಳಿಗೆ ಕಂಡುಕೊಂಡಿದ್ದಾರೆ. ಗ್ರಾಮನಾಮಗಳಿಗಿಂತಲೂ, ನಿರ್ವಸಿತ ಪ್ರದೇಶಗಳಾದ ಬಂಡೆ, ತಗ್ಗು, ಬೆಟ್ಟ, ಕುಂಟೆ, ಕಾಡು, ಮರ, ಯಾವುದೇ ವಿಶೇಷ ತೋಪು ಮುಂತಾದವುಗಳಿಗೆ ಈ ಪ್ರಾಣಿ,ಪಕ್ಷಿಯ ಹೆಸರುಗಳನ್ನೇ ಕರೆದುಕೊಂಡಿರುವುದು ಕಂಡುಬರುತ್ತದೆ. ಯಾವುದೇ ಬಂಡೆಯ ಮೇಲೆ ಹುಲಿ ಮಲಗಿದ್ದರೆ ಅದನ್ನು 'ಹುಲಿಬಂಡೆ' ಎಂದೂ, ಗುಂಡಿನ ಮೇಲೆ ಕೋತಿ ಕುಂತಿದ್ದರೆ 'ಕೋತಿಗುಂಡು' ಎಂದೂ ತಮ್ಮ ಗುರುತಿಗಾಗಿ ಕರೆದು, ಅದನ್ನು ಸಾರ್ವತ್ರಿಕ, ಶಾಶ್ವತವಾಗಿಸಿದ್ದೂ ಇದೆ. ಆದೋನಿ ತಾಲೂಕಿನಲ್ಲಿ ಇಂತಹ ಕೆಲವು ಹೆಸರುಗಳುಳ್ಳ ಸ್ಥಳನಾಮಗಳು ದೊರೆಯುತ್ತವೆ.

೧. **ಉರುಕುಂದೆ** : ಉರಗ ಎಂದರೆ ಹಾವು, ಕುಂದೆ ಬೆಟ್ಟ. ಬೆಟ್ಟದಲ್ಲಿ ಸರ್ಪ ವಾಸಿಸಿದ್ದರಿಂದ ಈ ಹೆಸರು ಬಂದಿದೆ. ನರಸಿಂಹಾವತಾರಿ ಸರ್ಪ ಇಲ್ಲಿದೆಯೆಂಬುದು ಇಲ್ಲಿನ ಐತಿಹ್ಯ. ಬೆಟ್ಟದ ಪಕ್ಕದಲ್ಲಿರುವ ಊರು ಉರುಕುಂದೆ ಎಂದು ಹೇಳಲು ಸಾಧ್ಯವಿದೆ.

೨. **ಗುರ್ರಲದೊಡ್ಡಿ** : ಗುರ್ರ=ಕುದುರೆ (ತೆಲುಗು) ಗುರ್ರಲು ಎಂದರೆ ಕುದುರೆಗಳು ದೊಡ್ಡಿ ಎಂದರೆ ಹಟ್ಟಿ, ದನದ ಕೊಟ್ಟಿಗೆ ಎಂಬ ಅರ್ಥಗಳಿವೆ.

೩. **ಚಿರ್ತನಕಲ್ಲು / ಚಿರ್ತನಪಲ್ಲೆ** : ಈ ಎರಡೂ ಊರುಗಳ ಪರಿಸರ ಬೆಟ್ಟ ಗುಡ್ಡಗಳ ಸಾಲಿನಿಂದ ಆವೃತ್ತವಾಗಿದೆ. ಇಲ್ಲಿ ಚಿರತೆಯ ವಾಸ ಸಹಜವಾಗಿದೆ. ಯಾವುದೋ ಒಂದು ಬಂಡೆಯ ಮೇಲೆ, ಇಲ್ಲವೇ ಗವಿಯಲ್ಲಿ ಅದರ ವಾಸವಿದ್ದಿರಬೇಕು. ಈ ಕಾರಣದಿಂದ ಅವುಗಳಿಗೆ ಚಿರತೆಗೆ ಸಂಬಂಧಿಸಿದ ಹೆಸರು ಇಟ್ಟಿರಬೇಕು.

೪. **ತುಂಬಿಗನೂರು** : "ತುಂಬಿಯಿಂದ ಈ ಊರಿಗೆ ಹೆಸರು ಬಂದಿದೆ. ಇಲ್ಲಿ ಹೂವಿನ ತೋಟಗಳು ಇದ್ದುದರಿಂದ ತುಂಬಿಗಳು ಹೆಚ್ಚಾಗಿ ಇದ್ದವು ಎಂಬ ವಿವರಣೆಯನ್ನು ಇಲ್ಲಿ ಸ್ಥಳೀಯರು ವಿವರ ನೀಡುತ್ತಾರೆ." ಇಂದು ರೆವಿನ್ಯೂ ದಾಖಲೆಯಲ್ಲಿಯೂ ತುಂಬಿಗನೂರು ಎಂಬುದಾಗಿ ಬರೆಯಲ್ಪಟ್ಟಿದೆ.

೫. ನವಿಲುಕಲ್ಲು : ಬಯಲು ಪ್ರದೇಶ, ಬೆಟ್ಟಗಳ ಸಾಲಿನ ನಡುವೆ ಇರುವ ದಟ್ಟವಾದ ಬಯಲುಗಳಲ್ಲಿ ಅಲ್ಲಲ್ಲಿ ಊರುಗಳು ನಿರ್ಮಾಣವಾಗಿವೆ. ಅದರಂತೆ ಆದೋನಿ ತಾಲೂಕಿನ ಈ ಊರಿನ ಒಂದು ವಿಶಾಲ ಕಲ್ಲಿನ ಮೇಲೆ ನವಿಲು ಇರುತ್ತಿದ್ದರಿಂದ ಆ ಹೆಸರು ಬಂದಿರಬೇಕು. ಈ ಪರಿಸರದಲ್ಲಿ ಹೆಚ್ಚು ನವಿಲುಗಳು ಇರುವುದನ್ನು ಇಂದಿಗೂ ನೋಡಬಹುದು.

೬. ಹುಲಿಕಣಿವೆ : ಪರ್ವತಗಳಿಂದ ಕೂಡಿದ ಈ ಊರಿನಲ್ಲಿ ಯಾವುದೋ ಒಂದು ಕಣಿವೆಯ ಮೇಲೆ ಹುಲಿಯು ಇರುತ್ತಿದ್ದರಿಂದ ಈ ಹೆಸರು ಬಂದಿದೆ ಎಂಬ ಸ್ಥಳೀಯ ವ್ಯಾಖ್ಯಾನವಿದೆ.

ಪ್ರಾಣಿ, ಪಕ್ಷಿವಾಚಿ ಸ್ಥಳನಾಮಗಳಿಂದ ಪಕ್ಷಿ ಶಾಸ್ತ್ರಜ್ಞರಿಗೆ ಅಮೂಲ್ಯ ಮಾಹಿತಿ ದೊರೆಯುತ್ತದೆಂಬುದನ್ನು ಗಮನಿಸಬೇಕು. ಆಯಾ ಭೌಗೋಳಿಕ ಪರಿಸರದಲ್ಲಿ ಇರುವ ಪ್ರಾಣಿಗಳ ಬಗೆಗಳು ಪಕ್ಷಿಗಳ ಬಗೆಗಳನ್ನು ತಿಳಿಯಲು ಪೂರಕ ಮಾಹಿತಿಯನ್ನು ಈ ಬಗೆಯ ಸ್ಥಳನಾಮಗಳು ನೀಡುತ್ತವೆ. ಈ ದೃಷ್ಟಿಯಿಂದ ಇಂತಹ ಸ್ಥಳನಾಮಗಳ ಅಧ್ಯಯನ ಅತಿ ಮುಖ್ಯವೆನಿಸುತ್ತವೆ.

೯. ದೈವವಾಚಿ

ಸಂಸ್ಕೃತಿಯಲ್ಲಿ ದೇವರ ಪಾತ್ರ ಅನನ್ಯವಾದುದು. ಜೀವನದ ಪ್ರತಿಯೊಂದು ಸಂಗತಿಗಳಲ್ಲಿ ದೈವದ ಅಸ್ತಿತ್ವವನ್ನು ಕಂಡುಕೊಳ್ಳುವುದು. ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತದೆ. ಹಾಗೆಯೇ ಗ್ರಾಮ, ಊರುಗಳ ಹೆಸರುಗಳಿಗೂ ದೇವರನಾಮವನ್ನು ಆರೋಪಿಸುವುದು ವಾಡಿಕೆಯಾಗಿದೆ. ಸಮುದಾಯಗಳು ತಾವು ನಂಬಿದ ಕುಲದೈವ ಮನೆದೈವ, ಗ್ರಾಮದೇವತೆ, ಪ್ರಾದೇಶಿಕ ದೇವತೆ ಹೀಗೆ ಹಲವಾರು ದೇವರುಗಳ ಹೆಸರನ್ನು ತಮ್ಮ ನೆಲೆಗಳಿಗೆ ಇಟ್ಟುಕೊಂಡರೆ ಶುಭವೆಂದು ನಂಬುತ್ತಾರೆ. ಆ ಮೂಲಕ ತಮ್ಮ ಸಂಸ್ಕೃತಿಯ ಒಂದು ಭಾಗವೆಂದು ದೇವರನ್ನು ಸ್ವೀಕರಿಸಿದ್ದಿದೆ. ಆದೋನಿ ಭಾಗದಲ್ಲಿ ದೊರೆಯುವ ದೈವವಾಚಿ ಸ್ಥಳನಾಮಗಳನ್ನು ಹೀಗೆ ಗುರುತಿಸಲಾಗಿದೆ.

೧. ದೇವರಬೆಟ್ಟ : ಇಲ್ಲಿನ ಒಂದು ಚಿಕ್ಕ ಬೆಟ್ಟದಲ್ಲಿ ಒಂದು ದೇವಾಲಯವಿದೆ.

೨. ಮಂತ್ರಾಲಯ : "ಮಂಚಾಲೆ ಎಂಬ ಮೂಲನಾಮವಿದ್ದ ಈ ಸ್ಥಳಕ್ಕೆ ರಾಘವೇಂದ್ರ ಯತೀಂದ್ರರು ಬಂದು ತಪಸ್ಸು ಮಾಡಿ ಈ ಸ್ಥಳವನ್ನು ಮಂತ್ರಾಲಯವೆಂದು ಮಾಡಿದರು."[೨]

೩. ರಂಗಾಪುರ : ಶ್ರೀಕೃಷ್ಣದೇವರ ಗುಡಿಯಿಂದ ಬಂದ ಹೆಸರು.

೪. ಶಂಕರಬಂಡೆ : ಈ ಬೆಟ್ಟದಲ್ಲಿ 'ಶಂಕರ' ಎಂಬ ಋಷಿ ತಪಸ್ಸು ಮಾಡಿದನೆಂದೂ ಸ್ಥಳೀಯರು ಹೇಳುತ್ತಾರೆ.

೫. ಸಾಂಬಗಲ್ಲು : ಶಿವನ ಇನ್ನೊಂದು ಹೆಸರು ಸಾಂಬ (ಕ.ನಿ.ಸಂ.ಅ.೮೪೪೯) ಆ ಮೂಲದಿಂದ ಬಂದಂತಹ ಹೆಸರು ಎಂಬುದಾಗಿ ಸ್ಥಳೀಯರ ಹೇಳಿಕೆ.

೧೦. ವೃತ್ತಿ ಅಥವಾ ಜಾತಿವಾಚಿ

ಆದೋನಿ ತಾಲೂಕಿನಲ್ಲಿ ವೃತ್ತಿ-ಜಾತಿಗಳಿಗೆ ಸಂಬಂಧಿಸಿದ ಗ್ರಾಮನಾಮಗಳು ಇರುವುದನ್ನು ಗಮನಿಸಬಹುದು.

೧. **ಅಗಸಲದಿನ್ನೆ** : ಮಡಿವಾಳ ವೃತ್ತಿಯವರ ನೆಲೆಗಳು. ಈ ಸಮುದಾಯ ಇಲ್ಲಿ ಹೆಚ್ಚಾಗಿ ವಾಸಿಸುತ್ತಿರಬೇಕು. ಅಗಸ+ಲ+ದಿನ್ನೆ ಎಂಬಲ್ಲಿ 'ಲ' ಕಾರವು ತೆಲುಗಿನ ಬಹುವಚನವನ್ನು ಸೂಚಿಸುವ ಅಕ್ಷರ. ಕನ್ನಡದ ರಚನೆಯ ನಡುವೆ 'ಲ' ಸಂಬಂಧವಾಚಿ ಬಂದಿರುವುದು ಗಡಿಭಾಗದ ದ್ವಿಭಾಷಿಕ ವಲಯದ ಪ್ರಭಾವದಿಂದ. ತೆಲುಗು ಭಾಷಿಕರು ಅಗಸಕ್ಕೆ ಪರ್ಯಾಯ 'ಚಾಕಲಿ' ಪದವನ್ನು ಬಳಸುತ್ತಾರೆ. ಆದರೆ 'ಅಗಸ' ಇದರ ಅರ್ಥ ಗಮನಿಸದೇ ಅದನ್ನು ಇಡಿಯಾಗಿ ಸ್ವೀಕರಿಸಿ ದಿನ್ನೆ ವಾರ್ಗಿಕದ ನಡುವೆ ತೆಲುಗಿನ ಬಹುವಚನ ವಾಚಿ 'ಲ' ಸೇರಿಸಿ ಉಚ್ಚರಿಸುತ್ತಿದ್ದಾರೆ.

೨. **ಉಪ್ಪರಾಳ್** : ವೃತ್ತಿವಾಚಿ. ಉಪ್ಪಾರರು ಕೆರೆ, ಬಾವಿಗಳನ್ನು ತೋಡುವುದು ಉಪ್ಪು ತಯಾರು ಮಾಡುವುದು ಮುಂತಾದ ಕಸುಬುಳ್ಳ ತೆಲುಗು ಮೂಲದ ಜನಾಂಗ.

೩. **ಗೌಡಗಲ್ಲು** : ವೃತ್ತಿವಾಚಿ. ಗಾವುಂಡ ಎಂಬುದು ಊರ ಪ್ರಮುಖನನ್ನು ಹೇಳುತ್ತದೆ. ಅವನಿಗೆ ಸಂಬಂಧಿಸಿದ ಗ್ರಾಮ.

೪. **ದೊಂಬಲದಿನ್ನೆ** : "ಸಂಚಾರಿ ಬುಡಕಟ್ಟು ಜನಾಂಗ. ಡೊಂಬರು ಗಣೆಯ ಮೇಲೆ ಆಟವಾಡುವ, ವೇಶ್ಯ."[೬]

೫. **ಭಟ್ಟರ ಬೊಮ್ಮಲಪುರ** : "ಭಟ್ರಾಜ ಎಂಬ ಜಾತಿಯವರು. ಬೊಮ್ಮ ಎಂಬುದು ದಾಸರಲ್ಲಿ ಒಂದು ಪಂಗಡ."[೭]

೬. **ಬಾಪುರಂ/ಬಾಪುಲದೊಡ್ಡಿ** : ಬಾಪುನೊಳ್ಳು ಎನ್ನುವುದು ತೆಲುಗಿನ ಪದ. ಬ್ರಾಹ್ಮಣರು ಎನ್ನುವುದು ಕನ್ನಡದ ಪದ. ಬಾಪು-ಬ್ರಾಹ್ಮಣ ಇವರಿಗೆ ಸಂಬಂಧಿಸಿದ ಊರು.

೧೧. ಸಂಕೀರ್ಣ ಸ್ಥಳನಾಮಗಳು

ಇಸ್ವಿ	ತುಂಬಳ
ಕಪತಿ	ಧೋವಿ
ಕರಣಿ	ಮದಿರೆ
ಕೌತಾಳ	ಮಂತ್ರಿಕಿ
ಚಾಗಿ	ಹಾಲ್ವಿ

ಹೀಗೆ ಆದೋನಿಯಲ್ಲಿ ದೊರೆಯುವ ಸ್ಥಳನಾಮಗಳನ್ನು ಮೇಲಿನಂತೆ ವರ್ಗೀಕರಿಸಲಾಗಿದೆ. ದ್ವಿಭಾಷಿಕ ವಲಯವಾದುದರಿಂದ ಭಾಷಿಕ ಮತ್ತು ಸಮುದಾಯಗಳ ಸ್ವರೂಪದಿಂದ ಕೆಲವು ವಿಶೇಷವಾದ ಸ್ಥಳನಾಮಗಳಿರುವುದು ಸಹಜವೇ ಆಗಿದೆ.

ಆದೋನಿ ಸ್ಥಳನಾಮಗಳು - ವಾರ್ಗಿಕಗಳ ಪಟ್ಟಿ

ಆದೋನಿ ತಾಲೂಕಿನ ಒಟ್ಟು ಸ್ಥಳನಾಮಗಳ ಉತ್ತರ ಪದದಲ್ಲಿ ಕಂಡುಬರುವ ವಾರ್ಗಿಕ ರಚನೆಗಳು ಹಾಗೂ ಅವುಗಳ ಸಂಕ್ಷಿಪ್ತ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

- **ಊರು** : ಇದು ಅಚ್ಚ ದ್ರಾವಿಡ ಪದ. ವಾಸಸ್ಥಳವನ್ನು ಸೂಚಿಸುತ್ತದೆ. "ನಾಡು, ಗ್ರಾಮ, ಸಣ್ಣಪಟ್ಟಣ, ತೊಡೆ, ನೆಡು"[೫] ಇದು ದ್ರಾವಿಡ ಪದವಾದ್ದರಿಂದ ತೆಲುಗಿನಲ್ಲಿಯೂ ಇದೇ ಪದವು ಬಳಕೆಯಾಗುತ್ತದೆ.

ಅಗಸನೂರು

ಕಂದಕೂರು

ಬೊಗ್ಗೂರು

- **ಕುಂಟೆ** : ಜಲವಾಚಿ ಪದ. "ನೀರಕುಣಿ, ಕೊಳ"[೬] ತೆಲುಗಿನಲ್ಲಿ ಇದು ಕುಂಟ, ಗುಂಟ ಇದೇ ಅರ್ಥದಲ್ಲಿ ಬಳಕೆಗೊಳ್ಳುತ್ತದೆ.

ಕಲ್ಲುಕುಂಟೆ

ಬೊಂತುಕುಂಟೆ

- **ಕೆರೆ** : ಜಲವಾಚಿ ಪದ. "ಕೊಳ, ಜಲಾಶಯ"[೭] ಉತ್ತರ ಕರ್ನಾಟಕದಲ್ಲಿ ಈ ಪದವನ್ನು ಕೇರಿ ಎಂದು ದೀರ್ಘಕರಿಸಿ ಉಚ್ಚರಿಸುತ್ತಾರೆ. ಆದರೆ ಈ ಪದದ ಅರ್ಥ ಓಣಿ, ಬೀದಿ ಎಂಬರ್ಥ ನೀಡುತ್ತದೆ (ಮಾದಿಗಕೇರಿ). ಕ>ಗ ಬದಲಾವಣೆಯಿಂದ - ಗೆರೆ, ಗೆರಿ ಎಂದೂ ಬಳಕೆಗೊಂಡಿದೆ. ತೆಲುಗಿನಲ್ಲಿ ಕೆರೆಗೆ ಸಮಾನವಾದ ಪದ ಚರವು ಎಂದು ಕರೆಯುತ್ತಾರೆ.

ಎರಿಗೆರೆ

ಕೆರೆಕೇರಿ

ಸೂಳೆಕೆರೆ

- **ಕೊಂಡ** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. "ಸಂಸ್ಕೃತದ 'ಕುಂಡ' ಪದದಿಂದ ತದ್ಭವಗೊಂಡಿದೆ. ಬೆಂಕಿ ಉರಿಸುವ ಕುಣಿ, ಬೆಟ್ಟ, ಪರ್ವತ"[೮] ಇದು ಕುಂದ ಪದಕ್ಕೆ ಸಮಾನವಾಗಿಯೇ ಬಳಕೆಯಾಗುತ್ತದೆ. ತೆಲುಗಿನಲ್ಲಿ-ಕೊಂಡವೆಂದೇ ಬಳಕೆಯಾಗುತ್ತದೆ.

ಕೊಂಡಾಪುರ

ದ್ಯಾವನಕೊಂಡ

ಪತ್ತಿಕೊಂಡ

ಸಲಕಲಕೊಂಡ

ಕನ್ನಡದ ಗುಡ್ಡ ಎನ್ನುವ ಪದಕ್ಕೆ ತೆಲುಗಿನಲ್ಲಿ ಕೊಂಡ ಎಂದು ಕರೆಯುತ್ತಾರೆ. ಮೇಲಿನ ಸ್ಥಳನಾಮಗಳಲ್ಲಿ ತೆಲುಗಿನ ರೂಪಗಳು ಕಂಡುಬಂದಿವೆ.

- **ಕೋಡು** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. ಸಂಸ್ಕೃತದ 'ಕೂಟ' ಪದಕ್ಕೆ ಸಮಾನವಾದುದು. "ಪರ್ವತ, ಶಿಖರ, ಕೊಂಬು, ಟೊಂಗೆ."[೯]

ಬಸರಕೋಡು

- **ಗಿರಿ** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. "ಬೆಟ್ಟ, ಪರ್ವತ"[೧೦] ಗಿರಿ ಸಂಸ್ಕೃತ. ತೆಲುಗಿನಲ್ಲಿ ಗಿರಿ, ಶಿಖರಂ ಎಂದು ಬಳಕೆಯಾಗಿದೆ.

ಮಂಡಗಿರಿ

ಮುಚ್ಚಗಿರಿ

- **ಗುಡ್ಡ** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. ಬೆಟ್ಟ, ದಿನ್ನೆ ಎಂಬರ್ಥವಿದೆ. ತೆಲುಗಿನ 'ಕೊಂಡ' ಪದಕ್ಕೆ ಸಮಾನವಾದುದು. ತೆಲುಗು ಮಾತೃಭಾಷಿಕರು ಕನ್ನಡ 'ಗುಡ್ಡ' ವಾರ್ಗಿಕವನ್ನೊಂದಿದ ಸ್ಥಳನಾಮ ರಚನೆಯನ್ನು 'ಗುಡ್ಡಂ' ಎಂದು 'ಮ' ಕಾರಂತವಾಗಿ ಉಚ್ಚರಿಸುವುದು ಕಂಡುಬಂದಿದೆ.

- ದಯ್ಯಾಲ ಗುಡ್ಡ

- **ಗುಂಡು** : "ಶಿಲಾವಾಚಿ ವರ್ತುಲ, ಗೋಳಾಕಾರ, ದಪ್ಪವಾಗಿರುವ ಕಲ್ಲು, ದೊಡ್ಡಕಲ್ಲು ಗುಂಪು, ಸಮೂಹ."[೧೧]

ಕಳವಲಗುಂಡು

- **ಚಿಂತ** : ಸಸ್ಯವಾಚಿ ತೆಲುಗು ಪದ. ಕನ್ನಡದಲ್ಲಿ ಹುಣಿಸೆಮರ ಎಂಬರ್ಥವಿದೆ. ಸ್ಥಳನಾಮಗಳಲ್ಲಿ ಪೂರ್ವಪದದಲ್ಲಿ ನಿರ್ದಿಷ್ಟ ಸ್ಥಾನದಲ್ಲಿ ಬಳಕೆಯಾಗಿದೆ.

ಚಿಂತಕುಂಟ

- **ಚೆರವು** : ಜಲವಾಚಿ ತೆಲುಗುಪದ. ಜಲಾಶಯ, ಕೆರೆ ಎನ್ನುವ ಅರ್ಥಗಳನ್ನು ಒಳಗೊಂಡಿದೆ.

ಕಮ್ಮಲಚೆರುವು

- **ದೊಣೆ** : ಜಲವಾಚಿ. "ಬಂಡೆಯ ಮೇಲಿನ ನೀರಕುಳಿ. ಸ್ವಾಭಾವಿಕ ಕೊಳ, ಕೆರೆ."[೧೨] ತೆಲುಗಿನಲ್ಲಿ ಇದಕ್ಕೆ ದೊನ ಮೊಣ, ಡೊಣ ಎಂದು ಕರೆಯುತ್ತಾರೆ. ಇದು ಸಂಸ್ಕೃತ ದ್ರೋಣಿಯ ತದ್ಭವ ರೂಪ.

ದೊಣೆಕುಂಟ

- **ತೋಟ** : ಕ್ಷೇತ್ರವಾಚಕ. "ಉದ್ಯಾನ, ಹಿತ್ತಲು, ನೆಟ್ಟು ಬೆಳಸಿದ ಗಿಡ ಮರಗಳ ಸಮೂಹ."[೧೩] ತೆಲುಗಿನಲ್ಲಿ ತೋಟ ತೋಟಂ ಎಂದು ಕರೆಯುತ್ತಾರೆ.

ಕಡೇತೋಟ

- ದಿನ್ನೆ : ಭೌಗೋಳಿಕ ಲಕ್ಷಣ ಸೂಚಿಸುವ ಪದ. "ದಿಬ್ಬ, ತಿಟ್ಟು, ಎತ್ತರದ ಗುಡ್ಡ, ದಿಮ್ಮೆ."[೧೪] ತೆಲುಗಿನಲ್ಲಿ ದಿನ್ನ ಎಂದು 'ಅ' ಕಾರಂತವಾಗಿ ಬಳಕೆಯಾಗುತ್ತದೆ.

ಅಗಸಲದಿನ್ನೆ

ಮೋಟರದಿನ್ನೆ

ಜರ್ನಲದಿನ್ನೆ

ದೊಂಬಲದಿನ್ನೆ

ವೀರಲದಿನ್ನೆ

- **ದೊಡ್ಡಿ** : ವಾಸ್ತವ್ಯವಾಚಿ. ''ಹಟ್ಟಿ, ಕೊಟ್ಟಿಗೆ, ಯಜಮಾನರಿಲ್ಲದಂತಹ ದನಕರುಗಳನ್ನು ಕಟ್ಟುವ ಮನೆ. ಮೂಲದ ಮನೆ.''[೧೫] ತೆಲುಗಿನಲ್ಲಿ ಇದೇ ಅರ್ಥದಲ್ಲಿ ಬಳಕೆಯಲ್ಲಿದೆ.

ಕಾಟೇದೊಡ್ಡಿ	ಚಿರುಮನ ದೊಡ್ಡಿ
ಕಾಮನದೊಡ್ಡಿ	ತಿಪ್ಪಲದೊಡ್ಡಿ
ಗುರ್ರಲದೊಡ್ಡಿ	ದಿಬ್ಬನದೊಡ್ಡಿ
ಗೋತುಲದೊಡ್ಡಿ	ಬಸಲದೊಡ್ಡಿ
	ಬಾಪುಲದೊಡ್ಡಿ

- **ಪಲ್ಲಿ/ಪಲ್ಲೆ** : ವಾಸ್ತವ್ಯವಾಚಿ. ''ಪಲ್ಲಿ, ಹಳ್ಳಿ, ಮನೆ, ಗೌಳಿ''[೧೬] ತೆಲುಗಿನಲ್ಲಿ ಪಲ್ಲಿ, ಪಲ್ಲೆ ಎಂದು ಬಳಕೆಯಾಗುತ್ತಿದೆ.

ಪಲ್ಲಿಪಾಡು

ಪಾಡು : ಪಾಡ (ಹಾಡ) ಸ್ಥಳ, ಸಂದರ್ಭ, ಚೌಕಟ್ಟು.''[೧೭]

ಪಲ್ಲಿಪಾಡು

ಪುರ/ಪುರಿ : ವಾಸ್ತವ್ಯವಾಚಿ ಪದ. ಸಂಸ್ಕೃತ ಪದ. ''ಪಟ್ಟಣ, ಮನೆ, ನಗರ, . ನದಿ ಕಾಲುವೆ''[೧೮] ತೆಲುಗಿನಲ್ಲಿ `ಮ` ಕಾರಾಂತ್ಯವಾಗಿ `ಪುರಂ` ಎಂದು ಬಳಕೆಯಾಗುತ್ತದೆ.

''-ಅವರ, -ವರ, -ವಾರ, -ಪೂರ್.''[೧೯]

ಕೊಂಡಾಪುರಂ	ಬೊಮ್ಮಾಲಪುರಂ
ಡಣಾಪುರ	ವೆಂಗಲಾಪುರಂ
ನಾರಾಯಣಪುರ	ಸುಲ್ತಾನಪುರಂ
ಪರ್ವತಪುರಂ	ಬಾಪುರಂ

ಬಂಡೆ : ಶಿಲಾವಾಚಿ. ಅರೆಕಲ್ಲು, ಶಿಲೆ, ತೆಲುಗಿನಲ್ಲಿ 'ಬಂಡ' ಎಂದು ಬಳಕೆಯಾಗುತ್ತದೆ.

ಅರ್ಲೆಬಂಡೆ

ತ್ಯಾಕ್ಸಿಬಂಡ

ಪೀಸಲಬಂಡ

ಶಂಕರಬಂಡ

- ಬಾವಿ : ಜಲವಾಚಿ ಪದ. ವಾಪಿ (ಸಂಸ್ಕೃತ) "ಕೃತಕ ನೀರಿನ ಆಸರೆ."[೨೦]

ಕಲ್ಲುಬಾವಿ

ಓರಬಾವಿ

ಗೋನಬಾವಿ

ಬೆಟ್ಟ : ಎತ್ತರವಾದ ಸ್ಥಳ. ಪ್ರದೇಶ, ಗುಡ್ಡ, ಪರ್ವತ - ಕೊಂಡ (ತೆಲುಗು)

ದೇವರಬೆಟ್ಟ

ಪೀಕಲಬೆಟ್ಟ

- ಮಿದ್ದಿ : ತೆಲುಗು ಪದ. ಛಾವಣಿ, ಮಾಳಿಗೆ, ದಿನ್ನೆ, ಎತ್ತರವಾದ ಸ್ಥಳ ಎಂಬರ್ಥಗಳಿವೆ.

ಒಂಟಿಮಿದ್ದಿ

- ವಾಯಿ/ವಾಯ್ : ಅರ್ಥ ಸ್ಪಷ್ಟವಿಲ್ಲ. ಬಹುಶಃ ಬ>ವ ಪರಿವರ್ತನೆಯಾಗಿರಬೇಕು. ಬಾಯ್, ಬಾವಿ ಎಂಬರ್ಥವಿರಬಹುದು.

ಓರುವಾಯಿ (ಒಂದು+ಬಾವಿ=ಓರುವಾಯಿ)

- ವಾನಿ : ಜಲವಾಚಿ. ನದಿ, ದೊಡ್ಡಹಳ್ಳ.

ಆದವಾನಿ

ಸಂತೆ : ವಾಣಿಜ್ಯ ಕೇಂದ್ರ, ವ್ಯಾಪಾರ ನಡೆಯುವ ಸ್ಥಳ. ಪಟ್ಟಣ-ಸಂತೆ ಸ್ಥಳನಾಮ ನಿರ್ದಿಷ್ಟ ಸ್ಥಾನದಲ್ಲಿ ಬಳಕೆಯಾಗಿದೆ.

ಸಂತೆಕೂಡ್ಲೂರು

ಆದೋನಿ ಸ್ಥಳನಾಮಗಳ ಪೂರ್ವಪದದಲ್ಲಿ ವಾರ್ಗಿಕ ರೂಪದ ರಚನೆಗಳು

ಸ್ಥಳನಾಮಗಳಲ್ಲಿ ವಾರ್ಗಿಕಗಳಾಗಿ ಬಳಕೆಯಾಗುವ ಆಕೃತಿಮಾಗಳು ಕೆಲವೊಮ್ಮೆ ನಿರ್ದಿಷ್ಟಗಳಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಅಂತಹ ಒಂದು ಮಾದರಿಯನ್ನು ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

ಅರೆ+ಕಲ್ಲು = ಅರೆಕಲ್ಲು

ಅರ್ತಿ+ಬಂಡ = ಅರ್ತಿಬಂಡ

ಕಲ್ಲು+ಬಾವಿ = ಕಲ್ಲುಬಾವಿ

ಕಲ್ಲು+ಕುಂಟೆ = ಕಲ್ಲುಕುಂಟೆ

ಕುಪ್ಪ+ಕಲ್ಲು = ಕುಪ್ಪಗಲ್ಲು

ಗವಿ+ಕಟ್ಟು = ಗವಿಗಟ್ಟು

ಗೌಡ+ಕಲ್ಲು = ಗೌಡಗಲ್ಲು

ಚಿಂತ+ಕುಂಟೆ = ಚಿಂತಕುಂಟೆ

ಪಲ್ಲಿ+ಪಾಡು = ಪಲ್ಲಿಪಾಡು

ಪರ್ವತ+ಪುರಂ = ಪರ್ವತಪುರಂ

ಪೆಂಡೆ+ಕಲ್ಲು = ಪೆಂಡೆಕಲ್ಲು

ಸಂತೆ+ಕೂಡಲು+ಊರು = ಸಂತೆಕೂಡ್ಲೂರು.

ಮೇಲಿನ ಸ್ಥಳನಾಮಗಳು ಎರಡು ವಾರ್ಗಿಕ ರಚನೆಗಳು ಸೇರಿ ಹೆಸರಾಗಿರುವುದು ಕಂಡುಬರುತ್ತದೆ. ಸ್ಥಳನಾಮಗಳ ಪೂರ್ವ ಪದದಲ್ಲಿ ನಿರ್ದಿಷ್ಟ ಆಕೃತಿಮವಾಗಿ ಈ ಬಗೆಯ ವಾರ್ಗಿಕ ಆಕೃತಿಮಾಗಳು ಕಾರ್ಯನಿರ್ವಹಿಸುತ್ತವೆ. ಆದರೆ ಇವು ಪೂರ್ವ ಪದದಲ್ಲಿದ್ದಾಗ ವಾರ್ಗಿಕಗಳೆಂದು ಕರೆಯಲ್ಪಡುವುದಿಲ್ಲ. ಆಗ ನಿರ್ದಿಷ್ಟ ಆಕೃತಿಮಾಗಳೇ ತಮ್ಮ ಸ್ಥಾನವನ್ನು ನಿರ್ವಹಿಸುತ್ತವೆ. "ದ್ವಂದ್ವ ವಾರ್ಗಿಕ ಆಕೃತಿಮಾಗಳೇ ಹೀಗೆ ಸೇರಿ ಒಂದು ಸ್ಥಳನಾಮವಾದಾಗ ಆ ಪ್ರದೇಶದಲ್ಲಿ ಅವೆರಡರಲ್ಲಿ ಯಾವುದಕ್ಕೆ ಹೆಚ್ಚಿನ ಆವರ್ತನವುಂಟೋ ಅದು ವಾರ್ಗಿಕ ಸ್ಥಾನ ಪಡೆಯುತ್ತದೆ."[೨೧] ವಾರ್ಗಿಕ ಆಕೃತಿಮಾಗಳೇ ಅನೇಕ ಬಾರಿ ಸ್ವತಂತ್ರ ಸ್ಥಳವಾಚಕಗಳಾಗಿ ಬಳಕೆಯಾಗಿರುವುದು ಕಂಡುಬರುತ್ತದೆ.

ಆದೋನಿ ತಾಲೂಕು ಸ್ಥಳನಾಮಗಳು ಮತ್ತು ಸಾಮಾಜಿಕ ಸಂಬಂಧ

ಭಾಷೆಯ ರಚನೆಯಲ್ಲಿ ಧ್ವನಿ, ಪದ, ವಾಕ್ಯ, ಅರ್ಥ ಮುಂತಾದ ಅಂಶಗಳಿರುವಂತೆ ಸಾಮಾಜಿಕ ರಚನೆಯಲ್ಲಿ ಮಾನವನಿಗೆ ಲಿಂಗ, ವರ್ಗ, ಜಾತಿ ಮುಂತಾದ ಅಂಶಗಳಿವೆ. "ಸಾಂಸ್ಕೃತಿಕ ಸ್ತರಗಳ ನಾನಾ ಜನಾಂಗಗಳ ಅಸ್ತಿತ್ವವು ಸ್ಥಳನಾಮಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದಾಗಿದೆ."[೨೨] ಇಂತಹ ನಾಮಗಳು ನೇರವಾಗಿ ಅಲ್ಲದಿದ್ದರೂ "ಸಂಸ್ಕೃತಿಯ ಪಳೆಯುಳಿಕೆಗಳಂಥ ಅವಶೇಷಗಳಾಗಿರುವುದರಿಂದ ಅವು ಪರೋಕ್ಷವಾಗಿಯಾದರೂ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ."[೨೩] ಈ ಬಗೆಯ ಸಾಮಾಜಿಕ ಅಧ್ಯಯನದಿಂದ "ಒಂದು ಸಮಾಜದಲ್ಲಿನ ವರ್ಣವ್ಯವಸ್ಥೆ, ನಾಗರಿಕತೆ, ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುತ್ತದೆ."[೨೪]

ಬ್ರಾಹ್ಮಣರು

ಬ್ರಾಹ್ಮಣ ಸಮುದಾಯಕ್ಕೆ ಸಂಬಂಧಿಸಿದ ಸ್ಥಳ, ಗ್ರಾಮನಾಮಗಳು ಆದೋನಿ ಭಾಗದಲ್ಲಿ ಕಂಡುಬಂದಿರುವುದನ್ನು ಕಾಣಬಹುದಾಗಿದೆ. ಬ್ರಾಹ್ಮಣ ಪದಕ್ಕೆ ಸಮಾನವಾದ ತೆಲುಗು ಭಾಷೆಯಲ್ಲಿ - ಬಾಪುಲ ಎಂಬ ಪದ. ಈ ಬಗೆಯ ಗ್ರಾಮನಾಮಗಳು ಆದೋನಿ ಭಾಗದಲ್ಲಿವೆ.

ಬಾಪುರಂ

ಬಾಪುಲದೊಡ್ಡಿ

ತೆಲುಗಿನ ಪ್ರಭಾವದಿಂದ ಬಾಪುಲ ಎಂದು ಆರಂಭವಾಗುವ ಈ ತೆರನಾದ ಹೆಸರುಗಳನ್ನು ಬ್ರಾಹ್ಮಣರ ನೆಲೆಗಳೆಂದು ಗುರುತಿಸಬಹುದು.

- ಬೊಮ್ಮ ನಿರ್ದಿಷ್ಟವನ್ನು ಹೊಂದಿದ ವಾಸ್ತವ್ಯಗಳು.

ಭಟ್ಟರ ಬೊಮ್ಮಲಾಪುರ

ಬೊಮ್ಮಪಲ್ಲಿ

ಹೀಗೆ ಬ್ರಾಹ್ಮಣ ಸಮುದಾಯವನ್ನು ಸೂಚಿಸುವ ಅಯ್ಯ-ಅಯ್ಯವಾರು (ತೆಲುಗು) ಬ್ರಾಹ್ಮಣ-ಬಾಪುಲ (ತೆಲುಗು) ಮುಂತಾದ ನಿರ್ದಿಷ್ಟ ವಾರ್ಗಿಕಗಳನ್ನು ಹೊಂದಿದ ಸ್ಥಳನಾಮಗಳಿವೆ.

ಇಂದಿನ ಆಧುನಿಕ ವಿದ್ಯಮಾನದಲ್ಲಿಯೂ ಕೆಲವು ನಗರಗಳಲ್ಲಿ ಬ್ರಾಹ್ಮಣ ಸಮುದಾಯ ಪ್ರತ್ಯೇಕವಾಗಿ ವಾಸಿಸುತ್ತಿರುವುದು ಕಂಡುಬರುತ್ತದೆ. ಅವರು ತಮ್ಮ ವಾಸ್ತವ್ಯಗಳಿಗೆ ವೈಷ್ಣವ ಸಂಬಂಧೀ ದೈವಮೂಲದ ಹೆಸರುಗಳನ್ನು ನಿರ್ದೇಶಿಸಿಕೊಂಡಿರುವುದು ಕಂಡುಬರುತ್ತದೆ.

ರಾಘುವೇಂದ್ರ ಕಾಲನಿ

ಸ್ಥಳನಾಮ ನಿರ್ದಿಷ್ಟ ಹಾಗೂ ವಾರ್ಗಿಕಗಳ ನಡುವೆ ‘ಲಾ’ ಕಾರವು ಬಳಕೆಗೊಂಡಿದೆ.

ಭಟ್ಟರಬೊಮ್ಮ|ಲಾ|ಪುರ

ಸ್ಥಳನಾಮ ನಿರ್ದಿಷ್ಟ ಹಾಗೂ ವಾರ್ಗಿಕಗಳ ನಡುವೆ ಯಾವುದೇ ಸಂಬಂಧಿವಾಚಕವಿಲ್ಲದೇ ಬಳಕೆಗೊಂಡಿದೆ.

ಬೊಮ್ಮಪಲ್ಲೆ

ಸಾಮಾನ್ಯವಾಗಿ ಬೊಮ್ಮ ಸಂಬಂಧಿ ಹೆಸರುಗಳು ಬ್ರಾಹ್ಮಣರ ನೆಲೆಗಳೆಂದು ಗುರುತಿಸಬಹುದಾದರೂ, ಕೆಲವು ದ್ವಂದ್ವಗಳು ಮೇಲಿನ ಉದಾಹರಣೆಗಳಲ್ಲಿವೆ. ‘ಬೊಮ್ಮಲಾ’ ಎನ್ನುವ ಸ್ಥಳನಾಮದಲ್ಲಿ ‘ಲಾ’ ಸ್ತ್ರೀವಾಚಿ ಪದವಾಗುತ್ತದೆ. ಕರ್ನಾಟಕದಲ್ಲಿ ಕಂಡುಬರುವ - ನಾಗಲಾ, ಶಾಂತಲಾ, ಶಕುಂತಲಾ ಮುಂತಾದ ವ್ಯಕ್ತಿನಾಮಗಳಲ್ಲಿ |ಲಾ| ಪದವು ಕೊನೆಯಲ್ಲಿದೆ. ಇದರಿಂದ ಬ್ರಾಹ್ಮಣರ ನೆಲೆಯೆಂದು ಹೇಳಲು ಕೆಲವು ಸಂದೇಹಗಳು ಬರಬಹುದು. ತೆಲುಗು ಭಾಷೆಯಲ್ಲಿ ಬೊಮ್ಮ = ಎಂದರೆ ಗೊಂಬೆ. ಬೊಂಬೆ ಎಂಬರ್ಥವಿದೆ. ಈ ಬಗೆಯ ಅರ್ಥಗಳು ನಿಜ ನಿಷ್ಪತ್ತಿಗೆ ಬಹುಶಃ ದೂರವೇ ಉಳಿಯುತ್ತವೆ. “ಬ್ರಹ್ಮ ತದ್ಭವಗೊಂಡ ಬೊಮ್ಮ ಆಗಿದೆ. ಕ್ಷೇತ್ರ ಮಾಹಿತಿಯ ಪ್ರಕಾರ ಇವು ಬ್ರಾಹ್ಮಣರ ಸಮುದಾಯಗಳ ವಾಸ್ತವ್ಯವೆಂದೇ ತಿಳಿಯುತ್ತದೆ.”[೨೫]

ಕ್ಷತ್ರಿಯರು : ಕ್ಷತ್ರಿಯ ಎಂಬ ಸ್ಥಳನಾಮ ಕಂಡುಬರದಿದ್ದರೂ, ಕ್ಷಾತ್ರಗುಣ ಹೊಂದಿದ ಅರಸರು, ವೀರರು ಎಂದು ಕರೆದವರನ್ನು ಹೆಸರಿಸುತ್ತಾ ಕ್ಷತ್ರಿಯರಿಗೆ ಸಂಬಂಧಿಸಿದ ಸ್ಥಳನಾಮಗಳು ಕಂಡುಬರುತ್ತವೆ.

ಪಾಂಡವಗಲ್ಲು

ವೀರಲದಿನ್ನೆ

ಈ ಸ್ಥಳನಾಮಗಳಲ್ಲಿ ಬಂದಿರುವ - ಅರಸ, ವೀರ ಹೆಸರುಗಳು ನೇರವಾಗಿ ಕ್ಷತ್ರಿಯರನ್ನು ಬಿಂಬಿಸಲಾರವಾದರೂ, ಕ್ಷಾತ್ರಗುಣವನ್ನು ಪ್ರತಿನಿಧಿಸುವ ದೃಷ್ಟಿಯಿಂದ ಇವುಗಳನ್ನು ಗುರುತಿಸಬಹುದು. ಆದರೂ ಇವು ಸಮರ್ಪಕವೆಂದು ಹೇಳಲಾಗದು. ಕೆಲವು ವ್ಯಕ್ತಿನಾಮವಾಚಕ ಸ್ಥಳನಾಮಗಳಾಗುತ್ತವೆ. ಆದರೆ ಇದೊಂದು ಮಾದರಿ.

ಲಿಂಗಾಯಿತರು : ಹನ್ನೆರಡನೆ ಶತಮಾನದಲ್ಲಿ ಉಂಟಾದ ವೀರಶೈವ ಪಂಥದ ಪ್ರಭಾವದಿಂದ ಗ್ರಾಮನಾಮಗಳಲ್ಲಿ ಬಸವಣ್ಣನ ಪ್ರಭಾವ ಬೀರಿರುವುದು ಕಂಡುಬಂದಿದೆ.

ಬಸವಪುರ

ಅಗಸರು : ಬಟ್ಟೆ ತೊಳೆಯುವ ಪ್ರಾಚೀನ ವೃತ್ತಿ. ಕಾವ್ಯ ಶಾಸನಾದಿಗಳಲ್ಲಿ ಈ ಸಮುದಾಯದ ಉಲ್ಲೇಖವಿದೆ. 'ಮಡಿವಾಳ' ಎಂಬ ಪದ ಈ ಸಮುದಾಯಕ್ಕೆ ಬಳಕೆಯಾಗುತ್ತದೆ. ಇವರಿಗೆ ಸಂಬಂಧಿಸಿದ ಸ್ಥಳನಾಮಗಳು ಆದೋನಿ ತಾಲೂಕಿನಲ್ಲಿ ಕಂಡುಬರುತ್ತವೆ.

ಅಗಸನೂರು

ಅಗಸಲದಿನ್ನೆ

ಉಪ್ಪಾರರು : ಉಪ್ಪು ತಯಾರಿಸುವುದು ಮತ್ತು ಗೋಡೆ ಕಟ್ಟುವುದು ಇವರ ವೃತ್ತಿ. "ಉಪ್ಪು ತೆರಿಗೆ (ಉಪ್ಪುದೆರೆ) ಪ್ರಾಚೀನ ಕರ್ನಾಟಕದಲ್ಲಿ ಇವರ ವೃತ್ತಿಗೆ ಇತ್ತು. ೧೬ನೇ ಶತಮಾನದ ಶಾಸನ - ಉಪ್ಪಾರ ಎಂಬುದು ಒಂದು ಜಾತಿ ಎಂಬುದನ್ನು ತಿಳಿಸುತ್ತದೆ."[೨೬]

ಉಪ್ಪಾರಹಾಳ್

ಆದೋನಿ ಪರಿಸರದ ವ್ಯಕ್ತಿನಾಮಾಧಾರಿತ ಸ್ಥಳನಾಮಗಳು

ಯಾವುದೇ ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಮಾನವನ ಆಲೋಚನಾ ವಿಧಾನ, ಜೀವನ ಶೈಲಿಯು ಅನೇಕ ಸ್ಥಿತ್ಯಂತರ ಪ್ರಕ್ರಿಯೆಗೆ ಒಳಪಡುತ್ತಲೇ ಇರುತ್ತದೆ. ಈ ಎಲ್ಲ ಸ್ಥಿತ್ಯಂತರಗಳು ಜೀವನ ವಿಧಾನದ ಜೊತೆ ಜೊತೆಗೆ ಆಯಾ ಭೌಗೋಳಿಕ ಪರಿಸರದ ಮೇಲೆ ವಿಶೇಷವಾಗಿ ಪ್ರಭಾವ ಬೀರುತ್ತದೆನ್ನಬಹುದು. ಸಂಸ್ಕೃತಿಯ ಪರಿಚಲನೆಯಲ್ಲಿ ಈ ರೀತಿಯ ಬದಲಾವಣೆ ಅನಿವಾರ್ಯ. ಸ್ಥಳನಾಮ ನಿರ್ದೇಶನ ಆರಂಭಿಕ ಹಂತ ನೈಸರ್ಗಿಕ ವಾತಾವರಣವನ್ನು ಅವಲಂಬಿಸಿತ್ತು. ತರುವಾಯದ ಘಟ್ಟದಲ್ಲಿ ಜನಾಂಗಿಕ ನಿಷ್ಠೆಗೆ ಈ ಪ್ರವೃತ್ತಿ ಸಾಗಿಬಂತು. ಇದರೊಂದಿಗೆ ಯಾವುದೇ ಕಾರಣಕ್ಕೆ ವಿಶೇಷವಾದ ಘಟನೆಯಿಂದ ಹೆಸರಾದ ವ್ಯಕ್ತಿಯನ್ನು ಒಂದೊಂದು ಗ್ರಾಮಕ್ಕೆ ಹೆಸರಿಟ್ಟು ಕರೆದರು. ಪರಂಪರೆಯ ನೆನಪಿಗಾಗಿ ಈ ಬಗೆಯ ನಾಮ ನಿರ್ದೇಶನ ನಡೆಯಿತು.

ಆದೋನಿ ತಾಲೂಕಿನ ಕಂಡುಬರುವ ವ್ಯಕ್ತಿನಾಮ ಆಧಾರಿತ ಸ್ಥಳನಾಮಗಳು

ಈರನಗಲ್ಲು	ಬಂಟಕುಂಟೆ
ಕಾಮನದೊಡ್ಡಿ	ಬಸಲದೊಡ್ಡಿ
ಕಾಟೇದೊಡ್ಡಿ	ಬಸಾಪುರಂ-೧
ಕಾಮವರಂ	ಬಸಾಪುರಂ-೨

ಕುಂಟನಹಾಳ್	ಮಲ್ಲನಹಟ್ಟಿ
ಗೌಡಗಲ್ಲು	ರಂಗಾಪುರಂ
ತಾರಾಪುರಂ	ವಿರುಪಾಪುರಂ
ತಿಪ್ಪಲದೊಡ್ಡಿ	ಸಾಂತನೂರು
ದೊಡ್ಡನಕೇರಿ	ಸಾಂಬಗಲ್ಲು
ನಾರಾಯಣಪುರ	ಸುಲ್ತಾನಪುರ
ಪಾಂಡವಗಲ್ಲು	ಸೂಳೆಕೆರೆ
	ಹನವಾಳ್

ಈ ಪಟ್ಟಿಯನ್ನು ಗಮನಿಸಿದರೆ ಆದೋನಿ ತಾಲೂಕಿನಲ್ಲಿ ವ್ಯಕ್ತಿನಾಮಾಧಾರಿತ ಸ್ಥಳನಾಮಗಳು ಹೆಚ್ಚಾಗಿವೆ.

<u>ಆದೋನಿ ತಾಲೂಕು</u>

ಒಟ್ಟು ಸ್ಥಳನಾಮ	ವ್ಯಕ್ತಿ ಆಧಾರಿತ ಸ್ಥಳನಾಮ
೧೧೮	೨೪

ಒಟ್ಟಾರೆ ಈ ಅಧ್ಯಯನದಿಂದ ಕರ್ನಾಟಕ ಭೌಗೋಳಿಕ ವ್ಯಾಪ್ತಿ ಎಷ್ಟಿತ್ತು ಎಂಬುದು ಗೊತ್ತಾಗಲು ಊರ ಹೆಸರುಗಳಲ್ಲಿ ಸೂಚನೆ ಸಿಗುತ್ತದೆ. ಕನ್ನಡಿಗರು ಇದ್ದ ಊರುಗಳಿಗೆ ಕನ್ನಡದ ಹೆಸರುಗಳಿದ್ದು ಈಗ ಆ ಊರುಗಳು ಕರ್ನಾಟಕ ಎಂದು ನಾವು ತಿಳಿದಿರುವ ಭೌಗೋಳಿಕ ಪ್ರದೇಶದಿಂದ ಹೊರಗುಳಿದಿರುವುದನ್ನು ಗುರುತಿಸಬಹುದಾಗಿದೆ.

ಅಡಿಟಿಪ್ಪಣಿ

೧. ವಿಶ್ವಕೋಶ, ಸಂ.ಕೆ.ನಾರಾಯಣ

೨. ಜಾಜಿ ದೇವೇಂದ್ರಪ್ಪ, ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಪು.೭೮

೩. ಸಿರಿಗನ್ನಡ ಅರ್ಥಕೋಶ, ಪು.೨೬೬

೪. ವಿ.ಗೋಪಾಲಕೃಷ್ಣ, ಸ್ಥಳನಾಮ ಅಧ್ಯಯನ, ಪು.೬೦-೬೧

೫. ಸಿರಿಗನ್ನಡ ಅರ್ಥಕೋಶ, ಪು.೬೮

೬. ಸಿರಿಗನ್ನಡ ಅರ್ಥಕೋಶ, ಪು.೧೨೫

೭. ಸಿರಿಗನ್ನಡ ಅರ್ಥಕೋಶ, ಪು.೧೩೨

೮. ಸಿರಿಗನ್ನಡ ಅರ್ಥಕೋಶ, ಪು.೧೪೦

೯. ಸಿರಿಗನ್ನಡ ಅರ್ಥಕೋಶ, ಪು.೧೪೧

೧೦. ಸಿರಿಗನ್ನಡ ಅರ್ಥಕೋಶ, ಪು.೧೬೧

೧೧. ಕನ್ನಡ ನಿಘಂಟು, ಸಂ.೨, ಪು.೨೫೨೧

೧೨. ಸಿರಿಗನ್ನಡ ಅರ್ಥಕೋಶ, ಪು.೨೧೧

೧೩. ಸಿರಿಗನ್ನಡ ಅರ್ಥಕೋಶ, ಪು.೨೩೬

೧೪. ಸಿರಿಗನ್ನಡ ಅರ್ಥಕೋಶ, ಪು.೨೫೫

೧೫. ಸಿರಿಗನ್ನಡ ಅರ್ಥಕೋಶ, ಪು.೨೬೬

೧೬. ಸಿರಿಗನ್ನಡ ಅರ್ಥಕೋಶ, ಪು.೩೨೪

೧೭. ಸಿರಿಗನ್ನಡ ಅರ್ಥಕೋಶ, ಪು.೩೨೯

೧೮. ಸಿರಿಗನ್ನಡ ಅರ್ಥಕೋಶ, ಪು.೩೪೦

೧೯. ವಾಗಾರ್ಥ, ಪು.೧೬

೨೦. ಸಿರಿಗನ್ನಡ ಅರ್ಥಕೋಶ, ಪು.೩೭೯

೨೧. ವಾಗಾರ್ಥ, ಪು.೨೦

೨೨. ದೇ.ಜ.ಗೌ. ಸ್ಥಳನಾಮ ವ್ಯಾಸಂಗ, ಪು.೨೩

೨೩. ಆರ್.ಕೆ. ಮಣಿಪಾಲ, ಹೆಸರಿನಲ್ಲೇನಿದೆ?, ಪು.೧೫

೨೪. ಡಾ.ವಿಶ್ವನಾಥ ಸಕಲೇಶ್ವರ, ಪರಿಸರದ ಸ್ಥಳನಾಮಗಳು, ಪು.೪೯

೨೫. ಜಾಜಿ ದೇವೇಂದ್ರಪ್ಪ, ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಪು.೨೨೮

೨೬. ಜಾಜಿ ದೇವೇಂದ್ರಪ್ಪ, ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಪು.೨೩೨

□□

ಅಧ್ಯಾಯ ೧೧

ಸಮಾರೋಪ

ಅಧ್ಯಾಯ ೧೧

ಸಮಾರೋಪ

ಮಾನವ ತನ್ನ ಸುತ್ತ ಇರುವ ಪ್ರಕೃತಿಯಲ್ಲಿನ ಪ್ರಾಣಿಗಳನ್ನು ನೋಡಿ ಅವುಗಳಿಂದ ಬೇಕಾದಷ್ಟು ಪ್ರಯೋಜನವನ್ನು ಪಡೆದುಕೊಂಡಿದ್ದಾನೆ. ಹಕ್ಕಿಯ ಹಾರಾಟವನ್ನು ನೋಡಿ ವಿಮಾನವನ್ನು ನಿರ್ಮಿಸಿದ. ಮೀನಿನ ಈಜಾಟವನ್ನು ನೋಡಿ ಹಡಗು ನಿರ್ಮಿಸಿದ. ಪ್ರಕೃತಿಯಲ್ಲಿ ದೊರೆತ ಗಾಳಿ, ಬೆಳಕು, ನೀರುಗಳನ್ನು ಬಳಸಿ ತನ್ನ ನಾಗರೀಕತೆಯನ್ನು ಬೆಳಸಿಕೊಂಡಿದ್ದಾನೆ. ಸಮುದ್ರದ ತಳವನ್ನು ಶೋಧಿಸಿದ್ದಾನೆ. ಚಂದ್ರ ಮಂಡಲದಲ್ಲಿ ಕಾಲಿಟ್ಟಿದ್ದಾನೆ. ತನ್ನ ದೇಹ ಮನಸ್ಸುಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿ ಅವುಗಳಿಂದ ರೋಗರುಜಿನಗಳನ್ನು ಪಾರು ಮಾಡಲು ಸಾಹಸ ಮಾಡಿದ್ದಾನೆ. ಅವನು ತಿಳಿಯಬೇಕಾದದ್ದು ಅಪಾರವಾಗಿದೆ ನಿಜ. ಆದರೆ ತಿಳಿದಿರುವಷ್ಟು ಸಂಗತಿ ಸಾಮಾನ್ಯವಾದುದ್ದೇನಲ್ಲ. ಮನುಷ್ಯನ ಈ ಸಾಧನೆಗಳಿಗೆಲ್ಲಾ ಕಿರೀಟ ಪ್ರಾಯವಾದ ಸಾಧನೆ ಅವನು ಭಾಷೆಯನ್ನು ಕಂಡುಕೊಂಡಿದ್ದು. ಅವನು ಮಾಡಿರುವ ಅನೇಕ ಸಾಧನೆಗಳಿಗೆ ಬೆನ್ನುಲುಬು ಈ ಸಾಧನೆ. ಇಂತಹ ಸಾಧನೆಯ ಮುಖಾಂತರ ಕಂಡುಕೊಂಡ ಭಾಷೆಯಲ್ಲಿ ಅನೇಕ ಭಾಷಾ ಪ್ರಭೇದಗಳಿವೆ. ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಪ್ರಭೇದಗಳನ್ನು ಕಂಡುಕೊಂಡಿರುತ್ತದೆ. ಆಯಾ ಭಾಷಾ ಪ್ರದೇಶ ಅದನ್ನು ಆಡುವ ಜನ ಸಮುದಾಯ. ಜನರ ಸಮಾಜ, ಸಂಸ್ಕೃತಿ, ವೃತ್ತಿ, ಧರ್ಮ ಮುಂತಾದವುಗಳಿಗೆ ತಕ್ಕಂತೆ ಪ್ರಭೇದಗಳು ಕಾಣಿಸಿಕೊಳ್ಳುತ್ತವೆ.

ಇಂತಹ ಪ್ರಭೇದಗಳು ಒಂದು ಭಾಷೆಯಲ್ಲಿ ಹೆಚ್ಚಿರಬಹುದು. ಇನ್ನೊಂದು ಭಾಷೆಯಲ್ಲಿ ಕಡಿಮೆ ಇರಬಹುದು. ಇವು ಇಷ್ಟೇ ಇರಬೇಕು ಎಂಬ ನಿಯಮವೇನೂ ಇಲ್ಲ. ಒಂದು ಭಾಷಾ ಪ್ರದೇಶ ವಿಶಾಲವಾಗಿದ್ದಾಗ ಆ ಭಾಷೆ ಆಡುವವರ ಜನಸಂಖ್ಯೆ ಹೆಚ್ಚಿದಾಗ ಸಹಜವಾಗಿ ಆ ಭಾಷೆಯಲ್ಲಿ ಪ್ರಭೇದಗಳ ಸಂಖ್ಯೆ ಹೆಚ್ಚಿರುತ್ತದೆ.

ಕನ್ನಡ ಭಾಷೆ ಒಂದೇ ಆದರೂ ಅದು ಎಲ್ಲಾ ಪ್ರದೇಶಗಳಲ್ಲೂ ಒಂದೇ ರೀತಿಯಲ್ಲಿ ಬಳಕೆಯಲ್ಲಿ ಇಲ್ಲ. ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ವ್ಯತ್ಯಾಸ ಹೆಚ್ಚಿದಂತೆಲ್ಲಾ ಜನರ ಮಾತುಗಳಲ್ಲಿ ಪರಸ್ಪರ ಅರಿವು ಕಡಿಮೆಯಾಗುತ್ತದೆ. ಅರಿವು ಕಡಿಮೆಯಾದಾಗ ಅದು ಒಂದು ಪ್ರಭೇದವಾಗಿ ಪರಿಣಮಿಸುತ್ತದೆ.

ಒಂದು ಭಾಷೆಯಲ್ಲಿ ಪ್ರಭೇದಗಳಿರುವುದು ಸೋಜಿಗದ ಸಂಗತಿಯೇನಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಅನ್ಯಭಾಷಾ ಸಂಸರ್ಗ, ಭೌಗೋಳಿಕ ದೂರಾಂತರ ಮುಂತಾದವುಗಳಿಂದ ಭಾಷೆಯೊಳಗೆ ಪ್ರಭೇದ ತಲೆದೋರಿ ಅವು ತಮ್ಮಷ್ಟಕ್ಕೆ ಬೆಳೆದುಕೊಳ್ಳುತ್ತವೆ. ಪ್ರಾಕೃತಿಕ ರಾಜಕೀಯ ಪ್ರತಿಬಂಧಗಳಿಂದ ಒಂದು ಪ್ರದೇಶದ ಜನಕ್ಕೂ ಮತ್ತೊಂದು ಪ್ರದೇಶದ ಜನಕ್ಕೂ ಮಧ್ಯ ಸಂಪರ್ಕ ಕಡಿದು ಭಾಷಾ ಪ್ರಭೇದಕ್ಕೆಡೆ ಮಾಡಿಕೊಡುತ್ತದೆ. ಕನ್ನಡ ಭಾಷೆಯನ್ನಾಡುವ ಜನ ಅನಿವಾರ್ಯವಾಗಿ ಮತ್ತೊಂದು ಪ್ರದೇಶದಲ್ಲಿ ನೆಲೆಸುತ್ತಾರೆ. ತಾಯ್ನಾಡಿಗೂ ಅವರಿಗೂ ಮಧ್ಯ ಸಂಪರ್ಕ ಕಡಿದುಹೋಗುತ್ತದೆ. ಮಾತೃಭಾಷೆಯೊಡನೆ ಸಂಪರ್ಕ ಕಡಿದು ಹೋದುದರಿಂದಲೂ, ಆ ಪ್ರದೇಶದ ಭಾಷೆಯ ಒತ್ತಡಕ್ಕೆ ಸಿಕ್ಕಿಯೂ ಆ ಪರಿಸರದ ಭಾಷೆ ಭಿನ್ನ ರೀತಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಸಾಕಷ್ಟು ಭಿನ್ನತೆ ಬೆಳೆಸಿಕೊಂಡು ಮುಖ್ಯ ಪ್ರಭೇದವಾಗಿ ಪರಿಣಮಿಸುತ್ತದೆ.

ಇಲ್ಲಿಯವರೆಗೂ ಒಳನಾಡ ಕನ್ನಡ ಪ್ರಭೇದಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಭಾಷಾ ಪುನರ್‌ವಿಗಂಡನೆ ಆಗುವುದಕ್ಕಿಂತ ಮುಂಚೆ ಒಳನಾಡಾಗಿದ್ದು ಇಂದು ಹೊರನಾಡು ಅಥವಾ ಗಡಿನಾಡು ಆಗಿರುವ ಆದೋನಿ ಪ್ರದೇಶದ 'ಆದೋನಿ ಕನ್ನಡ' ಭಾಷಾಧ್ಯಯನದಲ್ಲಿ ಒಂದು ಹೊಸ ಮಾದರಿಯಾಗಿದೆ. ಜೊತೆಗೆ ಇದೊಂದು ದ್ವಿಭಾಷಿಕ ಪರಿಸರವಾಗಿದೆ. ಡಾ. ಸಂಗಮೇಶ ಸವದತ್ತಿಮಠ ಅವರು ಕನ್ನಡ ಭಾಷಾ ಪ್ರಭೇದಗಳನ್ನು ವಿಂಗಡಿಸಿದ್ದಾರೆ. ಅದರಲ್ಲಿ 'ಆದೋನಿ ಕನ್ನಡ'ದ ಬಗೆಗೆ ಅಧ್ಯಯನ ಆಗಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆದೋನಿ ಕನ್ನಡ ಬರಹ ಕನ್ನಡಕ್ಕಿಂತ ಬೇರೆ. ಅಂದರೆ ಆದೋನಿ ಕನ್ನಡ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು, ವಿಶಿಷ್ಟ ಪದಗಳ ಪ್ರಯೋಗಾರ್ಥ, ನುಡಿಮಿಶ್ರಣ, ಪದರಚನೆ, ದ್ವಿಭಾಷಿಕತೆ ಶೈಕ್ಷಣಿಕ ನೆಲೆ, ವ್ಯಕ್ತಿನಾಮಗಳು, ಸ್ಥಳನಾಮಗಳು, ಕಥಾಮಾದರಿ ಮತ್ತು ಹತ್ತು ವಿಭಿನ್ನ ವಲಯಗಳ ಪದಕೋಶಿ ಮುಂತಾದ ಭಾಷಿಕ ಮಾದರಿಗಳು ಬರಹ ಕನ್ನಡಕ್ಕಿಂತ ಬೇರೆಯಾಗಿವೆ ಎಂಬುದು ನಿದರ್ಶನಗಳಿಂದ ಸ್ಪಷ್ಟವಾಗಿದೆ. ಈ ವ್ಯತ್ಯಾಸಗಳಿಗೆ ಆದೋನಿ ಕನ್ನಡವು ಒಂದು ಪ್ರಾದೇಶಿಕ ಆಡುನುಡಿಯಾಗುವುದರ ಜೊತೆಗೆ ಅನ್ಯಭಾಷಾ ಪ್ರಭಾವ ಆಗಿದೆ ಎಂಬುದು ನಿದರ್ಶನದ ಮೂಲಕ ಸ್ಪಷ್ಟವಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ 'ಆದೋನಿ ಕನ್ನಡ' ಕನ್ನಡದ ಒಂದು ಮಹತ್ವವಾದ ದ್ವಿಭಾಷಿಕ ಪ್ರದೇಶ ಎಂದು ನಿರ್ಧರಿಸಬಹುದು.

ಆದೋನಿ ಭಾಷಿಕ ಪರಿಸರ ವಿಶಿಷ್ಟವಾಗಿದೆ. ಏಕೆಂದರೆ ಕನ್ನಡ ಮತ್ತು ತೆಲುಗು ಭಾಷೆಗಳು ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದವುಗಳು. ಕರ್ನಾಟಕದಲ್ಲಿ ಕನ್ನಡ ಮತ್ತು ಉರ್ದು ಭಾಷೆಗಳು ಬಹುಸಂಖ್ಯಾತರ ಭಾಷೆಯಾಗಿವೆ. ಅದೇ ರೀತಿ ತೆಲುಗು ಭಾಷೆ ಎರಡನೇ ಸ್ಥಾನದಲ್ಲಿದೆ. ಆದೋನಿಯ ಕನ್ನಡ ಮಾತೃ ಭಾಷೆಯವರು ಮನೆಯ ಆವರಣದಲ್ಲಿ ಕನ್ನಡ ಭಾಷೆಯನ್ನು ಸಾರ್ವಜನಿಕ ವಲಯದಲ್ಲಿ ತೆಲುಗು ಭಾಷೆಯನ್ನು ಬಳಸುತ್ತಿದ್ದಾರೆ. ಹಾಗೆ ಬಳಸುವಾಗ ತೆಲುಗು ಪದ ಗೊತ್ತಿಲ್ಲದ ಜಾಗಕ್ಕೆ ಕನ್ನಡದ ರೂಪ ಸೇರಿಸಿ ಬಳಸುವ ರೂಢಿಯಿದೆ. ಆದೋನಿ ತಾಲೂಕಿನ ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಮೇಲೆ ಕನ್ನಡದ ಪ್ರಭಾವವಿದೆ. ವಿದ್ಯಾವಂತ ತೆಲುಗರ ಮಾತು ತೆಲುಗುವಿನಿಂದ ಇಂಗ್ಲೀಷಿಗೆ ನುಡಿಪಲ್ಲಟ ಮಾಡಿದರೆ ಅವಿದ್ಯಾವಂತರು ತೆಲುಗು ಭಾಷೆಯಿಂದ ಕನ್ನಡಕ್ಕೆ ನುಡಿಪಲ್ಲಟ ಮಾಡುವ ಪ್ರಕ್ರಿಯೆ ಕಂಡುಬರುತ್ತದೆ. ಇದಕ್ಕೆ ಕಾರಣ ಅನೇಕ ಶತಮಾನಗಳ ಕಾಲ ಆದೋನಿ, ಆಲೂರು, ಬಳ್ಳಾರಿ, ಕರ್ನೂಲು ಮತ್ತು ಕಡಪ ಪ್ರದೇಶಗಳು ಒಂದೇ ಆಡಳಿತಕ್ಕೆ ಒಳಪಟ್ಟಿದ್ದವು ಎಂಬುದು ಚರಿತ್ರಾರ್ಹ ವಿಚಾರ. ಹಾಗಾಗಿ ಇದೊಂದು ದ್ವಿಭಾಷಾ ಪ್ರದೇಶವಾಗಿದೆ.

ಮೊದಲನೆ ಹಂತದಲ್ಲಿ ಆದೋನಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು ಎಂಬ ಅಧ್ಯಾಯವು ವಿಶಿಷ್ಟವಾದುದ್ದಾಗಿದೆ. ಪದಾಂತ್ಯ ಪರಿಸರದಲ್ಲಿ 'ಇ' ಕಾರಂತವಾಗುವುದು. ಉತ್ತರ ಕರ್ನಾಟಕದ ಉಪಭಾಷೆಯ ಲಕ್ಷಣ. ಆದರೆ ಆದೋನಿ ಕನ್ನಡದಲ್ಲಿ 'ಇ' ಕಾರಂತದ ಜೊತೆಗೆ 'ಎ' ಕಾರಂತ ಪದಗಳು ಉಚ್ಚಾರಣೆಯಲ್ಲಿವೆ. ಉದಾ. ಒಂಟೆ, ಇರುವೆ, ಮಡಿಕೆ, ಕಾಡಿಗೆ, ಕುಂಟೆ, ಬದನೆ, ಮುಸುರೆ ಮುಂತಾದ ಪದಗಳು ಆದೋನಿ ಕನ್ನಡದಲ್ಲಿವೆ. ಈ ಪ್ರದೇಶದ ಕನ್ನಡವನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡಿದಾಗ ಅನೇಕ ಅನುಮಾನಗಳಿಗೆ ದಾರಿ ಮಾಡಿಕೊಡುತ್ತದೆ. ಇದಕ್ಕೆ ಭಾಷಾತಜ್ಞರು ಅಭಿಪ್ರಾಯ ಈ ರೀತಿಯಾಗಿದೆ. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನು ಶ್ರೀರಂಗಪಟ್ಟಣದ ಕನ್ಯೆಯನ್ನು ವಿವಾಹವಾದ ಮೇಲೆ ಮೈಸೂರು ಜನರ ನಡುವೆ ಸಂಬಂಧ ಏರ್ಪಟ್ಟಿತ್ತು. ನಂತರ ಮೈಸೂರು ಆಡುಭಾಷೆಯ 'ಎ' ಕಾರಂತ ಪದಗಳು ಬಳ್ಳಾರಿ ಪ್ರಭೇದ ಮೇಲೆ ಪ್ರಭಾವ ಬೀರಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಬಳ್ಳಾರಿ ಭಾಷಾ ಪುನರ್‌ವಿಂಗಡನೆ ಆಯೋಗ ಆಗುವುದಕ್ಕಿಂತ ಮುಂಚೆ ಆದೋನಿ ತಾಲೂಕು ಬಳ್ಳಾರಿ ಜಿಲ್ಲೆಯಲ್ಲಿತ್ತು. ಈ ವಿಶಿಷ್ಟ ಧ್ವನಿ ಪ್ರಕ್ರಿಯೆಗೆ ಆನೆ ಬಂತಾನೆ, ಯಾವುರಾನೇ ಮೈಸೂರಾನೇ ಎಂಬ ಮಕ್ಕಳ ಹಾಡಿನ ಮೂಲಕ ಮತ್ತಷ್ಟು ಶೋಧನಾ ಮಾಡಿರುವುದು ಗಮನಿಸುವಂತಹ ಅಂಶ. ಬರಹ ಕನ್ನಡದಲ್ಲಿ ಕಲ್ಲು ಆದೋನಿ ಕನ್ನಡದ ಉಚ್ಚಾರಣೆಯಲ್ಲಿ ಕೊಲ್ಲು ಆಗಿದೆ. ಅಂದರೆ ಪದಾದಿಯ 'ಅ' ಕಾರವು ಆದೋನಿ ವ್ಯವಹಾರಿಕ ಕನ್ನಡ ಉಚ್ಚಾರಣೆಯಲ್ಲಿ 'ಒ' ಕಾರವಾಗಿದೆ. ಅಂದರೆ ಎಲ್ಲಾ ಸಂದರ್ಭದಲ್ಲೂ ಈ ಧ್ವನಿ ನಿಯಮ ಬಳಕೆಯಲ್ಲಿ

ಇಲ್ಲ, ಬಣ್ಣ-ಬೊಣ್ಣ, ಗಲ್ಲ-ಗೊಲ್ಲ ಆಗಿ ಉಚ್ಚಾರಣೆಯಲ್ಲಿ ಇಲ್ಲ. ಇಂತಹ ವಿಶಿಷ್ಟ ಧ್ವನಿ ನಿಯಮಗಳನ್ನು ರೂಪಿಸಲಾಗಿದೆ. ಮೇಲಿನ ಧ್ವನಿ ನಿಯಮಕ್ಕೆ ವಿರುದ್ಧವಾಗಿ ಪದಾದಿಯ 'ಒ' ಕಾರ ಆದೋನಿ ಕನ್ನಡದ ಉಚ್ಚಾರಣೆಯಲ್ಲಿ 'ಅ' ಕಾರವಾಗಿದೆ. ಉದಾಹರಣೆಗೆ, ಮೋಕಾ ಮಾಕ, ಮೊಲ ಮಲ ಆಗಿದೆ. ಅದೇ ರೀತಿ ಆದೋನಿ ವ್ಯವಹಾರಿಕ ಕನ್ನಡದ ಉಚ್ಚಾರಣೆಯಲ್ಲಿ 'ಆ್ಯ' ಧ್ವನಿ ಕಂಡುಬರುತ್ತದೆ. ಇದು ಇಂಗ್ಲೀಷ್ ಭಾಷೆಯಿಂದ (ಬ್ಯಾಂಕ್ ಪದದಿಂದ) ಬಂದ್ದಿದ್ದು ಎಂಬುದು ಭಾಷಾವಿಜ್ಞಾನಿಗಳ ಅಭಿಪ್ರಾಯ. ಹೀಗೆ ಆದೋನಿ ಕನ್ನಡದ ಉಚ್ಚಾರಣೆಯಲ್ಲಿ ಧ್ವನಿ ನಿಯಮಗಳು ವಿಶಿಷ್ಟವಾಗಿವೆ.

ಎರಡನೆ ಹಂತದಲ್ಲಿ 'ಪದ ರಚನೆ'ಯು ಬರಹ ಕನ್ನಡಕ್ಕಿಂತ ಆದೋನಿ ಕನ್ನಡದಲ್ಲಿ ವಿಭಿನ್ನವಾಗಿರುವುದನ್ನು ಗಮನಿಸಲಾಗಿದೆ. ದೊಡ್ಡವನು-ದೊಡ್ಡೋನು, ಚಿಕ್ಕವಳು-ಸಿಕ್ಕೋಳು, ಬಿಳಿಯದು-ಬಿಳೇದು, ಮೇಲಿನವರು-ಮ್ಯಾಲಿನೋರು ಈ ರೀತಿ ಭಿನ್ನವಾಗಿ ಬಳಕೆಯಲ್ಲಿವೆ. ವಿಭಕ್ತಿ ಪ್ರತ್ಯಯದಲ್ಲಿರುವ ವೈಶಿಷ್ಟ್ಯತೆಗಳನ್ನು ಗಮನಿಸಲಾಗಿದೆ. ಉದಾ. ದ್ವಿತೀಯ ವಿಭಕ್ತಿ ಬದಲಾಗಿ ಷಷ್ಠಿ ವಿಭಕ್ತಿ ಬಳಕೆಯಲ್ಲಿರುವುದು. ರಾಮನನ್ನು -ರಾಮನ್ನ, ಅವನನ್ನು-ಅವನ್ನ ಈ ರೀತಿ ವ್ಯತ್ಯಾಸಗಳೊಂದಿಗೆ ಬಳಕೆಯಲ್ಲಿವೆ. ವಿಶೇಷಣಗಳು, ಕ್ರಿಯಾಪದಗಳು ಮುಂತಾದವನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಕೃದಂತ, ವಿಶೇಷಣ, ಗುಣವಾಚಕ ಹಾಗೂ ಸ್ಥಾನಸೂಚಕ ಕ್ರಿಯಾ ವಿಶೇಷಣಗಳಿಗೆ ಪ್ರಥಮ ಪುರುಷ ಸರ್ವನಾಮ ರೂಪಗಳನ್ನು ಪ್ರತ್ಯಯವಾಗಿಸಿ ನಾಮಪದಗಳಂತೆ ಬಳಸಿಕೊಳ್ಳುವಾಗ ಭಿನ್ನವಾಗಿ ಬಳಕೆಯಲ್ಲಿವೆ. ವಿಭಕ್ತಿ ಪ್ರತ್ಯಯದಲ್ಲಿ ಇರುವ ವೈಶಿಷ್ಟ್ಯತೆಗಳನ್ನು ಗಮನಿಸಲಾಗಿದೆ. ಉದಾ. ದ್ವಿತೀಯ ವಿಭಕ್ತಿಗೆ ಬದಲಾಗಿ ಷಷ್ಠಿ ವಿಭಕ್ತಿ ಬಳಕೆಯಲ್ಲಿರುವುದು. ರಾಮನನ್ನು ರಾಮನ್ನ, ಅವನನ್ನು ಅವನ್ನ ಈ ರೀತಿ ವ್ಯತ್ಯಾಸಗಳೊಂದಿಗೆ ಬಳಕೆಯಲ್ಲಿವೆ. ವಿಶೇಷಣಗಳು, ಕ್ರಿಯಾಪದಗಳು ಮುಂತಾದವನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಮೂರನೇ ಹಂತದಲ್ಲಿ ಆದೋನಿ ಕನ್ನಡದ ಉಚ್ಚಾರಣೆಯಲ್ಲಿ ವಿಶಿಷ್ಟ ಪದಗಳು ಮತ್ತು ಪ್ರಯೋಗಾರ್ಥವನ್ನು ನೀಡಲಾಗಿದೆ. ಪ್ರಸ್ತುತ ಪ್ರಬಂಧದ ಈ ಭಾಗವು ಬರಹ ಕನ್ನಡಕ್ಕಿಂತ ಆದೋನಿ ಕನ್ನಡ ಯಾವ ರೀತಿ ಭಿನ್ನವಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಸಂಗ್ರಹಿಸಿದ ಪದಗಳು ಬರಹ ಕನ್ನಡಕ್ಕಿಂತ ವಿಶಿಷ್ಟವಾದ ರೀತಿಯಲ್ಲಿ ಬಳಕೆಗೊಳ್ಳುವುದು ಗಮನಾರ್ಹ. 'ಮದುಮಗ' ಎನ್ನುವ ಪದವು 'ಮದ್ಲಿಂಗ' ಎಂದು ಉಚ್ಚಾರಣೆಗೊಳ್ಳುತ್ತದೆ. ಅದೇ ರೀತಿ 'ಮದುಮಗಳು' ಎನ್ನುವುದು 'ಮದ್ಲಿಗಿತ್ತಿ' ಎಂದು ಉಚ್ಚಾರಣೆಯಲ್ಲಿದೆ. ಹಾಗೂ 'ಬಹಳ' ಎನ್ನುವ ಬರಹ ಕನ್ನಡದ ಪದವು ಜಗ್ಗಿ, ನಗ್ಗ, ಸ್ಯಾನ, ಬರ್ತಿ, ತಪಾತರ ಮತ್ತು ದೆಂಡಿಗ ಎಂದು ಉಚ್ಚಾರಣೆಗೊಳ್ಳುತ್ತದೆ. ಆದೋನಿ ಆಂಧ್ರಪ್ರದೇಶಕ್ಕೆ ಒಳಪಟ್ಟಿದ್ದರಿಂದ ಇಲ್ಲಿನ ಕನ್ನಡದ ಮೇಲೆ ತೆಲುಗಿನ ಪ್ರಭಾವವು ಆಗಿದೆ. ಆದ್ದರಿಂದ ಕೆಲವು ತೆಲುಗಿನ ರೂಪಗಳು ಬಳಕೆ

ಮಾಡುವುದನ್ನು ಈ ಭಾಗದಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ 'ಪಿಳ್ಳೆ' ಬರಹ ಕನ್ನಡದಲ್ಲಿ ಹುಡುಗಿ ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗಿನಲ್ಲಿ ಹುಡುಗಿಗೆ 'ಪಿಲ್ಲ' ಎಂದು ಕರೆಯುವುದುಂಟು. ಈ ಪಿಲ್ಲ ಎನ್ನುವ ಪದ ಆದೋನಿ ವ್ಯವಹಾರಿಕ ಕನ್ನಡದಲ್ಲಿ ಪಿಳ್ಳೆಯಾಗಿ ಉಚ್ಚಾರಣೆಗೊಳ್ಳುತ್ತಿರುವುದು ಒಂದು ವಿಶಿಷ್ಟ. 'ಏದಕ' ಅಥವಾ 'ಯದಕ' ಪದ ಮೂಲತಃ ತೆಲುಗಿನ 'ಎಂದುಕು' ರೂಪದಿಂದ ಬಂದಿರುವುದು. ಏಕೆ ಎನ್ನುವ ಅರ್ಥದಲ್ಲಿ ಆದೋನಿ ಕನ್ನಡದಲ್ಲಿ 'ಏದ್ಕ' 'ಯದಕ' ಎನ್ನುತ್ತಾರೆ. ಬೈಗುಳ ವಲಯದಲ್ಲಿ 'ನಿನಗೆಷ್ಟು ಪೊಗರು' ಎಂದು ಬೈಯುವಲ್ಲಿ 'ಪೊಗ್ರು' ಪದ ಮೂಲತಃ ತೆಲುಗಿನ 'ಪೊಗರು' ಪದದಿಂದ ಬಂದಿದೆ. ಹಾಗೆಯೇ ಅವ್ನ ಕುತ್ತಿಗೆ 'ಹಿಡಿದು ದಬ್ಬು' ಎನ್ನುವಲ್ಲಿ 'ದಬ್ಬು' ಪದ ತೆಲುಗಿನ 'ದೊಬ್ಬು' ಪದದಿಂದ ಬಂದಿದೆ. ಇದೇ ರೀತಿ ಆದೋನಿ ಕನ್ನಡದಲ್ಲಿ ಅನೇಕ ವಿಶಿಷ್ಟ ಪದಗಳು ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ.

ಆದೋನಿ ಕನ್ನಡದಲ್ಲಿ ಅಕ್ಷರ ಪಲ್ಲಟಗೊಂಡು ಬಳಕೆಯಾಗುವ ಕೆಲವು ವಿಶಿಷ್ಟ ಪದಗಳನ್ನು ಗಮನಿಸಲಾಗಿದೆ. ಬರಹ ಕನ್ನಡದ 'ಮಜ' ಆದೋನಿ ಕನ್ನಡದಲ್ಲಿ 'ಜಮ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಅದೇ ರೀತಿ 'ಕೆಸರು' ಎನ್ನುವ ಬರಹ ಕನ್ನಡದ ಪದವು 'ಬದುರೆ' ಎಂದು ಆದೋನಿ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ. ತೆಲುಗಿನಲ್ಲಿ ಕೆಸರನ್ನು 'ಬುರುದ' ಎಂದು ಕರೆಯುತ್ತಾರೆ. ಈ ಬುರುದ ಅಕ್ಷರ ಪಲ್ಲಟಗೊಂಡು ಬದುರೆ ಎಂದು ಉಚ್ಚಾರಣೆಯಲ್ಲಿದೆ. ಈ ರೀತಿಯಾಗಿ ವಿಶಿಷ್ಟ ಪದಗಳ ಉಚ್ಚಾರಣೆ ಮತ್ತು ಪದ ಪ್ರಯೋಗವನ್ನು ನಿದರ್ಶನ ಸಹಿತ ಕೊಡಲಾಗಿದೆ.

ನಾಲ್ಕನೇ ಹಂತದಲ್ಲಿ ಆದೋನಿ ಕನ್ನಡದ ಉಚ್ಚಾರಣೆಯಲ್ಲಿ ನುಡಿಮಿಶ್ರಣ ಪ್ರಕ್ರಿಯೆಯನ್ನು ಕೊಡಲಾಗಿದೆ. ಈ ನುಡಿ ಮಿಶ್ರಣ ಪ್ರಕ್ರಿಯೆ ತುಂಬಾ ವಿಶಿಷ್ಟವಾಗಿದೆ. ಇಲ್ಲಿ ದಾಖಲಿಸಿರುವ ಪದಗಳು ತೆಲುಗರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ಎರಡು ಮಾದರಿಯ ನುಡಿಮಿಶ್ರಣ ಪ್ರಕ್ರಿಯೆಯನ್ನು ಬಳಕೆ ಮಾಡುತ್ತಾರೆ. ಒಂದು ಕನ್ನಡ, ತೆಲುಗು ನುಡಿಮಿಶ್ರಣ, ಎರಡು ತೆಲುಗು-ಕನ್ನಡ ನುಡಿಮಿಶ್ರಣ.

'ಬಸ್ಸುಎಕ್ಕು' ಎನ್ನುವ ಪದದಲ್ಲಿ 'ಬಸ್' ಇಂಗ್ಲೀಷ್‌ನಿಂದ ಪಡೆದ ಎರವಲು ಪದ. 'ಎಕ್ಕು' ಎನ್ನುವುದು ತೆಲುಗಿನ ಪದವಾಗಿದೆ. ಇದಕ್ಕೆ ಕನ್ನಡದ ಅರ್ಥ 'ಏರು' ಎಂದಿದೆ. 'ಬಸ್ಸು ಎಕ್ಕು' ಎಂದರೆ 'ಬಸ್ಸು ಏರು' ಎಂದು ಅರ್ಥ. ಬಸ್ಸು ಎನ್ನುವ ಕನ್ನಡದ ಎರವಲು ಪದಕ್ಕೆ 'ಎಕ್ಕು' ಎನ್ನುವ ತೆಲುಗಿನ ಪದ ಸೇರಿ 'ಬಸ್ಸು ಎಕ್ಕು' ಎಂದಾಗಿದೆ. ಇದು ಕನ್ನಡ-ತೆಲುಗು ನುಡಿಮಿಶ್ರಣಕ್ಕೆ ನಿದರ್ಶನ. ಇದೇ ರೀತಿ ಕೆಲವು ಪದಗಳನ್ನು ಕೊಡಲಾಗಿದೆ.

ತೆಲುಗು ಮತ್ತು ಕನ್ನಡ ಪದಗಳ ನುಡಿಮಿಶ್ರಣ ಮತ್ತೊಂದು ವೈಶಿಷ್ಟ್ಯ. 'ಉರ್ಲಗಡ್ಡೆ' ಎನ್ನುವುದು ಆದೋನಿ ವ್ಯವಹಾರಿಕ ಕನ್ನಡದಲ್ಲಿ ಬಳಕೆಗೊಳ್ಳುತ್ತಿದೆ. 'ಉರ್ಲ' ಎನ್ನುವುದು ತೆಲುಗಿನ ಪದ. ಗಡ್ಡೆ ಎನ್ನುವುದು ಕನ್ನಡದ ಪದ ಎರಡೂ ಸೇರಿ 'ಉರ್ಲಗಡ್ಡೆ' ಎಂದಾಗಿದೆ. 'ಉರ್ಲಗಡ್ಡೆ' ಎಂದರೆ ಕನ್ನಡದಲ್ಲಿ ಆಲುಗಡ್ಡೆ ಎಂದು ಅರ್ಥ. ಈ ರೀತಿಯಾಗಿ ಕನ್ನಡ-ತೆಲುಗು, ತೆಲುಗು-ಕನ್ನಡ ನುಡಿಮಿಶ್ರಣ ಪ್ರಕ್ರಿಯೆ ಈ ಭಾಗದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಐದನೆ ಹಂತದಲ್ಲಿ ಆದೋನಿ ತೆಲುಗು ಭಾಷಿಕರ ಮೇಲೆ ಕನ್ನಡದ ಪ್ರಭಾವವನ್ನು ಸ್ವರಗಳು ಮತ್ತು ವ್ಯಂಜನಗಳ ಹಂತದಲ್ಲಿ ನಿದರ್ಶನ ಸಮೇತ ವಿಶ್ಲೇಷಿಸಲಾಗಿದೆ.

ಸ್ವರಗಳ ಹಂತ :

ಉದಾ :	ಬ.ತೆ	ಆ.ತೆ	ಆ.ಕ	ಬ.ಕ
	ಅತನು	ಆತಿನಿ	ಆತ	ಆತ

ಬರಹದ ತೆಲುಗಿನಲ್ಲಿ ಪದಾದಿಯಲ್ಲಿ ಹ್ರಸ್ವಸ್ವರ 'ಅ' ಕಾರ ಬಳಕೆಯಲ್ಲಿದ್ದರೆ ಆದೋನಿ ತೆಲುಗಿನಲ್ಲಿ ದೀರ್ಘಸ್ವರ 'ಆ' ಕಾರ ಬಳಕೆಯಲ್ಲಿದೆ. ಈ ವ್ಯತ್ಯಾಸಕ್ಕೆ ಬರಹದ ತೆಲುಗು ಕಾರಣವಾಗಿರದೆ; ಕನ್ನಡದ ಪ್ರಭಾವದಿಂದ ಮೇಲಿನ ರೂಪ ಆದೋನಿ ತೆಲುಗಿನಲ್ಲಿ ಬಳಕೆಯಲ್ಲಿದೆ.

ವ್ಯಂಜನಗಳ ಹಂತ :

ಬ.ತೆ	ಆ.ತೆ	ಆ.ಕ	ಬ.ಕ
ಚಿರುನಾಲುಕ	ಕಿರ್ನಾಲಕಿ	ಕಿರ್ನಾಲಿಗೆ	ಕಿರುನಾಲಿಗೆ

ಆದೋನಿ ತೆಲುಗಿನಲ್ಲಿ 'ಚ' ಕಾರ ಲೋಪಗೊಂಡು ಕನ್ನಡದ ಪ್ರಭಾವದಿಂದ ಪದಾದಿಯಲ್ಲಿ 'ಕ' ಬಳಕೆಯಲ್ಲಿರುವುದು ಸ್ಪಷ್ಟವಾಗಿದೆ.

ಈ ರೀತಿಯಾಗಿ ಆದೋನಿ ತೆಲುಗು ಬರಹ ತೆಲುಗಿಗಿಂತ ಯಾವ ರೀತಿ ಭಿನ್ನವಾಗಿದೆ, ಮತ್ತು ಆದೋನಿ ತೆಲುಗಿನ ರೂಪಗಳು ಕನ್ನಡಕ್ಕೆ ಸಾಮಿಪ್ಯವಿರುವುದನ್ನು ವಿವಿಧ ನಿದರ್ಶನಗಳ ಸಹಿತ ವಿವರಿಸಲಾಗಿದೆ. ಈ ಅಧ್ಯಾಯ ಪ್ರಸ್ತುತ ನಿಬಂಧದ ಕೇಂದ್ರ ಭಾಗ ಎಂದರೆ ತಪ್ಪಾಗಲಾರದು. ಏಕೆಂದರೆ 'ಆದೋನಿ ಕನ್ನಡ' ಎಂದರೆ ಆದೋನಿ ಕನ್ನಡದ ಮೇಲೆ ತೆಲುಗಿನ ಪ್ರಭಾವ ಗುರುತಿಸುವುದು. ಆದೋನಿ ತೆಲುಗಿನ ಭಾಷಿಕರ ಮೇಲೆ ಕನ್ನಡ ಪ್ರಭಾವ ಗುರುತಿಸುವುದು. ಈ ಎರಡೂ ಮಾದರಿಯ ಕನ್ನಡದ ಸ್ವರೂಪವೇ ಆದೋನಿ ಕನ್ನಡದ ರಚನೆ ಎಂದು ಹೇಳಬಹುದು.

ಆರನೇ ಹಂತದಲ್ಲಿ ದ್ವಿಭಾಷಿಕತೆ, ಶೈಕ್ಷಣಿಕ ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ತೆಲುಗು ಮಾತೃಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ಕ್ರಮದಲ್ಲಿ ಸ್ವರ, ವ್ಯಂಜನ ಮತ್ತು ಅರ್ಧಸ್ವರಗಳನ್ನು ಯಾವ ರೀತಿ ವ್ಯತ್ಯಾಸ ಮಾಡುತ್ತಾರೆ ಎನ್ನುವುದನ್ನು ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಅದೇ ರೀತಿ ಕನ್ನಡ ಮಾತೃಭಾಷೆ ಮಕ್ಕಳು ಕನ್ನಡ ಉಚ್ಚರಿಸುವ ಸಂದರ್ಭದಲ್ಲಿ ತೆಲುಗಿನ ಪ್ರಭಾವ ಜೊತೆಗೆ ಕನ್ನಡ ವಿಶಿಷ್ಟ ಪದಗಳು ಯಾವ ರೀತಿ ಪ್ರವೇಶ ಪಡೆದಿವೆ ಎನ್ನುವುದನ್ನು ಗಮನಿಸಲಾಗಿದೆ.

ಏಳನೇ ಹಂತದಲ್ಲಿ ವ್ಯಕ್ತಿನಾಮಗಳನ್ನು ಸ್ಥಳವಾಚಿ, ವೃತ್ತಿವಾಚಿ, ಜಾತಿವಾಚಿ, ವ್ಯಕ್ತಿವಾಚಿ, ವಸ್ತುವಾಚಿ ಎಂದು ವಿಭಾಗಿಸಿಕೊಂಡು ನಿರ್ದಿಷ್ಟ ಮತ್ತು ವಾರ್ಗಿಕಗಳಲ್ಲಿ ಕನ್ನಡ-ತೆಲುಗು ರೂಪಗಳು ಯಾವ ರೀತಿ ಬಳಕೆಯಾಗಿವೆ ಎನ್ನುವುದನ್ನು ದ್ವಿಭಾಷಿಕ ಪರಿಸರದ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ವ್ಯಕ್ತಿನಾಮಗಳು ಪ್ರತ್ಯೇಕವಾದ ಅಧ್ಯಯನ ಮಾದರಿ ಆಗಿದ್ದರೂ, ದ್ವಿಭಾಷಿಕ ಪರಿಸರದ ವ್ಯಕ್ತಿನಾಮಗಳು ಬಹಳ ವಿಶಿಷ್ಟವಾಗಿರುವುದನ್ನು ಇಲ್ಲಿ ಗಮನಿಸಬಹುದು. ಈ ಹಿನ್ನೆಲೆಯಿಂದ ವ್ಯಕ್ತಿನಾಮಗಳ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

ಎಂಟನೇ ಹಂತದಲ್ಲಿ ಆದೋನಿ ಪರಿಸರದ ಸ್ಥಳನಾಮಗಳನ್ನು ಕುರಿತು ಚರ್ಚಿಸಲಾಗಿದೆ. ಈ ಸ್ಥಳನಾಮಗಳಲ್ಲಿ ಕನ್ನಡ-ತೆಲುಗು ರೂಪಗಳು ಬಳಕೆಯಾಗಿರುವುದನ್ನು ಗಮನಿಸಲಾಗಿದೆ. ಇಲ್ಲೂ ಸ್ಥಳನಾಮಗಳು ದ್ವಿಭಾಷಿಕ ಪರಿಸರದ ಪ್ರಭಾವದಿಂದ ಬಳಕೆಯಲ್ಲಿರುವುದರಿಂದ ಇದನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಸಮಾರೋಪ ಭಾಗದಲ್ಲಿ ಅಧ್ಯಯನ ಒಟ್ಟು ನೋಟವನ್ನು ವಿಶ್ಲೇಷಣೆ ಮಾಡಲಾಗಿದೆ. ಅನುಬಂಧದಲ್ಲಿ ಆದೋನಿ ಕನ್ನಡದ ಪದಕೋಶಿಯನ್ನು ಪಟ್ಟಿಸಲಾಗಿದೆ. ಜೊತೆಗೆ ಆದೋನಿ ಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡದ ಕಥೆಗಳನ್ನು ಸಂಗ್ರಹಿಸಿ ದಾಖಲಿಸಲಾಗಿದೆ. ಅಧ್ಯಯನ ಸಂದರ್ಭದಲ್ಲಿ ಪ್ರಯೋಜನಕ್ಕೆ ಬಂದ ಕೃತಿ, ಲೇಖನಗಳನ್ನು ಪರಾಮರ್ಶನ ಗ್ರಂಥಸೂಚಿಯಲ್ಲಿ ನೀಡಲಾಗಿದೆ.

ಈ ಅಧ್ಯಯನದ ಮುಖ್ಯ ಫಲಿತಗಳು

೧. ಆದೋನಿ ಪರಿಸರದ ಕನ್ನಡ ಭಾಷೆಯ ಧ್ವನಿಗಳನ್ನು ವರ್ಗೀಕರಿಸುವ ಮೂಲಕ ಆದೋನಿ ಭೌಗೋಳಿಕ ಚಹರೆಯನ್ನು ಮತ್ತು ಅಲ್ಲಿನ ಭಾಷಿಕ ಸ್ವರೂಪವನ್ನು ಗುರುತಿಸಲಾಗಿದೆ. ಆದೋನಿ ಕನ್ನಡದ ಉಚ್ಚಾರಣೆಗೆ ಒತ್ತು ನೀಡಿ ಅಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆಯ ಧ್ವನಿ ನಿಯಮಗಳನ್ನು ವಿಶ್ಲೇಷಣೆ ಮಾಡಲಾಗಿದೆ.

೨. ವ್ಯಾಕರಣಾತ್ಮಕ ದೃಷ್ಟಿಯಿಂದ ನಾಮಪದ, ಸರಳನಾಮಪ್ರಕೃತಿ, ಸಾಧಿತನಾಮ ಪ್ರಕೃತಿ ನಾಮೀಕರಣ, ಲಿಂಗವ್ಯವಸ್ಥೆ, ವಚನವ್ಯವಸ್ಥೆ, ಪ್ರತ್ಯಯಗಳು, ಸರ್ವನಾಮಗಳು, ವಿಶೇಷಣಗಳು, ಮತ್ತು ಕ್ರಿಯಾಪದಗಳು ಆದೋನಿ ಕನ್ನಡದಲ್ಲಿ ಬರಹ ಕನ್ನಡಕ್ಕಿಂತ ವಿಶಿಷ್ಟವಾಗಿರುವುದನ್ನು ಗುರುತಿಸಲಾಗಿದೆ.

೩. ಕನ್ನಡ ಹಾಗೂ ತೆಲುಗಿನ ಪದಗಳೆರಡು ಸೇರಿಕೊಂಡು ವಿಶಿಷ್ಟ ಪದಗಳು ಆದೋನಿ ಕನ್ನಡದಲ್ಲಿ ಬಳಕೆಯಾಗಿರುವುದನ್ನು ನಿದರ್ಶನ ಸಹಿತ ಉಲ್ಲೇಖಿಸಲಾಗಿದೆ.

೪. ತೆಲುಗರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ಎರಡು ಮಾದರಿಯ ನುಡಿಮಿಶ್ರಣ ರೂಪಗಳನ್ನು ಗುರುತಿಸಲಾಗಿದೆ. ೧. ಮೊದಲನೇ ಪದ ಕನ್ನಡ, ಎರಡನೇ ಪದ ತೆಲುಗು. ೨. ಮೊದಲನೇ ಪದ ತೆಲುಗು, ಎರಡನೇ ಪದ ಕನ್ನಡ.

೫. ಆದೋನಿ ತೆಲುಗಿನ ಮೇಲೆ ಕನ್ನಡದ ಪ್ರಭಾವವನ್ನು ಗುರುತಿಸಲಾಗಿದೆ. ಆದೋನಿ ತೆಲುಗನ್ನು ಬರಹದ ತೆಲುಗಿನ ರೂಪಗಳೊಂದಿಗೆ ಹೋಲಿಸಿ ನೋಡುವುದರ ಮೂಲಕ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆದೋನಿ ಪರಿಸರದಲ್ಲಿ ಕನ್ನಡದ ಮೇಲೆ ತೆಲುಗಿನ ಪ್ರಭಾವ ಆಗಿರುವಂತೆ; ತೆಲುಗಿನ ಮೇಲೆ ಕನ್ನಡದ ಪ್ರಭಾವ ಆಗಿರುವುದು ವಿಶೇಷ. ಈ ಹಿನ್ನೆಲೆಯಿಂದ ಇದೊಂದು ಮಹತ್ವವಾದ ದ್ವಿಭಾಷಿಕ ಅಧ್ಯಯನ ಎನ್ನಬಹುದು.

೬. ತೆಲುಗು ಮಾತೃಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ಸಂದರ್ಭದಲ್ಲಿ ಮಾಡುವ ದೋಷಗಳು ಮತ್ತು ಅಲ್ಲಿನ ಕನ್ನಡ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಗುರುತಿಸಲಾಗಿದೆ. ಅಂದರೆ ಕನ್ನಡ ಮತ್ತು ತೆಲುಗು ಮಕ್ಕಳು ಶೈಕ್ಷಣಿಕ ನೆಲೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂತಹ ಸಮಸ್ಯೆಗಳ ಲಕ್ಷಣವನ್ನು ಮಾತ್ರ ಇಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

೭. ಆದೋನಿ ಪರಿಸರದಲ್ಲಿರುವ ವ್ಯಕ್ತಿನಾಮಗಳಲ್ಲಿ ತೆಲುಗು ಪ್ರಭಾವವಿರುವುದನ್ನು ಗುರುತಿಸಲಾಗಿದೆ. ಅಂದರೆ ಈ ಭಾಗದ ಉದ್ದೇಶ ದ್ವಿಭಾಷಿಕ ಪರಿಸರದ ವ್ಯಕ್ತಿನಾಮಗಳು ವಿಶೇಷವಾಗಿವೆ ಎಂಬುವುದನ್ನು ತೋರಿಸುವುದು.

೮. ಸ್ಥಳನಾಮಗಳನ್ನು ವರ್ಗೀಕರಿಸುವ ಮೂಲಕ ಆದೋನಿ ಭೌಗೋಳಿಕ ಚಹರೆ ಮತ್ತು ಅಲ್ಲಿನ ಭಾಷಿಕ ಸ್ವರೂಪವನ್ನು ಸಾಂಸ್ಕೃತಿಕ ಸ್ವರೂಪ ಮತ್ತು ಗ್ರಾಮಗಳ ವಾಸ್ತು ಸ್ವರೂಪವನ್ನು ಗುರುತಿಸಲಾಗಿದೆ. ಆದೋನಿ ಪರಿಸರದಲ್ಲಿ ಜಲವಾಚಿ, ಶಿಲಾವಾಚಿ, ಕ್ಷೇತ್ರವಾಚಿ, ಸಸ್ಯವಾಚಿ, ಲೋಹವಾಚಿ ಮುಂತಾದ ಪ್ರಾಕೃತಿಕ ಸ್ಥಳನಾಮಗಳೊಂದಿಗೆ, ಜಾತಿ, ವರ್ಗ, ವೃತ್ತಿ, ವ್ಯಕ್ತಿ, ಪ್ರಾಣಿ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಪ್ರತಿನಿಧಿಸುವ ಸ್ಥಳನಾಮಗಳಿರುವುದನ್ನು ಗುರುತಿಸಲಾಗಿದೆ.

ಮುಂದಿನ ಅಧ್ಯಯನದ ಸುಳಿವುಗಳು

೧. ಆಂಧ್ರ ಸಮಗ್ರ ಗಡಿಯನ್ನು ಅನುಲಕ್ಷಿಸಿ ಕನ್ನಡ ಭಾಷೆಯನ್ನು ಅಧ್ಯಯನ ಮಾಡಬಹುದು. ಅಂತೆಯೇ ಮರಾಠಿ, ಉರ್ದು, ತುಳು, ತಮಿಳು ಗಡಿಭಾಗಗಳೊಂದಿಗೆ ಅಧ್ಯಯನ ಮಾಡುವ ಅಗತ್ಯವಿದೆ.

೨. 'ಉಚ್ಚಾರಣೆ ಮತ್ತು ಧ್ವನಿನಿಯಮಗಳು' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪ್ರತ್ಯೇಕ ಅಧ್ಯಯನ ಮಾಡಬಹುದು. ಅಲ್ಲದೆ ಅಖಂಡ ಗಡಿಭಾಗವನ್ನು ಗಮನದಲ್ಲಿಟ್ಟುಕೊಂಡು ಮೌಖಿಕ ಆಕರಗಳಾದ ಒಡಪು, ಒಗಟು, ಗಾದೆ, ಕಥೆ, ಒಗಟು, ಪುರಾಣ, ಜಾನಪದ ಮೂಲಕ ಒಂದೊಂದು ಪ್ರಕಾರವನ್ನು ಇಟ್ಟುಕೊಂಡು ಪ್ರತ್ಯೇಕ ಅಧ್ಯಯನ ಮಾಡಬಹುದು.

೩. ದ್ವಿಭಾಷಿಕತೆ, ಶೈಕ್ಷಣಿಕ ನೆಲೆ ಎಂಬ ಪ್ರತ್ಯೇಕ ವಿಷಯಗಳನ್ನಾಧರಿಸಿ ಅಧ್ಯಯನ ಮಾಡಬಹುದು. ಅಲ್ಲದೆ ಗಡಿಭಾಗವನ್ನು ಗಮನದಲ್ಲಿಟ್ಟುಕೊಂಡು ವಲಸೆ, ಅಲೆಮಾರಿ ಹೀಗೆ ಒಂದೊಂದು ಅಂಶವನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕ ಅಧ್ಯಯನ ಮಾಡಲು ಅವಕಾಶವಿದೆ.

ಈ ನಿಬಂಧದಲ್ಲಿ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು ದ್ವಿಭಾಷಿಕತೆ, ಶೈಕ್ಷಣಿಕ ನೆಲೆ, ತೆಲುಗು ಭಾಷೆಯ ಮೇಲೆ ಕನ್ನಡ ಪ್ರಭಾವ ಹೀಗೆ ಒಂದೊಂದು ಉಪ ಶೀರ್ಷಿಕೆಗಳಿಂದ ಪ್ರತ್ಯೇಕ ಅಧ್ಯಯನ ಮಾಡಲು ಸಾಧ್ಯವಿದೆ. ಆದರೆ ಅಧ್ಯಯನವನ್ನು ಯಾವುದೇ ಭೂಭಾಗಕ್ಕೆ ಸೀಮಿತ ಮಾಡಿಕೊಳ್ಳಬಾರದು. ಸಮಗ್ರ ಗಡಿ ಪ್ರದೇಶವನ್ನು ಇಟ್ಟಕೊಂಡು ಮಾಡಿದರೆ ಅಧ್ಯಯನ ವ್ಯಾಪಕ ಚರ್ಚೆಗೆ ಒಳಪಡುತ್ತದೆ.

ಇಂದು ಕರ್ನಾಟಕ ಸರ್ಕಾರಕ್ಕೆ ಗಡಿಸಮಸ್ಯೆ ಸ್ಥಿರವಾದುದು. ಇದಕ್ಕೆ ಪರಿಹಾರವೇ ಇಲ್ಲ. ಸರ್ಕಾರಗಳು ಬದಲಾವಣೆ ಆದಂತೆ ಗಡಿ ಸಮಸ್ಯೆ ಕಾಣಿಸಿಕೊಂಡು ಮತ್ತೆ ಮಾಯವಾಗುತ್ತಿದೆ. ಇದಕ್ಕೆ ಪರಿಹಾರವಾಗಿ ಭಾಷಿಕ ಅಧ್ಯಯನದಿಂದ ಸಿಗಬಹುದೇನೊ, ಏಕೆಂದರೆ ಕನ್ನಡ ಭಾಷೆ ಎಲ್ಲಿಯವರೆಗೆ ಬಳಕೆಯಲ್ಲಿದೆ ಅಲ್ಲಿಯವರೆಗೂ ಕನ್ನಡ ನಾಡು ಇದೆ ಎಂಬ ವಾದದ ಬಗ್ಗೆ ಚರ್ಚೆಯಾಗಬೇಕಾಗಿದೆ.

ಹಾಗಾದರೆ ಬೇರೆ ಬೇರೆ ರಾಜ್ಯ ಮತ್ತು ದೇಶಗಳಿಗೆ ಕನ್ನಡಿಗರು ವಲಸೆ ಹೋಗಿದ್ದಾರಲ್ಲ ಎಂಬ ಮಾತು ಬರಬಹುದು. ಅಂತಹ ಸಂದರ್ಭಗಳನ್ನು ಬಿಟ್ಟು ಭಾಷಿಕವಾಗಿ ಗ್ರಂಥಸ್ಥವಾಗಿರುವ ಉಲ್ಲೇಖಗಳನ್ವಯ ಪ್ರದೇಶದ ಗಡಿಯನ್ನು ನಿರ್ದಿಷ್ಟಗೊಳಿಸಬಹುದಾಗಿದೆ. ಅಂತಹ ಬೃಹತ್ ಸಮಸ್ಯೆಗಳಿಗೆ ಗಡಿನಾಡು ಮತ್ತು ಹೊರನಾಡು ಕನ್ನಡಗಳ ರಚನೆ ಕುರಿತ ಅಧ್ಯಯನಗಳು ಪ್ರಯೋಜನಕ್ಕೆ ಬರುತ್ತವೆ.

□□

ಅನುಬಂಧ

* ಪ್ರಶ್ನಾವಳಿ
* ಪದಕೋಶ
* ಕಥೆಗಳು
* ಆದೋನಿ ತಾಲೂಕು ಸ್ಥಳನಾಮಗಳು
* ವಕ್ತೃಗಳ ವಿವರ
* ಗ್ರಂಥಸೂಚಿ

ಅನುಬಂಧ

ಪ್ರಶ್ನಾವಳಿ

೧. ನಿರೂಪಕನ ಹೆಸರು :

ವಯಸ್ಸು :

ಲಿಂಗ :

ಉದ್ಯೋಗ :

ಖಾಯಂ ವಿಳಾಸ :

೨. ಮಾನವನ ಮತ್ತು ಪ್ರಾಣಿಗಳ ಶರೀರದ ಅಂಗಾಂಗಗಳು

ಉದಾ : ಕೊಣ್ಣು-ಕಣ್ಣು

ಕೊಣ್ಣುಗುಡ್ಡೆ-ಕಣ್ಣಿನ ಗುಡ್ಡೆ

೩. ಬಟ್ಟೆಗಳು ಮತ್ತು ಅಲಂಕಾರಿಕ ಸಾಮಾನುಗಳು

ಉದಾ : ಲಿಂಗಿ-ಲುಂಗಿ

ಟೌಜರ್-ಪ್ಯಾಂಟ್

೪. ವಿವಿಧ ಯಂತ್ರೋಪಕರಣಗಳು ಮತ್ತು ಪಿಠೋಪಕರಣಗಳು

ಉದಾ : ರಾಟೆ-ಬಟ್ಟೆ ಹೊಲಿಯುವ ಯಂತ್ರ

ಕುರ್ಜಿ-ಚೇರ್, ಟೇಬಲ್ ಇತ್ಯಾದಿ

೫. ವಿವಿಧ ವೃತ್ತಿ ಸಂಬಂಧಿಸಿದ ಪದಗಳು

ಉದಾ : ಅಕ್ಸ್ಯಾಲರು-ಅಕ್ಕಸಾಲಿಗರು

ಬ್ಯಾಡ್ರು-ನಾಯಕರು, ವಾಲ್ಮೀಕಿ

೬. ವಿವಿಧ ತೆರನಾದ ಮಣ್ಣುಗಳು, ಗಾಳಿಗಳು, ಕಲ್ಲುಗಳು ಮುಂತಾದ ಭೌಗೋಳಿಕ ಅಂಶಗಳು

ಉದಾ : ಯರಿಮಣ್ಣು-ಕಪ್ಪುಮಣ್ಣು

ಸುಳಿಗಾಳಿ-ಸುಂಟರಗಾಳಿ

ಚಕ್ಕೆಕಲ್ಲು, ಸೈಜುಕಲ್ಲು, ಕೆಂಪುಕಲ್ ಇತ್ಯಾದಿ.

೭. ಬೆಳೆಯುವ ಬೆಳೆಗಳು, ಆಹಾರ ಪದಾರ್ಥಗಳು, ಆಹಾರ ಸಿದ್ಧಗೊಳಿಸುವ ಪದ್ಧತಿಗಳು

ಉದಾ : ಜ್ವಾಳ-ಜೋಳ

ಜಾಮಣ್ಣು-ಪೇರಲಹಣ್ಣು

ಕಡ್ಲೆ-ಕಡಲೆ

ಕಟಮ್‌ಲಿ-ಮುದ್ದೆ

೮. ಅಳತೆ, ವೇಳೆ ಮತ್ತು ತೂಕವನ್ನು ಸೂಚಿಸುವ ಪದಗಳು

ಉದಾ : ದಡೇವು, ಮೊಣವು, ಅರಪಾವು, ಗಿರ್ದ

೯. ರೋಗಗಳು, ಅವುಗಳ ಪ್ರಕಾರಗಳು, ಔಷದೋಪಚಾರಗಳು

ಉದಾ : ನತ್ತರಗಡ್ಡೆ-ರಕ್ತದಗಡ್ಡೆ

ಉಗುರುಸುತ್ತು-ಉಗುರಿನ ಸುತ್ತ ಆಗಿರುವ ಹುಣ್ಣು

೧೦. ಆಡುವ ಆಟಗಳು ಮತ್ತು ಅವುಗಳ ಪ್ರಕಾರಗಳು

ಉದಾ : ಬಗರಿ, ಗೋಲಿ, ಬೆಲ್ಲಕಾಮ (ಗಿಲ್ಲಿದಂಡ), ಮರಕೋತಿ, ಪ್ಯಾಕಾಟ್ ಇತ್ಯಾದಿ

೧೧. ಧಾರ್ಮಿಕ, ಸಾಂಸ್ಕೃತಿಕ ಸಮುದಾಯಗಳಿಗೆ ಸಂಬಂಧಿಸಿದ ಪದಗಳು

ಉದಾ : ಪೀರ್ಲಹಬ್ಬ-ಮೊಹರಂ

ಮದ್ಲಿಂಗ-ಮದುಮಗ

ಮದ್ಲಿಗಿತ್ತಿ-ಮದುಮಗಳು

ಆದೋನಿ ವ್ಯವಹಾರಿಕ ಕನ್ನಡದ ಉಚ್ಚಾರಣೆಯ ಪದಕೋಶಿ

ಆದೋನಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿನಿಯಮಗಳ ಸ್ಪಷ್ಟತೆಗಾಗಿ ಕೆಳಗಿನ ಪದಕೋಶಿ ಸಹಾಯಕವಾಗುತ್ತದೆ. ಈ ಪದಕೋಶಿಯಲ್ಲಿ ದಾಖಲಿಸಿರುವ ಭಾಷಿಕ ದತ್ತವನ್ನು ದೇಶ್ಯ, ಅನ್ಯದೇಶ್ಯ ಹಾಗೂ ಸೀಕೃತಗಳೆಂದು ಗುರುತಿಸದೇ ಸಂಗ್ರಹಿಸಿದಂತೆ ದಾಖಲಿಸಿದೆ. ಬಳಕೆಯ ಹಿನ್ನೆಲೆಯನ್ನು ಆಧರಿಸಿ, ಒಂಬತ್ತು ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಿ, ನಿದರ್ಶಗಳನ್ನು ಅರ್ಥಸಹಿತ ಪಟ್ಟಿಸಿದೆ. ಅವು ಇಂತಿವೆ.

೧. ಬಂಧುತ್ವಸೂಚೀ ಪದಗಳು

೨. ವೃತ್ತಿಸೂಚೀ ಪದಗಳು

೩. ಅಂಗಾಂಗಸೂಚೀ ಪದಗಳು

೪. ಪ್ರಾಣಿ-ಪಕ್ಷಿ-ಕೀಟ ಇತ್ಯಾದಿ ಸೂಚೀ ಪದಗಳು

೫. ಗೃಹೋಪಯೋಗಿ ಹಾಗೂ ಕೃಷಿಸೂಚೀ ಪದಗಳು

೬. ಸಂಖ್ಯಾಸೂಚೀ ಪದಗಳು

೭. ಕಾಲಸೂಚೀ ಪದಗಳು

೮. ಆಭರಣಸೂಚೀ ಪದಗಳು

೯. ಸಾಮಾನ್ಯವಾಚಕ, ಸರ್ವನಾಮ, ಕ್ರಿಯಾವಾಚಕ, ಗುಣವಾಚಕ ಇತ್ಯಾದಿ ಪದಗಳು

೧. ಬಂಧುತ್ವ ಸೂಚಿಪದಗಳು

ಶಿಷ್ಟ ಕನ್ನಡ	ಆದೋನಿ ಕನ್ನಡ	ಅರ್ಥ
ಅಕ್ಕ	ಯಕ್ಕ/ಅಕ್ಕ	ಅಕ್ಕ
ಅಜ್ಜ	ತಾತ	ಅಜ್ಜ

ಅಜ್ಜಿ	ಅವ್ವ	ಅಜ್ಜಿ
ಅಣ್ಣ	ಯಣ್ಣ/ಅಣ್ಣ	ಅಣ್ಣ
ಅತ್ತಿಗೆ	ಅತ್ಗೆ/ವದಿನ	ಅತ್ತಿಗೆ
ಅತ್ತೆ	ಅತ್ತೆ	ಅತ್ತೆ
ಅಪ್ಪ	ಯಪ್ಪ/ಅಪ್ಪ	ತಂದೆ
ಅಮ್ಮ	ಯಮ್ಮ/ಅಮ್ಮ	ತಾಯಿ
ಅಳಿಯ	ಅಳಿಯ/ಅಲಿಯ	ಅಳಿಯ
ಚಿಕ್ಕಪ್ಪ	ಕಕ್ಕಪ್ಪ/ಕಕ್ಕ	ಚಿಕ್ಕಪ್ಪ
ಚಿಕ್ಕಮ್ಮ	ಕಕ್ಕಮ್ಮ/ಕಕ್ಕಿ	ಚಿಕ್ಕಮ್ಮ
ದೊಡ್ಡಪ್ಪ	ದೊಡಪ್ಪ	ದೊಡ್ಡಪ್ಪ
ದೊಡ್ಡಮ್ಮ	ದೊಡಮ್ಮ	ದೊಡ್ಡಮ್ಮ
ನಾದಿನಿ	ನಾದ್ನಿ	ನಾದಿನಿ
ಬೀಗರು/ಬೀಗತಿ	ಬೀಗ್ರು/ಬೀಗ್ತಿ	ಬೀಗರು/ಬೀಗತಿ
ಮಗಳು	ಮಗ್ಳು	ಮಗಳು
ಮಗು	ಕೂಸು	ಮಗು
ಮೈದುನ	ಮೈದ್ನ	ಮೈದುನ
ಮಲತಾಯಿ	ಮಲ್‌ತಾಯಿ	ಮಲತಾಯಿ

೨. ವೃತ್ತಿಸೂಚಕ ಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಅಕ್ಕಸಾಲಿಗ	ಅಕ್ಸ್ಯಾಲ್ರು	ಅಕ್ಕಸಾಲಿಗ
ಗ್ರಾಹಕರು	ಗಿರಾಕಿಗಳು	ಗ್ರಾಹಕರು
ಬಡಿಗರು	ಬಡಿಗ್ಯಾರ್ರು	ಬಡಿಗರು

ಬೇಡರು	ಬ್ಯಾಡ್ರು	ಬೇಡರು
ಬ್ರಾಹ್ಮಣರು	ಬಾಪುನೋರು	ಬ್ರಾಹ್ಮಣರು
ಮುಸ್ಲಿಮರು	ತುರುಕರು	ಮುಸ್ಲಿಮರು
ಶೆಟ್ಟರು	ಶೆಟ್ರು	ಶೆಟ್ಟರು
ಹಜಾಮರು	ನಾದ್ರು	ಹಜಾಮರು

೩. ಅಂಗಾಂಗ ಸೂಚೀಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಕತ್ತು	ಕುತ್ತಿಗೆ	ಕತ್ತು
ಕಣ್ಣು	ಕೊಣ್ಣು	ಕಣ್ಣು
ಬುರಡೆ	ಬುಲ್ಡೆ	ಬುರಡೆ
ಮೊಲೆ	ಮಲಿ	ಮೊಲೆ

೪. ಪ್ರಾಣಿ-ಪಕ್ಷಿ-ಕೀಟ ಇತ್ಯಾದಿ ಸೂಚೀ ಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಆಡು	ಮ್ಯಾಕೆ	ಆಡು
ಆಮೆ	ತಾಂಬೇಲಿ	ಆಮೆ
ಇರುವೆ	ಗೊದ್ದಿಗೆ	ಇರುವೆ
ಎಮ್ಮೆ	ಯಮ್ಮಿ/ಯಮ್ಮೆ	ಎಮ್ಮೆ
ಕಪ್ಪೆ	ಕೊಪ್ಪೆ	ಕಪ್ಪೆ
ಕರಡಿ	ಕಲ್ಡಿ	ಕರಡಿ
ಗೂಬೆ	ಗುಡ್ಲುಗೂಗಿ	ಗೂಬೆ
ಜಿಂಕೆ	ಚಿಗರಿ	ಜಿಂಕೆ
ಮೊಲ	ಮೊಲ/ಮಲ	ಮೊಲ

ಸೊಳ್ಳೆ	ಸುಕ್ಕಾಡಿ	ಸೊಳ್ಳೆ
ಹಸು	ಆಕ್ಳ	ಹಸು

೫. ಗೃಹಪಯೋಗಿ ಮತ್ತು ಕೃಷಿ ಸೂಚೀಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಒಂದರಿ	ಜಲ್ಡಿ	ಒಂದರಿ
ಒನಕೆ	ವನ್ಕೆ	ಒನಕೆ
ಒರಳು	ವಳ್ಳು	ಒರಳು
ಕೊಡಲಿ	ಕೊಡ್ಲಿ	ಕೊಡಲಿ
ಗಾಡಿ	ಬಂಡಿ	ಗಾಡಿ
ಬೀಸುವಕಲ್ಲು	ಬೀಸಾಕಲ್ಲು	ಬೀಸುವಕಲ್ಲು
ಹಾರೆ	ಗಡಾರಿ	ಹಾರೆ

೬. ಸಂಖ್ಯಾಸೂಚೀ ಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಒಂದು	ವಂದು/ಒಂದು	ಒಂದು
ಎರಡು	ಯಲ್ಡು/ಎಲ್ಡು	ಎರಡು
ನಾಲ್ಕು	ನಾಕು	ನಾಲ್ಕು
ಏಳು	ಯೇಳು/ಏಳು	ಏಳು
ಹನ್ನೆರಡು	ಅನ್ನೆಲ್ಡು	ಹನ್ನೆರಡು
ಮೂವತ್ತೊಂಬತ್ತು	ಮೂವತ್ರೊಂಬತ್ತು	ಮೂವತ್ತೊಂಬತ್ತು
ನಲವತ್ತೊಂಬತ್ತು	ನಲವತ್ರೊಂಬತ್ತು	ನಲವತ್ತೊಂಬತ್ತು
ಎರಡು ನೂರು	ಇನ್ನೂರು	ಎರಡು ನೂರು
ಮೂರು ನೂರು	ಮುನ್ನೂರು	ಮೂರು ನೂರು
ನಾಲ್ಕು ನೂರು	ನಾಕನೂರು	ನಾಲ್ಕುನೂರು

೭. ಕಾಲಸೂಚೀ ಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ದಿನ	ದಿವ್ಸ	ದಿನ
ನೆನ್ನೆ	ನಿನ್ನೆ	ನೆನ್ನೆ
ಬೇಸಿಗೆ	ಬ್ಯಾಸಿಗೆ	ಬೇಸಿಗೆ
ಮೊನ್ನೆ	ಮನ್ನೆ	ಮೊನ್ನೆ

೮. ಆಭರಣಸೂಚೀ ಪದಗಳು

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಓಲೆ	ವಾಲೆ	ಓಲೆ
ಕಾಲುಂಗುರ	ಪಿಲ್ಲೆ/ಮೆಟ್ಟು/ಕಾಲುಂಗುರ	ಕಾಲು ಉಂಗುರ
ತೋಳ್ಬಂದಿ (ಮಹಿಳೆಯರು ತೋಳಿಗೆ ಧರಿಸುವ ಆಭರಣ)	ವಂಕಿ	ಒಂದು ಬಗೆಯ ಆಭರಣ
ಮೂಗುತಿ	ಮೂಗುಬಟ್ಟು	ಮೂಗುತಿ

೯. ಸಾಮಾನ್ಯವಾಚಕ, ಸರ್ವನಾಮ, ಕ್ರಿಯಾವಾಚಕ, ಗುಣವಾಚಕ ಇತ್ಯಾದಿ ಪದಗಳು.

ಶಿಷ್ಟಕನ್ನಡ	ಆದೋನಿ ಕನ್ನಡ	ಅರ್ಥ
ಅಗಲ	ಅಗ್ಲ	ಅಗಲ
ಅಡವಿ	ಅಡ್‌ವಿ	ಅಡವಿ
ಅಡಿಕೆ	ಅಡ್ಕೆ	ಅಡಿಕೆ
ಅಡುಗೆ	ಅಡ್ಗೆ	ಅಡುಗೆ
ಅನ್ನ	ಬಾನ	ಅನ್ನ
ಅನ್ನು	ಅಂಬು	ಅನ್ನು
ಅವನು	ಆತ	ಅವನು

ಅವಳು	ಆಕೆ	ಅವಳು
ಅಳಿಲು	ಉಣ್ಚಿಕಾಟ	ಅಳಿಲು
ಅಭ್ಯಾಸ ಇಲ್ಲ	ರಾಪ್ತಿ ಇಲ್ಲ	ಅಭ್ಯಾಸ ಇಲ್ಲ
ಆಗದಿದ್ದರೆ	ಆಗ್‌ದಿದ್ದರೆಗಿನ	ಆಗದಿದ್ದರೆ
ಆ ದಿವಸ	ಆದಿಸ/ಆವತ್ತು	ಆ ದಿವಸ
ಆಮೆ	ತಾಂಬೇಲಿ	ಆಮೆ
ಅಳುತ್ತಾ ಇರುತ್ತೀ	ಅತ್ತಕಂತಾ ಇರತಿ	ಅಳುತ್ತಾ ಇರುತ್ತೀ
ಇಡ್ಲಿ	ಇದ್ಲಿ/ಇಡ್ಲಿ	ಇಡ್ಲಿ
ಇದ್ದಾನೆ	ಅಯ್‌ದಾನ	ಇದ್ದಾನೆ
ಇರುವೆ	ಇರುಬೆ	ಇರುವೆ
ಇವುಗಳನ್ನು	ಇವುಟ್ರನ	ಇವುಗಳನ್ನು
ಇಲಿ	ಇಲಿಪಿ/ಇಲಿಚೆಮ್ಮ	ಇಲಿ
ಈಜು	ಈಸು	ಈಜು
ಈರುಳ್ಳಿ	ಉಳ್ಳಾಗಡ್ಡೆ	ಈರುಳ್ಳಿ
ಉಡುಗೊರೆ	ಮುಯ್ಯಿ	ಉಡುಗೊರೆ
ಊಟ ಆಯಿತಾ	ಉಂಡ್ಯಾ	ಊಟ ಆಯಿತಾ
ಉಳಿದಿದ್ದು	ಉಳಿಕಿದ್ದು	ಉಳಿದಿದ್ದು
ಉಸುಕು	ಉಸುಗು	ಉಸುಕು
ಎಣ್ಣೆ	ಯಣ್ಣೆ	ಎಣ್ಣೆ
ಎದೆ	ಯದೆ	ಎದೆ
ಎರಡು	ಎಲ್ಡು	ಎರಡು
ಎಲೆ	ಯಲೆ/ಎಲೆ	ಎಲೆ
ಎಲುಬು	ಯಮ್‌ಕೆ/ಎಮ್‌ಕೆ	ಎಲುಬು

ಎಷ್ಟು	ಏಸು	ಎಷ್ಟು
ಏಣಿ	ನಿಚ್ಚಣ್ಕೆ	ಏಣಿ
ಏಳು	ಯೇಳು/ಏಳು	ಏಳು
ಒಗ್ಗರಣೆ	ವಗ್ಗಾಣಿ	ಒಗ್ಗರಣೆ
ಒಂಟೆ	ವಂಟೆ	ಒಂಟೆ
ಒಣಕೆ	ವನಿಕೆ	ಒಣಕೆ
ಒರಳು	ವಳ್ಳು	ಒರಳು
ಒಲೆ	ವಲೆ	ಒಲೆ
ಒಸಡು	ವಸಡು	ಒಸಡು
ಓತಿ	ತೊಂಡೆಕಾಟ	ಓತಿ
ಓಲೆ	ವಾಲೆ	ಓಲೆ
ಕಟುಕ	ಕಟುಗ	ಕಟುಕ
ಕಡಲೆಕಾಯಿ	ಶೇಂಗಾ/ಬುಡ್ನೆ	ಕಡಲೆಕಾಯಿ
ಕಣ್ಣು	ಕೊಣ್ಣು	ಕಣ್ಣು
ಕಪ್ಪೆ	ಕೊಪ್ಪೆ	ಕಪ್ಪೆ
ಕರಡಿ	ಕಲ್ಡಿ	ಕರಡಿ
ಕರಳು	ಕೊಳ್ಳು	ಕರಳು
ಕಲ್ಲು	ಕೊಲ್ಲು	ಕಲ್ಲು
ಕಸಬರಿಗೆ	ಪರಿಕೆ	ಕಸಬರಿಗೆ
ಕಾಲುಭಾಗ	ಗಿರ್ದ	ಕಾಲುಭಾಗ
ಕಿಟಕಿ	ಜನಾಲು	ಕಿಟಕಿ
ಕಿವುಡ	ಕಿವ್‌ಡ	ಕಿವುಡ
ಕುಂಡೆ	ಮುಗುಳಿ	ಕುಂಡೆ

ಕುತ್ತಿಗೆ	ಸಿರ	ಕುತ್ತಿಗೆ
ಕುಪ್ಪಸ	ರವಿಕೆ	ಕುಪ್ಪಸ
ಕುರುಡ	ಕುಲ್ಡ	ಕುರುಡ
ಕೆಸರು	ಬುದುರೆ	ಕೆಸರು
ಕೊಟ್ಟಿಗೆ	ದೊಡ್ಡಿ	ಕೊಟ್ಟಿಗೆ
ಕೊಡಲಿ	ಕೊಡ್ಲಿ	ಕೊಡಲಿ
ಕೊತ್ತಂಬರಿ	ಕೊತ್ತುಮಿರಿ	ಕೊತ್ತಂಬರಿ
ಕೊಂಬೆ	ಕೊಂಗೆ	ಕೊಂಬೆ
ಕೊರಡು	ಕೊಳ್ಡು	ಕೊರಡು
ಕೋಣ	ಕ್ವಾಣ	ಕೋಣ
ಗಂಡುಮಕ್ಕಳು	ಗೊಣ್‍ಮಕ್ಳು	ಗಂಡುಮಕ್ಕಳು
ಗರಗಸ	ರಂಪ	ಗರಗಸ
ಗುಡಿಸಲು	ಗುಡಿಸ್ಲು	ಗುಡಿಸಲು
ಗುಹೆ	ಗವಿ	ಗುಹೆ
ಗೆಳೆಯ	ಜತೆಗಾರ	ಗೆಳೆಯ
ಗೊರಕೆ	ಗೊರ್ಕೆ	ಗೊರಕೆ
ಗೋಡೆ	ಗ್ವಾಡೆ	ಗೋಡೆ
ಚೆಕ್ಕು	ಸೆಕ್ಕು	ಚೆಕ್ಕು
ಚೆಂಡು	ಸೆಂಡು	ಚೆಂಡು
ಚರ್ಮ	ತೊಗ್ಲು	ಚರ್ಮ
ಚಾಪೆ	ಸ್ವಾಪೆ	ಚಾಪೆ
ಚಿಟ್ಟೆ	ಸಿಟ್ಟೆ	ಚಿಟ್ಟೆ
ಚಿಮುಕು	ಸಿಮ್ಸು	ಚಿಮುಕು

ಚಿವುಟು	ಗಿಚ್ಚು	ಚಿವುಟು
ಚೀಲ	ಸೀಲ	ಚೀಲ
ಚತ್ರಿ	ಚತ್ರಿಕಿ	ಚತ್ರಿ
ಜರಡಿ	ಜಲ್ಡಿ	ಜರಡಿ
ಜ್ವರ	ಜರ	ಜ್ವರ
ಜಿಂಕೆ	ಜಿಮ್ಕೆ	ಜಿಂಕೆ
ಜನ್ಮ	ಜಲ್ಮ	ಜನ್ಮ
ಜಮ	ಮಜ	ಜಮ
ಜೋರಾಗಿ	ಜಿಗೂದು	ಜೋರಾಗಿ
ಜೋಳ	ಜ್ವಾಳ	ಜೋಳ
ತಲೆ	ನೆತ್ತಿ	ತಲೆ
ತಿನ್ನು	ತಿಂಬು	ತಿನ್ನು
ತಿನ್ನುವುದಕ್ಕೆ	ತಿಂಬಾಕ	ತಿನ್ನುವುದಕ್ಕೆ
ತುರಿತ	ತಿಂಡಿ	ತುರಿತ
ತೇಗು	ಡೇಗು	ತೇಗು
ತೆಗೆದುಕೊಂಡು	ತಗಂಡು/ಇಸಗಂಡು	ತೆಗೆದುಕೊಂಡು
ತೋಟ	ತ್ವಾಟ	ತೋಟ
ದಡ	ಗಡ್ಡೆ	ದಡ
ದನಗಳಿಗೆ ಮೇವು ಹಾಕುವ ಸ್ಥಳ	ಗ್ವಾದ್ಲಿ/ಗ್ವಾಜ್ಲಿ	ದನಗಳಿಗೆ ಮೇವು ಹಾಕುವ ಸ್ಥಳ
ದನದ ಚರ್ಮದಿಂದ ಮಾಡಿದ ಹಗ್ಗ	ಮಿಣಿ	ಮಿಣಿ
ನೀಡು	ಇಕ್ಕು	ನೀಡು
ನೂಕು	ದೂಕು/ದೊಬ್ಬು	ನೂಕು

ನೆಕ್ಕು	ನಾಕು	ನೆಕ್ಕು
ನೆರಳು	ನೆಳ್ಳು	ನೆರಳು
ನೇಣು	ಉರ್ಲು	ನೇಣು
ನೈವೇದ್ಯ	ಎಡೆ	ನೈವೇದ್ಯ
ನೊಗ	ನಗ	ನೊಗ
ನೊರೆ	ಬುರುಗು	ನೊರೆ
ಪಕ್ಕಕ್ಕೆ	ಮಗ್ಗಲು	ಪಕ್ಕಕ್ಕೆ
ಪಲ್ಯ	ಪಲ್ಲೆ	ಪಲ್ಯ
ಪ್ರಾಯ	ಆರೇವು	ಪ್ರಾಯ
ಪೇರಲಹಣ್ಣು	ಜಾಮಣ್ಣು	ಪೇರಲಹಣ್ಣು
ಬಳ್ಳಿ	ಅಲ್ಬು	ಬಳ್ಳಿ
ಬಸುರಿ	ಬಸಿರಿ/ದಿಮ್‌ನ್‌ಸೇಳು	ಬಸುರಿ
ಬಣವಿ	ವಾಮೆ	ಬಣವಿ
ಬಹಳ	ಬಾಳ/ಬಾಲ/ಜಗ್ಗಿ	ಬಹಳ
ಬಾಗಿಲು	ಬಾಕ್ಲಿ	ಬಾಗಿಲು
ಬಿಟ್ಟು ಬಿಟ್ಟು	ಜಾಜಾಕ	ಬಿಟ್ಟುಬಿಟ್ಟು
ಬಿಂದಿಗೆ	ಕೊಡಪಾನ	ಬಿಂದಿಗೆ
ಬೀಗ	ಪತ್ತ	ಬೀಗ
ಬೆರಳು	ಬೊಳ್ಳು	ಬೆರಳು
ಬೇಟೆ	ಬ್ಯಾಟೆ	ಬೇಟೆ
ಬೇಗ	ಜಲ್ದಿ	ಬೇಗ
ಬೇಸರ	ಬ್ಯಾಸರ	ಬೇಸರ

ಮಗು	ಕೂಸು	ಮಗು
ಮಗಳು	ಮಗ್ಳು	ಮಗಳು
ಮಂಡಕ್ಕಿ	ಮಂಡಾಳು	ಮಂಡಕ್ಕಿ
ಮದುಮಗ	ಮದ್ಲಿಂಗ	ಮದುಮಗ
ಮದುಮಗಳು	ಮದ್ಲಿಗಿತ್ತಿ	ಮದುಮಗಳು
ಮಲಗುತ್ತಾನೆ	ಮಕ್ಕಂತಾನ	ಮಲಗುತ್ತಾನೆ
ಮುಂಜಾನೆ	ಮಿಂಚೇಲಿ	ಮುಂಜಾನೆ
ಮುಳುಗು	ಮುನುಗು	ಮುಳುಗು
ಮೆಟ್ಟಿಲು	ಪ್ಯಾಂಟಿಗೆ	ಮೆಟ್ಟಿಲು
ಮೆರವಣಿಗೆ	ಮೆರಣಿಗಿ	ಮೆರವಣಿಗೆ
ಮೆಲುಕಾಡು	ನಮಲಾಕು	ಮೆಲುಕಾಡು
ಮೇಲೆ	ಮ್ಯಾಲೆ/ಮ್ಯಾಗ	ಮೇಲೆ
ಮೊಗ್ಗೆ	ಮಗ್ಗೆ	ಮೊಗ್ಗೆ
ಮೊಟ್ಟೆ	ತತ್ತಿ	ಮೊಟ್ಟೆ
ಮೊನ್ನೆ	ಮನ್ನೆ	ಮೊನ್ನೆ
ಮೊಮ್ಮಗ	ಮಮ್ಮಗ	ಮೊಮ್ಮಗ
ಮೊಲೆ	ಮಲಿ	ಮೊಲೆ
ಮೋಡ	ಮಾಡ	ಮೋಡ
ಮೊಹರಂ	ಪೀರಲಬ್ಬ	ಮೊಹರಂ
ಲಟ್ಟಣಿಗೆ	ಲತ್‌ಪುಡಿ	ಲಟ್ಟಣಿಗೆ
ವಿಭೂತಿ	ಈಬೂತಿ/ಈಬತ್ತಿ	ವಿಭೂತಿ
ವಿಮಾನ	ಇಮಾನ	ವಿಮಾನ
ವಿಷ	ಇಸ	ವಿಷ

ವ್ಯವಸಾಯ	ಸೆದ್ಲೇವ್	ವ್ಯವಸಾಯ
ಸಡಿಲು	ಸೊಡ್ಲ	ಸಡಿಲು
ಸಮೀಪ	ಸೆನ್ಯಾಕ	ಸಮೀಪ
ಸ್ನಾನಮಾಡು	ಮೈತೊಳಕ	ಸ್ನಾನ ಮಾಡು
ಸಿಡಿಲು	ಸಿಡ್ಲು	ಸಿಡಿಲು
ಸುಮ್ಮನೆ ಇರು	ಸುಂಕಿರು	ಸುಮ್ಮನೆ ಇರು
ಸೆಗಣಿ	ಎಂಡೆ	ಸೆಗಣಿ
ಸೊಂಟ	ನಡುವು	ಸೊಂಟ
ಸೊಪ್ಪು	ತಪ್ಲ	ಸೊಪ್ಪು
ಸ್ವಲ್ಪ	ರೊವಟು/ತೊಟಗು	ಸ್ವಲ್ಪ
ಹಕ್ಕಿ	ಅಕ್ಕಿ	ಹಕ್ಕಿ
ಹಕ್ಕು	ಅಕ್ಕು	ಹಕ್ಕು
ಹಣ್ಣು	ಅಣ್ಣು	ಹಣ್ಣು
ಹನ್ನೆರಡು	ಅನ್ನೆಲ್ಡು	ಹನ್ನೆರಡು
ಹಲ್ಲು	ಅಲ್ಲು	ಹಲ್ಲು
ಹಸಿವು	ಅಸಿವು	ಹಸಿವು
ಹಾಲು	ಆಲು	ಹಾಲು
ಹಾವು	ಆವು	ಹಾವು
ಹಾಸಿಗೆ	ತಡಿ	ಹಾಸಿಗೆ
ಹುಣ್ಣಿಮೆ	ಉಣಿವೆ	ಹುಣ್ಣಿಮೆ
ಹೆಡೆ	ಎಡೆ	ಹೆಡೆ
ಹೆಂಡತಿ	ಎಣ್ತಿ	ಹೆಂಡತಿ
ಹೊಕ್ಕಳು	ಬಡ್ಡಕ್ಕಳು	ಹೊಕ್ಕಳು

ಹೊತ್ತು	ವತ್ತು	ಹೊತ್ತು
ಹೊಟ್ಟೆ	ವಟ್ಟೆ	ಹೊಟ್ಟೆ
ಹೊರಡು	ವಲ್ಡು	ಹೊರಡು
ಹೊಲ	ವಲ	ಹೊಲ
ಹೋತ	ಓತು	ಹೋತ

ಅಮಾಸ್ ಅಮಾಸೆಗೆ ನಡಕಂತೀವಿ. ಗುಡ್ನಕ್ ಬಂದು ಕಾಯಿ ವಡಕಂಡು ವೋಗ್‌ತೀವಿ. ಆಯ್ತವಾರ ರೆಟ್ಟಿ ಸುಡಂಗಿಲ್ಲ. ನಮ್ಮಪ್ಪ ಕುಂದ್ರಕ ಇಸೇತಿ ಜಾಗ ಸಿಗಂಗಿಲ್ಲ. ಬರೆ ಪಂಜು ಇಡಕಂಡು ದ್ಯಾವರಿಗೆ ಸ್ಯಾಕರಿ ಮಾಡಬೇಕಂತೇಳಿ ಇದಿಷ್ಟು ಜಾಗ ಇಡಕಂಡ. ಈ ಗುಡಿಗೆ ಎಪ್ಪತ್ಮೂರಾಗ ಬುನಾದಿ ಆಕಿದರು. ಎಂಬತ್ತಾರಾಗ ದ್ಯಾವರನ ಪ್ರತಿಸ್ಟಾಪ ಮಾಡಿದರು. ಮಡಿವಾಳ ಮಾಚಯ್ಯ ದ್ಯಾವರನ ಮಲ್ಲೇಶ್ವರ ಮಾಳವ್ವ ಕಲಿತು ಪರಿಚೆ (ಪರೀಕ್ಷೆ) ಮಾಡಿದರಂತೆ. ಆತನ ಕರ್‍ಕಂಡು ಬಂದು ನನ್ನ ಅಂಗಿ ಇಂಡಿಕ್ಯಾಂಡು ಬಾ ಅಂದರಂತೆ. ಸರಿ ಸ್ವಾಮಿ ಎಂದು ಅಂಗಿ ತಗಂಡು ವೋದನಂತೆ. ಈ ಅಂಗಿ ಎಂಗ ಇಂಡಬೇಕು ಅಂದರೆ ಅದರನ ನೀರಿನ್ಯಾಗ ತೊಯ್ಸಬಾರದು. ಬಂಡೆಮ್ಯಾಲೆ ಇಂಡಬಾರ್‍ದು. ನಿನ್ನ ಎಣ್ತಿ ವಡಲನ ಬಗೆದು ವಟ್ಟೇನ ತೊಸ್ತು ಮಾಡಿ ಬೆನ್ನಿನ ಬಂಡೆ ಮಾಡಿ ರಕ್ತನ ಸವಳ್ ಸುಣ್‌ಮಾಡಿ ಇಂಡಿಕ್ಯಾಂಡು ಬಾ ಎಂದನಂತೆ. ಮನೆಗೆ ಬಂದು ಗಂಡ ಎಸನ ಮಾಡುತ್ತಿದ್ದರೆ ಎಣ್ತಿ ಏನ್ ಎಂದು ಕೇಳಿದ್ಲಂತೆ. ಇಂಗಿಂಗ ಅಂದನಂತೆ ಅದಕೆ ಎಣ್ತಿ ಆಯ್ತು ನನ್ನ ಕಡ್‌ದು ಬುಡು ಎದ್ಲಂತೆ. ಈಯಮ್ಮನ ಕಡ್‌ದು ರೊಗ್ತದಲ್ಲಿ ಬಟ್ಟೆ ವಗದು ತಗಂಡ್ ವೋದನಂತೆ. ಆವಾಗ ಏನಪಾ ಬಟ್ಟೆ ವಗಿದ್ಯಾ ಅಂದರೆ ವಗಿದ್ಯೆ ಎಂದನಂತೆ. ನಿನ್ನ ಎಣ್ತಿ ಎಲ್ಲಿ ಐದಾಳ ಎಂದನಂತೆ. ಮನ್ಯಾಗ ಅಡಿಗೆ ಮಾಡತಾಳ ಅಂದನಂತೆ. ಆ ಮ್ಯಾಲೆ ಎಲ್ಡು ಮೂರು ದಿವ್ಸ ಬರಲಿಲ್ಲ ಅಂತೆ ಎದಕ ಬಂದಿಲ್ಲ ಕರ್‍ಕಂಡು ಬರ್‍ರಿ ಎಂದು ಏಳಿ ಕಳ್ಸಿದನಂತೆ. ಆವಾಗ ಬಂದ್‌ನಂತೆ. ಬಟ್ಟೆ ಎಂಗ್ ಇಂಡಿದೆ ಕರೆಕ್ಟ್ ಏಳ್ ಅಂದರೆ ನನ್ ಎಣ್ತಿ ಕಡಿದು ಇಂಡಿದೆ ಎಂದ್‌ನಂತೆ. ಇಲ್ಲಿ ನಿನ್ನ ಎಣ್ತಿ ಅಯ್‌ದಾಳ ನೋಡು ಎಂದನಂತೆ ಮಲ್ಲೇಶ್ವರ ಮಾನ್ಯಾಗ ವೋಗಿ ನೋಡಿದರೆ ಎಣ್ತಿ ಇದ್ಲಂತೆ. ಅಂತ ದೊಡ್ನೋರು ಏಳತಾರ.

ತೇರಿನ ದಿವ್ಸ ತೇರ ಎಳಿತಾರ ಅಮಾಸೆ ಆದ ಐದು ದಿವ್ಸಕ ಅಂದರೆ ಪಂಚಮಿ ದಿವ್ಸ ಇಲ್ಲಿ ಬರ್‍ತೀವಿ. ಇಲಾಲು ಅಂದರೆ ತ್ರಿಶೂಲ ಎಲ್ಲಾರು ಇಡಕಾಬೋದು. ಆದರೆ ಪಂಜು ಮಾತ್ರ ನಾವೇ ಇಡಕಂತೀವಿ. ಮಾಮೂಲು ಕಾಟನ್ ಬಟ್ಟೆ ಕಟ್ಟಿಗೆ ಸುತ್ತ್ಯಕಂಡು ಬಂದು ಇಲ್ಲಿ ಇಡ್‌ತೀವಿ. ಔಡ್ಲೆಣ್ಣೆ ವಳ್ಳೆಣ್ಣೆಗೆ ಮಾತ್ರ ಪಂಜು ಇಡುತೀವಿ. ಕೆಲವರು ಸೀಮೆಎಣ್ಣೆ ಆಕಿ ಇಡತಾರ ಕೆಲವರು ಮದುವೆಗೆ ಪಂಜು ಇಡತಾರ. ಆದರೆ ನಾವು ದೇವರಿಗೆ ಮಾತ್ರ ಪಂಜು ಇಡತೀವಿ. ಎಣ್ಣೆನ ಬಕ್ತರು ತಂದು ಕೊಡ್ತಾರ. ಬಕ್ತರು ಕೊಡದಿದ್ದರೆ ಟ್ರಸ್ಟ್ ಕಮಿಟೋರು ನಮಗೆ ಕೊಡ್ತಾರ. ಸ್ವಾಮಾನು ಅಯತ್ಯಾ ಇಲ್ಲ ನೋಡಕಂತೀವಿ ತಿರಗ ಸಸ್ತ್ರ ಪವಾಡ ಮಾಡ್ತಾರ.

ನಾವು ಎಲ್ಲಿಬೇಕಲ್ಲಿ ಪಂಜು ಇಡಂಗಿಲ್ಲ. ದೇವರು ಪಕ್ಕದಾಗ ಇರಬೇಕು. ಸ್ವಾಮಾನು ಕಳಿದೋಗದಂಗ ದ್ಯಾವರ ಮುಂದೆ ಇರ್‍ತೀವಿ. ಎಲ್ಲಗಂಟೆ ಮ್ಯಾಲೆ ಬಸವೇರಾಟ ಇರ್‍ತೈತೆ. ವಸ ಬಸವೇರನ ಯಾರನ್ನ ಬುಡ್ತಿ ಅವರ್ ನಮಗೆ ಇಪ್ಪತ್ತೈದು ರೂಪಾಯಿ ದಕ್‌ಸಿನ ಕೊಡಬೇಕು. ವೋಕಳ್ಳಿಗೆ ಬಂಡಾರ, ಸುಣ್ಣ ಸ್ವಲ್ಪ ಎಣ್ಣೆ ಕಲ್ಸಿತೀವಿ. ಗುಡ್ಡಕ ಬುಟ್ಟು ಬಸವೇರಿಗೆ ಬಂಡಾರ ಆಕಿ ಬುಟ್ಟಿರುತಾರ. ತಿರಪತಿ ತಿಮ್ಮಪ್ಪ ಬಸವೇರು, ಹುಲಿಗೆಮ್ಮ ಬಸವೇರು ಇವರು ನಮ್ಮ ಗುಡ್ಡಕ ಸಂಬಂದಿಲ್ಲ. ವಸದಾಗ ಬಸವೇರ ಬಿಟ್ಟು ಎತಕಂಡು ಬಿಟ್ಟರೆ ಅವರಿಗೆ ದೀಕ್‌ಸೆ ಕೊಟ್ಟಂಗ. ಬಸವೇರ ಆಟ ಅಗಸ ಆಡಬೇಕು. ವಗ್ಗರ ಆಟ ಗೊರವ ಆಡಬೇಕು ಅಂತ ದೊಡ್ಡೋರು ನೇಮಿಸ್ಯಾರ.

ನಮ್ಮಪ್ಪ ಐದ್ ಮಂದಿ ಎಂಡ್ರ ಮಾಡಿಕೆಂಡಿದ್ದರು. ಇಲ್ಲೆ ಕಾಯಿ ಬುಡಬೇಕು ಅಂದಕಂಡಿದ್ದರು. ಬಸವನ ಬಾಗೇವಾಡಿಗೆ ವೋಗಿ ಬಂದು ಮೂರು ದಿವ್ಸಕ್ಕೆ ಕಾಯಿಬುಟ್ಟರು. ಮಡಿವಾಳ ಮಾಚಯ್ಯ ಗುಡಿಗೆ ಮಾಡಿಸಿದ ಯ್ಯಾಂಡ್ ಬಿಲ್ಲು ಐದಾವ ಎಲ್ಲಾರು ಎಲ್ಡು ರೂಪಾಯಿ, ಮೂರು ರೂಪಾಯಿಕ್ಕಿಂತ ಹೆಚ್ಚು ಬರೆದಿಲ್ಲ. ನಮ್ಮೂರು ಬೀಮಪ್ಪನೋರು ಮಾತ್ರ ನೂರಾವಂದು ರೂಪಾಯಿ ಬರೆದಾರ. ಈಗಿನ ಕಾಲದಾಗ ಸ್ಯಾರ್ಜಿಗೆ ಆಗಾದಿಲ್ಲ. ಈ ಜಾಗ ಇಡಕಂಡಿದ್ದೇ ನಮಗೆ ಸಂತೋಸ.

ಮಡಿವಾಳ ಹನುಮಂತಪ್ಪ, ನರಣಿಕಿ (ಸ್ವಾಸ್ತಿ) ಲಿಂಗದಳ್ಳಿವಾಸ ೪೦ ವರ್ಷ, ಮನೆದೇವರು
ಮಲ್ಲೇಶ್ವರಸ್ವಾಮಿ

ಕಥೆ ೨

ಒಂದೂರಾಗ ರಾಜ ಇರ್‍ತಾನ. ಬಡಬೀಮ ಇರ್‍ತಾನ. ರಾಜ ಮನ್ಯಾಗ ಕೆಲ್ಸ ಮಾಡತಿರತಾನ. ಒಂದ್ಸತೆ ಆತಗ ಏಳು ಜನ ಎಣ್‌ಮಕ್ಳು. ಅಕ್ಕತೆಂಗ್ಯೋರು ಬಾಳ ಬಡವರಿರ್‍ತಾರ. ಈ ರಾಜಗ ಮದುವ್ಯಾಗಿ ಅದಿನೆಂಟು ವರ್ಷ ಆಗಿರತ್ತೈತಿ. ಮಕ್ಕಳಾಗಿರಂಗಿಲ್ಲ. ಬಡಬೀಮ ಒಂದ್ಸತಿ ಕೆಲ್ಸಕೋಗವತ್ತಿನ್ಯಾಗ ಕುಂಬಳಕಾಯಿ ಸಿಗತೈತಿ. ಆ ಕುಂಬಳಕಾಯಿ ವಯ್ದು ಎಣ್ತಿಗೆ ಕೊಡತಾನ. ಎಣ್ತಿ ಬೆಯ್ಯುತಿರುತಾಳ ಅದಕೆ ವೋಗಿ ಗಡಿಗ್ಯಾಗ ಇಕ್ಕಿರತಾನ. ಎಣ್ತಿ ಸಿಟ್ಟು ಬಂದು ವಟ್ಟೆ ಅಸಕಂಡು ಕುಂಬಳಕಾಯಿ ಕೊಯ್ದು ತಿಂಬಾನಂದರೆ ಆವು (ಹಾವು) ಆಗಿರತ್ತೈತೆ. ಬೆಯ್ಯುತಾಳ ನನಗೆ ಆವು ತಂದಿಕ್ಯಾನ ಸಾಯಸಕ ಅಂತ ಅಂದಕಮ್ಮುತಾಳ. ಅವಾಗ ಆತ ಬರ್‍ತಾನ. ನೀರ್ ತಗಂಡ್ ಬಾ ಅಂತಾನ. ನನಗೆ ಸಾಯಿಸಕ ಆವು ತಂದಿಕ್ಕೀಯ ಅಂತ ಬೆಯ್ಯುತಾಳ. ವೋಗಿ ನೋಡಿದರೆ ಬಂಗಾರ ಆಗಿರತ್ತೈತೆ ಅದು. ಅರೆ ನಾನ್ ಕುಂಬಳ್‌ಕಾಯಿ ತಂದಿಕ್ಕಿದ್ದೆ ನೀನು ನೋಡಿದರೆ ಆವು ಆಗೈತೆ. ನಾನು ನೋಡಿದರೆ ಬಂಗಾರ ಆಗೈತೆ. ಇದು ನಮ್ಮತ್ತಲಿದ್ದರೆ ನಾವು ಸಾವಕರಾಗಿ ಬುಡುತೀವಿ.

ಎಲ್ಲಾರಿಗೂ ಅನುಮಾನ ಬಂದು ಬುಡತೈತೆ. ರಾಜನ ಮನ್ಯಾಗ ಕಳ್ತನ ಮಡ್ಯಾನಿವನು ಅದಕೆ ಇಷ್ಟು ಸೌಕಾರ ಆಗ್ಯಾನ ಅಂತಂದ್ರು ಇದು ನಮ್‌ತಾಗ ಇದ್ದರೆ ಬೇಸಲ್ಲ ರಾಜನ ಮನೆಗೆ ವೋಗಿ ಕೊಡ್ತೀನಿ. ಅಂತ ವಯ್ದು ರಾಜ ರಾಜ ನನಗೊಂದು ಕುಂಬಳಕಾಯಿ ಸಿಕ್ಕಿತು ವಯ್ದು ಗಡಿಗ್ಯಾಗ ಇಟ್ಟಿದ್ದೆ. ನನ್ನೇಣ್ತಿಗೆ ಆವಾಗಿ ಕಂಡೈತೆ. ನನಗೆ ಬಂಗಾರಾಗೈತಿ. ಇವನ್ನ ತಗಂಡು ನನಗೇನನ್ನ ಸಹಾಯ ಮಾಡ್ರಿ ಅಂದ್ರೆ. ನಾನು ಸುಮ್ನೆ ತಗೊಂಬದಿಲ್ಲ ನಿನಗೆ ಹತ್ತು ಎಕರೆ ವಲ ಕೊಡ್ತೀನಿ. ಅದರಿಂದ ನೀನು ಮಾಡಿಕ್ಯಂಡು ಸುಕ ಮಾಡಿರು. ನಾನ್ ಇದನ್ನ ತಗಂತೀನಿ ಅಂತಾನ. ಅವರಿಗೆ ಹತ್ತು ಎಕರೆ ವಲ ಕೊಡ್ತಾನ. ಅವರ್ ಬದುಕತಾರ. ಈ ಕಡೆ ರಾಜ ವೋಗಿ ಎಣ್ತಿ ಕೊಳ್ಳಾಗ ಆಕ್ತಾನ. ಆ ಬಂಗಾರನ್ನ ದಿನಾ ನೀರ ಎರಕವಾಗ ಮಂಚದ ಕಾಲಿಗೆ ಆಕಿ ನೀರು ಆಕ್ಯಂತಿದ್ನಂತೆ. ಒಂದ್ಸಾರಿ ಮಂಚದ ಮೇಲೆ ಮಕ್ಕಸಿ ನಿರಾಕಂಡು ಬರಾಕ ವೋಗಿದ್ನಂತೆ. ಅದು ಕೂಸಾಗಿ ಅಳಾಕತ್ತೈತೆ. ಅಂಗೆ ಬಂದು ಆಕಿ ಕೂಸನ ತಗಂಡು ಎತ್ತಿಕಂಡು ವಡಾಡಿಕೊಡು ಜೋಪಾನ ಮಾಡಿದ್ನಂತೆ. ಹೆಸರು ಇಕ್ಕಬೇಕಲ್ಲ ಕೇಳ್ಸಿಕೊಂಡು ಬರಾಕೋದರೆ ಆತನ ಹೆಸರು ನಾಗಪ್ಪ. ಒಂದು ದಿನಕ್ಕೆ ಒಂದು ವರ್ಸದ ವುಡ್ಗ. ಎಲ್ಡು ದಿನಕ್ಕೆ ಎಲ್ಡು ವರ್ಷದ ವುಡ್ಗ. ಒಂದ್ಸತೆ ಅವನ ಸ್ಕೂಲಿಗೆ ಆಕತಾರ. ಸ್ಕೂಲಿಗೆ ವೋದರೆ ಏನೋ ನಾಗಪ್ಪ ಬಾ ಆಡ ಬಾ ಅಂದರೆ ನಾ ಆಡಕಿಲ್ಲ. ನನಗೆ ಜೀವ ಬೇಸಿಲ್ಲ. ನೀವ್ ಆಡ್‌ವೋಗ್ರಿ ಅಂದರೆ ಯಾಕೋ ಅಸ್ಟು ಡಲ್ ಆಗಿ ಅಯ್‌ದೀಯ. ಇಲ್ಲ ನನಗೆ ಏನೂ ಇಲ್ಲ ಸುಮ್ನೆ ವೋಗ್ರಿ ಅಂತಾನ. ಮನೆಗೋಗಿ ಮಕ್ಕೋಂತಾನ. ಉಣು ಬಾಪ್ಪ ನಾಗಪ್ಪ ಅಂದರೆ ಇಲ್ಲಮ್ಮ ನಾ ಉಣಾಕಿಲ್ಲ ಅಂತಾನ. ಯಾಕೋ, ನನಗೆ ಒಂದ್ ಅಯ್‌ತೆ ಅಪ್ಪನ್ ಕೇಳ್ ನನಗೆ ತೋರ್ಸ್ತಾನ ಅಂತ. ಏನೋ ಅಂದರೆ ನನಗೆ ಆದೋನಿ ಎಷ್ಟು ಊರೈತೆ ಅಸ್ಟು ಊರು ತೋರ್ಸಬೇಕು. ಒಂದ್ ವೋಣಿ ಬಿಡಬಾರ್ದು. ಅಂದರೆ ನಿಮ್ಮಪ್ಪ ರಾಜಾ ಅಲ್ಲ ನಿಮ್ಮಪ್ಪ ಎದಕ ತೋರ್ಸಗಿಲ್ಲ ಬಾ ನಾನ ಕರಕಂಡೋಗ್ತೀನಿ ಅಂತ ಕರಕಂಡು ವೋಗ್ತಾಳ. ಅಯ್ಯೋ ಅಸ್ಟೇನ ಅಂತ ಬಡಬೀಮನ ಕರೆಕಳಿಸಿ ಬೀಮ ನನ್ ಮಗ ಊರು ನೋಡ್ತಾನಂತೆ. ನೀನ್ ಆನೆ ತಂದು ಆನೆ ಮ್ಯಾಲೆ ಅಂಬಾರಿ ಕಟ್ಟಿ ಅಂಬಾರಿ ಮ್ಯಾಲೆ ಮಗನ ಕುಂದರ್ಸಕಂಡು ಎಲ್ಲಾ ತೋರ್ಸು ಒಂದು ವೋಣಿ ಮಾತ್ರ ತೋರ್ಸಬ್ಯಾಡ. ಯಾವ ವೋಣಿ ಅಂದರೆ ಪಾತ್ರಗಿತ್ತಿ ವೋಣಿ. ಎಲ್ಲಾ ಊರು ತೋರ್ಸ್ಯಾತಾನ ರಾತ್ರಿಯಾಗಿರತ್ತೈತೆ ಬರ್‌ತಿರತಾನ. ಬಡಬೀಮಣ್ಣ ಅಂತಾನ ಏನಪ ಅಂದರೆ ನನಗೆ ಎಲ್ಲಾ ತೋರ್ಸಿ ಒಂದು ವೋಣಿ ತೋರ್ಸಿಲ್ಲ ನೋಡು ಅಂತಾನ. ಎಲ್ಲಾ ತೋರ್ಸಿನಲ್ಲಪ್ಪ ಅಂದರೆ ಸುಳ್ಳು ಹೇಳಬ್ಯಾಡ ನನಗೆ ಪಾತ್ರಗಿತ್ತಿ ವೋಣಿ ತೋರ್ಸಿಲ್ಲ ನೋಡು ಅಂತಾನೆ. ಅಲ್ಲಿಗೆ ವೋಗ್‌ಬಾರದಪ್ಪ ಬೇಸಿರಕ್ಕಿಲ್ಲ ಗಲೀಜು ಅಂತಾನ. ಇಲ್ಲ ಅದು ತೋರ್ಸ್ತೀಯ ಇಲ್ಲ ನಾನ್ ಮನೆಗೆ ಬರಾಕಿಲ್ಲ ಅಂತಾನ. ಯಾರೋ ಒಬ್ಬ ವುಡ್ಗಿ ನೀರ ಆಕ್ಯಂಡು ಮಾಳಿಗೆ ಮ್ಯಾಲೆ ನಿಂತಕಂಡು ಕೂದ್ಲು ಆರಿಸಿಕೊಳ್ಳುತ್ತಿರತಾಳ. ಆ ವುಡ್ಗಿ ಕಣ್ಣು ಈತನ ಮ್ಯಾಲೆ ಬೀಳತೈತೆ. ಈತನ ಕಣ್ಣು ಆ ವುಡ್ಗಿ ಮ್ಯಾಲೆ ಬೀಳತೈತೆ. ಆ ವುಡ್ಗ ಆಕಿತಾನ್ ವೋಗ್‌ತಾನ ವೋಗಿ ಮನ್ಯಾಗ ಇದ್ದು ಬಿಡ್ತಾನ. ಬಡಬೀಮ ಬಾಪ್ಪ ವೋಗೋಣ ಬಾಪ್ಪ ವೋಗೋಣ ಅಂದರೆ ಇಲ್ಲ ಬಡಬೀಮ

ನಾನ್ ಬರಾಕಿಲ್ಲ. ನೀನ್ ವೋಗ್ ಅಂದರೆ ಬಾಪ್ಪ ನಿಮ್ಮಪ್ಪ ನಿಮ್ಮಮ್ಮ ಎದುರು ನೋಡ್‌ತಿರತಾರ ರಾತ್ರಿ ಆಯ್ತಪ್ಪ ವೋಗೋಣ ಅಂದರೆ ಇಲ್ಲ ನಾನು ಬರಾಕಿಲ್ಲ ಬರಾಕಿಲ್ಲ ಅಂತಾನ. ಬಡಬೀಮ ವೋಗ್‌ತಾನ, ಏನಪಾ ನನ್ನ ಮಗ ಬಂದಿಲ್ಲ ಎಂದು ರಾಜ ಕೇಳ್ತಾನ. ರಾಜಾ ನಿನ್ಮಗ ಯಾರೋ ಒಬ್ಬ ವುಡ್ಗಿ ಜೊತೆ ವೋಗಿ ಬುಟ್ಟಾನ. ಬರಂಗಿಲ್ಲ ಅಂತೆ ಮದುವೆ ಮಾಡಿಕ್ಯಂತನಂತೆ. ಆತನ್‌ಕೋಸ್ಕರ ಎಣ್ ನೋಡಿ ಬಂದೀವಿ ಅಲ್ಲಪ್ಪ ನಾವು. ಆಕಿ ಎಸರು ಪದ್ಮಾವತಿ ಬೇಸ್ಯೆದಾಳ ವುಡ್ಗಿ ವೋಗಿ ಪೋಟೋ ತೋರ್‍ಸು ಎಂದು ಬೀಮಣ್ಣಗ ಎಳ್ತಾರ. ನಾಗಪ್ಪ ನಾಗಪ್ಪ ನಿನಗೆ ನಿಮ್ಮಪ್ಪ ಅವರು ಎಣ್ ನೋಡ್ಯಾರ ನೋಡು. ಪೋಟೋ ತಗೋ ಅಂದರೆ ಆಕಿ ಒಂದು ಕಣ್ಣಿಗೆ ಬೊಕ್ಕೆ ಆಕಿ ಏನ್ರೀ ಇಂತ ವುಡ್ಗಿ ಮಾಡಿಕಂತೀರಿ ಚೀ, ಬೇಸಿಲ್ಲ. ನನಕಿನ ಬೇಸ್ಯೆದಾಳ ಏನ್ರಿ ಅಂದರೆ ಅಯ್ಯಾ ಅವುದು ಈಕಿ ಬೇಸಿಲ್ಲ ನೀನೆ ಬೇಸ್ಯೆದೀಯ. ಅದನ ವಾಪಸ್ಸು ಕಳಸ್ತಾರ. ಆ ಪೋಟೋ ನೋಡಿ ಮದುವೆ ಮಾಡ್ತಾರ ಈತಗ. ಈತ ಅಂಗೆ ಇರ್‍ತಾನ. ಒಂದ್ಸತಿ ಇಂಗೆ ಅಡಿಗೆ ಮಾಡತಿರತಾಳ ದಿನಾ ನೀನು ಇಂಗ ಸಿಂತೆ ಮಾಡಿದರೆ ಎಂಗಮ್ಮ ನಾನ್ ಒಂದು ಆಕಳ ತರತೀನಿ ಅದಕ ಎಲ್ಲಾ ಆಕು ಆಲು ಕೊಡತ್ಯೆತೆ. ಮೊಸರು ಮಾಡಿಕ್ಯಂಡು ದಿನಾ ಅವರೋಣ್ಯಾಗ ವೋಗು ಮಾರಾಕ. ನಿನಗಂಡನ ನೋಡಾಕ ಬರತ್ಯೆತೆ. ಸರೆ ಅಂತ ಎಲ್ಲಾ ರೆಡ್ಯಾಗಿ ವೋಗ್ತಾಳ. ಒಂದ್ಸತಿ ರಾಜಾ ಮ್ಯಾಲೆ ನಿಂತು ನೋಡ್ತಾನ. ಅಕಿ ಇಸ್ಟು ವಳ್ಳೆ ವುಡಿಗೀನ ನಾನು ನೋಡಿಲ್ಲ. ಒಂದ್ಸತಿ ನಾನು ಆಕ್ಯಾಬೇಕು ಆಲು. ಎಣ್ತಿ ವೋದರೆ ತಾರೇ ನಾನು ಆಕ್ಸಂಬರ್‍ತೀನಿ ಆಲು. ಇಲ್ಲೋಳ್ರಿ ನಾನು ಆಕ್ಸಂಬರ್‍ತೀನಿ ಅಂದರೆ ಇಲ್ಲ. ಕೊಡು ನೀನು ಅಡಿಗೆ ಮಾಡೋಗು ಅಲ್ಲಿ ಬ್ಯಾಳೆ ಉಕ್ಕುತ್ಯೆತೆ ನೋಡು. ವೋಯ್ತಾನ ಆಕಿ ಎಷ್ಟು ಆಕಬೇಕು ಅಂದರೆ ಎಲ್ಡು ಸೇರು ಆಕಮ್ಮ ಅಂತಾನ. ಆಕಿನ ಈತ ನೋಡ್‌ತಿರತಾನ ಆಕಿ ಸುಮ್ಮನೆ ಆಕ್‌ತಿರತಾಳ. ಆಕಿ ಒಂದು ಸೆಪ್ಪಲಿ ಬಿಟ್ಟು ವೋತಾಳ. ಏನಮ್ಮ ಸೆಪ್ಪಲಿ ಏನಮ್ಮ ಸೆಪ್ಪಲಿ ಆಕಿ ಸರಸರ ವೋಗಿ ಮನ್ಯಾಗ ವಕ್ಕಂಬಿಡುತ್ತಾಳ. ಅರೆ ನಮ್ಮ ಮನ್ಯಾಗ ವಕ್ಕಂಬಿಟ್ಲಲ್ಲ. ಈಕಿ ನಮ್ಮಪ್ಪ ನಮ್ಮಮ್ಮಗ ಎಂಗ ಗೊತ್ತು ಅಪ್ಪ ಅಪ್ಪ ಅಂತ ಬರ್‍ತಾನ. ಬಾಪ್ಪ ರಾಜಾ ಎಲ್ಲಂತ ವುಡಕಬೇಕಪ್ಪ ನಿನ್ನ ಅಂತಾನ. ಬಡಬೀಮಗ ಏಳಿ ಕಳ್ಸಿದ್ವಲ್ಲಪ್ಪ ನೀನು ಬರ್‍ಲಿಲ್ಲ. ಮದುವೆ ಮಾಡಿಕ್ಯಂಡು ಪಾಪ ಅಂಗೆ ಅಯ್‌ದಾಳ ಆ ವುಡ್ಗಿ. ಅಮ್ಮ ಈವಾಗಿಂದ ಆ ವುಡ್ಗಿ ಜೊತೆ ಇರ್‍ತೀನಿ. ಸರೇ ಇನ್ನಾ ಸಂತೋಸಲ್ಲಪ್ಪ ಅಂಗಿದ್ರರೆ ಅಂತಾಳ. ಸರಿ ಇಬ್ಬರು ವಂದಾಗತಾರ ರಾತ್ರಿ ಊಟ ಮಾಡಬೇಕಾದರೆ ರೀ ಒಂದು ಮಾತು ಕೇಳ್ತೀನಿ ರೀ ಅಂತಾಳ. ಏನ್ ಅಂದರೆ ನೀನು ಕುಂಬಳಕಾಯಿಯಿಂದ ಆವು ಆಗಿ ಆವುಲಿಂದ ವುಡ್ಗ ಆಗಿಯಂತಲ್ಲ ಅಂತಾಳ. ಅಸ್ಟುರೊಳಾಗ ಕರಂಟೋಗಿ ಬಿಡತ್ಯೆತೆ. ಬಚ್ಚಲ ಮನ್ಯಾಗ ವೋಗಿರತಾನ. ಅತ್ತೆ ಅತ್ತೆ ಅಂತ ಕರಿತಾಳ ಏನಮ್ಮ ಅಂದರೆ ನಿನ್ ಮಗ ಆವು ಆಗಿ ವೋಗ್ಬಿಟ್ಟ ಅಂತಾಳ. ನೀನ್ಯಾಕೆ ಎಳಾಕ ವೋಗಿದ್ದೆ ಅಸ್ಟ ಜಲ್ದಿ. ಸುಮ್ನೆ ಇರಾಕ ಬರಾದಿಲ್ಲ ಅಂತ ಬೈತಾಳ. ಆತ ವೋಗಿ ಕಾಲುವೆ ಮ್ಯಾಲೆ ಇರ್‍ತಾನ. ಒಂದು ಮುದುಕ ಬರ್‌ತಿರತಾನ.

ಈತನ್ ನೋಡಿರ್‌ತಾನ. ಆವಾಗ ರಾಜಾ ದಿನಾ ಬಂದು ನಮ್ಮನ್ಯಾಗ ಉಂಬಾಕ ಬರಬೇಕು ಉಂಡು ನನ್ಮಗನ ನೋಡಿನೆಂದರೆ ನೋಡಿನಿ ಇಲ್ಲಂದರೆ ಇಲ್ಲ ಅಂತ ಹೇಳಿ ವೋಗ್ಬೇಕು. ಎಲ್ಲಾರು ನೋಡಿಲ್ಲ ನೋಡಿಲ್ಲ ಅಂತ ಉಂಡು ವೋಗ್ತಾರ. ಒಬ್ಬ ಮುದುಕ ದಿನ ಸಂಜ್ಯಾಗ ಬರತಿರತಾನ. ಆಕಳತಾಗ ವೋಗ್ ತಿರತಾನಂತೆ. ಅದು ಆಕಳ ಆತನ್‌ತಾಗ ವೋಗ್‌ತಿತ್ ಅಂತೆ. ಆಲು ಇಂಡಿಕೆಂಡು ಬರಾಕ ವೋತಿದ್ರೆ ಈ ಮುದುಕ ವೋದರೆ ಆವತ್ತು ವುಡ್ಗ ಯಾರು ಬಂದಿಲ್ಲ ಅಂತ ಆಕಳ ತೋಕ ಇಡ್ಕಂಡನಂತೆ. ತೋಕ ಇಡ್ಕಂಡ ವಳಾಗ ವೋದನಂತೆ. ವಲಾಗ ಆಲು ಇಂಡಿಕ್ಯಂಡು ಪೂಜೆ ಮಾಡಿದರಂತೆ. ಮುದುಕನ್ನ ಕೇಳಿದರಂತೆ ತಾತ ತಾತ ನಾಗಪ್ಪ ನೋಡಿಯಾ ಅಂತ ನಾಗಪ್ಪ ನನ್ನ ಅತ್ತಿರ ಅಯ್‌ದಾನ ನಿನಗೇನಾಗಬೇಕು ಅಂದರೆ ನನ ಗಂಡ ಅಂದ್ಲಂತೆ ಅವಾಗ ಕರ್ಕಂಡೋಗಿ ಅವರಿಬ್ಬರನ ಸೇರಿಸಿ ಅರಮನೆಗೆ ಬಂದು ಸುಖವಾಗಿದ್ದರಂತೆ.

ಈರಮಣಿ, ಮೋಚಿ, ವಯಸ್ಸು ೧೬

ಕಥೆ ೩

ಒಂದ್ ಅಡಿವ್ಯಾಗ ಸಿಂಹ ಇತ್ತು. ಅಡಿವೆಗೆಲ್ಲಾ ನಾನೇ ರಾಜ ಅನ್‌ತಿತ್ತು. ದಿಸಾ ಒಂದು ಪ್ರಾಣಿಯನ್ನ ಕೊಂದು ತಿನ್‌ತಿತ್ತು. ಪ್ರಾಣಿಗಳೆಲ್ಲಾ ಕಲ್‌ತು ಒಂದು ಸಂಗವಾಗಿ ದಿನಾ ಇಂಗ್ ತಿಂಬೋದು ಒಳ್ಳೆದಲ್ಲಾ ನಾವೆಲ್ಲರು ವಗ್ಗಟ್ಟಾಗಿ ಕೂಡಿ ಒಂದು ನಿರ್ಣಯ ತಕ್ಕೊಂಬಾನ ಅಂದಕಂಡವು. ದಿಸಾ ಒಬ್ಬೊಬ್ಬರು. ನಾವೇ ಹೋಗೋಣ ದಿನಾ ಬಯಪಟ್ಟು ಬಯಪಟ್ಟು ಇರಾದಬೇಡ ನಾವೇ ದಿನಾ ಸಾಲಾಗಿ ವೋಗಾಮ ಅಂದಕಂಡವು. ಈ ಮಾತನ್ನು ಸಿಂಹಗೆ ಏಳಿದವು. ರಾಜಾ ಕೂಡ ಒಪ್ಪಕಂಡ. ದಿನಾ ಸಾಲಾಗಿ ವೋಗ್‌ತಿದ್ದವು. ಒಂದು ದಿನ ಮಲದ ಸಾಲು ಬಂತು. ಆ ಮಲವು ನನಗೆ ಸಾಯದಿಷ್ಟವಿಲ್ಲ ಏನ್ಮಾಡಮು ಅಂತ ಸ್ವಲ್ಪ ಹೊತ್ತು ಆಲೋಚನೆ ಮಾಡಿತು. ಆಲೋಚನೆ ಮಾಡಿ ಒಂದು ಹಾಳ್ ಬಾವಿ ಕಾಣ್ತು. ಅಂಗೆ ಒಂದು ಉಪಾಯ ತಾಳ್ತು ಅದಕ ವತ್ತಾಗಿ ಬಂತು. ಯಾರು ತಡದರು ನಿನ್ನ ಅಂತ ಕೇಳಿತು. ಇಲ್ಲ ರಾಜಾ ನಿನಗೆ ಹೆದರಿಸೋ ಒಂದು ಪ್ರಾಣಿ ಅಲ್ಲಿದೆ. ತಾನೇ ರಾಜನೆಂದು ಎಲ್ಲಕ್ಕೂ ದೊಡ್ಡದೆಂದು ಹೇಳ್ತಾ ಇದಾನೆ. ಯಾರು ಆ ರಾಜಾ ನನಕ್ಕಂತ ದೊಡ್ಡಾನ ಅಂತ ಹೇಳಿತು ಸಿಂಹ. ಎರಡೂ ಸೇರಿ ಆಳ್ ಬಾಯಿಯತ್ತರ ವೋಗ್ತಾವ. ಬಾಯಾಗ ಇದರ ಮಕ ಕಾಣತ್ಯೆತೆ. ಇದು ಎಂಗ್ ಮಾಡಿದರೆ ಅದು ಅಂಗೆ ಮಾಡತ್ಯೆತೆ. ಅದರ ಮ್ಯಾಲೆ ಯುದ್ಧ ಮಾಡಾಕ ದುಮಕತ್ಯೆತೆ.

ಕೌಸಲ್ಯ, ಲಿಂಗಾಯಿತರು, ೧೬

ಕಥೆ ೪

ಆಯ್ತವಾರ ಮೈತೊಲಕಂಡು ದ್ಯಾವರ ಪೂಜೆ ಮಾಡ್ತೀವಿ. ಅಕ್ಕಿ, ಗೋದಿ, ಕೊಬಿರಿ, ಊವ, ಹಣ್ಣು ತಂದು ಕೊಡ್ತೀವಿ. ದ್ಯಾವರ ಬಂಡಾರ ಆಕಿ ಪೂಜೆ ಮಾಡಿ ತಾಳಿ ಕಟ್ಟುತಾರ. ವಸ ಒಂದ್ಸಲ ದೇವರಿಗೆ ವೋತಾರ ಆಯ್ತವಾರ ಬಿಟ್ಟು ಬೇರೆ ವಾರ ನಡಕಂಬದಿಲ್ಲ. ತಿಕ್ಕಡಿ, ಕಾಟ, ಗಂಡವಂಸ ಇಲ್ಲ ಅಂದರೆ ಅಂತೋರು ಬಸವಿಗೆ ಬುಡತಾರ. ವರ್ಸಕೊಂದು ಸಲ ಅಗ್ಸರು ಎತಕೆಂದು ಇಳಿಸ್ತಾರ. ನಮ್ಮ ಮಕ್ಕಿಗೆ ಆತನ ಹೆಸರೇ ಇಡಬೇಕು. ಬೇರೆ ಹೆಸರು ಇಟ್ಟರೆ ಏನಾದರೂ ತಿಕ್ಕಡಿ ಇರ್ರೈತೆ. ಬ್ಯಾರೆ ಹೆಸರು ಇಟ್ಟಿದ್ದಕ್ಕೆ ೨೦,೦೦೦ ಕರ್ಚು ಆಗೈತೆ. ಮಲ್ಲಿಕಾರ್ಜುನ ಅಂತ ಹೆಸರು ಇಟ್ಟ ಮ್ಯಾಲೆ ಬೇಸಾಯಿತು. ಈ ಉಡುಗ್ ಅಯ್‌ದು ವರ್ಸ ತಿಪ್ಪಲು ಬಿದ್ದೀವಿ. ನಾವು ಸ್ಯಾಣೆರಾಗಿ ಬದಕ್‌ತೀವಿ. ಇನಾಮ ಗಿನಾಮು ಏನು ಕೊಟ್ಟಿಲ್ಲ.

ತಾಳಾರಿ ಸಣ್ಣಮ್ಮ, ನೆರಣಿಕೆ, ಮಲ್ಲಯ್ಯ ಮನೆದೇವರು.

ಕಥೆ ೫

ಆದೋನ್ಯಾಗ ಇದ್ದಾಗ ನನ್ನ ಗಂಡ ಸತ್ತೋದ. ತಿಂಗಳ್‌ಗೊಂದು ಸಲ ಬರ್‍ತೀವಿ. ಗೊಣ್‌ಮಕ್ಕು ಆಡದಂಗ ಪದ ಆಡ್ತೀವಿ. ಮದ್ದೋರು ನಾವು. ರೊವಟು ಅವರು ನಮ್ಮನ್ನ ಸೇರಂಗಿಲ್ಲ. ಗೊಂಡ ಮಕ್ಕನ ಸೈ ಅಂದರೆ ಗೊಂಡ್ ಮಕ್ಕನ ಬಿಡುವಚ್ಚು ಎಣ್ ಮಕ್ಕನ ಸೈ ಅಂದರೆ ಎಣ್ ಮಕ್ಕನ ಬಿಡುವಚ್ಚು.

ಇವನ್ಯಾವನು ಇವನು ಇಂಗ್ ಸಿಳ್ಳ್ ವಡಿತಾನ ಗೂದಿ ಮಕದೋನು. ಅಲ್ಲಿ ಗುದ್ದಾಡತಾನ ನೋಡು ಅವನೇ ನಮ್ಮ ಭಾವನ ಮಗ ಉರಾಡಕೋದಾಗ ದಿನ ಒಬ್ಬ ಮನ್ಯಾಗ ಉಂಬುತೀವಿ. ಬೇಸಿದ್ದರೆ ಸಾಕು ನಮಗ್ಯಾಕ ಒಬ್ಬರು ಗೊಡವು.

ಮಲ್ಲಮ್ಮ, ನೆರಣಿಕೆ, ೪೫ ಗೊರವರು.

ಕಥೆ ೬

ಮಾ ತಾತ ತಂದೆಗಾರನಿಂಚಿ ಮಾಮು ಇಕ್ಕಡೇ ಉಂಡಾಮು. ದೇವರ ಪೂಜೆ ಉನ್ನಪ್ಪುಡು ಇಕ್ಕಡಿಕಿ ವಸ್ತಾಮು. ಸಂವತ್ಸರಾನಿಕಿ ವಕಸಾರಿ ಹೇಳಿಕೆ ಚಪ್ಪೇದಿ ನಾನೇ. ಈ ಗುಡಿ ಇನಾಮು ಭೂಮಿ ಐದು ಎಕರಾಲು ಸವಳು ಭೂಮಿ ಮಿಗಿತಾದ ಬಾಗ ಉಂದಿ. ಒಟ್ಟು ೧೮ ಎಕರಾಲು ಇನಾಮು ಭೂಮಿ ಉಂದಿ.

ಮಲ್ಲಯ್ಯ ಸ್ವಾಮಿ, ನೆರಣಿಕೆ, ತೆಲುಗು, ಲಿಂಗಾಯತರು, ವಯಸ್ಸು ೪೫

ಕಥೆ ೭

